ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಕೊರೊನಾ ರೋಗಾಣುವು ಕರ್ನಾಟಕದಲ್ಲಿ ಮಾತ್ರ ವಿಚಿತ್ರವಾದ ರೂಪಾಂತರ ಪಡೆದು ಮಠಗಳನ್ನು, ಜಾತಿ ನಿಗಮಗಳನ್ನು ಯಾವ ಕಾರಣಕ್ಕೂ ಬಾಧಿಸದೇ ಕೇವಲ ಕನ್ನಡದ ಸಂಸ್ಥೆಗಳ ಮೇಲೆ ಆಕ್ರಮಣ ಮಾಡುತ್ತಿದೆ



‘ಪೊಲೀಸ್ ದಾಳಿಗೆ ನ್ಯಾಯಾಧೀಶರ ಅನುಮತಿ ಬೇಕಿಲ್ಲ’ 5
ಬಾಂಗ್ಲಾ ಪ್ರವಾಸದಲ್ಲಿ ಪ್ರಧಾನಿ ನರೇಂದ್ರ ಮೋದಿ 7
‘ಬಿಜೆಪಿಯ ಸಂಚಿಗೆ ಕಾಂಗ್ರೆಸ್ ಸಾಥ್’ 12
ಐದು ಒಪ್ಪಂದಗಳಿಗೆ ಭಾರತ–ಬಾಂಗ್ಲಾ ಸಹಿ 7

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹46,350 (ಬೆಂಗಳೂರು)	₹66,700 (ಬೆಂಗಳೂರು)

ತೆವಳುತ್ತಿದೆ ಗಣಿಬಾಧಿತ ಪ್ರದೇಶಗಳ ಅಭಿವೃದ್ಧಿ ಕಾರ್ಯ • ಬ್ಯಾಂಕ್‌ಗಳಲ್ಲೇ ಇದೆ ಕೋಟ್ಯಂತರ ಹಣ

ಖನಿಜ ನಿಧಿ ಹೇರಳ, ಕೆಲಸ ವಿರಳ

• ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ಇಲ್ಲಿನ ಕಥೆ ಬೇರೆ ಇಲಾಖೆಗಳ ರೀತಿಯದ್ದಲ್ಲ. ಇಲ್ಲಿ ಹೇರಳ ಹಣಕಾಸು ನಿಧಿ ಲಭ್ಯವಿದೆ. ಮಾಡಬೇಕಾದ ಕೆಲಸಗಳೂ ಸಾಕಷ್ಟಿವೆ. ಆದರೆ ಕೆಲಸಗಳಾಗುತ್ತಿಲ್ಲ. ಕೈಗೆತ್ತಿಕೊಂಡಿರುವ ಅಭಿವೃದ್ಧಿ ಕಾಮಗಾರಿಗಳು ತೆವಳುತ್ತಾ ಸಾಗುತ್ತಿವೆ...

ಗಣಿಗಾರಿಕೆಯಿಂದ ನಲುಗಿಹೋಗಿರುವ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯ, ಪರಿಸರ ಸಂರಕ್ಷಣೆ ಕೈಗೊಳ್ಳಲು ಸ್ಥಾಪಿಸಲಾಗಿರುವ ಖನಿಜ ನಿಧಿಯ ಕಥೆ ಇದು. 2015ರಿಂದ ಕಳೆದ ತಿಂಗಳ ಕೊನೆಯವರೆಗೆ ಜಿಲ್ಲೆಗಳ ಖನಿಜ ನಿಧಿಯಲ್ಲಿ ಲಭ್ಯವಿರುವ ಒಟ್ಟು ಮೊತ್ತ ₹2,399 ಕೋಟಿ. ಆದರೆ ಕೋವಿಡ್ ಅವಧಿಯಲ್ಲಿ ಆಗಿರುವ ವೆಚ್ಚವೂ ಸೇರಿದಂತೆ ಬಳಕೆಯಾಗಿರುವುದು ₹ 827.62 ಕೋಟಿ ಮಾತ್ರ. ಅಂದರೆ ಶೇ 35ಕ್ಕಿಂತ ಕಡಿಮೆ. ಬ್ಯಾಂಕ್ ಖಾತೆಗಳಲ್ಲಿ ಉಳಿದಿರುವ ಮೊತ್ತ 1,475.50 ಕೋಟಿ.

ಬಳ್ಳಾರಿ, ಚಿಕ್ಕಮಗಳೂರು, ಕಲಬುರ್ಗಿ, ಚಿತ್ರದುರ್ಗ, ರಾಮನಗರ, ಗದಗ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಹಸಿರಿನಿಂದ ಕಂಗೊಳಿಸುತ್ತಿದ್ದ ಗುಡ್ಡಗಳು ಕಾಣೆಯಾಗಿವೆ. ಅಲ್ಲಿ ಸಾವಿರಾರು ಅಡಿ ಆಳದ ಕಂದಕಗಳು ನಿರ್ಮಾಣವಾಗಿವೆ. ಕಲುಷಿತ ನೀರು ಸೇವನೆ ಹಾಗೂ ದೂಳಿನಿಂದಾಗಿ ಜನರು ಅಸ್ತಮಾ, ಅಲರ್ಜಿ, ಚರ್ಮ ರೋಗ ಸೇರಿದಂತೆ ವಿವಿಧ ಕಾಯಿಲೆಗಳಿಂದ ಬಳಲುತ್ತಿದ್ದಾರೆ.

ಇದುವರೆಗೆ 7,230 ಕಾಮಗಾರಿಗಳಿಗೆ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ. 1,690 ಕಾಮಗಾರಿಗಳು ಪೂರ್ಣಗೊಂಡಿದ್ದರೆ, 1,571 ಪ್ರಗತಿಯಲ್ಲಿವೆ. 3,504 ಕಾಮಗಾರಿಗಳು ಇನ್ನೂ ಆರಂಭವಾಗಬೇಕಿವೆ. ಕೆಲವು ಆರಂಭಕ್ಕೆ ಮುನ್ನವೇ ರದ್ದಾಗಿವೆ. ಕ್ರಿಯಾ ಯೋಜನೆ ಸಿದ್ಧವಿದ್ದರೂ, ಅನುಷ್ಠಾನ ಕಾರ್ಯ ತೆವಳುತ್ತಾ ಸಾಗಿದೆ.

ಒಳನೋಟ

‘ಗಣಿ ಜಿಲ್ಲೆ’ಗಳ ವಾಸಿಯಾಗದ ನೋವು

ಪ್ರತಿಕ್ರಿಯಿಸಿ: 9606038256

ಗಣಿಗಾರಿಕೆಯಿಂದ ವನ್ಯಜೀವಿಗಳ ಆವಾಸ ಸ್ಥಾನ ನಾಶವಾಗಿ ಉಂಟಾಗುವ ಮಾನವ-ವನ್ಯಜೀವಿ ಸಂಘರ್ಷಕ್ಕೆ ಪರಿಹಾರಗಳನ್ನು ಜಿಲ್ಲಾ ಖನಿಜ ನಿಧಿಯಿಂದ ಕಂಡುಕೊಳ್ಳಬೇಕು

ಸಂಜಯ್ ಗುಬ್ಬಿ, ವನ್ಯಜೀವಿ ತಜ್ಞ

ಸರ್ಕಾರದ ಬೇರೆ ಇಲಾಖೆಗಳಲ್ಲಿ ಅನುದಾನದ ಕೊರತೆಯಿಂದ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ. ಗುತ್ತಿಗೆದಾರರ ಬಿಲ್ ಪಾವತಿಯಾಗುತ್ತಿಲ್ಲ. ಆದರೆ ಖನಿಜ ನಿಧಿ ಪ್ರತಿಷ್ಠಾನದಲ್ಲಿ ಅನುದಾನ ಹೇರಳವಾಗಿದೆ. ಅದರ ಸದುಪಯೋಗ ಆಗುತ್ತಿಲ್ಲ. ‘ಹಲ್ಲಿದ್ದರೆ ಕಡಲೆಯಿಲ್ಲ, ಕಡಲೆಯಿದ್ದರೆ ಹಲ್ಲಿಲ್ಲ’ ಎನ್ನುವ ಸ್ಥಿತಿಯಿದೆ.

ಸಮನ್ವಯದ ಕೊರತೆ: ಪ್ರಧಾನಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ ಮಾರ್ಗಸೂಚಿ ಅನ್ವಯ ಈ ನಿಧಿಯನ್ನು ಕುಡಿಯುವ ನೀರು, ಪರಿಸರ ಸಂರಕ್ಷಣೆ, ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕೌಶಲ ಅಭಿವೃದ್ಧಿಗೆ ಶೇ 60ರಷ್ಟು, ಮೂಲಸೌಕರ್ಯ, ನೀರಾವರಿ, ಪರಿಸರ ಗುಣಮಟ್ಟ ಹೆಚ್ಚಳಕ್ಕೆ ಶೇ 40ರಷ್ಟು ಖರ್ಚು ಮಾಡಲು ಅವಕಾಶ ನೀಡಲಾಗಿದೆ.

6ನೇ ಪುಟ ನೋಡಿ | ಇನ್ನಷ್ಟು ಸುದ್ದಿಗಳು 6



ಗಣಿಗಾರಿಕೆಗೆ ಗುಡ್ಡವೊಂದನ್ನು ಬಗೆದಿರುವ ನೋಟ (ಸಂಗ್ರಹ) ಪ್ರಜಾವಾಣಿ ಚಿತ್ರ:ತಾಜುದ್ದೀನ್ ಆಜಾದ್

ಅನುದಾನ ಬಳಕೆ ತೃಪ್ತಿದಾಯಕವಾಗಿಲ್ಲ

• ವೆಂಕಟೇಶ್ ಜಿ.ಎಚ್



ಬಾಗಲಕೋಟೆ: ರಾಜ್ಯದಲ್ಲಿ ಆಯಾ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯಡಿ (ಡಿಎಂಎಫ್) ಸಂಗ್ರಹವಾಗಿರುವ ಹಣ ಇದುವರೆಗೂ ತೃಪ್ತಿದಾಯಕವಾಗಿ ಬಳಕೆಯಾಗಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ.

ಅಚ್ಚರಿಯೆಂದರೆ, ಡಿಎಂಎಫ್ ಬಳಕೆ ನಿಟ್ಟಿನಲ್ಲಿ ನೀತಿ–ನಿಯಮ ರೂಪಿಸಲು ಆಯಾ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ರಚಿಸಲಾದ ಸಮಿತಿಗಳಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾ ಖೆಗೇ ಪ್ರಾತಿನಿಧ್ಯವಿಲ್ಲ. ನಮ್ಮ ನಿಧಿ ಹೇಗೆ ವಿನಿಯೋಗವಾಗಬೇಕು ಎಂಬುದನ್ನು ನಾವು ನಿರ್ಧರಿಸಲಾಗದ ಪರಿಸ್ಥಿತಿ. ಅದನ್ನು ತಪ್ಪಿಸಲು ಏಪ್ರಿಲ್ ಮೊದಲ ವಾರ ಈ ಸಮಿತಿಗಳನ್ನು ಪುನರ್ ರಚಿಸಲಾಗುವುದು. ಗಣಿ ಮತ್ತು ಭೂ ವಿಜ್ಞಾನ ಸಚಿವರೇ ಸಮಿತಿಯ ಅಧ್ಯಕ್ಷರು ಆಗಿರುತ್ತಾರೆ. ಆಯಾ ಜಿಲ್ಲಾ ಉಸ್ತುವಾರಿ ಸಚಿವರು ಉಪಾಧ್ಯಕ್ಷರು ಆಗಿರಲಿದ್ದಾರೆ. ಡಿಎಂಎಫ್ ದುರ್ಬಳಕೆ ತಪ್ಪಿಸಲು ಹೊಸ ಮಾರ್ಗಸೂಚಿ ಜಾರಿಗೊಳಿಸಲಾಗುವುದು ಎನ್ನುತ್ತಾರೆ ನಿರಾಣಿ.

6ನೇ ಪುಟ ನೋಡಿ

ಪೋಷಕರ ಮೇಲೆ ಒತ್ತಡ – ಮತ್ತೊಂದು ವಿಡಿಯೊ ಹರಿಬಿಟ್ಟ ಯುವತಿ

ಸಿ.ಡಿ: ಯಾರ ಬುಡಕ್ಕೆ ಕಿಡಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿಗೆ ಸಂಬಂಧಿಸಿದ್ದೆನ್ನಲಾದ ಸಿ.ಡಿ ಪ್ರಕರಣ ದಿನಕ್ಕೊಂದು ಆಯಾಮ ಪಡೆದುಕೊಳ್ಳುತ್ತಿದೆ.

ಸಂತ್ರಸ್ತ ಯುವತಿ ತನ್ನ ತಮ್ಮ ಮತ್ತು ಅಮ್ಮನ ಜತೆ ಮಾತನಾಡಿದ ಆಡಿಯೊ ಬಿಡುಗಡೆಯಾದ ಬೆನ್ನಲ್ಲೇ, ಶನಿವಾರ ಬೆಳಿಗ್ಗೆ ಮತ್ತೊಂದು ವಿಡಿಯೊ ಬಿಡುಗಡೆ ಮಾಡಿದ್ದು, ‘ರಮೇಶ ಜಾರಕಿಹೊಳಿ ಹೆಸರು ಬರೆದಿಟ್ಟು ಸಾಯುವಷ್ಟು ನನಗೆ ಕಿರುಕುಳವಾಗುತ್ತಿದೆ’ ಎಂದು ಅಸಹಾಯಕತೆ ವ್ಯಕ್ತಪಡಿಸಿದ್ದರು.

ಈ ಬೆಳವಣಿಗೆಗಳ ಬೆನ್ನಲ್ಲೇ, ಯುವತಿಯ ಪೋಷಕರನ್ನು ವಿಜಯಪುರದಿಂದ ಕರೆಸಿ ಎಸ್ಐಟಿ ತನಿಖಾ ತಂಡ ಅವರನ್ನು ವಿಚಾರಣೆಗೆ ಒಳಪಡಿಸಿದೆ.

ವಿಚಾರಣೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಯುವತಿಯ ತಮ್ಮ, ‘ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ನೇರ ಆರೋಪ ಮಾಡಿದ್ದಲ್ಲದೇ, ಅಕ್ಕನಿಗೆ ಹಣ ಕೊಟ್ಟು ಗೋವಾಕ್ಕೆ ಕಳಿಸಿದ್ದಾರೆ’ ಎಂದು ಹೇಳಿದ್ದಾರೆ.

5ನೇ ಪುಟ ನೋಡಿ

ಡಿಕೆಶಿ ಮೇಲೆ ದೂರು ಕೊಡುವೆ: ರಮೇಶ



‘ಆ ಮಹಾನಾಯಕ ರಾಜಕೀಯದಲ್ಲಿ ಇರಲು ನಾಲಾಯಕ್. ಇಂಥ ಷಡ್ಯಂತ್ರ ಮಾಡಬಾರದು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ನೇರವಾಗಿ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ರಮೇಶ ಜಾರಕಿಹೊಳಿ, ‘ನಾನು ಗಂಡಸು, ಅವನು ...’ ಎಂದೂ ಶಿವಕುಮಾರ್ ಅವರನ್ನು ಅವಾಚ್ಯವಾಗಿ ನಿಂದಿಸಿದರು. ‘ಕನಕಪುರದಲ್ಲಿ ಡಿ.ಕೆ. ಶಿವಕುಮಾರ್ ಸೋಲಬೇಕು. ಅದಕ್ಕೆ ಏನೆಲ್ಲಾ ಬೇಕು ಅದೆಲ್ಲವನ್ನೂ ಮಾಡಿದ್ದೇನೆ’ ಎಂದರು.

5ನೇ ಪುಟ ನೋಡಿ

ಹತಾಶೆಯಲ್ಲಿ ರಮೇಶ: ಡಿಕೆಶಿ

ಬೆಂಗಳೂರು: ‘ಪಾಪ... ಅವರು (ರಮೇಶ ಜಾರಕಿಹೊಳಿ) ಹತಾಶೆಯಲ್ಲಿದ್ದಾರೆ. ಅವರಿಗೆ ಏನೋ ಸಮಸ್ಯೆ ಇರಬೇಕು. ಅವರು ಮಾತನಾಡಿದ್ದಕ್ಕೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಕಾನೂನು ಇದೆ, ಅಧಿಕಾರಿಗಳಿದ್ದಾರೆ, ತನಿಖೆಯೂ ನಡೆಯುತ್ತಿದೆ. ನನಗೂ ಇದಕ್ಕೂ ಯಾವುದೇ ಸಂಬಂಧ ಇಲ್ಲ’ ಎಂದು ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.



‘ಅವರ (ರಮೇಶ ಜಾರಕಿಹೊಳಿ) ವೈಯಕ್ತಿಕ ಸಮಸ್ಯೆಯದು. ಅದನ್ನು ಅವರೇ ಸರಿಪಡಿಸಿಕೊಳ್ಳಬೇಕು’ ಎಂದು ಹೇಳಿದರು. ‘ಮಹಾನಾಯಕ ನೀವೇ ಎಂದು ಹೆಸರು ಹೇಳಿದ್ದಾರಲ್ಲ’ ಎಂದು ಕೇಳಿದ ಪ್ರಶ್ನೆಗೆ, ‘ಅವರು ಇವತ್ತೊಂದು ಮಾತನಾಡುತ್ತಾರೆ. ಏನು ಬೇಕಾದರೂ ಹೇಳಲಿ. ಅದಕ್ಕೆಲ್ಲ ಪ್ರತಿಕ್ರಿಯೆ ನೀಡುವುದಿಲ್ಲ’ ಎಂದರು.

5ನೇ ಪುಟ ನೋಡಿ

‘ಮಗಳನ್ನು ಗೋವಾಕ್ಕೆ ಕಳುಹಿಸಿದ್ದೇ ಡಿಕೆಶಿ’

ಬೆಂಗಳೂರು: ‘ನನ್ನ ಮಗಳನ್ನು ಮುಂದಿಟ್ಟುಕೊಂಡು ಡಿ.ಕೆ. ಶಿವಕುಮಾರ್ ಹೊಲಸು ರಾಜಕಾರಣ ಮಾಡುತ್ತಿದ್ದಾರೆ. ನನ್ನ ಮಗಳಿಗೆ ಹಾಗೂ ನನ್ನ ಕುಟುಂಬಕ್ಕೆ ಯಾವುದೇ ತೊಂದರೆಯಾದರೂ ಡಿ.ಕೆ. ಶಿವಕುಮಾರ್ ಅವರೇ ಹೊಣೆಗಾರರು’ ಎಂದು ಸಿ.ಡಿ. ಯಲ್ಲಿದ್ದಾಳೆ ಎನ್ನಲಾದ ಯುವತಿ ತಂದೆ ಹೇಳಿದರು.

ಎಸ್ಐಟಿ ಅಧಿಕಾರಿಗಳ ಎದುರು ಶನಿವಾರ ಹಾಜರಾಗಿ ಹೇಳಿಕೆ ನೀಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಮಗಳನ್ನು ನೆನೆದು ಕಣ್ಣೀರಿಟ್ಟರು. ಡಿ.ಕೆ. ಶಿವಕುಮಾರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ‘ನನ್ನ ಮಗಳನ್ನು ಕರೆದುಕೊಂಡು ಬಂದು ಒಪ್ಪಿಸಿ’ ಎಂದು ಆಗ್ರಹಿಸಿದರು.

5ನೇ ಪುಟ ನೋಡಿ

ಮೊದಲ ಹಂತದ ಮತದಾನ

ಕೋಲ್ಕತ್ತ/ಗುವಾಹಟಿ: ಪಶ್ಚಿಮ ಬಂಗಾಳದ 30 ವಿಧಾನಸಭಾ ಕ್ಷೇತ್ರ ಹಾಗೂ ಅಸ್ಸಾಂನ 47 ವಿಧಾನಸಭಾ ಕ್ಷೇತ್ರಗಳಿಗೆ ಶನಿವಾರ ಮೊದಲ ಹಂತದ ಮತದಾನ ನಡೆಯಿತು. 12

ಒಳ ಪುಟ



ಮಾರುಕಟ್ಟೆಗೆ ಮಾವು: ಮಾರಾಟದ್ದೇ ಚಿಂತೆ! 12

ಇಂದಿನ ಪಾಡ್‌ಕಾಸ್ಟ್ ವಿಶೇಷ

ವೈದ್ಯ ಮಿತ್ರ ಕಥಾ ಸಾಗರ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ವಾಸ್ತವ ಲೆಕ್ಕಾಚಾರ– ಆರ್ಥಿಕ ಶಿಸ್ತಿನ ಜಪ

‘ಅಭಿವೃದ್ಧಿಗಿಲ್ಲ ಹೊಸ ಕಾರ್ಯತಂತ್ರ’

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಬಜೆಟ್ 2021-22

ಬೆಂಗಳೂರು: ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿ ಇಲ್ಲದರ ನಡುವೆಯೇ ಬಿಬಿಎಂಪಿ 2021–22ನೇ ಸಾಲಿಗೆ ₹ 9,286.81 ಕೋಟಿ ಗಾತ್ರದ ಬಜೆಟ್ ಮಂಡಿಸಿದೆ. ಈ ಹಿಂದಿನ ವರ್ಷಗಳ ಬಜೆಟ್‌ಗಳಿಗೆ ಹೋಲಿಸಿದರೆ ವಾಸ್ತವಕ್ಕೆ ತುಸು ಹತ್ತಿರವಿರುವ ಈ ಬಜೆಟ್‌ನಲ್ಲಿ ಅನುದಾನ ಹಂಚಿಕೆ ವೇಳೆ ವಿಕೇಂದ್ರೀಕರಣ ನೀತಿಯ ಮೊರೆ ಹೋಗಿರುವುದು ವಿಶೇಷ.

ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ ಅವರು ಬಜೆಟ್ ಅನ್ನು ಶನಿವಾರ ಮಂಡಿಸಿದರು. ‘ಬಿಬಿಎಂಪಿಯಲ್ಲಿ ಆರ್ಥಿಕ ಶಿಸ್ತು ಜಾರಿಗೆ ತರುವುದು ಬಜೆಟ್‌ನ ಮೂಲಮಂತ್ರ. ಪಾಲಿಕೆಯ ಹೊಣೆಗಾರಿಕೆಯು ಲಭ್ಯ ಹಣಕಾಸು ಮೊತ್ತಕ್ಕಿಂತ 2.5 ಪಟ್ಟು ಮೀರುವಂತಿಲ್ಲ. ಬೃಹನ್‌ಮುಂಬೈ ಮಹಾನಗರ ಪಾಲಿಕೆಯ ನೀತಿಗೆ ಇದನ್ನು ಹೋಲಿಸಬಹುದು’ ಎಂದು ತಿಳಿಸಿದರು.

3B ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ




ಸಚಿವ ಜೆ.ಸಿ.ಮಾಧುಸ್ವಾಮಿ ಅಸಮಾಧಾನ

‘ರಾಜ್ಯಗಳ ವಿಚಾರದಲ್ಲಿ ಕೇಂದ್ರದ ಹಸ್ತಕ್ಷೇಪ’

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜ್ಯಗಳ ವಿಚಾರಗಳಲ್ಲಿ ಕೇಂದ್ರ ಸರ್ಕಾರ ಅತಿಕ್ರಮಣ ಮಾಡಿ, ಹಸ್ತಕ್ಷೇಪ ನಡೆಸುತ್ತಿದೆ. ಇದರಿಂದ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗುವ ಆತಂಕ ಎದುರಾಗಿದೆ’ ಎಂದು ಸಚಿವ ಜೆ.ಸಿ. ಮಾಧುಸ್ವಾಮಿ ಇಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.



ಮಾಧುಸ್ವಾಮಿ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಶನಿವಾರ ಆಯೋಜಿಸಿದ್ದ ‘ರಾಷ್ಟ್ರೀಯ ಏಕತೆ ಮತ್ತು ಪ್ರಾದೇಶಿಕ ಸ್ವಾತಂತ್ರ್ಯ’ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ‘ಕೇಂದ್ರದ ಸರ್ವಾಧಿಕಾರಿ ಧೋರಣೆ ಹೆಚ್ಚುತ್ತಿದ್ದು, ಅಧಿಕಾರದ ಕೇಂದ್ರೀಕರಣಕ್ಕೆ ಮುಂದಾಗಿದೆ. ಈ ಧೋರಣೆಯಿಂದಲೇ ಪ್ರಾದೇಶಿಕ ಭಾವನೆ ಬೆಳೆಯುತ್ತಿದೆ. ಎಲ್ಲೋ ಕುಳಿತು ನಮ್ಮನ್ನು ಆಳುವವರ ಸರ್ವಾಧಿಕಾರಿ ಧೋರಣೆಯನ್ನು ನಿಗ್ರಹ ಮಾಡದಿದ್ದರೆ ಮುಂದೆ ಕಷ್ಟವಾಗಲಿದೆ’ ಎಂದರು.

5ನೇ ಪುಟ ನೋಡಿ

ಮಾಧುಸ್ವಾಮಿ ಮಾತಿಗೆ ತೇಜಸ್ವಿ ಆಕ್ಷೇಪ

ರಾಜ್ಯಗಳ ರಚನೆ ಸಂಬಂಧ ಸಚಿವ ಮಾಧುಸ್ವಾಮಿ ಮಂಡಿಸಿದ ವಾದಕ್ಕೆ ಸಂಸದ ತೇಜಸ್ವಿ ಸೂರ್ಯ ಆಕ್ಷೇಪ ವ್ಯಕ್ತಪಡಿಸಿದರು.

ಆಡಳಿತಾತ್ಮಕ ಉದ್ದೇಶಕ್ಕಾಗಿ ರಾಜ್ಯಗಳನ್ನು ಹೊಸದಾಗಿ ರೂಪಿಸಲಾಗುತ್ತಿದೆಯೇ ಹೊರತು ರಾಜಕೀಯ ಕಾರಣಕ್ಕಾಗಿ ಅಲ್ಲ. 16 ರಾಜ್ಯಗಳು ಇದ್ದದ್ದು, ಈಗ 29 ಆಗಿರುವುದರಲ್ಲಿ ತಪ್ಪೇನಿದೆ? ಪರಿಣಾಮಕಾರಿ ಆಡಳಿತಕ್ಕಾಗಿ ಹೆಚ್ಚು ರಾಜ್ಯಗಳನ್ನು ರೂಪಿಸಿದರೆ ಸಮಸ್ಯೆ ಏನು’ ಎಂದು ಪ್ರಶ್ನಿಸಿದರು. ‘ರಾಜ್ಯದ ವಿಚಾರಕ್ಕೆ ಬಂದಾಗ, ಬೆಂಗಳೂರು ಮತ್ತು ಹಳೇ ಮೈಸೂರು ಭಾಗಕ್ಕೆ ಹೆಚ್ಚು ಆದ್ಯತೆ ನೀಡುತ್ತಿರುವುದು ಕಾಣಿಸುತ್ತದೆ. ಕಲ್ಯಾಣ ಕರ್ನಾಟಕಕ್ಕೆ ಮತ್ತಷ್ಟು ಆದ್ಯತೆ ಕೊಡಬೇಕು ಎನಿಸುತ್ತದೆ. ಕೇಂದ್ರ ಸರ್ಕಾರದ ದೃಷ್ಟಿಕೋನದಲ್ಲಿ ನೋಡಿದಾಗ ಬಿಹಾರ, ಉತ್ತರ ಪ್ರದೇಶ ಹಿಂದುಳಿದಿವೆ ಎಂಬುದು ಗೋಚರವಾಗುತ್ತದೆ. ಇದು ಮಾಧುಸ್ವಾಮಿ ಮಾತಿನಲ್ಲಿ ಕಂಡ ವಿರೋಧಾಭಾಸ’ ಎಂದರು.

5ನೇ ಪುಟ ನೋಡಿ

ರಸ್ತೆ ದುರಸ್ತಿಗೆ ₹ 1 ಸಾವಿರ ಕೋಟಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಗೆ ಸೇರ್ಪಡೆಯಾದ 110 ಹಳ್ಳಿಗಳಿಗೆ ಕುಡಿಯುವ ನೀರು ಮತ್ತು ಒಳಚರಂಡಿ ಕೊಳವೆಗಳನ್ನು ಅಳವಡಿಸಲು ಅಲ್ಲಿನ ರಸ್ತೆಗಳನ್ನು ಅಗೆಯಲಾಗಿತ್ತು. ದುರಸ್ತಿಗೆ ಕ್ರಮ ಕೈಗೊಳ್ಳದ ಕಾರಣ ಅಲ್ಲಿನ ರಸ್ತೆಗಳು ಅಧ್ವಾನವಾಗಿದ್ದವು. ಈ 110 ಹಳ್ಳಿಗಳ ರಸ್ತೆ ದುರಸ್ತಿಗೆ ಬಿಬಿಎಂಪಿ ಬಜೆಟ್‌ನಲ್ಲಿ ₹ 1 ಸಾವಿರ ಕೋಟಿ ಅನುದಾನ ಕಾಯ್ದಿರಿಸಲಾಗಿದೆ.

ಈ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗಿದೆ ಎಂಬ ಆರೋಪವೂ ವ್ಯಕ್ತವಾಗಿದೆ. ದಾಸರಹಳ್ಳಿ ಹಾಗೂ ಬ್ಯಾಟರಾಯನಪುರ ಕ್ಷೇತ್ರಗಳಲ್ಲಿನ ರಸ್ತೆಗಳಿಗೆ ಭಾರಿ ಪ್ರಮಾಣದಲ್ಲಿ ಹಾನಿ ಆಗಿದೆ. ಆದರೆ, ಬಿಜೆಪಿಯೇತರ ಶಾಸಕರು ಈ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿರುವುದರಿಂದ ಇಲ್ಲಿಗೆ ತಲಾ ₹ 25 ಕೋಟಿ ಅನುದಾನ ಮಾತ್ರ ಹಂಚಿಕೆ ಮಾಡಲಾಗಿದೆ. ಬಿಜೆಪಿ ಶಾಸಕರು ಪ್ರತಿನಿಧಿಸುತ್ತಿರುವ ಕ್ಷೇತ್ರಗಳ ವ್ಯಾಪ್ತಿಗೆ ಗರಿಷ್ಠ ಪ್ರಮಾಣದ ಅನುದಾನ ನೀಡಲಾಗಿದೆ ಎಂಬ ಆರೋಪ ಕೇಳಿಬಂದಿದೆ.

ಕಸ ಸುರಿಯುವ, ಮರಳು ಸಾಗಣೆ ಲಾರಿ, ಗುಜರಿ ವಾಹನಗಳ ನಿಲುಗಡೆ ತಾಣ

ಸರ್ವೀಸ್ ರಸ್ತೆ ಸ್ವಚ್ಛವಾದರೂ ಸಿಗದ ಮುಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ತುಲ ರಸ್ತೆಯ ಹೊಸಕೆರೆಹಳ್ಳಿ ಪಿಇಎಸ್ ಕಾಲೇಜು ಸಿಗ್ನಲ್‌ನಿಂದ ನಾಯಂಡಹಳ್ಳಿ ಜಂಕ್ಷನ್ ತನಕ ಸರ್ವೀಸ್ ರಸ್ತೆಗಳನ್ನು ಸ್ವಚ್ಛಗೊಳಿಸುವ ಕಾರ್ಯ ನಡೆಯುತ್ತಿದ್ದರೂ, ಸಂಪೂರ್ಣವಾಗಿ ಸಾರ್ವಜನಿಕ ಸೇವೆಗೆ ಲಭ್ಯವಾಗುವ ಲಕ್ಷಣಗಳಿಲ್ಲ.

ನಾಯಂಡಹಳ್ಳಿಯಿಂದ ಹೊಸಕೆರೆಹಳ್ಳಿ ತನಕ ಮಾತ್ರ ವರ್ತುಲ ರಸ್ತೆಗೆ ಸರ್ವೀಸ್ ರಸ್ತೆ ಇದ್ದರೂ, ಇಲ್ಲದ ಸ್ಥಿತಿಯಲ್ಲಿ ಇಷ್ಟು ದಿನ ಇತ್ತು. ಕಟ್ಟಡಗಳ ಅವಶೇಷ, ಕಸ ಸುರಿಯುವ, ಮರಳು, ಜಲ್ಲಿ ಲಾರಿಗಳು, ಗುಜರಿ ವಾಹನಗಳ ನಿಲುಗಡೆ ತಾಣವಾಗಿತ್ತು.

'ವಿಧಾನ ಪರಿಷತ್ತಿನ ಸದಸ್ಯ ಯು.ಬಿ. ವೆಂಕಟೇಶ್ ಅವರು ಈ ಸರ್ವೀಸ್ ರಸ್ತೆ ಅವ್ಯವಸ್ಥೆ ಬಗ್ಗೆ ಸದನದಲ್ಲಿ ಚುಕ್ಕಿ ಗುರುತಿನ ಪ್ರಶ್ನೆ ಕೇಳಿದ್ದರು. ಸರ್ವೀಸ್ ರಸ್ತೆಯಲ್ಲಿ ಎಲ್ಲ ಅಡೆತಡೆ ತೆರವುಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ' ಎಂಬ ಉತ್ತರವನ್ನು ಬಿಬಿಎಂಪಿ ಅಧಿಕಾರಿಗಳು ನೀಡಿದ್ದರು. ಸುಳ್ಳು ಮಾಹಿತಿ ನೀಡಿದ್ದ ಕಾರಣಕ್ಕೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗೆ ನೋಟಿಸ್ ಕೂಡ ನೀಡಲಾಗಿತ್ತು.



ಸರ್ವೀಸ್ ರಸ್ತೆಯಲ್ಲಿ ಪ್ರೀಕಾಸ್ಟ್ ಕಲ್ವರ್ಟ್‌ಗಳನ್ನು ಜೋಡಿಸಿರುವುದು

ಈ ಬೆಳವಣಿಗೆ ಬಳಿಕ ಈಗ ಸರ್ವೀಸ್ ರಸ್ತೆಯನ್ನು ಆವರಿಸಿಕೊಂಡಿದ್ದ ಕಟ್ಟಡ ತ್ಯಾಜ್ಯವನ್ನು ತೆಗೆಯುವ ಕೆಲಸ ಭರದಿಂದ ನಡೆಯುತ್ತಿದೆ. ಜೆಸಿಬಿ ಮೂಲಕ ತ್ಯಾಜ್ಯವನ್ನು ತೆರವುಗೊಳಿಸಲಾಗುತ್ತಿದೆ. ಆದರೆ, ಮರಳು, ಜಲ್ಲಿ ಲಾರಿಗಳು ಇದೇ ಸರ್ವೀಸ್ ರಸ್ತೆಯಲ್ಲಿ ನಿಲ್ಲುವುದು ತಪ್ಪಿಲ್ಲ.

ನಾಯಂಡಹಳ್ಳಿ ಜಂಕ್ಷನ್‌ನಿಂದ ಹೊರಟರೆ ಎಡ ಬದಿಯ ಸರ್ವೀಸ್ ರಸ್ತೆಯಲ್ಲಿ ಗುಜರಿ ವಾಹನಗಳು ನಿಂತಿದ್ದರೆ, ಇನ್ನೊಂದು ಬದಿಯಲ್ಲಿ ಮರಳು, ಜಲ್ಲಿ ಮಾರಾಟದ ಕೇಂದ್ರವಾಗಿದೆ. ಜೊತೆಗೆ ಹೂವು ಹಣ್ಣಿನ ಗಿಡಗಳನ್ನು ಮಾರಾಟ ಮಾಡುವ ನರ್ಸರಿಯೊಂದು ರಸ್ತೆಯನ್ನೇ ಆವರಿಸಿಕೊಂಡಿದೆ.

ಕೆಳ ಸೇತುವೆ ನಿರ್ಮಾಣಕ್ಕೆ ಅಗತ್ಯ ಇರುವ ಪ್ರೀಕಾಸ್ಟ್ ಬಾಕ್ಸ್ ಕಲ್ವರ್ಟ್‌ಗಳನ್ನು ಬಿಬಿಎಂಪಿಯೇ ತಂದು ಸರ್ವೀಸ್ ರಸ್ತೆಯ ಉದ್ದಕ್ಕೂ ಜೋಡಿಸಿದೆ. ಇದ್ಯಾವುದನ್ನೂ ತೆರವುಗೊಳಿಸದ ಬಿಬಿಎಂಪಿ, ಮಣ್ಣಿನ ರಾಶಿಯನ್ನಷ್ಟೇ ಕರಗಿಸುತ್ತಿದೆ.

ನೈಸ್ ರಸ್ತೆ ಸಿಗ್ನಲ್ (ವೀರಭದ್ರನಗರ) ದಾಟಿ ಮುಂದೆ ಸಾಗಿದರೆ ಎರಡೂ ಬದಿಯಲ್ಲಿ ಸರ್ವೀಸ್ ರಸ್ತೆಗಳಲ್ಲೂ ಗ್ಯಾರೇಜ್ ವಾಹನಗಳ ನಿಲುಗಡೆ ತಾಣವಾಗಿದೆ. ಹೊಸಕೆರೆಹಳ್ಳಿ ಮೇಲ್ಸೇತುವೆ ದಾಟಿದರೆ ರಿಂಗ್ ರಸ್ತೆಗೆ ಸರ್ವೀಸ್ ರಸ್ತೆಗಳಿಲ್ಲ. ಇರುವ ಫುಟ್‌ಪಾತ್‌ಗಳೂ ಪಾದಚಾರಿಗಳಿಗೆ ಯೋಗ್ಯವಾಗಿಲ್ಲ ಎನ್ನುತ್ತಾರೆ ಸ್ಥಳೀಯರು.

ಈ ಕುರಿತು ಪ್ರತಿಕ್ರಿಯಿಸಿದ ಬಿಬಿಎಂಪಿ ಮುಖ್ಯ ಎಂಜಿನಿಯರ್ (ರಸ್ತೆ, ಮೂಲಸೌಕರ್ಯ) ಬಿ.ಎಸ್. ಪ್ರಹ್ಲಾದ್, 'ಪ್ರೀಕಾಸ್ಟ್ ಕಲ್ವರ್ಟ್‌ಗಳು ಬೇರೆಡೆಗೆ ಸ್ಥಳಾಂತರಿಸುವ ತನಕ ಅಲ್ಲಿಯೇ ಇರಲಿವೆ. ಮರಳು ಲಾರಿಗಳು, ಗುಜರಿ ವಾಹನಗಳನ್ನು ತೆರವುಗೊಳಿಸಲು ಪೊಲೀಸರಿಗೆ ತಿಳಿಸಲಾಗಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ತ್ವರಿತ ನ್ಯಾಯ ವಿತರಣೆಗೆ ದಾರಿ ಕಂಡುಕೊಳ್ಳಬೇಕು: ಸಂತೋಷ ಹೆಗ್ಡೆ

ಬೆಂಗಳೂರು: 'ತ್ವರಿತ ನ್ಯಾಯ ವಿತರಣಾ ವ್ಯವಸ್ಥೆಗೆ ನಾವು ದಾರಿ ಕಂಡುಕೊಳ್ಳುವ ಅಗತ್ಯವಿದೆ' ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ ಹೆಗ್ಡೆ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ (ಕೆಎಸ್‌ಎಲ್‌ಎಸ್‌ಎ) ಆಯೋಜಿಸಿದ್ದ ಮೆಗಾ ಲೋಕ ಅದಾಲತ್ ಉದ್ಘಾಟಿಸಿದ ಅವರು, 'ನ್ಯಾಯ ಕಂಡುಕೊಳ್ಳಲು ಜನರಿಗೆ ಇರುವ ಮಾರ್ಗ ಎಂದರೆ ನ್ಯಾಯಾಂಗ. ಆದರೆ, ನ್ಯಾಯ ವಿತರಣಾ ವ್ಯವಸ್ಥೆ ಒಂದು ಕೊರತೆಯಿಂದ ಬಳಲುತ್ತಿದೆ. ವ್ಯಾಜ್ಯಗಳ ಇತ್ಯರ್ಥ ವಿಳಂಬವಾಗುತ್ತಿರುವುದು ಜನರಲ್ಲಿ ನಿರಾಶೆಗೆ ಕಾರಣವಾಗುತ್ತಿದೆ' ಎಂದರು.

'ಮೊಕದ್ದಮೆಗಳು ಸುಪ್ರೀಂ ಕೋರ್ಟ್‌ ತನಕ ಹೋಗಿ ಬಗೆಹರಿಯಲು 35ರಿಂದ 40 ವರ್ಷಗಳಾಗುತ್ತಿವೆ. ಈ ಸಂದರ್ಭದಲ್ಲಿ ಮಧ್ಯಂತರ ಆದೇಶಗಳ ಪ್ರಯೋಜನವನ್ನು ಒಬ್ಬರು ಪಡೆದುಕೊಳ್ಳುತ್ತಾರೆ. ಊಹಾತ್ಮಕ ದಾವೆಗಳು ನ್ಯಾಯ ವಿತರಣೆ ವ್ಯವಸ್ಥೆ ಮೇಲೆ ಹೊರೆಯಾಗುತ್ತಿವೆ. ಆದ್ದರಿಂದ ತ್ವರಿತ ನ್ಯಾಯ ವಿತರಣೆಗೆ ಮಾರ್ಗವೊಂದನ್ನು ಹುಡುಕಿಕೊಳ್ಳಬೇಕಿದೆ. ಆ ಕೆಲಸ ಲೋಕ ಅದಾಲತ್ ಮೂಲಕ ಆಗುತ್ತಿದೆ' ಎಂದರು.

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ, ಕೆಎಸ್‌ಎಲ್‌ಎಸ್‌ಎ ಕಾರ್ಯನಿರ್ವಾಹಕ ಅಧ್ಯಕ್ಷ ನ್ಯಾಯಮೂರ್ತಿ ಅರವಿಂದಕುಮಾರ್ ಇದ್ದರು. ಕೋವಿಡ್ ನಡುವೆಯೇ ಕಳೆದ ಐದು ತಿಂಗಳಲ್ಲಿ ಮೂರನೇ ಮೆಗಾ ಲೋಕ್ ಅದಾಲತ್ ನಡೆಸಲಾಗಿದ್ದು, ಸುಮಾರು 2.74 ಲಕ್ಷ ಪ್ರಕರಣಗಳನ್ನು ಈ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗಿದೆ.



ಯುವತಿ ಕೊಲೆ: ಪರಿಚಯಸ್ಥನ ಕೃತ್ಯ ಶಂಕೆ

ಬೆಂಗಳೂರು: ಆರ್‌.ಟಿ.ನಗರ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ಝುರಾ (28) ಎಂಬುವವರನ್ನು ಶುಕ್ರವಾರ ತಡರಾತ್ರಿ ಕೊಲೆ ಮಾಡಲಾಗಿದ್ದು, ಪರಿಚಯಸ್ಥನೇ ಕೃತ್ಯ ಎಸಗಿರುವ ಅನುಮಾನ ವ್ಯಕ್ತವಾಗಿದೆ.

'ಮುಂಬೈನ ಝುರಾ, ಎರಡು ವರ್ಷಗಳ ಹಿಂದಷ್ಟೇ ನಗರಕ್ಕೆ ಬಂದಿದ್ದರು. ನಗರದ ಬ್ಯಾಂಡೊಂದರಲ್ಲಿ ಕೆಲಸ ಮಾಡುತ್ತಿದ್ದರು. ಆರ್‌.ಟಿ. ನಗರದ ಬಾಡಿಗೆ ಮನೆಯೊಂದರಲ್ಲಿ ನೆಲೆಸಿದ್ದರು' ಎಂದು ಪೊಲೀಸರು ಹೇಳಿದರು.

'ಯುವಕನೊಬ್ಬನ ಜೊತೆ ಝುರಾ ಸ್ನೇಹ ಹೊಂದಿದ್ದರು. ಸಲುಗೆಯೂ ಇತ್ತು. ಆತ ಆಗಾಗ ಯುವತಿ ಮನೆಗೂ ಬಂದು ಹೋಗುತ್ತಿದ್ದ. ಆತನ ಮೇಲೆಯೇ ಅನುಮಾನವಿದ್ದು, ಸದ್ಯ ತಲೆಮರೆಸಿಕೊಂಡಿದ್ದಾನೆ' ಎಂದು ತಿಳಿಸಿದರು.

'ಶುಕ್ರವಾರ ತಡರಾತ್ರಿ ಯುವಕ ಮನೆಗೆ ಬಂದು ಗಲಾಟೆ ಮಾಡಿರುವ ಅನುಮಾನವಿದೆ. ಗಲಾಟೆ ಸಂದರ್ಭದಲ್ಲೇ ಝುರಾ ಅವರ ತಲೆಗೆ ಹೊಡೆದಿದ್ದು, ತೀವ್ರ ರಕ್ತಸ್ರಾವವಾಗಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಯುವಕನ ಸ್ನೇಹಿತನೊಬ್ಬನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದೂ ಹೇಳಿದರು.


‘ಸಾಮರಸ್ಯದ ಬದುಕು ಕಟ್ಟಿಕೊಟ್ಟ ಕೃತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತಾಂತರ ದ್ವೇಷಿಸುವ ಈ ಕಾಲದಲ್ಲಿ ಶ್ಯಾಮಲಾ ಮಾಧವ ಅವರು ಕಟ್ಟಿಕೊಟ್ಟಿರುವ ಬದುಕು, ಸಾಮರಸ್ಯದ ಮಹತ್ವವನ್ನು ಸಾರುತ್ತದೆ. ಸಾಮರಸ್ಯ ಜೀವನದ ಭಾಗವಾಗಿದೆ' ಎಂದು ಖ್ಯಾತ ವಿದ್ವಾಂಸ ಪ್ರೊ ಬಿ.ಎ. ವಿವೇಕ ರೈ ಅಭಿಪ್ರಾಯಪಟ್ಟರು.

'ಅವಧಿ' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಸಾಹಿತಿ ಶ್ಯಾಮಲಾ ಮಾಧವ ಅವರ ಅನುಭವ ಕಥನ 'ನಾಳೆ ಇನ್ನೂ ಕಾದಿದೆ' ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಆತ್ಮಕಥನ, ಆತ್ಮಚರಿತ್ರೆ, ಅನುಭವ ಕಥನ ಇಂದು ಹೊಸ ದಿಕ್ಕನ್ನು ಕಂಡುಕೊಳ್ಳುತ್ತಿದೆ. ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಲೇಖಕಿಯರು ಆತ್ಮ ಕಥನ ರಚಿಸಿದ್ದಾರೆ. ಪುರುಷ ಸಾಹಿತಿಗಳು ಬರೆದ ಕಥನಕ್ಕೂ, ಲೇಖಕಿಯರು ಬರೆದ ಕಥನಕ್ಕೂ ಇರುವ ವ್ಯತ್ಯಾಸವನ್ನು ಅಧ್ಯಯನ ಮಾಡುವುದು ಸೂಕ್ತ' ಎಂದು ಅವರು ಅಭಿಪ್ರಾಯಪಟ್ಟರು.



'ನಾಳೆ ಇನ್ನೂ ಕಾದಿದೆ' ಪುಸ್ತಕವನ್ನು ಪ್ರೊ ಬಿ.ಎ. ವಿವೇಕ ರೈ ಬಿಡುಗಡೆ ಮಾಡಿದರು. ಬಹುರೂಪಿ ಪ್ರಕಾಶನದ ಜಿ.ಎನ್.ಮೋಹನ್, ರಂಗಕರ್ಮಿ ನಾ. ದಾಮೋದರ ಶೆಟ್ಟಿ, ಜಯಲಕ್ಷ್ಮಿ ಪಾಟೀಲ ಇದ್ದರು

'ಈ ಹೊತ್ತಿಗೆ'ಯ ಜಯಲಕ್ಷ್ಮಿ ಪಾಟೀಲ ಮಾತನಾಡಿ, 'ಇದು ಅಪ್ಪಟ ಹೆಣ್ಣಿನ ಕೃತಿ ಎಂದು ಬಣ್ಣಿಸಿದರು. ಶ್ಯಾಮಲಾ ಮಾಧವ ಅವರು ಬದುಕನ್ನು ಕಟ್ಟಿಕೊಂಡ ಬಗೆ ಮಾದರಿಯಾಗಿದೆ. ಎಲ್ಲಾ ಹೆಣ್ಣುಮಕ್ಕಳ ಪ್ರಯಾಣದಂತಿದೆ' ಎಂದು ಬಣ್ಣಿಸಿದರು.

ರಂಗಕರ್ಮಿ ನಾ. ದಾಮೋದರ ಶೆಟ್ಟಿ ಮಾತನಾಡಿ, 'ಶ್ಯಾಮಲಾ ಮಾಧವ ಅವರ ಕೃತಿಯ ಹೆಸರೇ ಆಶಾಭಾವ, ಆತಂಕ ಎರಡನ್ನೂ ಬಿಂಬಿಸುವಂತಿದೆ' ಎಂದರು.

‘ಶೋಷಿತರನ್ನು ವಂಚಿಸಿ ಸಮೃದ್ಧ ಕರ್ನಾಟಕ ಹೇಗೆ ಸಾಧ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಜೆಟ್‌ನಲ್ಲಿ ಶೋಷಿತ ಸಮುದಾಯಗಳನ್ನು ವಂಚಿಸಿ ಸಮೃದ್ಧ ಕರ್ನಾಟಕ ನಿರ್ಮಾಣ ಹೇಗೆ ಸಾಧ್ಯ' ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಘಟಕದ ಅಧ್ಯಕ್ಷ ಎಂ.ವೆಂಕಟಸ್ವಾಮಿ ಪ್ರಶ್ನಿಸಿದರು.

'ರಾಜ್ಯ ಬಜೆಟ್ ಜನಪರವೋ? ಜಾತಿಪರವೋ?' ಎಂಬ ವಿಷಯದ ಕುರಿತು ನಗರದಲ್ಲಿ ಶನಿವಾರ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

'ಈ ಬಾರಿಯ ಬಜೆಟ್ ಅಹಿಂದ ವರ್ಗಗಳ ವಿರೋಧಿ ಬಜೆಟ್ ಆಗಿದೆ. ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯದ ನಿಗಮಗಳಿಗೆ ತಲಾ ₹500 ಕೋಟಿ ನೀಡಿದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ 16 ನಿಗಮಗಳಿಗೆ ₹500 ಕೋಟಿ ಅನುದಾನ ನೀಡಲಾಗಿದೆ. ಇದರಿಂದ ದಲಿತ ಸಮುದಾಯಕ್ಕೆ ದೊಡ್ಡ ಅನ್ಯಾಯವಾಗಿದೆ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.



ವೆಂಕಟಸ್ವಾಮಿ

ಅಂಬೇಡ್ಕರ್ ಹಾಗೂ ಬುದ್ಧ ಅಧ್ಯಯನ ಕೇಂದ್ರಕ್ಕೆ 70 ವರ್ಷಗಳಿಂದ ಯಾವುದೇ ಸರ್ಕಾರಗಳು ಅನುದಾನ ನೀಡಿಲ್ಲ. ಈ ಬಾರಿ ಅನುದಾನ ನೀಡುವಂತೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಸೂಲಗಿತ್ತಿ ನರಸಮ್ಮ ಸ್ಮಾರಕ ನಿರ್ಮಾಣಕ್ಕೆ ₹5 ಕೋಟಿ ಅನುದಾನ ಕೇಳಲಾಗಿತ್ತು. ಅದನ್ನೂ ನೀಡಿಲ್ಲ. ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ರಚಿಸಬೇಕು ಎಂಬ ಬೇಡಿಕೆ ಈಡೇರಿಲ್ಲ. ನೆಪಮಾತ್ರಕ್ಕೆ ಇದು ಸಮೃದ್ಧ ಕರ್ನಾಟಕ ಬಜೆಟ್' ಎಂದರು.

'ತಳ ಸಮುದಾಯಗಳ ಬೇಡಿಕೆಗಳನ್ನು ಸರ್ಕಾರ ಈಡೇರಿಸದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು' ಎಂದು ಅವರು ಎಚ್ಚರಿಕೆ ನೀಡಿದರು.

ನಿವೃತ್ತ ಐಎಎಸ್ ಅಧಿಕಾರಿ ಡಾ.ರಾಜು, ಚಿಂತಕ ಲೋಲಾಕ್ಷ ಇದ್ದರು.

‘ಧನ್ಯವಾದ’ ನಾಟಕ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಗತಿ ಶಾಲೆಯ ತಂಡವು ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಸರ್ಕಾರಿ ಶಾಲಾ ಮಕ್ಕಳಿಂದ ಸಾಮಾಜಿಕ ಸಂದೇಶವುಳ್ಳ 'ಧನ್ಯವಾದ–2.0' ಎಂಬ ನಾಟಕ ಪ್ರದರ್ಶನವನ್ನು ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಶುಕ್ರವಾರ ಏರ್ಪಡಿಸಿತ್ತು.

ಆನೇಕಲ್ ತಾಲ್ಲೂಕಿನ ಮುಗಲೂರು ಕ್ಲಸ್ಟರ್ ವ್ಯಾಪ್ತಿಗೆ ಬರುವ 13 ಸರ್ಕಾರಿ ಶಾಲೆಗಳ 25 ವಿದ್ಯಾರ್ಥಿಗಳು ನಾಟಕ ಪ್ರದರ್ಶಿಸಿದರು.

'ಸರ್ಕಾರಿ ಶಾಲೆಯ ವಿದ್ಯಾರ್ಥಿಗಳನ್ನು ಸಾಮಾಜಿಕವಾಗಿ ತೊಡಗಿಸುವುದು ಹಾಗೂ ಅವರ ಪ್ರತಿಭೆಗೆ ವೇದಿಕೆ ಕಲ್ಪಿಸುವ ಉದ್ದೇಶದಿಂದ ಅವರಿಂದಲೇ ನಾಟಕ ಪ್ರದರ್ಶನ ಏರ್ಪಡಿಸಿದೆವು. ಕೊರೊನಾ ಇದ್ದ ಕಾರಣಕ್ಕೆ ಭೌತಿಕ ಹಾಗೂ ಆನ್‌ಲೈನ್ ಮೂಲಕವೂ ನಾಟಕ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿತ್ತು' ಎಂದು ಪ್ರಗತಿ ಶಾಲೆಯ (ಯುವಿ ಗ್ರೂಪ್) ಮುಖ್ಯಸ್ಥ ವಿನಯ್ ಶಿಂಧೆ ತಿಳಿಸಿದರು.

'ಕಾರ್ಯಕ್ರಮದಲ್ಲಿ ಡಿಎಕ್ಸ್‌ಸಿ ಟೆಕ್ನಾಲಜೀಸ್ ಸಂಸ್ಥೆಯ ಕಾರ್ಯಾಚರಣೆ ವಿಭಾಗದ ಮುಖ್ಯಸ್ಥ ನೀಲೇಶ್ ದೇಶಪಾಂಡೆ, ನಿರ್ದೇಶಕ ಅಬರಾರ್ ಭಾಗವಹಿಸಿದ್ದರು.

ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್: ಮಳಿಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಮುಂದಿನ ಒಂದು ವರ್ಷದಲ್ಲಿ 56 ಮಳಿಗೆಗಳನ್ನು ಪ್ರಾರಂಭಿಸಲು ಕಾರ್ಯಯೋಜನೆ ರೂಪಿಸಿದೆ.



ಎಂ.ಪಿ. ಅಹ್ಮದ್

ಜಾಗತಿಕ ಮಟ್ಟದಲ್ಲಿ ಕಾರ್ಯವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಲಾಗುತ್ತಿದೆ. ದೇಶದಲ್ಲಿ ಹೊಸದಾಗಿ 40 ಮಳಿಗೆಗಳು ಹಾಗೂ ಹೊರಗಡೆ 16 ಮಳಿಗೆಗಳನ್ನು ಪ್ರಾರಂಭಿಸುವ ಗುರಿ ಹಾಕಿಕೊಳ್ಳಲಾಗಿದೆ. ಇದರ ಭಾಗವಾಗಿ ಒಟ್ಟು ₹ 1,600 ಕೋಟಿ ಹೂಡಿಕೆ ಮಾಡಲಾಗುತ್ತಿದೆ. ಇದರಿಂದ 1,750 ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ದೇಶದಲ್ಲಿ ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ದೆಹಲಿ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಒಡಿಶಾ ಮತ್ತು ಕೇರಳವನ್ನು ಕೇಂದ್ರೀಕರಿಸಲಾಗುತ್ತದೆ ಎಂದು ಸಂಸ್ಥೆ ತಿಳಿಸಿದೆ.

'ಅಂತರರಾಷ್ಟ್ರೀಯ ಮಟ್ಟದಲ್ಲಿ ಸಿಂಗಪುರ, ಮಲೇಷ್ಯಾ, ಒಮಾನ್, ಕತಾರ್, ಬಹ್ರೇನ್ ಮತ್ತು ದುಬೈನಲ್ಲಿ ಮಾರುಕಟ್ಟೆಯನ್ನು ವಿಸ್ತರಿಸಲಾಗುತ್ತದೆ. ಜಾಗತಿಕ ಮಟ್ಟದಲ್ಲಿ ಆರ್ಥಿಕ ವ್ಯವಸ್ಥೆ ಏರುಪೇರಾದ ಕಾರಣ ಅನೇಕ ಚಿನ್ನಾಭರಣ ಚಿಲ್ಲರೆ ವ್ಯಾಪಾರಿಗಳು ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಮಾರುಕಟ್ಟೆಯು ಭವಿಷ್ಯದಲ್ಲಿ ಬೆಳವಣಿಗೆ ಹೊಂದಲಿದೆ ಎಂಬ ಆತ್ಮವಿಶ್ವಾಸದಿಂದ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಮಾಡಲಾಗುತ್ತಿದೆ' ಎಂದು ಮಲಬಾರ್ ಗ್ರೂಪ್‌ನ ಅಧ್ಯಕ್ಷ ಎಂ.ಪಿ. ಅಹ್ಮದ್ ಹೇಳಿದ್ದಾರೆ.

'ಈ ವರ್ಷ ಪ್ರಾರಂಭಿಸಲು ಉದ್ದೇಶಿಸಿದ್ದ ಮಳಿಗೆಗಳಲ್ಲಿ ಈಗಾಗಲೇ 12 ಕಾರ್ಯಾರಂಭ ಮಾಡಿವೆ. ನಮ್ಮ ಉತ್ಪನ್ನಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿವೆ. ಪಾರದರ್ಶಕತೆ ಮತ್ತು ಗ್ರಾಹಕರ ವಿಶ್ವಾಸ ನಮ್ಮ ವ್ಯವಹಾರದ ಆಧಾರ ಸ್ತಂಭಗಳಾಗಿವೆ' ಎಂದು ಮಲಬಾರ್ ಗ್ರೂಪ್‌ನ ಕಾರ್ಯನಿರ್ವಾಹಕ ನಿರ್ದೇಶಕ ಅಬ್ದುಲ್ ಸಲಾಂ ಕೆ.ಪಿ. ತಿಳಿಸಿದ್ದಾರೆ.



ಮಹಿಳಾ ಸಾಧಕಿಯರನ್ನು ಶಾಸಕ ಕೃಷ್ಣಬೈರೇಗೌಡ ಸನ್ಮಾನಿಸಿದರು. ಮಾಜಿ ಮೇಯರ್ ಜಿ.ಪದ್ಮಾವತಿ, ರಾಜ್ಯ ಯುವಕಾಂಗ್ರೆಸ್ ಘಟಕದ ಅಧ್ಯಕ್ಷ ರಕ್ಷಾ ರಾಮಯ್ಯ, ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಕಾಂಗ್ರೆಸ್ ಮುಖಂಡರಾದ ಆರ್ ಎಂ.ಶ್ರೀನಿವಾಸ್, ಎನ್.ಎನ್.ಶ್ರೀನಿವಾಸಯ್ಯ, ಗೋಪಾಲಕೃಷ್ಣ ಇದ್ದರು

ದೊಡ್ಡಬೊಮ್ಮಸಂದ್ರ: ಮಹಿಳಾ ದಿನಾಚರಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಮಹಿಳೆಯರು ಮಕ್ಕಳನ್ನು ಬೆಳೆಸುವುದರಿಂದ ಹಿಡಿದು, ಮನೆಯಲ್ಲಿ ಮತ್ತು ಹೊರಗೆ ದುಡಿಯುವುದರ ಜೊತೆಗೆ ಸಂಸಾರ ನಿಭಾಯಿಸುವುದೂ ಸೇರಿದಂತೆ ಎಲ್ಲ ರಂಗಗಳಲ್ಲಿಯೂ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ. ಆದರೆ, ಅನೇಕ ಸಲ ಅದನ್ನು ನಾವು ಗುರುತಿಸದಿರುವುದು ವಿಷಾದದ ಸಂಗತಿ ಎಂದು ಶಾಸಕ ಕೃಷ್ಣಬೈರೇಗೌಡ ಬೇಸರ ವ್ಯಕ್ತಪಡಿಸಿದರು.

ದೊಡ್ಡಬೊಮ್ಮಸಂದ್ರದಲ್ಲಿ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಮಹಿಳಾ ಕಾಂಗ್ರೆಸ್ ಸಮಿತಿ ವಾರ್ಡ್ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

'ಇಂದು ಸಮಾಜ ಇಷ್ಟರಮಟ್ಟಿಗೆ ಬೆಳವಣಿಗೆ ಹೊಂದಲು ಮಹಿಳೆಯರ ದುಡಿಮೆಯೂ ಕಾರಣವಾಗಿದೆ. ಅವಕಾಶ ಸಿಕ್ಕಾಗ ಇತರರಿಗಿಂತ ಚೆನ್ನಾಗಿ ಕೆಲಸಮಾಡಿ ತಾವು ಯಾರಿಗೂ ಕಡಿಮೆಯಿಲ್ಲ ಎಂಬುದನ್ನು ಸಾಬೀತುಪಡಿಸಿದ್ದು, ಅವರ ಕೊಡುಗೆಯನ್ನು ಗುರುತಿಸಿ ಸ್ಮರಿಸಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಬೇಕು' ಎಂದರು.

ಇದೇ ಸಂದರ್ಭದಲ್ಲಿ ವಾರ್ಡ್‌ನ ನೂತನ ಮಹಿಳಾ ಕಾಂಗ್ರೆಸ್ ಸಮಿತಿಯನ್ನು ಮರುಸ್ಥಾಪನೆ ಮಾಡಲಾಯಿತು.

ಗೊಲ್ಲಹಳ್ಳಿ: ಸ್ವಚ್ಛತಾ ಅಭಿಯಾನ

ಬೆಂಗಳೂರು: ಕುಮಾರಸ್ವಾಮಿ ಬಡಾವಣೆಯಲ್ಲಿರುವ ದಯಾನಂದ ಸಾಗರ ತಾಂತ್ರಿಕ ಮಹಾವಿದ್ಯಾಲಯದ ಸಿವಿಲ್ ಎಂಜಿನಿಯರಿಂಗ್ ವಿಭಾಗವು ಬೆಂಗಳೂರಿನ 'ಇಂಡಿಯನ್ ವಾಟರ್ ವರ್ಕ್ಸ್' ಕೇಂದ್ರದ ಸಹಯೋಗದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಎಚ್.ಗೊಲ್ಲಹಳ್ಳಿಯಲ್ಲಿ ಶುಕ್ರವಾರ ಗ್ರಾಮ ನೈರ್ಮಲ್ಯ ಕಾರ್ಯಕ್ರಮ ಹಮ್ಮಿಕೊಂಡಿತ್ತು.

'ಸ್ವಚ್ಛ ಭಾರತ' ಅಭಿಯಾನದ ಅಡಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಕಾಲೇಜಿನ ಒಟ್ಟು 195 ವಿದ್ಯಾರ್ಥಿಗಳು ಹಾಗೂ ಇತರ ಸಿಬ್ಬಂದಿ ಪಾಲ್ಗೊಂಡಿದ್ದರು.

'ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಒಟ್ಟು 10 ಗಿಡಗಳನ್ನು ನೆಡಲಾಯಿತು. ವಿದ್ಯಾರ್ಥಿಗಳೆಲ್ಲಾ ಒಟ್ಟುಗೂಡಿ ಮೂರು ಕಿ.ಮೀ.ವ್ಯಾಪ್ತಿಯಲ್ಲಿ ಚರಂಡಿ ಸ್ವಚ್ಛಗೊಳಿಸಿದರು. ಇ.ಎಸ್.ಐ.ಆಸ್ಪತ್ರೆಯ ವೈದ್ಯ ಡಾ.ಬಿ.ಎಸ್.ಸತೀಶ್ ಪ್ರಸಾದ್ ಅವರು ಆರೋಗ್ಯ ಹಾಗೂ ಶುಚಿತ್ವದ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಿದರು. ಕಾಲೇಜಿನ ವತಿಯಿಂದ ಶಾಲೆಗೆ 'ವಾಟರ್ ಪ್ಯೂರಿಫಯರ್'ಅನ್ನು ಕೊಡುಗೆಯಾಗಿ ನೀಡಲಾಯಿತು' ಎಂದು ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಎಚ್.ಕೆ.ರಾಮರಾಜು ತಿಳಿಸಿದರು.

ದಯಾನಂದ ಸಾಗರ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಸಿ.ಪಿ.ಎಸ್.ಪ್ರಕಾಶ್, ಬೆಂಗಳೂರು ದಕ್ಷಿಣ ವಲಯ–1ರ ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪ್ರಕಾಶ್, ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ ಸಿ.ಎನ್.ಪುಷ್ಪಲತಾ ಪರಮಶಿವಯ್ಯ ಭಾಗವಹಿಸಿದ್ದರು.

ವಿದ್ಯಾರ್ಥಿಗಳಿಂದ ಕೃಷಿ ಮಾಹಿತಿ ಪಡೆದ ಗ್ರಾಮಸ್ಥರು

ಹೆಸರಘಟ್ಟ: ಅಣಬೆ ಬೇಸಾಯ, ಹೈನುಗಾರಿಕೆ, ಜೇನು ಸಾಕಾಣಿಕೆಯಿಂದ ರೈತರಿಗೆ ಬರುವ ಆದಾಯ, ಮಣ್ಣಿನ ಪರೀಕ್ಷೆಯಿಂದ ಕೃಷಿಗೆ ಆಗುವ ಅನುಕೂಲಗಳ ಬಗ್ಗೆ ದಾಸನಪುರ ಹೋಬಳಿ ತೋಟಗೆರೆ ಗ್ರಾಮಸ್ಥರಿಗೆ ದೊಡ್ಡಬಳ್ಳಾಪುರದ ರೈ ತಾಂತ್ರಿಕ ಮಹಾ ವಿದ್ಯಾಲಯದ ಕೃಷಿ ವಿಭಾಗದ ವಿದ್ಯಾರ್ಥಿಗಳು ಮಾಹಿತಿ ನೀಡಿದರು.

ವಿದ್ಯಾಲಯದಿಂದ ಹಮ್ಮಿಕೊಂಡಿರುವ ಕೃಷಿ ಪ್ರಸಾರ 2021ರ ಕಾರ್ಯಕ್ರಮದಲ್ಲಿ ಭಾಗವಹಿಸಿ ಗ್ರಾಮಸ್ಥರಿಗೆ ಕೃಷಿಯ ತಾಂತ್ರಿಕತೆ ಮತ್ತು ಬೆಳೆಗಳಿಗೆ ಬರುವ ರೋಗಗಳ ಕುರಿತು ವಿದ್ಯಾರ್ಥಿಗಳು ವಿವರಿಸಿದರು.

'ತೋಟಗೆರೆ ಗ್ರಾಮದಲ್ಲಿ ಸುಮಾರು ಒಂದೂವರೆ ತಿಂಗಳು ವಾಸ್ತವ್ಯ ಹೂಡಿ ಕೃಷಿ ಕ್ಷೇತ್ರದಲ್ಲಿ ಅವರಿಗೆ ಬೇಕಾಗಿರುವ ಜ್ಞಾನ, ಮಾಹಿತಿ ಕಲೆ ಹಾಕಲಾಗಿದೆ. ಸಾಂಪ್ರದಾಯಿಕ ಕೃಷಿ ಪದ್ಧತಿಯಲ್ಲಿ ಯಶಸ್ಸು ಗಳಿಸಿದವರ ಬಗ್ಗೆಯೂ ಮಾಹಿತಿ ಸಂಗ್ರಹಿಸಿದ್ದೇವೆ. ಇಡೀ ಗ್ರಾಮದ ಕೃಷಿ ಪದ್ಧತಿ ಅವಲೋಕನ ಮಾಡಿ ಅವರಿಗೆ ಬೇಕಿರುವ ಅರಿವು ನೀಡಲಾಗಿದೆ' ಎಂದು ವಿದ್ಯಾರ್ಥಿನಿ ಟಿ.ಆರ್. ರಮ್ಯಾ ಸಂತಸ ವ್ಯಕ್ತಪಡಿಸಿದರು.

'ಕೃಷಿ ಮಾಡುತ್ತಲೇ ಗ್ರಾಮಸ್ಥರು ತಮ್ಮ ಖರ್ಚುಗಳನ್ನು ನಿಭಾಯಿಸಲು ಹಲವು ಉಪ ಕಸಬುಗಳನ್ನು ಮಾಡಬಹುದು' ಎಂದು ವಿದ್ಯಾರ್ಥಿನಿ ಪುಷ್ಪ ಶೆಟ್ಟರ್ ತಿಳಿಸಿದರು.

'ವಿದ್ಯಾರ್ಥಿಗಳು ಕೃಷಿ ಕ್ಷೇತ್ರದ ಬಗ್ಗೆ ನಮಗೆ ತಿಳಿಯದೇ ಇರುವ ಅನೇಕ ಸಂಗತಿಗಳನ್ನು ತಿಳಿಸಿದರು. ರೇಷ್ಮೆ, ಅಣಬೆ ಬೇಸಾಯದ ಬಗ್ಗೆ ಆಸಕ್ತಿದಾಯಕ ಮಾಹಿತಿ ನೀಡಿದರು' ಎಂದು ರೈತ ಬಸವೇಗೌಡ ಸಂತಸ ವ್ಯಕ್ತಪಡಿಸಿದರು.

ಆವಲಹಳ್ಳಿ: ಸಾಹಿತ್ಯ ಸಮ್ಮೇಳನದಲ್ಲಿ ಸಿದ್ದಲಿಂಗಯ್ಯ ಆಗ್ರಹ

‘ಆಂಗ್ಲ ಮಾಧ್ಯಮ ಶಾಲೆಗಳಿಗೆ ದಂಡ ವಿಧಿಸಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕನ್ನಡ ಮಾತನಾಡಿದರೆ ದಂಡ ವಿಧಿಸುತ್ತಾರೆ. ಅಂತಹ ಶಾಲೆಗಳನ್ನು ಪಟ್ಟಿ ಮಾಡಿ ಸರ್ಕಾರ ದಂಡ ವಿಧಿಸಬೇಕು. ನಮ್ಮ ಮಾತೃಭಾಷೆ ಕನ್ನಡ. ನಮ್ಮ ಮಕ್ಕಳು ಯಾವುದೇ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿದರೂ ಕನ್ನಡ ಭಾಷೆ ಮರೆಯಬಾರದು' ಎಂದು ಹಿರಿಯ ಕವಿ ಡಾ.ಸಿದ್ದಲಿಂಗಯ್ಯ ಹೇಳಿದರು.

ಬೆಂಗಳೂರು ಪೂರ್ವ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಆವಲಹಳ್ಳಿಯಲ್ಲಿ ಹಮ್ಮಿಕೊಂಡಿದ್ದ ಪ್ರಥಮ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡಿದರು.

ಸಮ್ಮೇಳನದ ಅಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ, 'ಕೇಂದ್ರ ಸರ್ಕಾರದ ಹಿಂದಿ ದಬ್ಬಾಳಿಕೆ ನೀತಿ ಹಾಗೂ ಇಂಗ್ಲಿಷ್ ವ್ಯಾಮೋಹವನ್ನು ಹಿಮ್ಮೆಟ್ಟಿಸಲು ಕನ್ನಡ ಸಾಹಿತ್ಯ ಪರಿಷತ್ತು ರಾಜಕೀಯ ಪಕ್ಷವಾಗಿ ಹೊರಹೊಮ್ಮಬೇಕು' ಎಂದರು.



ಸಮ್ಮೇಳನವನ್ನು ಡಾ.ಸಿದ್ದಲಿಂಗಯ್ಯ ಉದ್ಘಾಟಿಸಿದರು. ಸಮ್ಮೇಳನಾಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ, ಮಾಯಣ್ಣ, ಬೈರಮಂಗಲ ರಾಮೇಗೌಡ, ಗಣೇಶ್ ಇದ್ದರು

'ರಾಜಕೀಯ ಪಕ್ಷಗಳ ಮತ ಬ್ಯಾಂಕ್ ಲೆಕ್ಕಾಚಾರದಿಂದ ಕನ್ನಡಿಗರಿಗೆ ಹಿನ್ನಡೆಯಾಗುತ್ತಿದೆ. ಅನ್ಯ ಭಾಷಿಕರ ದಬ್ಬಾಳಿಕೆಯು ನಗರದಲ್ಲಿ ಹೆಚ್ಚಾಗುತ್ತಿದೆ' ಎಂದರು.

ಲೇಖಕ ಡಾ. ಬೈರಮಂಗಲ ರಾಮೇಗೌಡ, ಸಾಹಿತ್ಯ ಪರಿಷತ್ತು ನಗರ ಘಟಕದ ಅಧ್ಯಕ್ಷ ಮಾಯಣ್ಣ, ಜಿಲ್ಲಾ ಪಂಚಾಯಿತಿ ಸದಸ್ಯ ಗಣೇಶ್, ಬಿದರಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ವಿ.ವರುಣ್, ಲೇಖಕ ಹ.ರಾ ನಾಗರಾಜಾಚಾರ್ಯ ಹಾಜರಿದ್ದರು.

ಸಮ್ಮೇಳನಾಧ್ಯಕ್ಷರನ್ನು ಬಿದರಹಳ್ಳಿಯಿಂದ ಆವಲಹಳ್ಳಿಯವರೆಗೆ ಸಾಂಸ್ಕೃತಿಕ ಕಲಾ ತಂಡಗಳ ಪ್ರದರ್ಶನದೊಂದಿಗೆ ರಥದಲ್ಲಿ ಕರೆತರಲಾಯಿತು.

ಡಿಕೆಶಿ ವಿರುದ್ಧ ಅಶ್ಲೀಲ ಪದ ಬಳಕೆಗೆ ಖಂಡನೆ • ಜಾರಕಿಹೊಳಿ ಭಾವಚಿತ್ರ ಸುಟ್ಟು ಆಕ್ರೋಶ

ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಪ್ರಕರಣದಲ್ಲಿ ರಮೇಶ ಜಾರಕಿಹೊಳಿ ಅವರನ್ನು ಬಂಧಿಸುವಂತೆ ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ ಬೆನ್ನಲ್ಲೆ, ಹೆಣ್ಣನ್ನು ಮುಂದಿಟ್ಟು ಕೀಳು ಮಟ್ಟದ ರಾಜಕಾರಣ ಮಾಡುತ್ತಿರುವ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ರಮೇಶ ಜಾರಕಿಹೊಳಿ ಬೆಂಬಲಿಗರು ಪ್ರತಿಭಟನೆ ನಡೆಸಿದರು.

ಸದಾಶಿವನಗರದಲ್ಲಿರುವ ಇಬ್ಬರು ನಾಯಕರ ನಿವಾಸಕ್ಕೆ ನುಗ್ಗಲು ಯತ್ನಿಸಿದ ಕಾಂಗ್ರೆಸ್– ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು. ಇಬ್ಬರು ನಾಯಕರ ನಿವಾಸದ ಬಳಿ ಬಿಗಿ ಪೊಲೀಸ್ ಭದ್ರತೆ ಏರ್ಪಡಿಲಾಗಿದೆ.

ಡಿ.ಕೆ. ಶಿವಕುಮಾರ್ ವಿರುದ್ಧ ರಮೇಶ ಜಾರಕಿಹೊಳಿ ಏಕವಚನದಲ್ಲಿ ವಾಗ್ದಾಳಿ ನಡೆಸಿದ ತಕ್ಷಣ, ಸಿ.ಡಿ ಪ್ರಕರಣದಲ್ಲಿ ಸಿಲುಕಿ ಮಹಿಳಾ ಸಮುದಾಯಕ್ಕೆ ಅನ್ಯಾಯ ಮಾಡಿರುವ ರಮೇಶ ಜಾರಕಿಹೊಳಿ ಅವರನ್ನು ಬಂಧಿಸಿ ವಿಚಾರಣೆ ನಡೆಸುವಂತೆ ಆಗ್ರಹಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಶಿವಕುಮಾರ್ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವ ರಮೇಶ್ ಜಾರಕಿಹೊಳಿ ಕ್ಷಮೆ ಕೇಳುವಂತೆ ಒತ್ತಾಯಿಸಿ ಘೋಷಣೆ ಕೂಗಿದರು. ಶಿವಕುಮಾರ್ ಸಮ್ಮುಖದಲ್ಲಿ ಕ್ಷಮೆ ಕೋರಬೇಕು ಎಂದು ಪಟ್ಟು ಹಿಡಿದರು.

ಸ್ಥಳದಲ್ಲಿದ್ದ ಪೊಲೀಸರು, 'ಪ್ರತಿಭಟನೆಗೆ ಅವಕಾಶವಿಲ್ಲ. ವಾಪಸು ಹೋಗಿ' ಎಂದರು. ಅದಕ್ಕೆ ಪ್ರತಿಭಟನಕಾರರು ಒಪ್ಪಲಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿದ್ದ ಪೊಲೀಸರು, ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾ ರಾಮಯ್ಯ ಸೇರಿದಂತೆ ಹಲವರನ್ನು ವಶಕ್ಕೆ ಪಡೆದು ಜೀಪಿನಲ್ಲಿ ಕರೆದೊಯ್ದರು. ಇದಕ್ಕೂ ಮೊದಲು ಯುವ ಕಾಂಗ್ರೆಸ್ಸಿನ ಮತ್ತೊಂದು ತಂಡ ರಮೇಶ ಜಾರಕಿಹೊಳಿ ಮನೆ ಮುಂದೆ ಪ್ರತಿಭಟನೆ ನಡೆಸಿತ್ತು, ಅವರನ್ನೂ ಪೊಲೀಸರು ವಶಕ್ಕೆ ಪಡೆದು ಕರೆದೊಯ್ದರು.

ಮತ್ತೊಂದೆಡೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಡಿ.ಕೆ. ಶಿವಕುಮಾರ್ ಅವರ ಮನೆಯತ್ತ ಬಂದು ರಕ್ಷಣಾ ಕೋಟೆ ನಿರ್ಮಿಸಿದ್ದರು. ಆ ಬೆನ್ನಿಗೆ ಶಿವಕುಮಾರ್ ನಿವಾಸದ ಮುಂದೆ ಪ್ರತಿಭಟನೆಗೆ ರಮೇಶ್ ಬೆಂಬಲಿಗರು ಮುಂದಾದರು. ಬಿಜೆಪಿ ಬಾವುಟ ಹಿಡಿದು ಶಿವಕುಮಾರ್ ವಿರುದ್ಧ ಧಿಕ್ಕಾರ ಕೂಗಿದರು. ಪೊಲೀಸರು ಹಾಗೂ ಕಾರ್ಯಕರ್ತರ ನಡುವೆ ಮಾತಿನ ಚಕಮಕಿಯೂ ನಡೆಯಿತು.

ವಿಷಾದ: ರಮೇಶ ಜಾರಕಿಹೊಳಿ ಮಾತನಾಡಿ, 'ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆ ಮಾಡಲು ಎಲ್ಲರಿಗೂ ಹಕ್ಕಿದೆ. ಯಾರು ಬೇಕಾದರೂ ಪ್ರತಿಭಟನೆ ಮಾಡಬಹುದು. ಆದರೆ, ಅವಾಚ್ಯ ಶಬ್ದ ಬಳಸಬಾರದಿತ್ತು. ಅದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. 24 ದಿನಗಳಿಂದ ತೇಜೋವಧೆ ನಡೆಯುತ್ತಿದೆ. ಸಹಜವಾಗಿ ಬೇಸರದಿಂದ ಹೀಗೆ ಹೇಳಿದ್ದೇನೆ' ಎಂದರು.

ಹೆದ್ದಾರಿ ತಡೆದು ಪ್ರತಿಭಟನೆ (ಮಂಡ್ಯ ವರದಿ): ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬಗ್ಗೆ ಶಾಸಕ ರಮೇಶ್ ಜಾರಕಿಹೊಳಿ ಅಶ್ಲೀಲ ಪದ ಬಳಸಿರುವುದನ್ನು ಖಂಡಿಸಿ, ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ರಾತ್ರಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಕಚೇರಿಯಿಂದ ಸರ್. ಎಂ.ವಿಶ್ವೇಶ್ವರಯ್ಯ ಪ್ರತಿಮೆವರೆಗೆ ಪಂಜು ಹಿಡಿದು ಮೆರವಣಿಗೆ ನಡೆಸಿದರು. ರಮೇಶ್ ಜಾರಕಿಹೊಳಿ ಭಾವಚಿತ್ರ ಸುಟ್ಟು ಆಕ್ರೋಶ ಹೊರ ಹಾಕಿದರು.

ಎಸ್ಐಟಿ ವಿಚಾರಣೆ ನಡೆಸುತ್ತಿರುವ ಸಂದರ್ಭದಲ್ಲಿ ಪ್ರಕರಣ ತಿರುಚುತ್ತಿರುವ ರಮೇಶ್ ಜಾರಕಿಹೊಳಿ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

'ಹೆಣ್ಣು ಮಗಳ ಕುಟುಂಬದವರನ್ನು ಬೆದರಿಸಿ, ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಹೇಳಿಕೆ ಕೊಡಿಸಿದ್ದಾರೆ. ಯಾರು ತಪ್ಪು ಮಾಡಿದ್ದಾರೆ ಎಂಬುದು ರಾಜ್ಯದ ಜನತೆಗೆ ಗೊತ್ತು. ಶಿವಕುಮಾರ್ ಅವರ ವರ್ಚಸ್ಸು ಸಹಿಸಲಾಗದೇ ಅವರ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದ ಕಾರ್ಯಕರ್ತರು, ಅವರ ಹೇಳಿಕೆ ವಿರುದ್ಧ ಇಡೀ ಒಕ್ಕಲಿಗ ಸಮುದಾಯ ಪ್ರತಿಭಟನೆ ನಡೆಸಲಿದೆ ಎಂದರು.



ಮಂಡ್ಯದಲ್ಲಿ ಶಾಸಕ ರಮೇಶ್ ಜಾರಕಿಹೊಳಿ ಹೇಳಿಕೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಪಂಜು ಹಿಡಿದು ಪ್ರತಿಭಟನೆ ನಡೆಸಿದರು

'ಮಾತೂ ಅಶ್ಲೀಲ'

ಬೆಂಗಳೂರು: 'ರಮೇಶ ಜಾರಕಿಹೊಳಿಯ ದೃಶ್ಯವಷ್ಟೇ ಅಶ್ಲೀಲವಲ್ಲ, ಮಾತೂ ಅಶ್ಲೀಲ' ಎಂದು ರಾಜ್ಯ ಕಾಂಗ್ರೆಸ್ ಘಟಕ ಟ್ವೀಟ್ ಮಾಡಿದೆ.

'ಬಿಜೆಪಿ ಸಂಸ್ಕೃತಿ ಬಿಂಬಿಸುವ 'ದೊಡ್ಡ ದೊಡ್' ಮಾತುಗಳನ್ನಾಡಿದ್ದಾರೆ. ಇದು ಹೊಲಸುತನದ ಪರಮಾವಧಿ. ಅಂಥ ಪದಗಳು ಬಿಜೆಪಿಗರ ಬಾಯಲ್ಲಿ ಮಾತ್ರ ಬರಲು ಸಾಧ್ಯ. ಬೊಮ್ಮಾಯಿಯವರೇ, ಕೇಸ್ ದಾಖಲಾಗಿದ್ದರೂ ಬಂಧಿಸದೇ ಇಂಥ ಕೀಳುಮಟ್ಟದ ನಾಟಕ ಆಡಲು ಬಿಟ್ಟಿದ್ದೀರಾ' ಎಂದೂ ಪ್ರಶ್ನಿಸಿದೆ.

'ಸಂತ್ರಸ್ತೆಗೆ ರಕ್ಷಣೆ ನೀಡುವ ಬದಲಿಗೆ ಆರೋಪಿಗೆ ನೂರಾರು ಪೊಲೀಸರನ್ನು ನಿಯೋಜಿಸಿ ಸರ್ಕಾರ ಬಿಗಿ ಭದ್ರತೆ ನೀಡುತ್ತಿದೆ. ಪೊಲೀಸರನ್ನು ಕಳಿಸಬೇಕಿದ್ದಿದ್ದು ಅರೆಸ್ಟ್ ಮಾಡುವುದಕ್ಕೋ ಅಥವಾ ರಕ್ಷಿಸುವುದಕ್ಕೋ ಬೊಮ್ಮಾಯಿಯವರೇ? ಇದೇ 'ಯುಪಿ ಮಾಡೆಲ್' ಅಲ್ಲವೇ? ಈ ನವರಂಗಿ ಆಟ ಬಿಟ್ಟು ಕೂಡಲೇ ಆರೋಪಿ ಬಂಧಿಸಿ' ಎಂದೂ ಕಾಂಗ್ರೆಸ್ ಆಗ್ರಹಿಸಿದೆ.

ನಗರದಲ್ಲಿಯೂ 'ಅರ್ಥ್ ಅವರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾಮಾನ ಬದಲಾವಣೆ ಕುರಿತು ವಿಶ್ವದಾದ್ಯಂತ ಆಚರಿಸಿದ 'ಅರ್ಥ್ ಅವರ್'ಗೆ ನಗರದಲ್ಲಿಯೂ ಶನಿವಾರ ಉತ್ತಮ ಪ್ರತಿಕ್ರಿಯೆ ಸಿಕ್ಕಿತು.

ಶನಿವಾರ ರಾತ್ರಿ 8.30ರಿಂದ 9.30ರ ಅವಧಿಯಲ್ಲಿ ಬಹುತೇಕರು ತೀರಾ ಅಗತ್ಯವಿರುವಷ್ಟು ದೀಪಗಳನ್ನು ಮಾತ್ರ ಉರಿಸಿ, ಉಳಿದ ವಿದ್ಯುತ್ ದೀಪಗಳನ್ನು ನಂದಿಸುವ ಮೂಲಕ ಅಭಿಯಾನಕ್ಕೆ ಬೆಂಬಲ ನೀಡಿದರು.

ಪರಿಸರ ಕುರಿತಾದ ವರ್ಲ್ಡ್ ವೈಡ್ ಫಂಡ್ (ಡಬ್ಲ್ಯುಡಬ್ಲ್ಯುಎಫ್) ಪ್ರತಿ ವರ್ಷ ಈ 'ಅರ್ಥ್ ಅವರ್' ಆಚರಿಸುತ್ತದೆ. ಪರಿಸರ ಸಂರಕ್ಷಣೆಯ ಜಾಗೃತಿಗಾಗಿಯೂ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗುತ್ತದೆ. 14 ವರ್ಷಗಳಿಂದ ಈ ಅಭಿಯಾನ ನಡೆಯುತ್ತಿದೆ.

ವಿದ್ಯುತ್ ಬಳಕೆಯನ್ನು ನಿಯಂತ್ರಿಸಿ, ತಾಪಮಾನವನ್ನು ಕಡಿಮೆ ಮಾಡುವ ಮೂಲಕ ಭೂಮಿಗೊಂದು ತಾಸು ಮೀಸಲಿಡುವ ಈ ಆಂದೋಲನಕ್ಕೆ ನಗರವೂ ಸಾಕ್ಷಿಯಾಯಿತು. ಪ್ರಮುಖವಾಗಿ ಬೆಸ್ಕಾಂ ಸಿಬ್ಬಂದಿ ತಮ್ಮ ಮನೆಗಳಲ್ಲಿ ಅನಗತ್ಯವಾದ ವಿದ್ಯುತ್ ದೀಪಗಳನ್ನು ಒಂದು ತಾಸು ಆರಿಸುವ ಮೂಲಕ ಬೆಂಬಲ ನೀಡಿದರು.

ಬ್ರಿಗೇಡ್ ರಸ್ತೆ, ಎಂ.ಜಿ. ರಸ್ತೆ ಮಾತ್ರವಲ್ಲದೆ ನಗರದ ಪ್ರಮುಖ ರಸ್ತೆಗಳಲ್ಲಿ ಶೇ 50ರಷ್ಟು ವಿದ್ಯುತ್ ದೀಪಗಳನ್ನು ಮಾತ್ರ ಉರಿಸಲಾಯಿತು. ವಿಧಾನಸೌಧ ಸೇರಿದಂತೆ ಹಲವು ಸರ್ಕಾರಿ ಕಟ್ಟಡಗಳಲ್ಲಿ ಮತ್ತು ಯು.ಬಿ. ಸಿಟಿ ಹಾಗೂ ಮಂತ್ರಿ ಮಾಲ್ ಸೇರಿದಂತೆ ಹಲವು ಶಾಪಿಂಗ್ ಮಾಲ್‌ಗಳಲ್ಲಿಯೂ ಈ ಒಂದು ತಾಸಿನಲ್ಲಿ ಅಗತ್ಯವಿರುವಷ್ಟು ದೀಪಗಳನ್ನು ಮಾತ್ರ ಉರಿಸಲಾಯಿತು.

'ಪ್ರತಿ ವರ್ಷದಂತೆ ಈ ಬಾರಿಯೂ ಈ ಅಭಿಯಾನವನ್ನು ಯಶಸ್ವಿಯಾಗಿ ಆಚರಿಸಲಾಯಿತು. ಬೆಸ್ಕಾಂ ವ್ಯಾಪ್ತಿಯಲ್ಲಿ ಈ ಅವಧಿಯಲ್ಲಿ ಬಳಸುತ್ತಿದ್ದ ಸರಾಸರಿ ವಿದ್ಯುತ್ ಪ್ರಮಾಣ ಮತ್ತು ಮಾ.27ರ ರಾತ್ರಿ 8.30 ರಿಂದ 9.30ರ ಅವಧಿಯಲ್ಲಿ ಬಳಸುತ್ತಿದ್ದ ವಿದ್ಯುತ್ ಪ್ರಮಾಣ ಹೋಲಿಕೆ ಮಾಡಿದರೆ, ಎಷ್ಟು ಉಳಿತಾಯವಾಗಿದೆ ಎಂಬುದು ನಂತರ ತಿಳಿಯಲಿದೆ' ಎಂದು ಬೆಸ್ಕಾಂ ಅಧಿಕಾರಿಯೊಬ್ಬರು ಹೇಳಿದರು.

ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಂಗ್ಯ: 'ಬೆಂಗಳೂರಿನಲ್ಲಿ ಆಗಾಗ ವಿದ್ಯುತ್ ಕಡಿತವಾಗುತ್ತಲೇ ಇರುವುದರಿಂದ ನಮಗೆ ನಿತ್ಯವೂ 'ಅರ್ಥ್ ಅವರ್'. ಈ ನಿಟ್ಟಿನಲ್ಲಿ ನೋಡುವುದಾದರೆ ನಾವು ದಿನವೂ ಪರಿಸರ ಸಂರಕ್ಷಣೆ ಅಭಿಯಾನದಲ್ಲಿ ಪಾಲ್ಗೊಂಡಿರುತ್ತೇವೆ' ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಹಲವರು ವ್ಯಂಗ್ಯಭರಿತ ಪೋಸ್ಟ್‌ಗಳನ್ನು ಹಾಕಿದರು.



ಸರ್ಕಾರಿ ಶಾಲೆಗಳ ದತ್ತು ಸ್ವೀಕರಿಸಿ: ದೊರೆಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಸರ್ಕಾರಿ ಶಾಲೆಗಳ ದತ್ತು ಸ್ವೀಕಾರ ಹೆಚ್ಚಾಗಬೇಕು ಹಾಗೂ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರು, ಶೌಚಾಲಯ, ಕಾಂಪೌಂಡ್ ಹಾಗೂ ಅಡುಗೆಮನೆ ನಿರ್ಮಾಣಕ್ಕೆ ಸರ್ಕಾರ ಆದ್ಯತೆ ನೀಡಬೇಕು' ಎಂದು ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ. ಎಂ. ಆರ್. ದೊರೆಸ್ವಾಮಿ ತಿಳಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಳೆದ ಬಜೆಟ್‌ನಲ್ಲಿ ಸರ್ಕಾರಿ ಶಾಲೆ ದತ್ತು ಸ್ವೀಕಾರ ಮಾಡುವ ಯೋಜನೆ ಜಾರಿಗೆ ತರಲಾಯಿತು. ಈವರೆಗೆ ಹಲವು ಶಾಸಕರು, ಸಂಸದರು, ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಖಾಸಗಿ ವಿಶ್ವವಿದ್ಯಾಲಯಗಳಿಂದ ಒಟ್ಟು ಮೂರು ಸಾವಿರ ಸರ್ಕಾರಿ ಶಾಲೆಗಳು ದತ್ತು ಸ್ವೀಕೃತಗೊಂಡಿವೆ' ಎಂದರು.

'ದತ್ತು ಶಾಲೆಗಳಲ್ಲಿ ಕಂಪ್ಯೂಟರ್ ವ್ಯವಸ್ಥೆ, ಶೌಚಗೃಹ ನಿರ್ಮಾಣ ಸೇರಿ ಹಲವು ಮೂಲ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಇನ್ನೂ ಬಹುತೇಕರು ಶಾಲೆಗಳನ್ನು ದತ್ತು ಪಡೆಯಬೇಕಿದೆ. ಜನಪ್ರತಿನಿಧಿಗಳಿಗೆ ನೀಡಿರುವ ಅನುದಾನವನ್ನು ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಬಳಕೆ ಮಾಡಬೇಕಿದೆ' ಎಂದು ಮನವಿ ಮಾಡಿದರು.

'ಜಲ ಜೀವನ್ ಮಿಷನ್' ಯೋಜನೆಯ ಅನುದಾನ ಬಳಸಿಕೊಳ್ಳಬೇಕು. ಜಿಲ್ಲಾವಾರು ಬಳಕೆಯಾಗದ ಚಾಲ್ತಿ ಖಾತೆಯ ಹಣವನ್ನು ಇಂತಹ ಕಾರ್ಯಗಳಿಗೆ ಬಳಸುವಂತೆ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ' ಎಂದು ವಿವರಿಸಿದರು.

'ಮಕ್ಕಳಿಗೆ ನೀತಿ ಕತೆಗಳನ್ನು ತಿಳಿಸುವ ಉದ್ದೇಶದಿಂದ ಸಂಪನ್ಮೂಲ ವ್ಯಕ್ತಿಗಳಿಂದ 35 ನೀತಿ ಕತೆಗಳನ್ನು ರಚಿಸಲಾಗಿದೆ. ಶೀಘ್ರದಲ್ಲೇ ಇದನ್ನು ಪುಸ್ತಕ ರೂಪಕ್ಕೆ ತಂದು ಎಲ್ಲ ಸರ್ಕಾರಿ ಶಾಲೆಗಳಿಗೆ ವಿತರಿಸಲಾಗುವುದು' ಎಂದರು.

ದತ್ತು ಶಾಲೆ ನಿರ್ವಹಣೆಗೆ ಸಮಿತಿ

'ರಾಜ್ಯದಲ್ಲಿ ದತ್ತು ಸ್ವೀಕರಿಸುವ ಸರ್ಕಾರಿ ಶಾಲೆಗಳ ಅಭಿವೃದ್ಧಿ ಹಾಗೂ ನಿರ್ವಹಣೆ ಮಾಡುವ ಉದ್ದೇಶದಿಂದ ರಾಜ್ಯಮಟ್ಟದ ಸಲಹಾ ಸಮಿತಿ ರಚಿಸಲಾಗಿದೆ' ಎಂದು ದೊರೆಸ್ವಾಮಿ ಹೇಳಿದರು.

'ಸಮಿತಿಯಲ್ಲಿ ವಿಶ್ರಾಂತ ಕುಲಪತಿ ಡಾ.ಕೆ.ಸಿದ್ದಪ್ಪ, ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್, ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಡಾ.ಜೆ. ಸೂರ್ಯ ಪ್ರಸಾದ್, ನಿವೃತ್ತ ಐಎಎಸ್ ಅಧಿಕಾರಿ ಮದನ್ ಗೋಪಾಲ್, ನಿವೃತ್ತ ಐಪಿಎಸ್ ಅಧಿಕಾರಿ ಗೋಪಾಲ್ ಹೊಸೂರು, ಮಕ್ಕಳ ತಜ್ಞೆ ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ, ಉದ್ಯಮಿ ಕರಣ್ ಕುಮಾರ್, ಅದಮ್ಯ ಚೇತನ ಮುಖ್ಯಸ್ಥೆ ತೇಜಸ್ವಿನಿ ಅನಂತ ಕುಮಾರ್ ಇದ್ದಾರೆ' ಎಂದು ದೊರೆಸ್ವಾಮಿ ಮಾಹಿತಿ ನೀಡಿದರು.

'ಮುಖ್ಯಮಂತ್ರಿ' ಚಂದ್ರುಗೆ ಸಿದ್ಧಗಂಗಾ ಸಿರಿ ಪ್ರಶಸ್ತಿ



ಬೆಂಗಳೂರು: ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ವತಿಯಿಂದ ನೀಡಲಾಗುವ 'ಸಿದ್ಧಗಂಗಾ ಸಿರಿ' ಪ್ರಶಸ್ತಿಗೆ ಹಿರಿಯ ನಟ 'ಮುಖ್ಯಮಂತ್ರಿ' ಚಂದ್ರು ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ₹10 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಅನ್ನಪೂರ್ಣೇಶ್ವರಿ ನಗರದ ಪೂರ್ಣಚಂದ್ರ ರಂಗಮಂದಿರದಲ್ಲಿ ಏಪ್ರಿಲ್ 1ರಂದು ಸಂಜೆ 5.30ಕ್ಕೆ ನಡೆಯಲಿರುವ ಶಿವಕುಮಾರ ಸ್ವಾಮೀಜಿ ಜಯಂತಿ ಕಾರ್ಯಕ್ರಮದಲ್ಲಿ ಸಾಹಿತಿ ಗೊ.ರು.ಚನ್ನಬಸಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಪುಸ್ತಕದಲ್ಲೇ ಉಳಿಯುತ್ತಿದೆ ನ್ಯಾಯ: ವಿವೇಕ ರೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಯ ಎನ್ನುವುದು ನ್ಯಾಯಾಲಯ ಮತ್ತು ಕಾನೂನು ಪುಸ್ತಕದಲ್ಲಿ ಮಾತ್ರ ಉಳಿದು ಸಂಕುಚಿತಗೊಳ್ಳುತ್ತಿದೆ. ನೈತಿಕ ನೆಲೆಯಲ್ಲಿ ನ್ಯಾಯವನ್ನು ನೋಡುವ ಚಿಂತನಾ ಕ್ರಮವನ್ನು ನಾವು ಕಳೆದುಕೊಂಡಿದ್ದೇವೆ' ಎಂದು ಹಿರಿಯ ವಿದ್ವಾಂಸ ಬಿ.ಎ.ವಿವೇಕ ರೈ ಬೇಸರ ವ್ಯಕ್ತಪಡಿಸಿದರು.

ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

2020ನೇ ಸಾಲಿನ 'ಮಾಸ್ತಿ ಪ್ರಶಸ್ತಿ'ಯನ್ನು ಲೇಖಕರಾದ ಸಂಧ್ಯಾ ಎಸ್. ಪೈ, ಎಸ್.ಆರ್. ವಿಜಯಶಂಕರ, ಸುಬ್ರಾಯ ಚೊಕ್ಕಾಡಿ, ಕೇಶವರೆಡ್ಡಿ ಹಂದ್ರಾಳ, ಸ. ರಘುನಾಥ ಅವರಿಗೆ ಪ್ರದಾನ ಮಾಡಿದರು.

ಪ್ರಶಸ್ತಿ ಪುರಸ್ಕೃತರಲ್ಲಿ ಪುರುಷೋತ್ತಮ ಬಿಳಿಮಲೆ ಗೈರಾಗಿದ್ದರು. ಪ್ರಶಸ್ತಿಯು ತಲಾ ₹ 25 ಸಾವಿರ ನಗದು, ಫಲಕ ಒಳಗೊಂಡಿದೆ.

'ತರಂಗ' ವಾರಪತ್ರಿಕೆ ವ್ಯವಸ್ಥಾಪಕ ಸಂಪಾದಕಿ ಸಂಧ್ಯಾ ಎಸ್. ಪೈ, 'ಮಕ್ಕಳಿಗೆ ನಮ್ಮ ಸಂಸ್ಕೃತಿ ಹಾಗೂ ಸಂಸ್ಕಾರಗಳ ಬಗ್ಗೆ ತಿಳಿಸುವ ಕೃತಿಗಳು ಇತ್ತೀಚಿನ ದಿನಗಳಲ್ಲಿ ಹೊರಬರುತ್ತಿಲ್ಲ. ಈ ತರಹದ ಸಾಹಿತ್ಯವನ್ನು ಸೃಷ್ಟಿಸುವ ಕೆಲಸ ಹೆಚ್ಚಬೇಕು' ಎಂದರು.

'ವಿಜ್ಞಾನದ ಒಲವು ಹೆಚ್ಚಿಸಿಕೊಳ್ಳಿ'

ಬೆಂಗಳೂರು: 'ವಿದ್ಯಾರ್ಥಿಗಳಿಗೆ ಶಾಲಾ ಹಂತದಲ್ಲೇ ವಿಜ್ಞಾನ ವಿಷಯದ ಮೇಲೆ ಹೆಚ್ಚಿನ ಆಸಕ್ತಿ ಮೂಡಬೇಕು. ಇದರಿಂದ ಭವಿಷ್ಯದಲ್ಲಿ ಅವರಿಗೆ ವಿಜ್ಞಾನ ಕ್ಷೇತ್ರದಲ್ಲಿ ವಿಪುಲ ಅವಕಾಶಗಳು ಸಿಗಲಿವೆ' ಎಂದು ಹಿರಿಯ ವಿಜ್ಞಾನಿ ಎಂ.ಆರ್.ಎನ್.ಮೂರ್ತಿ ತಿಳಿಸಿದರು.

ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಕರ್ನಾಟಕ ವಿಜ್ಞಾನ ಪರಿಷತ್ತು ನಗರದಲ್ಲಿ ಶನಿವಾರ ಆಯೋಜಿಸಿದ್ದ ಸರ್.ಸಿ.ವಿ. ರಾಮನ್ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆ' ಉದ್ಘಾಟಿಸಿ ಅವರು ಮಾತನಾಡಿದರು.

'ವಿದ್ಯಾರ್ಥಿಗಳಿಗೆ ವಿಜ್ಞಾನದ ಆಸಕ್ತಿ ಮೂಡಲು ಶಿಕ್ಷಕರೂ ನೆರವಾಗಬೇಕು. ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಪರಿಪೂರ್ಣವಾಗಿ ಅರ್ಥೈಸಬೇಕು' ಎಂದು ಸಲಹೆ ನೀಡಿದರು.

'ಕೊರೊನಾ ಪರಿಸ್ಥಿತಿಯಿಂದ ಬಹಳಷ್ಟು ಸಮಸ್ಯೆಗಳು ಉದ್ಭವಿಸಿವೆ. ಇದಕ್ಕಾಗಿ ವಿಜ್ಞಾನಿಗಳು ಹಗಲಿರುಳೆನ್ನದೆ ಶ್ರಮಿಸಿದ ಪರಿಣಾಮ ಲಸಿಕೆ ಕಂಡುಹಿಡಿಯಲು ಸಾಧ್ಯವಾಯಿತು. ಇದಾದ ಬಳಿಕ ಇಡೀ ಜಗತ್ತು ಭಾರತವನ್ನು ನೋಡುತ್ತಿದೆ' ಎಂದರು.

'ಲಸಿಕೆ ಇದ್ದರೂ ಸಾರ್ವಜನಿಕರು ಕೊರೊನಾ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ಸ್ವಚ್ಛತೆಗೆ ಎಲ್ಲರೂ ಹೆಚ್ಚಿನ ಆದ್ಯತೆ ನೀಡಬೇಕು. ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಈ ಬಗ್ಗೆ ಪೋಷಕರಿಗೆ ಮಕ್ಕಳೂ ತಿಳಿಸಿ' ಎಂದು ಹೇಳಿದರು.

ರಾಜ್ಯ ವಿಜ್ಞಾನ ಪರಿಷತ್ತಿನ ಅಧ್ಯಕ್ಷ ಗಿರೀಶ್ ಕಡ್ಲೇವಾಡ, 'ಜನರು ವೈಜ್ಞಾನಿಕವಾಗಿ ಆಲೋಚಿಸುವ ಗುಣ ಬೆಳೆಸಿಕೊಳ್ಳಬೇಕು. ಯುವಜನತೆ ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚು ಸೇವೆ ಸಲ್ಲಿಸಬೇಕು. ಕೋವಿಡ್‌ನಿಂದ ನಿರ್ಮಾಣವಾಗಿರುವ ಸಂದಿಗ್ಧ ಸ್ಥಿತಿಯ ನಡುವೆಯೂ ಜೀವನ ಮುಂದುವರೆಸುವುದು ಅನಿವಾರ್ಯ. ಉನ್ನತ ಶಿಕ್ಷಣ ಹಾಗೂ ಸರ್ಕಾರಿ ಕೆಲಸ ಪಡೆಯಲು ಹೆಚ್ಚಿನ ಶ್ರಮ ಪಡಬೇಕು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಬೇಕು' ಎಂದರು.





ಬಿಬಿಎಂಪಿಯ 2021–22ನೇ ಸಾಲಿನ ಬಜೆಟ್‌ನಲ್ಲಿ ಮತ್ತೆ ಕಾಣಿಸಿಕೊಂಡ ಆಶಾಕಿರಣ

ಎ-ಖಾತಾ, ಬಿ-ಖಾತಾ ಕಿರಿಕಿರಿ: ಈ ಬಾರಿ ಇತಿಶ್ರೀ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎ-ಖಾತಾ ಮತ್ತು ಬಿ-ಖಾತಾ ಸಮಸ್ಯೆಗಳಿಗೆ ಬಿಬಿಎಂಪಿ ಈ ಬಾರಿಯಾದರೂ ಇತಿಶ್ರೀ ಹಾಡಲಿದೆಯೇ?

ಬಿಬಿಎಂಪಿಯ 2021-22ನೇ ಸಾಲಿನ ಬಜೆಟ್ ಅಂತಹದ್ದೊಂದು ಆಶಾಕಿರಣ ಮತ್ತೆ ಕಾಣಿಸಿದೆ.

'ಬೆಂಗಳೂರು ನಗರದಲ್ಲಿ ಪಾರದರ್ಶಕ ವ್ಯವಸ್ಥೆ ಜಾರಿಗೆ ಮತ್ತು ಕ್ರಮಬದ್ಧ ಬೆಳವಣಿಗೆಗೆ ಅನುಕೂಲವಾಗುವಂತೆ ಆಸ್ತಿಗಳ ಖಾತಾ ನೋಂದಣಿಗೆ ಬಿ-ವಹಿ (ಬಿ ಖಾತಾ) ನಿರ್ವಹಿಸುವ ಪದ್ಧತಿ ರದ್ದುಗೊಳಿಸಲು ಪೂರ್ವ ಸಿದ್ಧತಾ ಕಾರ್ಯ ಪ್ರಗತಿಯಲ್ಲಿದೆ. ಕಂದಾಯ ಇಲಾಖೆ ಸಹಕಾರದಿಂದ ಈ ಕಾರ್ಯ ನಡೆಯುತ್ತಿದೆ. ಕಾನೂನಾತ್ಮಕ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕ ಹೆಚ್ಚಿನ ಮಾಹಿತಿ ಒದಗಿಸಲಾಗುವುದು' ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

'ಬಿ-ಖಾತಾ'ಗಳನ್ನು 'ಎ-ಖಾತಾ' ಆಗಿ ಪರಿವರ್ತಿಸುವ ಕುರಿತ ಭರವಸೆಯ ಮಾತುಗಳು ಬಿಬಿಎಂಪಿ ಬಜೆಟ್‌ನಲ್ಲಿ ಉಲ್ಲೇಖವಾಗುತ್ತಿರುವುದು ಇದು ಮೊದಲೇನಲ್ಲ. ಚುನಾಯಿತ ಪ್ರತಿನಿಧಿಗಳ ಆಡಳಿತದ ಅವಧಿಯಲ್ಲಿ ಈ ಹಿಂದೆ ಮೂರು ಬಜೆಟ್‌ಗಳಲ್ಲಿ ಈ ಬಗ್ಗೆ ಉಲ್ಲೇಖವಾಗಿತ್ತು. ಆದರೆ, ಕಾರ್ಯರೂಪಕ್ಕೆ ಬಂದಿರಲಿಲ್ಲ.

'2007ಕ್ಕಿಂತ ಮುಂಚೆ ಬಿ-ಖಾತಾ ವ್ಯವಸ್ಥೆ ಬೆಂಗಳೂರಿನಲ್ಲಿ ಜಾರಿಯಲ್ಲಿರಲಿಲ್ಲ. ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು 8 ಲಕ್ಷ ಆಸ್ತಿಗಳು ಬಿ-ಖಾತಾ ಹೊಂದಿವೆ. ಇವುಗಳಲ್ಲಿ ಕಟ್ಟಡ ಅಥವಾ ಮನೆ ನಿರ್ಮಿಸುವುದಕ್ಕೆ ಮಂಜೂರಾತಿ ಸಿಗುವುದಿಲ್ಲ. ಇವುಗಳನ್ನು ಮಾರಾಟ ಮಾಡುವಾಗಲೂ ಸೂಕ್ತ ಬೆಲೆ ಸಿಗುತ್ತಿಲ್ಲ. ಕೆಲವು ದಶಕಗಳ ಹಿಂದೆ ಸುಧಾರಣಾ ಶುಲ್ಕ ಕಟ್ಟಿಸಿಕೊಂಡು ಖಾತಾ ನೀಡುವ ಕ್ರಮ ಇತ್ತು. ಈಗ ಬಿ ಖಾತಾಗಳನ್ನು ಎ ಖಾತಾ ಆಗಿ ಪರಿವರ್ತಿಸುವುದಕ್ಕೆ ಕಾನೂನಿನಲ್ಲಿ ಕೆಲವೊಂದು ಮಾರ್ಪಾಡುಗಳ ಅಗತ್ಯವಿದೆ. ಇದಕ್ಕೆ ಕ್ರಮ ಕೈಗೊಳ್ಳಲಾಗಿದೆ. ಹಾಗಾಗಿ ಈ ಆರ್ಥಿಕ ವರ್ಷದಲ್ಲೇ ಇದು ಜಾರಿಗೆ ಬರಲಿದೆ' ಎನ್ನುತ್ತಾರೆ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ.



ಬಿಬಿಎಂಪಿಯ 2021–22ನೇ ಸಾಲಿನ ಬಜೆಟ್ ಪುಸ್ತಕವನ್ನು ಪಾಲಿಕೆ ಆಯುಕ್ತ ಎನ್‌.ಮಂಜುನಾಥ ಪ್ರಸಾದ್, ಆಡಳಿತಾಧಿಕಾರಿ ಗೌರವ ಗುಪ್ತ ಹಾಗೂ ವಿಶೇಷ ಆಯುಕ್ತರಾದ (ಹಣಕಾಸು) ತುಳಸಿ ಮದ್ದಿನೇನಿ ಶನಿವಾರ ಪ್ರದರ್ಶಿಸಿದರು– ಪ್ರಜಾವಾಣಿ ಚಿತ್ರ

ಎಲ್ಲ ಆಸ್ತಿ 'ಇ- ಆಸ್ತಿ' ತಂತ್ರಾಂಶದ ವ್ಯಾಪ್ತಿಗೆ

ಬಿಬಿಎಂಪಿ ವ್ಯಾಪ್ತಿಯ ಎಲ್ಲ ಆಸ್ತಿಗಳನ್ನು ಇ- ಆಸ್ತಿ ತಂತ್ರಾಂಶದ ವ್ಯಾಪ್ತಿಗೆ ತರಲಾಗುತ್ತದೆ. ಈ ಸಲುವಾಗಿಯೇ ₹ 10 ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ಕಾಯ್ದಿರಿಸಲಾಗಿದೆ.

ಇದುವರೆಗೆ ಮೂರು ವಾರ್ಡ್‌ಗಳಲ್ಲಿ ಇ- ಆಸ್ತಿ ತಂತ್ರಾಂಶವನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿತ್ತು. ಇದನ್ನು ಕೇಂದ್ರ ವಲಯದ ಇನ್ನುಳಿದ 97 ವಾರ್ಡ್‌ಗಳಿಗೆ ವಿಸ್ತರಿಸಲು ಇತ್ತೀಚೆಗಷ್ಟೇ ಪಾಲಿಕೆ ಕ್ರಮ ಕೈಗೊಂಡಿದೆ. ಹಂತ ಹಂತವಾಗಿ ಹೊರ ವಲಯದ ವಾರ್ಡ್‌ಗಳಿಗೂ ಈ ವ್ಯವಸ್ಥೆಯನ್ನು ವಿಸ್ತರಿಸಲಾಗುತ್ತದೆ.

'ಹೊಸತಾಗಿ ನೀಡುವ ಖಾತಾಗಳ ಜೊತೆ, ಇದುವರೆಗೆ ನೀಡಿರುವ ಬಿ ಖಾತಾಗಳಿಗೂ ಎ- ಖಾತಾ ನೀಡಲಾಗುತ್ತದೆ' ಎಂದು ಅವರು ಸ್ಪಷ್ಟಪಡಿಸಿದರು.

'ಈ ಹಿಂದೆ ಸಂಬಂಧಪಟ್ಟ ಪ್ರಾಧಿಕಾರದಿಂದ ಮಂಜೂರಾತಿ ಪಡೆಯದೆಯೇ ನಿರ್ಮಿಸಿದ್ದ ಬಡಾವಣೆಗಳ ನಿವೇಶನಗಳಿಗೆ, ಭೂಪರಿವರ್ತನೆ ಮಾಡದೆ ಕಟ್ಟಡ ನಿರ್ಮಿಸಿದ್ದ ನಿವೇಶನಗಳಿಗೆ ಬಿ ಖಾತಾ ನೀಡಲಾಗುತ್ತಿತ್ತು. ಕಂದಾಯ ನಿವೇಶನಗಳಲ್ಲಿನ ಕಟ್ಟಡಗಳಿಗೂ ಬಿ ಖಾತಾ ನೀಡಲಾಗುತ್ತಿತ್ತು. ಈ ಪರಿಪಾಠ ಕೊನೆಯಾಗಲಿದೆ' ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ತಿಳಿಸಿದರು.

'ಕಟ್ಟಡ ನಿರ್ಮಾಣ ಬೈಲಾ ಉಲ್ಲಂಘಿಸಿ ಕಟ್ಟಡ ನಿರ್ಮಿಸಿದ ಪ್ರಕರಣಗಳು ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ. ಎ-ಖಾತಾ ನಿವೇಶನದಲ್ಲಿ ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸಿದರೂ ಅದು ಅಕ್ರಮ ಕಟ್ಟಡ ಎನಿಸಿಕೊಳ್ಳುತ್ತದೆ. ಅವುಗಳನ್ನು ಅಕ್ರಮ-ಸಕ್ರಮ ಯೋಜನೆ ಅಡಿ ಸಕ್ರಮಗೊಳ್ಳಬೇಕು. ಈ ಕುರಿತ ವ್ಯಾಜ್ಯ ಸುಪ್ರೀಂ ಕೋರ್ಟ್‌ನಲ್ಲಿದೆ' ಎಂದು ಅವರು ಸ್ಪಷ್ಟಪಡಿಸಿದರು.

'ಸಂಬಂಧಪಟ್ಟ ಪ್ರಾಧಿಕಾರದಿಂದ ಮಂಜೂರಾತಿ ಪಡೆಯದೇ ನಿರ್ಮಿಸಿದ ಬಡಾವಣೆಗಳಲ್ಲಿ ಕೆಲವು ನಿವೇಶನಗಳಿಗೆ ಬಿಬಿಎಂಪಿ ಅಧಿಕಾರಿಗಳು ಬಿ ಖಾತಾ ನೀಡಿದ್ದಾರೆ. ಅದೇ ಬಡಾವಣೆಯಲ್ಲೇ ಕೆಲವು ನಿವೇಶನಗಳಿಗೆ ಎ ಖಾತಾ ನೀಡಿರುವ ಉದಾಹರಣೆ ಇದೆ. ಬಿ-ಖಾತಾ ವ್ಯವಸ್ಥೆ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟಿದೆ. ಎ ಖಾತಾ ಮಾತ್ರ ನೀಡುವ ವ್ಯವಸ್ಥೆ ಜಾರಿಗೆ ಬಂದರೆ ಇಂತಹ ಭ್ರಷ್ಟಾಚಾರಗಳಿಗೆ ತನ್ನಿಂದ ತಾನೆ ಕಡಿವಾಣ ಬೀಳಲಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

ಬಜೆಟ್ ಸ್ವೀಕೃತಿ (₹ ಕೋಟಿಗಳಲ್ಲಿ)	
ಆದಾಯ	ಮೊತ್ತ
ತೆರಿಗೆ	3353.20
ತೆರಿಗೆಯೇತರ	1250.78
ಕೇಂದ್ರ ಸರ್ಕಾರದ ಅನುದಾನ	421.02
ರಾಜ್ಯ ಸರ್ಕಾರದ ಅನುದಾನ	3,845.56
ಇತರ ಮೂಲಗಳಿಂದ	417.25
ಒಟ್ಟು	9,287.81

ಬಜೆಟ್ ಪಾವತಿ (₹ ಕೋಟಿಗಳಲ್ಲಿ)	
ಸಿಬ್ಬಂದಿ ವೆಚ್ಚ	1,267.75
ಆಡಳಿತ ವೆಚ್ಚ	259.37
ಬ್ಯಾಂಕ್ ಸಾಲ, ಬಡ್ಡಿ ಪಾವತಿ	296.87
ಕಾರ್ಯಕ್ರಮಗಳಿಗೆ ವೆಚ್ಚ	424.25
ಕಾರ್ಯಾಚರಣೆ ಮತ್ತು ನಿರ್ವಹಣೆ	2,115.63
ಸಾರ್ವಜನಿಕ ಅಭಿವೃದ್ಧಿ ಕಾಮಗಾರಿ	4,587.68
ಠೇವಣಿ ಮತ್ತು ಕರ ಮರುಪಾವತಿ	344.25
ಒಟ್ಟು	9286.80

ಉಪಕರ ಪಾಲಿಕೆಯಲ್ಲೇ ಬಳಕೆ

ಪಾಲಿಕೆ ಆಸ್ತಿ ತೆರಿಗೆಯ ಶೇ 15ರಷ್ಟು ಆರೋಗ್ಯ ಕರ, ಶೇ 3 ಭಿಕ್ಷುಕರ ಕರ, ಶೇ 6ರಷ್ಟು ಗ್ರಂಥಾಲಯ ಕರ ಸೇರಿ ಶೇ 24ರಷ್ಟು ಉಪಕರವನ್ನು ಸಂಗ್ರಹಿಸುತ್ತಿದೆ. ಭಿಕ್ಷುಕರ ಕರದ ರೂಪದಲ್ಲಿ ಸಂಗ್ರಹವಾಗುವ ಮೊತ್ತದಲ್ಲಿ ಶೇ 50ರಷ್ಟನ್ನು ಪಾಲಿಕೆಯೇ ನಿರ್ವಹಿಸುವ ರಾತ್ರಿ ನಿರಾಶ್ರಿತರ ಆಶ್ರಯ ತಾಣಗಳನ್ನು ಹೆಚ್ಚಿಸುವುದಕ್ಕೆ ಹಾಗೂ ನಗರ ಬಡತನ ನಿರ್ಮೂಲನೆ ಕಾರ್ಯಕ್ರಮಗಳಿಗೆ ಬಳಸಲು ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸುವುದಾಗಿ ಬಜೆಟ್‌ನಲ್ಲಿ ಹೇಳಲಾಗಿದೆ.

ಸಂಗ್ರಹವಾಗುವ ಗ್ರಂಥಾಲಯ ಕರದ ಒಟ್ಟು ಮೊತ್ತದಲ್ಲಿ ಶೇ 50ರಷ್ಟನ್ನು ಪಾಲಿಕೆ ನಡೆಸುತ್ತಿರುವ ಶಾಲಾ ಕಾಲೇಜುಗಳ ಗ್ರಂಥಾಲಯ ಅಭಿವೃದ್ಧಿಗೆ ಬಳಸುವ ಕುರಿತೂ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಿದೆ.

ಇದುವರೆಗೆ ಭಿಕ್ಷುಕರ ಕರವನ್ನು ಸಮಾಜ ಕಲ್ಯಾಣ ಇಲಾಖೆಯ ಕೇಂದ್ರ ಪರಿಹಾರ ಸಮಿತಿಗೆ ಹಾಗೂ ಗ್ರಂಥಾಲಯ ಕರವನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ವರ್ಗಾಯಿಸಲಾಗುತ್ತಿತ್ತು.

ಕರ ಭಾರವಿಲ್ಲ– ₹ 3500 ಕೋಟಿ ಆಸ್ತಿ ತೆರಿಗೆ ಗುರಿ

ಬಿಬಿಎಂಪಿಯಲ್ಲಿ ಈ ಹಿಂದೆ ಆಡಳಿತಾಧಿಕಾರಿ ಅವಧಿಯಲ್ಲೇ ಆಸ್ತಿ ತೆರಿಗೆ ಹೆಚ್ಚಿಸಲಾಗಿತ್ತು. ಈ ಬಾರಿ ಚುನಾಯಿತ ಪ್ರತಿನಿಧಿಗಳ ಆಡಳಿತ ಇಲ್ಲ. ಹಾಗಾಗಿ ಈ ಬಾರಿಯೂ ಆಸ್ತಿ ತೆರಿಗೆ ಹೆಚ್ಚಳ ಮಾಡಬಹುದೆಂಬ ಆತಂಕ ಜನರಲ್ಲಿತ್ತು. ಆದರೆ, ಬಿಬಿಎಂಪಿ ಯಾವುದೇ ತೆರಿಗೆ ಹೆಚ್ಚಿಸಿಲ್ಲ.

ಬಿಬಿಎಂಪಿ 2021–22ನೇ ಸಾಲಿನಲ್ಲಿ ₹ 2,800 ಕೋಟಿ ಆಸ್ತಿತೆರಿಗೆ ಹಾಗೂ ಹಳೆ ತೆರಿಗೆ ಬಾಕಿ ವಸೂಲಿ ಸೇರಿ ₹ 3,500 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿಯನ್ನು ನಿಗದಿಪಡಿಸಿದೆ.


₹ 1,251 ಕೋಟಿ ತೆರಿಗೆಯೇತರ ಆದಾಯ ಹಾಗೂ ಇತರ ಮೂಲಗಳಿಂದ ₹ 416 ಕೋಟಿ ಆದಾಯ ಸೇರಿ ಒಟ್ಟು ಪಾಲಿಕೆ ಸ್ವಂತ ಮೂಲಗಳಿಂದ ₹ 5020.23 ಕೋಟಿ ವರಮಾನ ಗಳಿಸುವ ನಿರೀಕ್ಷೆ ಹೊಂದಿದೆ. 2020–21ನೇ ಸಾಲಿನಲ್ಲಿ ಮಾರ್ಚ್ 24ರವರೆಗೆ ₹ 2,850 ಕೋಟಿ (ಹಳೆ ಬಾಕಿ ಸೇರಿ) ಮಾತ್ರ ಆಸ್ತಿ ತೆರಿಗೆ ಸಂಗ್ರಹಿಸಲಾಗಿದೆ. ವಸ್ತುಸ್ಥಿತಿ ಹಾಗಿರುವಾಗ ₹ 3,500 ಕೋಟಿ ಆಸ್ತಿ ತೆರಿಗೆ ಸಂಗ್ರಹ ಗುರಿ ನಿಗದಿ ವಾಸ್ತವಕ್ಕೆ ಹತ್ತಿರ ಹೇಗಾಗುತ್ತದೆ ಎಂಬ ಪ್ರಶ್ನೆ ಸಹಜ.

ಇದಕ್ಕೆ ಉತ್ತರಿಸಿದ ಎನ್. ಮಂಜುನಾಥ ಪ್ರಸಾದ್, 'ಪಾಲಿಕೆ ವ್ಯಾಪ್ತಿಯಲ್ಲಿ 4.10 ಲಕ್ಷ ಆಸ್ತಿಗಳ ವರ್ಗೀಕರಣದ ವೇಳೆ ಮಾಲೀಕರು ತಪ್ಪು ಮಾಹಿತಿ ನೀಡಿದ್ದರು. ಇಂತಹ 78 ಸಾವಿರ ಆಸ್ತಿ ಮಾಲೀಕರಿಗೆ ನೋಟಿಸ್ ಜಾರಿಗೊಳಿಸಲಾಗಿದೆ. ಇನ್ನಷ್ಟು ಆಸ್ತಿ ಮಾಲೀಕರನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ. ಈ ತಪ್ಪುಗಳು ಸರಿಯಾದರೆ ಸಹಜವಾಗಿಯೇ ಆಸ್ತಿ ತೆರಿಗೆ ಸಂಗ್ರಹ ಹೆಚ್ಚಳವಾಗಲಿದೆ' ಎಂದು ವಿವರಿಸಿದರು.

'ಟೋಟಲ್ ಸ್ಟೇಷನ್ ಸರ್ವೆ ನಡೆಸಿದ್ದ ಅನೇಕ ಆಸ್ತಿಗಳಿಗೆ ಸಂಬಂಧಿಸಿಯೂ ಜಂಟಿ ಆಯುಕ್ತರ ಹಂತದಲ್ಲೇ ವಿಚಾರಣೆ ಮುಗಿಸಲಾಗಿತ್ತು. ಅವುಗಳನ್ನು ನನ್ನ ಹಂತದಲ್ಲಿ ಸ್ವಯಂಪ್ರೇರಿತವಾಗಿ ಮರುವಿಚಾರಣೆಗೆ ಕೈಗೆತ್ತಿಕೊಂಡು ಪಾಲಿಕೆಗೆ ಬಾಕಿ ಇರುವ ಆಸ್ತಿ ತೆರಿಗೆ ವಸೂಲಿಗೆ ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.

ನಗರ ಯೋಜನಾ ತಜ್ಞರು ಏನೆನ್ನುತ್ತಾರೆ?

'ವಾಸ್ತವಕ್ಕೆ ಹತ್ತಿರದ ಬಜೆಟ್'



ಇದು ತುಂಬಾ ಉತ್ತಮವಾದ, ವಾಸ್ತವಕ್ಕೆ ಹತ್ತಿರವಿರುವ ಬಜೆಟ್. ಅನುಷ್ಠಾನಗೊಳಿಸಲು ಸಾಧ್ಯವಿರುವುದಕ್ಕಿಂತ ಶೇ 35ರಿಂದ ಶೇ 40ರಷ್ಟು ಹೆಚ್ಚು ಘೋಷಣೆಗಳು ಸಾಮಾನ್ಯವಾಗಿ ಇರುತ್ತಿದ್ದವು. ಆದರೆ, ಇದರಲ್ಲಿ ವರಮಾನ ಮೀರಿದ ಘೋಷಣೆಗಳು ಕಾಣುವುದಿಲ್ಲ. ವಲಯವಾರು ಅನುದಾನ ಹಂಚಿರುವುದು ಮತ್ತು ಸಂಗ್ರಹವಾಗುವ ಆಸ್ತಿ ತೆರಿಗೆಯ ಶೇ 1 ರಷ್ಟನ್ನು ಆಯಾ ವಾರ್ಡ್ ಅಭಿವೃದ್ಧಿಗೆ ಬಳಸುವ ಯೋಜನೆಗಳ ಮೂಲಕ ವಿಕೇಂದ್ರೀಕರಣಕ್ಕೆ ಆದ್ಯತೆ ನೀಡಲಾಗಿದೆ. ಕೋವಿಡ್‌ನಂತಹ ಸಾಂಕ್ರಾಮಿಕ ರೋಗ ಹರಡುತ್ತಿರುವ ಈ ಸಂದರ್ಭದಲ್ಲಿ ಆರೋಗ್ಯ ವಲಯಕ್ಕೆ ಮಹತ್ವ ನೀಡಲಾಗಿದೆ. ಕೋವಿಡ್ ನಿಯಂತ್ರಣಕ್ಕೆ ಬಹುಪಾಲು ಬಿಬಿಎಂಪಿಯನ್ನೇ ಅವಲಂಬಿಸಬೇಕಾಗಿರುವುದರಿಂದ ಆ ನಿಟ್ಟಿನಲ್ಲಿ ಹೆಚ್ಚು ಗಮನ ಹರಿಸಿರು ವುದು ಸ್ವಾಗತಾರ್ಹ.

ವಿ. ರವಿಚಂದರ್, ನಗರ ಯೋಜನಾ ತಜ್ಞ

ಸುಸ್ಥಿರ ಅಭಿವೃದ್ಧಿ ಗುರಿ ಈಡೇರಿಕೆ ಪ್ರಸ್ತಾಪವಿಲ್ಲ



ಸುಸ್ಥಿರ ಅಭಿವೃದ್ಧಿ ಗುರಿಗಳ ಈಡೇರಿಕೆಗೆ ಬೇಕಾದ ಕ್ರಮ ಗಳನ್ನು ಕೈಗೊಳ್ಳಬೇಕಾಗಿರುವುದು ಇಂದಿನ ತುರ್ತು ಅಗತ್ಯ. ಆದರೆ, ಈ ಬಜೆಟ್‌ನಲ್ಲಿ ಇದಕ್ಕೆ ಪೂರಕ ವಾದ ಅಂಶಗಳು ಹೆಚ್ಚು ಸ್ಪಷ್ಟವಾಗಿಲ್ಲ. ಅಂಗನವಾಡಿ, ಶಾಲೆ, ಆಸ್ಪತ್ರೆ, ಕಟ್ಟಡ ಕಾರ್ಮಿಕರಿಗೆ ವಸತಿ, ಕೊಳೆಗೇರಿ ಪ್ರದೇಶಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಹೆಚ್ಚು ಕ್ರಮ ಕೈಗೊಳ್ಳಬೇಕಾಗಿತ್ತು. ಹಸಿ ತ್ಯಾಜ್ಯ ಮತ್ತು ಕೊಳಚೆ ನಿರ್ವಹಣೆ ಕಾರ್ಯ ಆಯಾ ವಾರ್ಡ್ ಮಟ್ಟದಲ್ಲಿಯೇ ನಡೆಯುವ ವ್ಯವಸ್ಥೆ ರೂಪಿಸಬೇಕಾಗಿತ್ತು. ಆಯಾ ವಾರ್ಡ್‌ಗಳಲ್ಲಿ ತೀರಾ ಅಗತ್ಯವಿರುವ ಕಾಮಗಾರಿಯನ್ನು ಆದ್ಯತೆ ಮೇರೆಗೆ ಕೈಗೊಳ್ಳಲು ಶೇ 40ರಷ್ಟು ನಿಧಿ ಒದಗಿಸ ಬೇಕು. ಈ ಅನುದಾನ ಪಾದಚಾರಿ ಮಾರ್ಗ ನಿರ್ಮಾಣಕ್ಕೆ ಮಾತ್ರ ಸೀಮಿತ ವಾಗಬಾರದು. ತಾಂತ್ರಿಕ ಜಾಗೃತ ಕೋಶದ ಮೂಲಕ ಸ್ಥಳ ಪರಿಶೀಲನೆ ನಡೆಸುವುದಕ್ಕಿಂತ ಮುಖ್ಯವಾಗಿ ಆಯಾ ಕಾಮಗಾರಿಗಳ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸುವ ಅಧಿಕಾರವನ್ನು ಆಯಾ ವಾರ್ಡ್ ಕಮಿಟಿಗಳಿಗೆ ನೀಡಬೇಕು.

ಕಾತ್ಯಾಯಿನಿ ಚಾಮರಾಜ್, ಸಿವಿಕ್ ಬೆಂಗಳೂರು ಕಾರ್ಯಕಾರಿ ಟ್ರಸ್ಟಿ

'ಬಜೆಟ್ ಅಲ್ಲ, ಘೋಷಣೆ ಮಾತ್ರ'



ಇದೊಂದು ನಿರರ್ಥಕ ಬಜೆಟ್. ನಿರ್ದಿಷ್ಟ ಯೋಜನೆಗಳಿಗಿಂತ ಘೋಷಣೆಗಳು ಮಾತ್ರ ಇವೆ. ಸಂಪನ್ಮೂಲ ಕ್ರೋಡೀಕರಣಕ್ಕೆ ಬೇಕಾದ ಕ್ರಮಗಳನ್ನು ಕೈಗೊಂಡಿಲ್ಲ. ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ₹3000 ಕೋಟಿ ಬಾಕಿ ಬರಬೇಕು ಎಂದು ಬಜೆಟ್‌ನಲ್ಲಿಯೇ ಹೇಳಲಾಗಿದೆ. ಇಷ್ಟು ತೆರಿಗೆ ಸಂಗ್ರಹಿಸುವ ಬಿಬಿಎಂಪಿಯು ಇನ್ನೂ ಕೇಂದ್ರ–ರಾಜ್ಯ ಸರ್ಕಾರದ ಅನುದಾನವನ್ನೇ ಅವಲಂಬಿಸಿರುವುದು ದುರದೃಷ್ಟಕರ. 'ಬಿ' ಖಾತಾದಲ್ಲಿ ಆಸ್ತಿಗಳ ವಿವರ ದಾಖಲಿಸುವುದನ್ನು ರದ್ದುಗೊಳಿಸಿ, 'ಎ' ಖಾತಾ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಲಾಗಿದೆ. ಆದರೆ, ಇದು ಕೂಡ ಭ್ರಷ್ಟಾಚಾರಕ್ಕೆ ಪರೋಕ್ಷವಾಗಿ ದಾರಿ ಮಾಡಿಕೊಡುವ ಸಾಧ್ಯತೆ ಇದೆ.

ಶಾಂತಲಾ ದಾಮ್ಲೆ, ಆಮ್ ಆದ್ಮಿ ಪಕ್ಷದ ಉಪಾಧ್ಯಕ್ಷೆ

- **₹473.50 ಕೋಟಿ** 191 ಕಿ.ಮೀ ಉದ್ದದ ಹೈಡೆನ್ಸಿಟಿ ಕಾರಿಡಾರ್ ಉನ್ನತೀಕರಣಕ್ಕೆ
- **₹10 ಕೋಟಿ** ಮಾರುಕಟ್ಟೆ ಕಟ್ಟಡದ ದುರಸ್ತಿ ಮತ್ತು ನಿರ್ವಹಣೆಗೆ
- **₹1,622.23 ಕೋಟಿ** ಕಸ ನಿರ್ವಹಣೆಗೆ
- **₹546.89 ಕೋಟಿ** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ, ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳಿಗೆ
- **₹7.50 ಕೋಟಿ** ಕಲ್ಯಾಣ ಕಾರ್ಯಕ್ರಮದಡಿ ಬೋಧನಾ ಶುಲ್ಕ ಮರುಪಾವತಿಗೆ
- **₹27 ಕೋಟಿ** ವೈದ್ಯಕೀಯ ವೆಚ್ಚ ಮರುಪಾವತಿ
- **₹38.50 ಕೋಟಿ** ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳಿಗೆ
- **₹20 ಲಕ್ಷ** ಪ್ರತಿ ವಾರ್ಡ್‌ನ ಪಾದಚಾರಿ ಮಾರ್ಗ ಉನ್ನತೀಕರಣಕ್ಕೆ
- **₹84 ಕೋಟಿ** ಶೈಕ್ಷಣಿಕ ಕಾರ್ಯಕ್ರಮಗಳಿಗೆ
- **₹337 ಕೋಟಿ** ಸಾರ್ವಜನಿಕ ಆರೋಗ್ಯ ಮತ್ತು ಕ್ಲಿನಿಕಲ್ ವಿಭಾಗಗಳಡಿ ವೈದ್ಯಕೀಯ ವೆಚ್ಚಕ್ಕೆ
- **₹5 ಕೋಟಿ** ಬೀದಿನಾಯಿ ನಿಯಂತ್ರಣಕ್ಕೆ
- **₹279 ಕೋಟಿ** ವಾಯು ಗುಣಮಟ್ಟ ನಿರ್ವಹಣೆಗೆ (ಕೇಂದ್ರ 15ನೇ ಹಣಕಾಸು ಆಯೋಗದ ನಿಧಿ)
- **₹241 ಕೋಟಿ** ಉದ್ಯಾನಗಳ ನಿರ್ವಹಣೆಗೆ
- **₹31 ಕೋಟಿ** ಕೆರೆಗಳ ನಿರ್ವಹಣೆಗೆ
- **₹10 ಕೋಟಿ** ಕೆರೆಗಳ ಸರಹದ್ದು ಸಂರಕ್ಷಣೆಗೆ
- **₹80 ಕೋಟಿ** ಅಭಿವೃದ್ಧಿ ಕಾಮಗಾರಿಗಳಿಗೆ ಭೂಸ್ವಾಧೀನ ಪ್ರಕ್ರಿಯೆಗೆ
- **₹21 ಕೋಟಿ** ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ
- **₹10 ಕೋಟಿ** ಕೌನ್ಸಿಲ್ ಸಭಾಂಗಣ ನವೀಕರಣಕ್ಕೆ
- **₹1 ಸಾವಿರ ಕೋಟಿ** ಪಾಲಿಕೆಗೆ ಸೇರ್ಪಡೆಯಾಗಿರುವ 110 ಹಳ್ಳಿಗಳ ರಸ್ತೆ ದುರಸ್ತಿಗೆ

'ವಾಸ್ತವಕ್ಕೆ ಹತ್ತಿರವಿರುವ ಬಜೆಟ್'



ಬಿಬಿಎಂಪಿ ವಾಸ್ತವಕ್ಕೆ ಹತ್ತಿರದ ಬಜೆಟ್ ಮಂಡಿಸಿದೆ. ಕೊರೊನದಂತಹ ಸಂಕಷ್ಟದ ಸಂದರ್ಭದಲ್ಲಿ ತೆರಿಗೆ ಹೊರೆ ಹೆಚ್ಚಿಸದೇ ಜನರ ಸಂಕಷ್ಟಗಳಿಗೆ ಸ್ಪಂದಿಸಿದೆ. ಆರ್ಥಿಕ ಪರಿಸ್ಥಿತಿ ಏರುಪೇರಾಗಿದ್ದರೂ ಜನಪರವಾದ ಕಾರ್ಯಕ್ರಮಗಳನ್ನು ಮುಂದುವರಿಸಿದೆ

ಪದ್ಮನಾಭ ರೆಡ್ಡಿ, ಬಿಜೆಪಿ ಮುಖಂಡ

'ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಎಲ್ಲಿ'



₹9300 ಕೋಟಿ ಗಾತ್ರದ ಬಜೆಟ್ ಮಂಡಿಸಿಯೂ ಅಭಿವೃದ್ಧಿ ಕಾರ್ಯ ಗಳಿಗೆ ಅನುದಾನವನ್ನೇ ನೀಡಿಲ್ಲ. ಇದು ವಾಸ್ತವಕ್ಕೆ ಹತ್ತಿರವಾದ ಬಜೆಟ್ ಹೇಗಾಗುತ್ತದೆ. ಒಂಟಿ ಮನೆಗಳಿಗೆ ನೀಡುತ್ತಿದ್ದ ಅನುದಾನವನ್ನೂ ಸ್ಥಗಿತಗೊಳಿಸಲಾಗಿದೆ. ಕಸ ನಿರ್ವಹಣೆಗೆ ₹ 1600 ಕೋಟಿಗೂ ಅಧಿಕ ಅನುದಾನ ಏತಕ್ಕೆ ಎಂದು ಅರ್ಥವಾಗುತ್ತಿಲ್ಲ. ಸರ್ಕಾರ ಕಸ ನಿರ್ವಹಣೆಗೆ ಪ್ರತ್ಯೇಕ ಕಂಪನಿ ರಚಿಸುತ್ತಿರುವಾಗ ಬಿಬಿಎಂಪಿ ಬಜೆಟ್‌ನಲ್ಲಿ ಇಷ್ಟೊಂದು ಅನುದಾನ ಕಾಯ್ದಿರಿಸುವ ಅಗತ್ಯವಿತ್ತೇ?

ಅಬ್ದುಲ್ ವಾಜಿದ್, ಕಾಂಗ್ರೆಸ್ ಮುಖಂಡ

15ನೇ ಕೇಂದ್ರ ಹಣಕಾಸು ಆಯೋಗದ ಅನುದಾನ ಪಡೆಯಲು ಈ ಮಾರ್ಪಾಡು ಅಗತ್ಯ

'ಬಂಡವಾಳ ಮೌಲ್ಯ' ವ್ಯವಸ್ಥೆ ಜಾರಿಗೆ ಸಿದ್ಧತೆ

● ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಲೆಕ್ಕಾಚಾರ ಪದ್ಧತಿ ತುಸು ಬದಲಾಗಲಿದೆ. ಪ್ರಸ್ತುತ ಘಟಕ ವಿಸ್ತೀರ್ಣದ ಮೌಲ್ಯ (ಯೂನಿಟ್ ಏರಿಯಾ ವ್ಯಾಲ್ಯು) ಆಧಾರದಲ್ಲಿ ವಾರ್ಷಿಕ ತೆರಿಗೆ ಪ್ರಮಾಣವನ್ನು ಲೆಕ್ಕ ಹಾಕುವ ವಿಧಾನ ಅನುಸರಿಸಲಾಗುತ್ತಿದೆ. ಇನ್ನು ಮುಂದೆ ಬಂಡವಾಳ ಮೌಲ್ಯದ ಆಧಾರದಲ್ಲಿ ತೆರಿಗೆ ಎಷ್ಟೆಂಬುದನ್ನು ಲೆಕ್ಕಾಚಾರ ಹಾಕುವ ವಿಧಾನ ಅನುಸರಿಸಲು ಬಿಬಿಎಂಪಿ ಸಿದ್ಧತೆ ಆರಂಭಿಸಿದೆ.

ಬಂಡವಾಳ ಮೌಲ್ಯ ವ್ಯವಸ್ಥೆ ಆಧರಿತ ಆಸ್ತಿ ತೆರಿಗೆ ಲೆಕ್ಕಾಚಾರ ಪದ್ಧತಿ ಜಾರಿಗೆ ತರಲು ಪೂರ್ವಭಾವಿ ಸಿದ್ಧತಾ ಕಾರ್ಯಗಳು ಪ್ರಾರಂಭವಾಗಿವೆ ಎಂದು ಬಿಬಿಎಂಪಿಯ 2021–22ನೇ ಸಾಲಿನ ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ.

ರಾಜ್ಯದ ಉಳಿದೆಲ್ಲ ಮಹಾನಗರ ಪಾಲಿಕೆಗಳಲ್ಲಿ ಬಂಡವಾಳ ಮೌಲ್ಯದ ಆಧಾರದಲ್ಲಿ ಆಸ್ತಿ ತೆರಿಗೆ ಲೆಕ್ಕಾಚಾರ ಹಾಕುವ ಪದ್ಧತಿ ಈಗಾಗಲೇ ಜಾರಿಯಾಗಿದೆ. ಇದಕ್ಕಾಗಿಯೇ 1976ರ ಕರ್ನಾಟಕ ಪೌರನಿಗಮಗಳ (ಕೆಎಂಸಿ) ಕಾಯ್ದೆಗೆ ರಾಜ್ಯ ಸರ್ಕಾರ ತಿದ್ದುಪಡಿಯನ್ನೂ ತಂದಿದೆ. ಬಿಬಿಎಂಪಿಯಲ್ಲಿ ಪ್ರಸ್ತುತ 2020ರ ಬಿಬಿಎಂಪಿ ಕಾಯ್ದೆ ಅನ್ವಯ ಆಡಳಿತ ಜಾರಿಯಲ್ಲಿದೆ. ವಾರ್ಷಿಕ ಆಸ್ತಿ ತೆರಿಗೆಯ ಮೌಲ್ಯದ ಲೆಕ್ಕಾಚಾರ ಮಾಡುವ ಕುರಿತು ಬಿಬಿಎಂಪಿ ಕಾಯ್ದೆಯ ಸೆಕ್ಷನ್ 144ರಲ್ಲಿ ವಿವರಿಸಲಾಗಿದೆ. ಬಿಬಿಎಂಪಿಯಲ್ಲೂ ಬಂಡವಾಳ ಮೌಲ್ಯದ ಆಧಾರದಲ್ಲಿ ಆಸ್ತಿ ತೆರಿಗೆ ಲೆಕ್ಕ ಹಾಕುವ ವಿಧಾನ ಅನುಸರಿಸಬೇಕಾದರೆ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 144ಕ್ಕೆ ತಿದ್ದುಪಡಿ ತರಬೇಕಾಗುತ್ತದೆ.

ಏನು ವ್ಯತ್ಯಾಸ?

ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಲ್ಲಿ ಈಗ ಅನುಸರಿಸುವ ಘಟಕದ ವಿಸ್ತೀರ್ಣ ಮೌಲ್ಯ ಆಧರಿತ ಲೆಕ್ಕಾಚಾರದಲ್ಲಿ ನಿರ್ದಿಷ್ಟ ಆಸ್ತಿಯ ಮೌಲ್ಯ ಸ್ಥಿರವಾಗಿರುತ್ತದೆ. ಸ್ವಯಂಘೋಷಿತ ಆಸ್ತಿ ತೆರಿಗೆಯಲ್ಲಿ ಬಂಡವಾಳ ಮೌಲ್ಯದ ಆಧಾರದ ಲೆಕ್ಕಾಚಾರ ಅಳವಡಿಸಿಕೊಂಡಾಗ ಆಸ್ತಿ ತೆರಿಗೆ ಆ ಪ್ರದೇಶದ ಮಾರ್ಗಸೂಚಿ ದರಕ್ಕೆ ಅನುಗುಣವಾಗಿ ಮಾರ್ಪಾಡಾಗುತ್ತದೆ. ಸರ್ಕಾರವು ನಿರ್ದಿಷ್ಟ ಪ್ರದೇಶದ ಮಾರ್ಗಸೂಚಿ ದರವನ್ನು ಕಾಲಕಾಲಕ್ಕೆ ಬದಲಾಯಿಸುತ್ತದೆ. ಆಸ್ತಿಯ ಮಾರ್ಗಸೂಚಿ ಮೌಲ್ಯ ಹೆಚ್ಚಾದರೆ ತೆರಿಗೆಯೂ ಹೆಚ್ಚಳವಾಗುತ್ತದೆ ಹಾಗೂ ಮಾರ್ಗಸೂಚಿ ಮೌಲ್ಯ ಕಡಿಮೆಯಾದರೆ ತೆರಿಗೆಯೂ ಕಡಿಮೆಯಾಗುತ್ತದೆ.

'ಪ್ರಸ್ತುತ ಆಸ್ತಿ ತೆರಿಗೆ ಲೆಕ್ಕ ಹಾಕುವಾಗ ಪ್ರದೇಶವಾರು ಎ,ಬಿ, ಸಿ, ಡಿ, ಇ, ಎಫ್ ಎಂಬ ಆರು ವಲಯಗಳನ್ನು ವರ್ಗೀಕರಣ ಮಾಡಿಕೊಂಡು ಅದರ ಆಧಾರದಲ್ಲಿ ಘಟಕ ವಿಸ್ತೀರ್ಣ ಮೌಲ್ಯ ನಿಗದಿಪಡಿಸುತ್ತೇವೆ. ಆಸ್ತಿಯು ಯಾವ ವಲಯದಲ್ಲಿ ಬರುತ್ತದೆ ಎಂಬುದನ್ನು ತೆರಿಗೆ ಲೆಕ್ಕಾಚಾರದ ವೇಳೆ ಖಾತರಿಪಡಿಸಿಕೊಳ್ಳಬೇಕಾಗುತ್ತದೆ. ಬಂಡವಾಳ ಮೌಲ್ಯ ಆಧರಿತ ವ್ಯವಸ್ಥೆಯಲ್ಲಿ ಆಸ್ತಿ ತೆರಿಗೆಯ ಶೇ 85ರಷ್ಟು ಪ್ರಮಾಣವು ಮಾರ್ಗಸೂಚಿ ದರಕ್ಕೆ ಅನುಗುಣವಾಗಿರುತ್ತದೆ. ಅದರ ಲೆಕ್ಕಾಚಾರವೂ ತುಂಬಾ ಸರಳ. ಅದು ಆಸ್ತಿ ಇರುವ ಜಾಗದ ಮಾರ್ಗಸೂಚಿ ದರವನ್ನು ಆಧರಿಸಿರುವುದರಿಂದ ಆಸ್ತಿ ಇರುವ ಸ್ಥಳವನ್ನು ಗುರುತಿಸಿದರೆ ಅದರ ಮೌಲ್ಯವೂ ತನ್ನಿಂದ ತಾನೆ ತಿಳಿಯುತ್ತದೆ' ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥಪ್ರಸಾದ್ ಅವರು ವಿವರಿಸಿದರು.

'ಬಂಡವಾಳ ಮೌಲ್ಯವು ಮಾರ್ಗಸೂಚಿ ದರವನ್ನು ಆಧರಿಸಿರುವುದರಿಂದ ಆಸ್ತಿ ಮಾಲೀಕರು ತಪ್ಪು ಲೆಕ್ಕಾಚಾರ ನೀಡುವ ಅವಕಾಶಗಳು ಕಡಿಮೆ. ತಪ್ಪು ಲೆಕ್ಕಾಚಾರ ಮಾಡಿದರೂ, ಅದು ಶೇ 15ಕ್ಕಿಂತ ಹೆಚ್ಚಾಗಲು ಸಾಧ್ಯವಿಲ್ಲ. ತಪ್ಪು ವರ್ಗೀಕರಣದಿಂದ ಪಾಲಿಕೆಗೆ ಆಗುವ ನಷ್ಟ ತಪ್ಪುತ್ತದೆ' ಎಂದರು.

'15ನೇ ಕೇಂದ್ರ ಹಣಕಾಸು ಆಯೋಗದ ನಿಧಿಯಡಿ ಅನುದಾನ ಪಡೆಯುವುದಕ್ಕೆ ಎಲ್ಲ ಮಹಾನಗರ ಪಾಲಿಕೆಗಳು ಬಂಡವಾಳ ಮೌಲ್ಯ ಆಧರಿತ ತೆರಿಗೆ ಲೆಕ್ಕಾಚಾರ ಪದ್ಧತಿ ಅನುಸರಿಸಲೇ ಬೇಕು. ಹಾಗಾಗಿ, ಇಂದಲ್ಲ ನಾಳೆಯಾದರೂ ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲೇ ಬೇಕಾಗುತ್ತದೆ. ಈ ಸಂಬಂಧ ಕಾನೂನು ತಿದ್ದುಪಡಿ ತರುವುದಕ್ಕೆ ಸರ್ಕಾರಕ್ಕೆ ಶೀಘ್ರವೇ ಪ್ರಸ್ತಾವನೆ ಕಳುಹಿಸುತ್ತೇವೆ' ಎಂದು ಅವರು ತಿಳಿಸಿದರು.

ಮುಖ್ಯಾಂಶಗಳು

- ಪ್ರಸ್ತುತ ಘಟಕ ವಿಸ್ತೀರ್ಣದ ಮೌಲ್ಯ ಆಧಾರದಲ್ಲಿ ಆಸ್ತಿ ತೆರಿಗೆ ಲೆಕ್ಕಾಚಾರ
- ಇನ್ನು ನಿರ್ದಿಷ್ಟ ಪ್ರದೇಶದ ಮಾರ್ಗಸೂಚಿ ದರದ ಜೊತೆ ತೆರಿಗೆ ಲೆಕ್ಕಾಚಾರ
- ಮಾರ್ಗಸೂಚಿ ದರ ಬದಲಾದಂತೆ ತೆರಿಗೆ ಪ್ರಮಾಣವೂ ಮಾರ್ಪಾಡು

'ಸದ್ಯಕ್ಕೆ ಜಾರಿ ಅಸಾಧ್ಯ...'

'ಬಂಡವಾಳ ಮೌಲ್ಯ ಆಧರಿತ ಆಸ್ತಿ ತೆರಿಗೆ ಲೆಕ್ಕಾಚಾರ ಪದ್ಧತಿ ಅಳವಡಿಸಲು ಇ–ಆಸ್ತಿ ತಂತ್ರಾಂಶದಲ್ಲಿ ಕೆಲವೊಂದು ಮಾರ್ಪಾಡು ಮಾಡಬೇಕಾಗುತ್ತದೆ. ಬಿಬಿಎಂಪಿ ಕಾಯ್ದೆಯಲ್ಲಿ ತಿದ್ದುಪಡಿ ತರಬೇಕಾಗುತ್ತದೆ. ಈ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿ ಸಲಹೆ ಹಾಗೂ ಅಭಿಪ್ರಾಯ ಪಡೆಯಬೇಕಾಗುತ್ತದೆ. ಇದೆಲ್ಲಕ್ಕೂ ಏನಿಲ್ಲವೆಂದರೂ 6 ತಿಂಗಳು ಕಾಲಾವಕಾಶಬೇಕು. ಈ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು 2022–23ನೇ ಸಾಲಿನಿಂದ ಹೊಸ ಪದ್ಧತಿ ಅನುಸರಿಸುವ ಸಾಧ್ಯತೆ ಹೆಚ್ಚು' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

1976ರ ಕೆಎಂಸಿ ಕಾಯ್ದೆಯ ನಿಯಮಾವಳಿಗಳ ಪ್ರಕಾರ ಆಸ್ತಿ ತೆರಿಗೆಯನ್ನು ಪ್ರತಿ ಮೂರು ವರ್ಷಕ್ಕೊಮ್ಮೆ ಚಾಲ್ತಿಯಲ್ಲಿರುವ ಪ್ರದೇಶವಾರು ಯೂನಿಟ್ ದರಗಳ ಮೇಲೆ ಕನಿಷ್ಠ ಶೇ 15ರಷ್ಟು ಹಾಗೂ ಗರಿಷ್ಠ ಶೇ 30ರಷ್ಟು ಹೆಚ್ಚಳ ಮಾಡಲು ಅವಕಾಶ ಇತ್ತು. ಬಿಬಿಎಂಪಿ ಕಾಯ್ದೆ ಪ್ರಕಾರ ಪ್ರತಿ ವರ್ಷ ಶೇ 5ರವರೆಗೆ ಆಸ್ತಿ ತೆರಿಗೆ ಹೆಚ್ಚಳ ಮಾಡಲು ಅವಕಾಶ ಇದೆ.

'ಬಂಡವಾಳ ಮೌಲ್ಯ ಆಧಾರಿತ ಆಸ್ತಿ ತೆರಿಗೆ ಪದ್ಧತಿ ಜಾರಿಗೊಂಡರೂ ತೆರಿಗೆಯಲ್ಲಿ ಶೇಕಡಾವಾರು ಹೆಚ್ಚಳ ಮಾಡುವ ಅಧಿಕಾರ ಬಿಬಿಎಂಪಿಗೆ ಇದ್ದೇ ಇದೆ' ಎಂದು ಮಂಜುನಾಥ ಪ್ರಸಾದ್ ಸ್ಪಷ್ಟಪಡಿಸಿದರು.

ಜನಸಾಮಾನ್ಯರ ಪ್ರತಿಕ್ರಿಯೆಗಳು

ಹಸಿರು ನಗರಕ್ಕೆ ಪೂರಕ



ಬೆಂಗಳೂರಿನ ಮನೆಗಳಲ್ಲಿ ಸಂಗ್ರಹವಾಗುವ ಕಾಂಪೋಸ್ಟ್ ಗೊಬ್ಬರದಿಂದ ಮನೆಯಲ್ಲಿ ಉದ್ಯಾನ ಹಾಗೂ ತೋಟಗಾರಿಕೆ ಚಟುವಟಿಕೆಗಳಿಗೆ ವಲಯ ಮಟ್ಟದಲ್ಲಿ ₹1 ಲಕ್ಷ ಬಹುಮಾನ ನೀಡುವ ಯೋಜನೆ ಸ್ವಾಗತಾರ್ಹ. ಬೆಂಗಳೂರಿಗೆ ಉದ್ಯಾನ ನಗರವೆಂಬ ಹೆಸರು ಉಳಿಯಲು ಈ ಚಿಂತನೆ ಉಪಾಯಕಾರಿ.

ಕೆ.ಸುಶೀಲಾ, ಗೃಹಿಣಿ, ಚೋಳನಾಯಕನಹಳ್ಳಿ

ಪಾದಚಾರಿಗಳಿಗೆ ದಾರಿ ನೀಡಿ



ನಗರದಲ್ಲಿ ಪಾದಚಾರಿಗಳ ಸಂಚಾರಕ್ಕೆ ಸೂಕ್ತ ಜಾಗಗಳಿಲ್ಲ. ಇರುವ ಪಾದಚಾರಿ ಮಾರ್ಗಗಳು ಹಾಳಾಗಿದ್ದರೂ ಅವುಗಳ ದುರಸ್ತಿಯಾಗಿಲ್ಲ. ಇದಕ್ಕಾಗಿ ಪ್ರತಿ ವಾರ್ಡ್‌ಗೆ ₹20 ಲಕ್ಷ ಅನುದಾನ ಸ್ವಾಗತಾರ್ಹ. ಈ ಹಣ ಭ್ರಷ್ಟರ ಜೇಬು ಸೇರದೆ, ಸಾರ್ವಜನಿಕರ ಹಿತಕ್ಕಾಗಿ ಪೂರ್ಣ ಬಳಕೆಯಾಗಲಿ.

ನಾಗವೇಣಿ, ಖಾಸಗಿ ಕಂಪನಿ ಉದ್ಯೋಗಿ

ರಸ್ತೆ ಸರಿಯಾದರೆ ಸಾಕು



110 ಹಳ್ಳಿಗಳಿಗೆ ನೀರು ಪೂರೈಕೆಗಾಗಿ ಬಹುತೇಕ ರಸ್ತೆಗಳನ್ನು ಅಗೆದು ಹಾಳು ಮಾಡಲಾಗಿದೆ. ಇದರ ದುರಸ್ತಿಗೆ ಬಜೆಟ್‌ನಲ್ಲಿ ದೊಡ್ಡ ಮೊತ್ತದ ಅನುದಾನ ಮೀಸಲು ಒಳ್ಳೆಯ ಬೆಳವಣಿಗೆ. ಇದರಿಂದ ನಗರದ ಹಲವು ಪ್ರದೇಶಗಳು ಅಭಿವೃದ್ಧಿ ಕಾಣಲಿವೆ. ಆದರೆ, ಈ ರೀತಿಯ ಯೋಜನೆಗೂ ಮುನ್ನ ಮುಂದಾಲೋಚನೆ ಇರಲಿ. ಇಲ್ಲದಿದ್ದರೆ ಕೆಡವಲು ಹಾಗೂ ಕಟ್ಟಲು ಸಾರ್ವಜನಿಕರ ಹಣವೇ ಪೋಲಾಗುತ್ತದೆ.

ವೀಣಾ, ಇಂದಿರಾನಗರ

ಸರ್ಕಾರಿ ಶಾಲೆಗಳ ಕಡೆಗಣನೆ



ಬೆಂಗಳೂರು ಅಭಿವೃದ್ಧಿ ಕಾಣುತ್ತಿರುವ ನಗರ. ಆದರೆ, ನಗರದಲ್ಲಿರುವ ಸರ್ಕಾರಿ ಶಾಲೆಗಳು ಮಾತ್ರ ಹಿಂದುಳಿದಿವೆ. ಪ್ರತಿ ವಾರ್ಡ್‌ನಲ್ಲಿರುವ ಸರ್ಕಾರಿ ಶಾಲೆಗಳನ್ನು ಪಾಲಿಕೆ ವತಿಯಿಂದ ಅಭಿವೃದ್ಧಿಪಡಿಸಬೇಕು. ಇದಕ್ಕಾಗಿ ಬಜೆಟ್‌ನಲ್ಲಿ ವಿಶೇಷ ಅನುದಾನ ಘೋಷಿಸಬೇಕಿತ್ತು. ಶಿಕ್ಷಣವೊಂದೇ ಉತ್ತಮ ಪ್ರಜೆಗಳನ್ನು ಹೊರಹಾಕುವ ಅಸ್ತ್ರ. ಅದನ್ನೇ ಕಡೆಗಣಿಸಿರುವುದು ಸರಿಯಲ್ಲ.

ಕೆ.ಪಿ.ನಾಗವೇಣಿ, ಉದ್ಯೋಗಿ

ಉದ್ಯೋಗ ಸೃಷ್ಟಿಯ ಮಾತಿಲ್ಲ



ಬಿಬಿಎಂಪಿ ಬಜೆಟ್‌ನಲ್ಲಿ ನಗರದ ಅಭಿವೃದ್ಧಿಗೆ ನೀಡಿರುವ ಆದ್ಯತೆಯನ್ನು ಯುವಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಕಡೆಗೂ ನೀಡಬೇಕಿತ್ತು. ಉದ್ಯೋಗಸ್ಥ ಯುವ ಸಮುದಾಯದಿಂದ ಸಮಾಜದಲ್ಲಿ ಅಭಿವೃದ್ಧಿ ತಾನಾಗೇ ಆಗುತ್ತದೆ. ಕೋಟಿಗಟ್ಟಲೆ ಹಣವನ್ನು ಅನ್ಯ ಉದ್ದೇಶಗಳಿಗೆ ನೀಡಿರುವುದರಿಂದ ನಿರುದ್ಯೋಗ ಕಡಿಮೆ ಮಾಡಲು ಸಾಧ್ಯವೇ?

ಅಜಯ್ ಶ್ರೀನಿವಾಸನ್, ಸ್ವ ಉದ್ಯೋಗಿ

ದುಬಾರಿ ಜೀವನ ಸಾಕಾಗಿದೆ



ಬೆಂಗಳೂರಿನಲ್ಲಿ ಸಾಮಾನ್ಯ ಜೀವನ ನಡೆಸುವುದು ಸವಾಲಿನ ಕೆಲಸ. ದುಬಾರಿ ದುನಿಯಾದಲ್ಲಿ ಮೂಲಸೌಕರ್ಯಗಳಿಗೂ ಜನ ಪರದಾಡುತ್ತಿದ್ದಾರೆ. ತೆರಿಗೆ ಹೆಚ್ಚಳ ಮಾಡುವ ವಿಚಾರವನ್ನು ಪಾಲಿಕೆ ದೂರ ತಳ್ಳಬೇಕು. ಒಟ್ಟಾರೆ ಈ ಬಜೆಟ್ ಜನಪರವಾಗಿಲ್ಲ.

ಹರೀಶ್ ಬಾಬು, ಖಾಸಗಿ ಕಂಪನಿ ಉದ್ಯೋಗಿ

ಪಾದಚಾರಿ ಮಾರ್ಗ: ವಾರ್ಡ್‌ಗೆ ₹ 20 ಲಕ್ಷ

ನಾಗರಿಕಸ್ನೇಹಿ ಪಾದಚಾರಿ ಮಾರ್ಗ ನಿರ್ಮಾಣಕ್ಕೆ ಪ್ರತಿ ವಾರ್ಡ್ ಸಮಿತಿಗೆ ₹ 20 ಲಕ್ಷ ಹಂಚಿಕೆ ಮಾಡಲಾಗಿದೆ. ವಾರ್ಡ್ ಮಟ್ಟದಲ್ಲೇ ಈ ಬಗ್ಗೆ ನಿರ್ಧಾರ ಕೈಗೊಳ್ಳುವ ಅಧಿಕಾರ ನೀಡಲಾಗಿದೆ. ಪ್ರತಿ ವಾರ್ಡ್‌ನಲ್ಲಿ ಕನಿಷ್ಠ 5 ಕಿ.ಮೀಗಳಂತೆ ಒಟ್ಟು 5 ಸಾವಿರ ಕಿ.ಮೀ ಪಾದಚಾರಿ ಮಾರ್ಗಗಳ ಅಭಿವೃದ್ಧಿಪಡಿಸುವ ಗುರಿಯನ್ನು ಬಿಬಿಎಂಪಿ ಹೊಂದಿದೆ.

'ಮೋಟಾರುರಹಿತ ಸಾರಿಗೆ ಉತ್ತೇಜಿಸಲು ಸೈಕಲ್ ಪಥ ಹಾಗೂ ಪಾದಚಾರಿ ಮಾರ್ಗ ಕಾಮಗಾರಿಗಳನ್ನೂ ರಾಜ್ಯ ಸರ್ಕಾರದ ಅನುದಾನಗಳಲ್ಲೂ ಕೈಗೊಳ್ಳಲಾಗುವುದು' ಎಂದು ಗೌರವ್ ಗುಪ್ತ ಮಾಹಿತಿ ನೀಡಿದರು.

ಆಸ್ತಿ ತೆರಿಗೆಯ ಶೇ 1ರಷ್ಟು ಪಾಲು ಆಯಾ ವಾರ್ಡ್‌ಗೆ

ಆಯಾ ವಾರ್ಡ್‌ನಲ್ಲಿ ಸಂಗ್ರಹವಾಗುವ ಆಸ್ತಿ ತೆರಿಗೆಯಲ್ಲಿ ಶೇ 1ರಷ್ಟನ್ನು ಆಯಾ ವಾರ್ಡ್‌ಗೆ ಒದಗಿಸುವ ಮಹತ್ವದ ತೀರ್ಮಾನವನ್ನು ಈ ಸಲದ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಈ ಅನುದಾನ ಬಳಕೆ ಬಗ್ಗೆ ವಾರ್ಡ್ ಸಮಿತಿ ತೀರ್ಮಾನ ಕೈಗೊಳ್ಳಲಿದೆ. ವಿಧಾನಸಭಾ ಕ್ಷೇತ್ರದ ಸಮಾಲೋಚನಾ ಸಮಿತಿ ಮಟ್ಟದಲ್ಲಿ ಅನುಮೋದನೆ ಪಡೆದು ಎಲ್ಲ ವಾರ್ಡ್‌ಗಳ ಈ ಕಾಮಗಾರಿಗಳನ್ನು ಕ್ರೋಡೀಕರಿಸಿ ಜಾರಿಗೊಳಿಸಲಾಗುತ್ತದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

'ಅಭಿವೃದ್ಧಿಗಿಲ್ಲ ಹೊಸ ಕಾರ್ಯತಂತ್ರ'

ಒಂದನೇ ಪುಟದಿಂದ

ವಿಕೇಂದ್ರೀಕರಣ–ಬಜೆಟ್‌ನ ಹೂರಣ: ವಾರ್ಡ್ ಮತ್ತು ವಲಯ ಮಟ್ಟದಲ್ಲಿ ಆರ್ಥಿಕ ನಿರ್ವಹಣೆ ಮತ್ತು ಹೊಣೆಗಾರಿಕೆ ವಿಕೇಂದ್ರೀಕರಣ, ಅನಗತ್ಯ ವೆಚ್ಚ ನಿಯಂತ್ರಣ, ಸಾರ್ವಜನಿಕ ಭಾಗ ವಹಿಸುವಿಕೆಗೆ ಉತ್ತೇಜನದ ಮೂಲಕ ಪಾರದರ್ಶಕತೆ ಸಾಧಿಸುವುದು ಈ ಬಜೆಟ್‌ನ ದೂರದೃಷ್ಟಿ ಮತ್ತು ಗುರಿ ಎಂದು ವಿಶೇಷ ಆಯುಕ್ತರು ಹೇಳಿದ್ದಾರೆ.

ಪಾಲಿಕೆಯ ಸ್ವಂತ ವರಮಾನದಲ್ಲಿ ಶೇ 50ರಷ್ಟರ ವಿನಿಯೋಗದ ಬಗ್ಗೆ ವಲಯ ಮಟ್ಟದಲ್ಲೇ ತೀರ್ಮಾನ ಕೈಗೊಳ್ಳುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಅಂದರೆ ಸುಮಾರು ₹ 2 ಸಾವಿರ ಕೋಟಿ ಅನುದಾನವನ್ನು ವಿವಿಧ ವಲಯಗಳಿಗೆ ಹಂಚಿಕೆ ಮಾಡಲಾಗಿದೆ. ಯಾವ ವಲಯಕ್ಕೆ ಎಷ್ಟು ಅನುದಾನ ಸಿಗುತ್ತದೆ ಎಂಬುದನ್ನು ಬಜೆಟ್‌ನಲ್ಲಿ ವಿವರಿಸಿಲ್ಲ.

'ಆಯಾ ವಲಯದ ಬೇಡಿಕೆ ಹಾಗೂ ಅಗತ್ಯ ನೋಡಿಕೊಂಡು ಅನುದಾನ ಹಂಚಿಕೆ ಮಾಡಲಾಗುತ್ತದೆ' ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

ಹೊಸ ಅಭಿವೃದ್ಧಿ ಕಾಮಗಾರಿಗಳಿಲ್ಲ: ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನದಲ್ಲಿ ಕೈಗೆತ್ತಿಕೊಳ್ಳುವ ಹೊಸ ಕಾಮಗಾರಿಗಳನ್ನು ಹೊರತಾಗಿ ಪಾಲಿಕೆ ಅನುದಾನದಲ್ಲಿ ಹೊಸ ಅಭಿವೃದ್ಧಿ ಕಾಮಗಾರಿಗಳಿಗೆ ಗಮನಾರ್ಹ ಮೊತ್ತವನ್ನು ಕಾಯ್ದಿರಿಸಿಲ್ಲ. ಆದರೆ, ನಿರ್ವಹಣೆಗೆ ಭರಪೂರ ಅನುದಾನ ಹಂಚಿಕೆ ಮಾಡಲಾಗಿದೆ.

ಪಾಲಿಕೆ ಆರ್ಥಿಕ ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿರುವುದರಿಂದ, ನಿರ್ವಹಣಾ ಕಾಮಗಾರಿಗಳಿಗೆ ಅನುದಾನ ಹಂಚಿಕೆ ಮಾಡಲು ಆದ್ಯತೆ ನೀಡಲಾಗಿದೆ. ಶಿಕ್ಷಣ, ಆರೋಗ್ಯ, ಕಲ್ಯಾಣ ಕಾರ್ಯಕ್ರಮಗಳು ಮತ್ತು ಕೆರೆ ಅಭಿವೃದ್ಧಿಗೆ ಹೊರತಾಗಿ ಬೇರೆ ಯಾವುದೇ ಇಲಾಖೆ ಯಲ್ಲೂ ಹೊಸ ಕಾಮಗಾರಿಗಳನ್ನು ಕೈಗೊಳ್ಳದಿರಲು ಪ್ರಜ್ಞಾಪೂರ್ವಕ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಬಜೆಟ್‌ನಲ್ಲೇ ಸ್ಪಷ್ಟಪಡಿಸಲಾಗಿದೆ.

ಕಸ ನಿರ್ವಹಣೆಗೆ ₹ 1,622.23 ಕೋಟಿ ತೆಗೆದಿಡಲಾಗಿದೆ. ಹಿಂದಿನ ಸಾಲುಗಳಿಗೆ (2020–21ನೇ ಸಾಲಿನ ಪರಿಷ್ಕೃತ ಅಂದಾಜು ₹ 1,031 ಕೋಟಿ) ಹೋಲಿಸಿದರೆ ಇದು ತೀರಾ ಅಧಿಕ. 'ಈ ಹಿಂದಿನ ಬಜೆಟ್‌ಗಳಲ್ಲಿ ಕಸ ನಿರ್ವಹಣೆಗೆ ಅವಶ್ಯಕವಿರುವಷ್ಟು ಅನುದಾನ ಹಂಚಿಕೆ ಮಾಡದ ಕಾರಣ ಬಿಲ್‌ಗಳು ಅನೇಕ ತಿಂಗಳುಗಳಿಂದ ಬಾಕಿ ಇವೆ. ಹಾಗಾಗಿ ಇದು ವಾಸ್ತವದ ವೆಚ್ಚ' ಎಂದು ಬಜೆಟ್‌ನಲ್ಲಿ ವಿಶೇಷ ಆಯುಕ್ತರು (ಹಣಕಾಸು) ಸಮರ್ಥಿಸಿಕೊಂಡಿದ್ದಾರೆ.

'7 ವರ್ಷಗಳಲ್ಲೇ ಮೊದಲ ಬಾರಿಗೆ ಕಸ ನಿರ್ವಹಣೆ ಟೆಂಡರ್ ಕರೆದು ಕಾರ್ಯಾದೇಶ ನೀಡಲಾಗಿದೆ. ಎಲ್ಲೂ ಕಸದ ರಾಶಿ ಕಂಡುಬಾರದ ವಾರ್ಡ್‌ಗಳಿಗೆ ₹ 50 ಲಕ್ಷ ಪ್ರೋತ್ಸಾಹ ಧನ ನೀಡಲಾಗುತ್ತದೆ. ಸ್ವಚ್ಛ ಸರ್ವೇಕ್ಷಣ ಸರ್ವೆಯಲ್ಲಿ ಶ್ರೇಯಾಂಕವನ್ನು ಒಡಿಎಫ್ ಪ್ಲಸ್ ಪ್ಲಸ್‌ಗೆ ಉತ್ತಮ ಪಡಿಸಿಕೊಳ್ಳಲು 67 ಹೊಸ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ. ಪ್ರತಿ ಪೌರಕಾರ್ಮಿಕರಿಗೆ ಸಲಕರಣೆ ಖರೀದಿಗೆ ವರ್ಷಕ್ಕೆ ತಲಾ ₹ 2,400 ಕಾಯ್ದಿರಿಸಲಾಗುತ್ತಿದೆ' ಎಂದು ಅವರು ತಿಳಿಸಿದ್ದಾರೆ.

ಒಂಟಿ ಮನೆಗಳಿಗೆ ಎಳ್ಳು ನೀರು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ, ಹಿಂದುಳಿದ ವರ್ಗಗಳಲ್ಲಿನ ಆರ್ಥಿಕ ದುರ್ಬಲರಿಗೆ ವಸತಿ ಕಲ್ಪಿಸಲು 'ಒಂಟಿ ಮನೆ' ಕಾರ್ಯಕ್ರಮಗಳಿಗೆ ಈ ಬಾರಿ ಯಾವುದೇ ಹೊಸ ಅನುದಾನ ಹಂಚಿಕೆ ಮಾಡಿಲ್ಲ. ಈಗಾಗಲೇ ಕೈಗೊಂಡ ಕಲ್ಯಾಣ ಕಾರ್ಯಕ್ರಮಗಳ ₹ 1ಸಾವಿರ ಕೋಟಿ ಬಿಲ್ ಪಾವತಿ ಬಾಕಿ ಇದೆ. ಇವುಗಳಲ್ಲಿ ಒಂಟಿ ಮನೆಗಳಿಗೆ ₹ 900 ಕೋಟಿ ಬಿಲ್ ಪಾವತಿ ಬಾಕಿ ಇದೆ. ಹಾಗಾಗಿ ಹೊಸ ಯೋಜನೆ ಕೈಗೆತ್ತಿಕೊಳ್ಳದಿರಲು ತೀರ್ಮಾನ ಕೈಗೊಂಡಿದ್ದಾಗಿ ಬಿಬಿಎಂಪಿ ಹೇಳಿದೆ. ಪೌರಕಾರ್ಮಿಕರು ಮತ್ತು ಡಿ ಗುಂಪಿನ ಸಿಬ್ಬಂದಿಯ ಮಕ್ಕಳ ಬೋಧನಾ ಶುಲ್ಕ ಮರುಪಾವತಿ ಮುಂದುವರಿಯಲಿದೆ. ಆರ್ಥಿಕ ದುರ್ಬಲರ ವೈದ್ಯಕೀಯ ವೆಚ್ಚ ಮರುಪಾವತಿಗೆ ₹ 27 ಕೋಟಿ ಮೀಸಲಿಡಲಾಗಿದೆ.

ಉಚಿತ ಆನ್‌ಲೈನ್ ತರಗತಿ ನಾಳೆಯಿಂದ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಸ್ಪರ್ಧಾತ್ಮಕ ಪರೀಕ್ಷಾ ಕೋಚಿಂಗ್ ಅಕಾಡೆಮಿಯಿಂದ ಯುಜಿಸಿ-ನೆಟ್, ಕೆ-ಸೆಟ್-2021 ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವ ರಾಜ್ಯದ ಎಲ್ಲ ಅಭ್ಯರ್ಥಿಗಳಿಗಾಗಿ ಸಾಮಾನ್ಯ ಪತ್ರಿಕೆ-1 ವಿಷಯಕ್ಕೆ ಸಂಬಂಧಿಸಿ ಮಾರ್ಚ್ 29 ರಿಂದ ಏ.9ರವರೆಗೆ ಉಚಿತ ಆನ್‌ಲೈನ್ ತರಗತಿಗಳನ್ನು ನಡೆಸಲಾಗುತ್ತಿದೆ.

ಪ್ರತಿ ದಿನ ಬೆಳಿಗ್ಗೆ 8 ರಿಂದ 10 ಗಂಟೆ ವರೆಗೆ ಹಾಗೂ ಸಂಜೆ 6 ರಿಂದ 8 ಗಂಟೆ ವರೆಗೆ ಪ್ರತಿದಿನ ಎರಡು ತರಗತಿಗಳ ಪ್ರಸಾರ ಯುಟ್ಯೂಬ್/ಫೇಸ್‌ಬುಕ್ ಲೈವ್‌ನಲ್ಲಿ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳು ಈ ಗೂಗಲ್ ಫಾರಂ ಲಿಂಕ್ https://forms.gle/ix594hL7N4seu3rw5 ಮೂಲಕ ತರಗತಿಗಳಿಗೆ ನೋಂದಾಯಿಸಿಕೊಳ್ಳಬಹುದು ಎಂದು ಸ್ಪರ್ಧಾತ್ಮಕ ಪರೀಕ್ಷಾ ಕೋಚಿಂಗ್ ಅಕಾಡೆಮಿ ಸಂಯೋಜಕ ಡಾ.ಪ್ರಕಾಶ ಬಡಿಗೇರ ತಿಳಿಸಿದ್ದಾರೆ.

ರಾಜ್ಯದಲ್ಲಿ ಮತ್ತೆ 2,886 ಮಂದಿಗೆ ಸೋಂಕು ದೃಢ ● ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸೂಚನೆ

ಜಾತ್ರೆ, ಮೇಳಗಳಿಗೂ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶನಿವಾರ 2,886 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಸೋಂಕಿನ ಸಂಖ್ಯೆ ಹೆಚ್ಚುತ್ತಲೇ ಇದೆ. ಕೋವಿಡ್ ಹರಡುವಿಕೆ ತಡೆಯಲು ಮುಂದಾಗಿರುವ ಸರ್ಕಾರ ಹಬ್ಬದ ಜತೆಗೆ ಜಾತ್ರೆ ಮತ್ತು ಮೇಳಗಳಿಗೂ ನಿರ್ಬಂಧ ವಿಧಿಸಿದೆ.

ಎರಡು ದಿನಗಳ ಹಿಂದಷ್ಟೇ ಹೋಳಿ, ಯುಗಾದಿ, ಷಬ್-ಎ-ಬರಾತ್, ಗುಡ್ ಫ್ರೈಡೇ ಹಬ್ಬಗಳ ಆಚರಣೆಗೆ ನಿರ್ಬಂಧ ವಿಧಿಸಲಾಗಿತ್ತು. ಯಾವುದೇ ಹಬ್ಬಗಳನ್ನು ಸಾರ್ವಜನಿಕ ಸ್ಥಳಗಳು, ಸಾರ್ವಜನಿಕ ಮೈದಾನಗಳು, ಉದ್ಯಾನ, ಮಾರುಕಟ್ಟೆ ಮತ್ತು ಧಾರ್ಮಿಕ ಪ್ರದೇಶಗಳಲ್ಲಿ ಆಚರಿಸುವಂತಿಲ್ಲ ಎಂದು ಸೂಚಿಸಲಾಗಿತ್ತು. ಆದರೆ, ಇದರಲ್ಲಿ ಜಾತ್ರೆ ಮತ್ತು ಮೇಳಗಳನ್ನು ಸೇರಿಸಿರಲಿಲ್ಲ.

ಕೋವಿಡ್ ಹರಡುವಿಕೆ ತಡೆಯಲು ಸಾರ್ವಜನಿಕ ಕಾರ್ಯಕ್ರಮಗಳಿಗೆ ಕಟ್ಟುನಿಟ್ಟಿನ ನಿರ್ಬಂಧ ವಿಧಿಸಬೇಕು ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯರು ಸೂಚಿಸಿದ್ದಾರೆ. ಧಾರ್ಮಿಕ ಹಬ್ಬಗಳಿಗೆ ಸಂಬಂಧಿಸಿದಂತೆ ಜಾತ್ರೆ, ಮೇಳಗಳಲ್ಲಿ ಸಹ ಜನ ಗುಂಪು ಸೇರುವುದನ್ನು ನಿಷೇಧಿಸಲಾಗಿದೆ. ಈ ನಿಯಮಗಳ ಜಾರಿಗೆ ಸರ್ಕಾರ, ಈ ಸಂಬಂಧ ಬಿಬಿಎಂಪಿ ಆಯುಕ್ತರು ಮತ್ತು ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ಕ್ರಮವಹಿಸಬೇಕು. ಯಾರಾದರೂ ನಿಯಮ ಉಲ್ಲಂಘಿಸಿದರೆ ಅಂತಹವರ ವಿರುದ್ಧ ಸಾಂಕ್ರಾಮಿಕ ರೋಗಗಳ ಕಾಯ್ದೆ ಅಡಿ ಕ್ರಮಕೈಗೊಳ್ಳಬೇಕು ಎಂದು ಸೂಚಿಸಿದೆ.

ಪ್ರಕರಣ ಮತ್ತಷ್ಟು ಏರಿಕೆ: ರಾಜ್ಯದಲ್ಲಿ ಕೇವಲ 3 ದಿನಗಳಲ್ಲಿ 7,975 ಪ್ರಕರಣಗಳು ಖಚಿತಪಟ್ಟಿವೆ. ಈವರೆಗೆ ಸೋಂಕಿತರಾದವರ ಸಂಖ್ಯೆ 9.83 ಲಕ್ಷ ದಾಟಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿದ್ದು, ನಾಲ್ಕು ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ ಮೂರಂಕಿ ದಾಟಿದೆ. ಬೆಂಗಳೂರು (1,820), ಉಡುಪಿ (156), (ಕಲಬುರ್ಗಿ 147), ಮೈಸೂರು (131), ಬೀದರ್ (82), ತುಮಕೂರು (80) ಜಿಲ್ಲೆಯಲ್ಲಿ ಹೊಸ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ದೃಢಪಟ್ಟಿವೆ.

ಕೊರೊನಾ ಸೋಂಕಿತರಲ್ಲಿ ಬೆಂಗಳೂರು ಹಾಗೂ ಕಲಬುರ್ಗಿಯಲ್ಲಿ ತಲಾ ಇಬ್ಬರು, ತುಮಕೂರು, ಹಾಸನ, ಧಾರವಾಡ ಮತ್ತು ಬೀದರ್‌ನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,492ಕ್ಕೆ ಏರಿಕೆಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 20 ಸಾವಿರದ ಗಡಿ (21,252) ದಾಟಿದೆ.

ಶಾಸಕಿ ಸೌಮ್ಯಾ ರೆಡ್ಡಿಗೆ ಕೋವಿಡ್

ಬೆಂಗಳೂರು: ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಅವರ ಪುತ್ರಿ, ಜಯನಗರ ಕ್ಷೇತ್ರದ ಶಾಸಕಿ ಸೌಮ್ಯಾರೆಡ್ಡಿ ಅವರಿಗೆ ಕೋವಿಡ್ ದೃಢಪಟ್ಟಿದೆ.

ತಮ್ಮ ಟ್ವಿಟರ್ ಖಾತೆಯಲ್ಲಿ, 'ನನಗೆ ಕೋವಿಡ್ ಸೋಂಕು ತಗುಲಿದೆ. ರೋಗಲಕ್ಷಣಗಳು ಹೆಚ್ಚಿಲ್ಲದೇ ಇದ್ದರೂ ಈ ಹಿಂದೆ ನನಗೆ ಅಸ್ತಮಾ ಇದ್ದ ಕಾರಣ ಆಸ್ಪತ್ರೆಗೆ ದಾಖಲಾಗಿದ್ದೇನೆ' ಎಂದು ಸೌಮ್ಯಾ ರೆಡ್ಡಿ ಬರೆದುಕೊಂಡಿದ್ದಾರೆ.

'ಕಳೆದ ಕೆಲವು ದಿನಗಳಿಂದ ನನ್ನ ಸಂಪರ್ಕದಲ್ಲಿದ್ದವರು ಪರೀಕ್ಷೆಗೆ ಒಳಗಾಗಬೇಕು. ಕೋವಿಡ್ ಎರಡನೇ ಅಲೆಯ ತೀವ್ರತೆ ಹೆಚ್ಚುತ್ತಿದೆ. ಪ್ರತಿಯೊಬ್ಬರೂ ಮುಂಜಾಗ್ರತಾ ಕ್ರಮ ಕೈಗೊಂಡು ಮಾಸ್ಕ್ ಧರಿಸಬೇಕು' ಎಂದು ಸಲಹೆ ನೀಡಿರುವ ಅವರು, 'ಸರ್ಕಾರ ಎಲ್ಲರಿಗೂ ಲಸಿಕೆ ನೀಡುವ ಕಾರ್ಯಕ್ರಮ ಚುರುಕುಗೊಳಿಸಬೇಕು' ಎಂದೂ ಒತ್ತಾಯಿಸಿದ್ದಾರೆ.

ಸುದ್ದಿ 2 ನಿಮಿಷ

ಬೆಂಗಳೂರು–ಹುಬ್ಬಳ್ಳಿ ಸೂಪರ್ ಫಾಸ್ಟ್ ರೈಲು ಶೀಘ್ರ: ಸಚಿವ ಜೋಶಿ

ಹುಬ್ಬಳ್ಳಿ: 'ಹುಬ್ಬಳ್ಳಿ-ಬೆಂಗಳೂರು ಮಧ್ಯೆ ಸೂಪರ್ ಫಾಸ್ಟ್ ರೈಲು ಆರಂಭಕ್ಕೆ ಕೇಂದ್ರ ಸಚಿವ ಪಿಯೂಷ್ ಗೋಯಲ್ ಮೌಖಿಕವಾಗಿ ಸಮ್ಮತಿ ಸೂಚಿಸಿದ್ದು, ಮುಂದಿನ ಆರು ತಿಂಗಳ ಒಳಗೆ ಚಾಲನೆ ನೀಡಲಾಗುವುದು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹುಬ್ಬಳ್ಳಿಯಿಂದ ಬೆಂಗಳೂರಿಗೆ ರೈಲು ಪ್ರಯಾಣದ ಅವಧಿ ಎಂಟು ಗಂಟೆ ಇದ್ದು, ಸೂಪರ್ ಫಾಸ್ಟ್ ರೈಲು ನಾಲ್ಕು ಗಂಟೆಯಲ್ಲೇ ತಲುಪಲಿದೆ' ಎಂದು ಹೇಳಿದರು.

'ಮ್ಯಾಂಗನೀಸ್, ಕಬ್ಬಿಣದ ಗಣಿಗಾರಿಕೆ ಕುರಿತು ರಾಜ್ಯಗಳ ಅಧಿಕಾರವನ್ನು ಕೇಂದ್ರ ಕಸಿದುಕೊಳ್ಳುವ ಯತ್ನ ಮಾಡಿಲ್ಲ. ಈ ಹಿಂದಿನ ಮಾರ್ಗಸೂಚಿಗಳನ್ನೇ ಜಾರಿಗೊಳಿಸಲಾಗಿದೆ. ಅದರ ಪರಿಣಾಮ ₹45 ಸಾವಿರ ಕೋಟಿ ಸಂಗ್ರಹವಾಗಿದೆ. ₹25 ಸಾವಿರ ಕೋಟಿ ಗಣಿಗಾರಿಕೆ ಬಾಧಿತ ಪ್ರದೇಶಗಳ ಅಭಿವೃದ್ಧಿಗೆ ಬಳಸಲಾಗಿದೆ. ಗಣಿಗಾರಿಕೆಯಿಂದ ಬಂದ ಆದಾಯವನ್ನು ಪುನರ್‌ವಸತಿ ಕಾರ್ಯಕ್ಕೆ ಬಳಸಿಕೊಳ್ಳುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ' ಎಂದು ಅವರು ತಿಳಿಸಿದರು.



ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,26,169 ಒಟ್ಟು ಸೋಂಕಿತರು

4,06,923 ಗುಣಮುಖರಾದವರು

14,671 ಸಕ್ರಿಯ ಪ್ರಕರಣ

4,574 ಸಾವು

ಶನಿವಾರದ ಏರಿಕೆ

1,820 ದೃಢಪಟ್ಟ ಪ್ರಕರಣ

474 ಗುಣಮುಖ

2 ಸಾವು

₹14 ಲಕ್ಷ ಕಳೆದುಕೊಂಡ ನಿವೃತ್ತ ನೌಕರ

ಹಾವೇರಿ: 'ಕೌನ್ ಬನೇಗಾ ಕರೋಡ್‌ಪತಿ'ಯಿಂದ ₹25 ಲಕ್ಷ ಬಹುಮಾನ ಬಂದಿದೆ ಅಂತ ನಂಬಿಸಿ, ಬಹುಮಾನದ ಹಣವನ್ನು ಖಾತೆಗೆ ಜಮಾ ಮಾಡಲು ವಿವಿಧ ರೀತಿಯ ತೆರಿಗೆ ಮತ್ತು ಸರ್ವೀಸ್ ಚಾರ್ಜ್ ಕಟ್ಟಬೇಕು ಎಂದು ನಂಬಿಸಿದ ಆರೋಪಿಗಳು, ₹14.86 ಲಕ್ಷ ವಂಚಿಸಿರುವ ಘಟನೆ ಕುರಿತು ನಗರದ ಸಿಇಎನ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಗೂರ ಸಕ್ಕರೆ ಕಾರ್ಖಾನೆಯ ನಿವೃತ್ತ ನೌಕರ, ಪ್ರಸ್ತುತ ಹುಬ್ಬಳ್ಳಿಯ ಜಂಗ್ಲಿಪೇಟೆ ನಿವಾಸಿ ಚನ್ನವೀರಯ್ಯ ಹರಕುಣಿಮಠ (63) ಹಣ ಕಳೆದುಕೊಂಡವರು. 2014ರಿಂದ 2021ರವರೆಗೆ ವಿವಿಧ ನಂಬರ್‌ಗಳಿಂದ ಕರೆ ಮಾಡಿ ವಂಚಿಸಿದ್ದಾರೆ ಎಂದು ಚನ್ನವೀರಯ್ಯ ದೂರು ನೀಡಿದ್ದಾರೆ.

ಲಸಿಕೆ: ಸರ್ಕಾರೇತರ ಸಂಸ್ಥೆಗಳ ನೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆ ವಿತರಣೆಗೆ ಸಂಬಂಧಿಸಿದಂತೆ ಸರ್ಕಾರೇತರ ಮತ್ತು ವೃತ್ತಿಪರ ಸಂಸ್ಥೆಗಳ ಬೆಂಬಲವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಬೇಕು ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ತಿಳಿಸಿದ್ದಾರೆ.

ಲಸಿಕೆ ಅಭಿಯಾನವನ್ನು ಅನುಷ್ಠಾನಗೊಳಿಸಲು ರೋಟರಿ ಇಂಟರ್‌ನ್ಯಾಷನಲ್, ಲಯನ್ಸ್ ಕ್ಲಬ್, ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಸೇರಿದಂತೆ ವಿವಿಧ ಸಂಸ್ಥೆಗಳ ಸಹಕಾರ ಪಡೆಯಬೇಕು. ಈ ಮೂಲಕ ಅಭಿಯಾನ ಯಶಸ್ವಿಗೊಳಿಸಬೇಕು ಎಂದು ಆರೋಗ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ.

ರಾಜ್ಯದಲ್ಲಿ ಶನಿವಾರ 3,062 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆದಿದ್ದು, ಮಧ್ಯಾಹ್ನ 3.30ರ ವೇಳೆಗೆ 36,770 ಮಂದಿಗೆ ಲಸಿಕೆ ವಿತರಣೆ ಮಾಡಲಾಗಿದೆ. ಲಸಿಕೆ ಪಡೆದವರಲ್ಲಿ 23,051 ಮಂದಿ ಹಿರಿಯ ನಾಗರಿಕರಾಗಿದ್ದಾರೆ. ಈವರೆಗೆ 33.02 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 5.47 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 3.34 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ.

60 ವರ್ಷ ಮೇಲ್ಪಟ್ಟವರಲ್ಲಿ 16.41 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. 45ರಿಂದ 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಲ್ಲಿ 4.81 ಲಕ್ಷ ಮಂದಿ ಲಸಿಕೆ ಪಡೆದುಕೊಂಡಿದ್ದಾರೆ.

ವಯೋಮಿತಿ ಸಡಿಲಿಸಲು ಒತ್ತಾಯ

'ಕೇಂದ್ರ ಸರ್ಕಾರದ ಆದೇಶದಂತೆ ಏ.1ರಿಂದ 45 ವರ್ಷ ಮೇಲ್ಪಟ್ಟ ಎಲ್ಲರೂ ಲಸಿಕೆ ಪಡೆಯಬಹುದಾಗಿದೆ. ಆದರೆ, ಡಯಾಲಿಸಿಸ್‌ಗೆ ಒಳಗಾಗುವವರಲ್ಲಿ ಶೇ 30ರಷ್ಟು ರೋಗಿಗಳು 45 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಾರೆ. ಪ್ರತಿ ವರ್ಷ ದೇಶದಲ್ಲಿ 2.2 ಲಕ್ಷ ಕೊನೆಯ ಹಂತದ ಮೂತ್ರಪಿಂಡ ಕಾಯಿಲೆಯ ಪ್ರಕರಣಗಳು ದಾಖಲಾಗುತ್ತಿವೆ. ಇವರು ಹೆಚ್ಚಿನ ಅಪಾಯವನ್ನು ಎದುರಿಸಲಿದ್ದಾರೆ. ಹಾಗಾಗಿ, ವಯೋಮಿತಿ ಸಡಿಲಿಸಿ, ಡಯಾಲಿಸಿಸ್‌ಗೆ ಒಳಗಾಗುತ್ತಿರುವ ಎಲ್ಲ ರೋಗಿಗಳಿಗೂ ಲಸಿಕೆ ಪಡೆಯಲು ಅವಕಾಶ ನೀಡಬೇಕು' ಎಂದು ರೀಗಲ್ ಆಸ್ಪತ್ರೆಯ ಮೂತ್ರಪಿಂಡ ತಜ್ಞ ಡಾ. ಸೂರಿರಾಜು ಒತ್ತಾಯಿಸಿದ್ದಾರೆ.

'ಬಣ ಒಂದುಗೂಡಿಸುವ ಹೊಣೆ ದೇವನೂರ ಹೊರಲಿ'

ಪಾಂಡವಪುರ (ಮಂಡ್ಯ): 'ಸಾಹಿತಿ ದೇವನೂರ ಮಹಾದೇವ ಅವರು ದಲಿತ ಸಂಘರ್ಷ ಸಮಿತಿಯ ಬಣಗಳನ್ನು ದಲಿತ ಚಳವಳಿಯ ವಿಸ್ತಾರ ಎಂದುಕೊಂಡರು. ಅವರು ಬಣಗಳ ನಾಯಕರಿಗೆ ಬುದ್ಧಿ ಹೇಳಲಿಲ್ಲ. ಇದು, ಚಳವಳಿಯ ವಿಘಟನೆಗೆ ಕಾರಣವಾಯಿತು' ಎಂದು ಕವಿ, ದಲಿತ ಹೋರಾಟಗಾರ ಪ್ರೊ.ಎಚ್.ಗೋವಿಂದಯ್ಯ ಹೇಳಿದರು.

ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ವತಿಯಿಂದ,ಮೇಲುಕೋಟೆಯ ಜನಪದ ಸೇವಾಟ್ರಸ್ಟ್‌ನ 'ಹೊಸ ಜೀವನ ದಾರಿ ಕೇಂದ್ರ'ದಲ್ಲಿ ಶನಿವಾರ ನಡೆದ ಚಿಂತನಾ ಶಿಬಿರದಲ್ಲಿ ಅವರು ಮಾತನಾಡಿದರು.

'ಒಡೆದುಹೋಗಿ ಬಣಗಳಾಗಿದ್ದ ದಲಿತ ಸಂಘರ್ಷ ಸಮಿತಿಯನ್ನು ವಿಸರ್ಜಿಸಿ ಒಂದೇ ಸಂಘಟನೆ ರೂಪಿಸಲು 2010ರಲ್ಲಿ ಪ್ರಯತ್ನ ನಡೆದಿತ್ತು. ಆ ಸಭೆಯಲ್ಲಿ ಸಾಹಿತಿ ದೇವನೂರ ಮಹಾದೇವ ಇದ್ದರು. ಒಂದಾಗುವಿಕೆಗೆ ಬಣಗಳ ಮುಖಂಡರ ಮನಸ್ಸು ಒಪ್ಪುತ್ತಿರಲಿಲ್ಲ. ಈ ಬಗ್ಗೆ ದೇವನೂರ ಮಹದೇವ ಕೂಡ ಮೃದು ಧೋರಣೆ ತಾಳಿದರು. ದೇವನೂರ ಅವರು ಇಂದು ಬಿಜೆಪಿ ಮತ್ತು ಕೋಮುವಾದಿ ಸಂಘಟನೆಗಳ ವಿರುದ್ಧ ಉಗ್ರವಾಗಿ ಮಾತನಾಡುತ್ತಿದ್ದಾರೆ. ಆದರೆ ದಲಿತ ಚಳವಳಿಯನ್ನು ಒಂದುಗೂಡಿಸುವ ಬಗ್ಗೆ ಮಾತುಗಳನ್ನಾಡುತ್ತಿಲ್ಲ. ದಸಂಸವನ್ನು ಒಂದುಗೂಡಿಸುವ ಹೊಣೆಯನ್ನು ಅವರೇ ಹೊರಬೇಕು. ನಾವು ದೇವನೂರ ಮಹಾದೇವ ಅವರ ಕಣ್ಣನ್ನು ತೆರೆಸಬೇಕಿದೆ' ಎಂದರು.

ಡಿಎಂಕೆ ಮೈತ್ರಿಕೂಟ ಅಧಿಕಾರಕ್ಕೆ

ಸಿದ್ದರಾಮಯ್ಯ ವಿಶ್ವಾಸ ● ತಮಿಳುನಾಡಿನಲ್ಲಿ ರಾಜ್ಯ ಕಾಂಗ್ರೆಸ್ ನಾಯಕರ ಪ್ರಚಾರ

ಪ್ರಜಾವಾಣಿ ವಾರ್ತೆ

ಆನೇಕಲ್: ಅಭಿವೃದ್ಧಿ ಮತ್ತು ಸಮ ಸಮಾಜದ ನಿರ್ಮಾಣಕ್ಕಾಗಿ ಜಾತ್ಯತೀತ ಸಿದ್ಧಾಂತದ ಡಿಎಂಕೆ-ಕಾಂಗ್ರೆಸ್ ಮೈತ್ರಿಕೂಟದ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು. ತಮಿಳುನಾಡಿನಲ್ಲಿ ಸ್ಟಾಲಿನ್ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮನವಿ ಮಾಡಿದರು.

ಥಳಿ ವಿಧಾನಸಭಾ ಕ್ಷೇತ್ರದ ಡಿಎಂಕೆ–ಕಾಂಗ್ರೆಸ್ ಮೈತ್ರಿಕೂಟದ ಅಭ್ಯರ್ಥಿ ಸಿಪಿಐನ ಟಿ.ರಾಮಚಂದ್ರನ್ ಪರ ತಮಿಳುನಾಡಿನ ಗುಮ್ಮಳಾಪುರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

ಎಐಎಡಿಎಂಕೆ ಪಕ್ಷ ಬಿಜೆಪಿಯ ಕೈಗೊಂಬೆ. ತಮಿಳುನಾಡಿನಲ್ಲಿ ಪರಂಪರಾಗತವಾಗಿ ನಡೆದು ಬಂದ ಜಾತ್ಯತೀತ ತತ್ವಕ್ಕೆ ವಿರುದ್ಧವಾಗಿ ಬಿಜೆಪಿಯೊಂದಿಗೆ ಮೈತ್ರಿ ಬೆಳೆಸಿದೆ. ಬಿಜೆಪಿ ಜನವಿರೋಧಿ ಪಕ್ಷ. ಬೆಲೆ ಏರಿಕೆ, ನಿರುದ್ಯೋಗದಿಂದಾಗಿ ಜನರು ತತ್ತರಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಚುನಾವಣೆ ಸಂದರ್ಭದಲ್ಲಿ ಅಚ್ಛೇ ದಿನ್ ಎಂದು ಹೇಳಿ ಅಧಿಕಾರಕ್ಕೆ ಬಂದ ಬಿಜೆಪಿ ಜನರಿಗೆ ಅಚ್ಛೇ ದಿನ್ ತರಲಿಲ್ಲ. ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ ಜನರನ್ನು ಸಂಕಷ್ಟಕ್ಕೆ ದೂಡಿದೆ ಎಂದು ಟೀಕಿಸಿದರು. ಅವರ ಮಾತಿಗೆ 'ಹೌದು ಹುಲಿಯಾ' ಎಂದು ಪ್ರತಿಕ್ರಿಯಿಸುತ್ತಾ ಬೆಂಬಲ ಸೂಚಿಸಿದರು.

ರೈತರ ಆದಾಯ ದ್ವಿಗುಣಗೊಳಿಸುವುದಾಗಿ ಹೇಳಿದ್ದ ಬಿಜೆಪಿ ದೇಶದಲ್ಲಿ ರೈತರು ಪರದಾಡುವಂತೆ ಮಾಡಿದೆ. ರೈತ ವಿರೋಧಿ ಕಾನೂನು ವಿರೋಧಿಸಿ 120 ದಿನಗಳಿಂದ ಸಾವಿರಾರು ರೈತರು ಧರಣಿ ನಡೆಸಿದರೂ ಪ್ರಧಾನಿ ಕ್ಯಾರೆ ಎನ್ನುತ್ತಿಲ್ಲ. ಜನರ, ರೈತರ ನೋವು ನಲಿವುಗಳಿಗೆ ಸ್ಪಂದಿಸದ ಪ್ರಧಾನಿಯ 'ಮನ್ ಕೀ ಬಾತ್' ಅಲ್ಲ 'ಮಂಕಿ ಬಾತ್' ಎಂದು ಟೀಕಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಮಾತನಾಡಿ, ಜನವಿರೋಧಿ ಚಿಂತನೆ ಮತ್ತು ನೀತಿಗಳುಳ್ಳ ಬಿಜೆಪಿ ಜತೆಗೂಡಿರುವ ಎಐಎಡಿಎಂಕೆಯನ್ನು ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಮೂಲೆಗುಂಪು ಮಾಡುವ ಮೂಲಕ ತಮಿಳುನಾಡಿನ ಪ್ರಜ್ಞಾವಂತ ಜನತೆ ಕೋಮುವಾದಿ ಪಕ್ಷಗಳನ್ನು ಅಧಿಕಾರದಿಂದ ದೂರವಿಡಬೇಕು ಎಂದರು.

ಹೊಸೂರು ವಿಧಾನಸಭಾ ಕ್ಷೇತ್ರದ ಡಿಎಂಕೆ ಅಭ್ಯರ್ಥಿ ಪ್ರಕಾಶ್ ಪರವೂ ಇದೇ ವೇಳೆ ಪ್ರಚಾರ ನಡೆಸಿದರು. ಸಂಸದ ಚೆಲ್ಲಕುಮಾರ್, ಶಾಸಕರಾದ ಬಿ.ಶಿವಣ್ಣ, ಜಮೀರ್ ಅಹಮದ್, ನಂಜೇಗೌಡ, ಮುಖಂಡರಾದ ಎಚ್.ಎಂ.ರೇವಣ್ಣ, ಮುತ್ತು ಹಾಜರಿದ್ದರು.



ಆನೇಕಲ್ ಸಮೀಪದ ತಮಿಳುನಾಡಿನ ಗುಮ್ಮಳಾಪುರದಲ್ಲಿ ಮೈತ್ರಿಕೂಟದ ಸಿಪಿಐ ಅಭ್ಯರ್ಥಿ ಟಿ.ರಾಮಚಂದ್ರನ್ ಪರವಾಗಿ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಪ್ರಚಾರ ನಡೆಸಿದರು

> ತಮಿಳುನಾಡಿನಲ್ಲಿ ಕೋಮುವಾದಿ ಬಿಜೆಪಿ ಜತೆಗೂಡಿರುವ ಎಐಎಡಿಎಂಕೆಯನ್ನು ಜನರು ತಿರಸ್ಕರಿಸಲಿದ್ದಾರೆ. ಅಲ್ಪಸಂಖ್ಯಾತರಿಗೆ ರಕ್ಷಣೆಯಿಲ್ಲ.ತಮಿಳು ಭಾಷೆ ಬುಡಕ್ಕೆ ಕಂಟಕ ತರುತ್ತಿರುವ ಬಿಜೆಪಿ ಮತ್ತು ಮೈತ್ರಿಕೂಟದ ಬಗ್ಗೆ ಜನರಿಗೆ ಒಲವಿಲ್ಲ
>
> – **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಸಿಗರೇಟ್ ವಿಚಾರಕ್ಕೆ ಗಲಾಟೆ; ರೌಡಿ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಗರೇಟ್ ವಿಚಾರಕ್ಕಾಗಿ ನಡೆದ ಗಲಾಟೆಯಿಂದಾಗಿ ರೌಡಿ ಸೈಯದ್ ವಸೀಂ ಅಲಿಯಾಸ್ ಬೋಡ್ಕಾನ ಹತ್ಯೆಯಾಗಿದ್ದು, ಈ ಸಂಬಂಧ ಚಂದ್ರಾ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ ವಸೀಂ, ಜೈಲಿಗೂ ಹೋಗಿ ಬಂದಿದ್ದ. ಜಗಜೀವನರಾಮ್ ನಗರ ಹಾಗೂ ಬ್ಯಾಟರಾಯನಪುರ ಠಾಣೆ ರೌಡಿಪಟ್ಟಿಯಲ್ಲಿ ಆತನ ಹೆಸರಿತ್ತು. ಶುಕ್ರವಾರ ರಾತ್ರಿ ಆತನನ್ನು ಕೊಲೆ ಮಾಡಲಾಗಿದ್ದು, ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಗಂಗೊಂಡಹಳ್ಳಿ ನಿವಾಸಿಗಳಾದ ಅರ್ಬಾಜ್ ಖಾನ್ ಹಾಗೂ ಸೈಫುಲ್ಲಾ ನಡುವೆ ಸಿಗರೇಟ್ ವಿಚಾರವಾಗಿ ಗಲಾಟೆ ಆಗಿತ್ತು. ಅರ್ಬಾಜ್‌ಖಾನ್ ತನ್ನ ಸ್ನೇಹಿತ ಅಬ್ದುಲ್ ಅಲಿಯಾಸ್ ಡಿಂಗ್ ಡಿಂಗ್ ಮೂಲಕ ರೌಡಿ ವಸೀಂಗೆ ಮಾಹಿತಿ ನೀಡಿದ್ದ. ಸೈಫುಲ್ಲಾ ಜೊತೆ ಮಾತನಾಡಿ ಬುದ್ಧಿ ಕಲಿಸುವಂತೆ ಹೇಳಿದ್ದ.'

'ಸೈಫುಲ್ಲಾ ಅಣ್ಣ ಶೇಕ್ ಬರ್ಕತ್‌ಗೆ ಕರೆ ಮಾಡಿದ್ದ ಡಿಂಗ್ ಡಿಂಗ್, ಜಗಳ ಸಂಬಂಧ ಮಾತನಾಡಬೇಕೆಂದು ಹೇಳಿ ಮದೀನಾ ಮಸೀದಿ ಬಳಿ ಕರೆಸಿಕೊಂಡಿದ್ದ. ರಾತ್ರಿ ಮಸೀದಿ ಬಳಿಯೇ ಎಲ್ಲರೂ ಸೇರಿದ್ದರು. ಅದೇ ವೇಳೆ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಶೇಕ್ ಬರ್ಕತ್ ಹಾಗೂ ಆತನ ಸಹಚರರು, ಮಾರಕಾಸ್ತ್ರಗಳಿಂದ ವಸೀಂ ಮೇಲೆ ಹಲ್ಲೆ ಮಾಡಿ ಕೊಂದು ಪರಾರಿಯಾಗಿದ್ದಾರೆ' ಎಂದೂ ಪೊಲೀಸರು ತಿಳಿಸಿದರು.

ವಿಶೇಷ ತಂಡ ರಚನೆ: 'ಹತ್ಯೆ ಸಂದರ್ಭದಲ್ಲಿ ಶೇಕ್ ಬರ್ಕತ್ ಜೊತೆಯಲ್ಲಿ ನ್ಯಾಮತ್, ಜೀಯಾವುಲ್ಲಾ, ಸೈಫುಲ್ಲಾ, ಮೊಹಮ್ಮದ್ ಅಹ್ಮದ್ ಹಾಗೂ ಇತರರು ಇದ್ದರೆಂಬ ಮಾಹಿತಿ ಇದೆ. ಅವರೆಲ್ಲರೂ ತಲೆಮರೆಸಿಕೊಂಡಿದ್ದು, ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ ಪಾಟೀಲ ಹೇಳಿದರು.

ವಿಡಿಯೊ ಹರಿಬಿಟ್ಟು ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಗೋಡಿ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ಒಂದೇ ಕುಟುಂಬದ ಮೂವರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ತೀವ್ರ ಅಸ್ವಸ್ಥಗೊಂಡಿರುವ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

'ಮಹದೇವಪುರ ಬಳಿಯ ಚನ್ನಚಂದ್ರ ಗ್ರಾಮದ ಶ್ರೀನಿವಾಸ್ ಹಾಗೂ ಆತನ ಕುಟುಂಬದವರು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳಲು ತೀರ್ಮಾನಿಸಿದ್ದರು. ವಿಷ ಕುಡಿದ ವಿಡಿಯೊವನ್ನು ಫೇಸ್‌ಬುಕ್‌ನಲ್ಲಿ ನೇರಪ್ರಸಾರ ಮಾಡಿದ್ದರು. ಪರಿಚಯಸ್ಥರೇ ಮನೆಗೆ ಹೋಗಿ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪರಿಶಿಷ್ಟ ಪಂಗಡದ ಶ್ರೀನಿವಾಸ್ ಹಾಗೂ ಕುಟುಂಬದವರಿಗೆ, ಸ್ಥಳೀಯ ಕೆಲ ಸಮುದಾಯದ ಜನರು ಕಿರುಕುಳ ನೀಡುತ್ತಿದ್ದರು. ಸಣ್ಣ ವಿಷಯಕ್ಕೂ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರು' ಎಂಬುದಾಗಿ ಶ್ರೀನಿವಾಸ್ ಹೇಳಿಕೆ ನೀಡಿದ್ದಾರೆ. ಜೊತೆಗೆ, ತಮ್ಮ ವಿರುದ್ಧವೇ ಸ್ಥಳೀಯರು ಠಾಣೆಗೆ ದೂರು ನೀಡಿದ್ದರೆಂದು ಶ್ರೀನಿವಾಸ್ ಹೇಳಿದ್ದಾರೆ. ಈ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಮೂವರು ತೀವ್ರವಾಗಿ ಅಸ್ವಸ್ಥಗೊಂಡಿದ್ದರಿಂದ ಪ್ರಾಥಮಿಕ ಹೇಳಿಕೆ ಮಾತ್ರ ಪಡೆಯಲಾಗಿದೆ. ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ ಪೂರ್ಣ ಮಾಹಿತಿ ಪಡೆಯಲಾಗುವುದು' ಎಂದೂ ಮೂಲಗಳು ಹೇಳಿವೆ.

ನಗರದಲ್ಲಿ ಇಂದು

ಸತೀಶ್ ಶೆಟ್ಟಿ ವಕ್ವಾಡಿ ಅವರ 'ಅಜ್ಜ ನೆಟ್ಟ ಹಲಸಿನ ಮರ' ಪುಸ್ತಕ ಬಿಡುಗಡೆ: ಪತ್ರಕರ್ತ ಮಂಜುನಾಥ್ ಚಾಂದ್, ಅತಿಥಿಗಳು–ಚಿತ್ರ ಸಾಹಿತಿ ಕವಿರಾಜ್, ಬಂಟರ ಸಂಘದ ಅಧ್ಯಕ್ಷ ಉಪೇಂದ್ರ ಶೆಟ್ಟಿ, ಮಲರ್ ವಿಳಿ, ಆಯೋಜನೆ–ಪಂಚಮಿ ಮೀಡಿಯಾ ಪಬ್ಲಿಕೇಷನ್ಸ್, ಸ್ಥಳ–ಸೆಮಿನಾರ್ ಹಾಲ್, ಬಂಟರ ಸಂಘ, ಬೆಳಿಗ್ಗೆ 10

ಸಾಹಿತಿ ಸುಬ್ರಾಯ ಚೊಕ್ಕಾಡಿ ಅವರ 'ಕಾಲದೊಂದೊಂದೇ ಹನಿ' ಪುಸ್ತಕ ಬಿಡುಗಡೆ: ವಿದ್ವಾಂಸ ಬಿ.ಎ.ವಿವೇಕ ರೈ, ಲೇಖಕ ನಾ.ದಾಮೋದರ ಶೆಟ್ಟಿ, ವಿಮರ್ಶಕ ಎಸ್.ಆರ್.ವಿಜಯಶಂಕರ, ಪತ್ರಕರ್ತ ಜೋಗಿ, ಆಯೋಜನೆ–ವಿಕಾಸ ಪ್ರಕಾಶನ, ಸ್ಥಳ–ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಪುಸ್ತಕಗಳ ಬಿಡುಗಡೆ: ಅತಿಥಿಗಳು–ಸಾಹಿತಿ ಕಬ್ಬಿನಾಲೆ ವಸಂತ ಭಾರದ್ವಾಜ್, ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನದ ಅಧ್ಯಕ್ಷೆ ಎಸ್.ಎನ್.ಪಂಜಾಜೆ, ಕವಿ ಭ.ರಾ.ವಿಜಯಕುಮಾರ್, ಪುಸ್ತಕಗಳು–ಅಂತಃಸ್ಫೋಟ, ಹದಿನಾರು ಹನಿ, ಉದ್ಯೋಗಪರ್ವ, ಆಯೋಜನೆ–ರವಿ ಪ್ರಕಾಶನ, ಸ್ಥಳ–ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ, ಎನ್.ಆರ್.ಕಾಲೊನಿ, ಬೆಳಿಗ್ಗೆ 10.30

ಸುಗಮ ಸಂಗೀತ ಗಾಯಕಿ ಆರ್. ನೀಲಾಂಬಿಕೆ ಅವರಿಗೆ ಅಭಿನಂದನೆ: ಅತಿಥಿ–ಸಚಿವ ಆರ್.ಅಶೋಕ, ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ, ಅಂಗವಿಕಲ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನಿರ್ದೇಶಕ ವಿ.ಮುನಿರಾಜು, ಆಯೋಜನೆ–ಸವಿಗಾನ ಸಾಂಸ್ಕೃತಿಕ ಕಲಾಕುಂಜ, ಸ್ಥಳ–ಅವ್ವಾ ಸಭಾಂಗಣ, ಬನಶಂಕರಿ 3ನೇ ಹಂತ, ಬೆಳಿಗ್ಗೆ 10.30

ಡಿ.ಆರ್.ನಾಗರಾಜ್ 67–ವಿಚಾರ ಸಂಕಿರಣ ಹಾಗೂ ಪುಸ್ತಕ ಬಿಡುಗಡೆ (ಬೆಳಿಗ್ಗೆ 11) :ಉದ್ಘಾಟನೆ–ಕವಿ ಮೂಡ್ನಾಕೂಡು ಚಿನ್ನಸ್ವಾಮಿ, ಅಧ್ಯಕ್ಷತೆ–ಸರ್ಕಾರಿ ಕಲಾ ಕಾಲೇಜು ಪ್ರಾಂಶುಪಾಲ ಕೋಡದ ರಾಜಶೇಖರಪ್ಪ, ಅತಿಥಿಗಳು–ಪ್ರದೀಪ್ ಮಾಲ್ಗುಡಿ, ರುದ್ರೇಶ್ ಅದರಂಗಿ, ಮಧ್ಯಾಹ್ನ 12ಕ್ಕೆ ವಿಚಾರ ಸಂಕಿರಣ, ಸಂಜೆ 6ಕ್ಕೆ ಶಿವರಾಜ್ ಬ್ಯಾಡರಹಳ್ಳಿ ಅವರ ಸಂಪಾದಿತ 'ಅನನ್ಯ ಪ್ರತಿಭೆಯ ಪರಿ' ಪುಸ್ತಕ ಬಿಡುಗಡೆ–ಶಾಸಕ ಕೆ.ಆರ್. ರಮೇಶ್ ಕುಮಾರ್, ಉದ್ಘಾಟನೆ–ಪ್ರೊ. ಜಾಫೆಟ್, ಅಧ್ಯಕ್ಷತೆ–ಕವಿ ಸಿದ್ಧಲಿಂಗಯ್ಯ, ಅತಿಥಿಗಳು–ಕಾಳೇಗೌಡ ನಾಗವಾರ, ಎಂ.ಎಸ್.ಆಶಾದೇವಿ, ಆಯೋಜನೆ–ಸಂಸ ಥಿಯೇಟರ್, ಸ್ಥಳ–ಬಿ.ಆರ್.ಅಂಬೇಡ್ಕರ್ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಕಾವೇರಿ ಭವನ ಹತ್ತಿರ

ಜಯಂತ ಕಾಯ್ಕಿಣಿ ಅವರ 'ವಿಚಿತ್ರಸೇನನ ವೈಖರಿ' ಹಾಗೂ 'ಅನಾರ್ಕಲಿಯ ಸೇಫ್ಟಿ ಪಿನ್' ಪುಸ್ತಕಗಳ ಬಿಡುಗಡೆ(ಆನ್ ಲೈನ್): ಅತಿಥಿ–ಎಸ್.ದಿವಾಕರ್, ಸುಂದರ ಸರುಕ್ಕೈ, ಆಯೋಜನೆ–ಅಂಕಿತ ಪುಸ್ತಕ, ಬುಕ್ ಬ್ರಹ್ಮ, ಸಂಜೆ 4

ಮಹಿಳಾ ದಿನಾಚರಣೆ ಹಾಗೂ ಸಂಗೀತೋತ್ಸವ: ಉದ್ಘಾಟನೆ–ಶಿಕ್ಷಣ ತಜ್ಞೆ ಗೀತಾ ರಾಮಾನುಜಂ, ಡಿ.ಎಚ್. ರಾಜಣ್ಣ ನೀಲಾಂಬಿಕೆ ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷೆ ಆರ್.ನೀಲಾಂಬಿಕೆ, ಅಧ್ಯಕ್ಷತೆ–ಲೇಖಕಿಯರ ಸಂಘದ ಅಧ್ಯಕ್ಷೆ ವನಮಾಲ ಸಂಪನ್ನಕುಮಾರ್, ಅತಿಥಿಗಳು–ರೇಣುಕಾ ಶಂಕರ್, ಪಾರ್ವತಿ ಸಪ್ನಾ, ಅಶ್ವಿನಿ, ಆಯೋಜನೆ–ಡಿ.ಎಚ್. ರಾಜಣ್ಣ ನೀಲಾಂಬಿಕೆ ಸಾಂಸ್ಕೃತಿಕ ಟ್ರಸ್ಟ್, ಸ್ಥಳ–ಅವ್ವಾ ಸಭಾಂಗಣ, ಬನಶಂಕರಿ ಮೂರನೇ ಹಂತ, ಸಂಜೆ 4

ಚೈತನ್ಯ ಪ್ರಭು ಜಯಂತಿ, ನಿತಾಯ್ ಗೌರಾಂಗರ ಪಲ್ಲಕ್ಕಿ ಉತ್ಸವ ಹಾಗೂ ಗೌರ ಪೂರ್ಣಿಮೆ:ಪ್ರವಚನ–ಇಸ್ಕಾನ್ ಬೆಂಗಳೂರು ಅಧ್ಯಕ್ಷ ಮಧು ಪಂಡಿತ ದಾಸ, ಆಯೋಜನೆ–ಅಂತರರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘ, ಸ್ಥಳ–ಇಸ್ಕಾನ್, ಸಂಜೆ 6

ಹೋಳಿ: ಇದು ಕಾಮನಹಬ್ಬವೂ ಹೌದು

● ಎಸ್. ಸೂರ್ಯಪ್ರಕಾಶ ಪಂಡಿತ್

ಹೋಳಿಹಬ್ಬ ಎಂದರೆ ನಮಗೆಲ್ಲ ಸಂತಸ. ಬಣ್ಣದ ಓಕುಳಿಯಲ್ಲಿ ಮಿಂದು ನಲಿಯಬಹುದು ಎಂಬುದು ಸಂತಸಕ್ಕೆ ಕಾರಣ. ಆದರೆ ಇದಿಷ್ಟೇ ಹೋಳಿಹಬ್ಬದ ಆಚರಣೆಯಲ್ಲ; ಕಾಮದಹನವೂ ಈ ಹಬ್ಬದ ಭಾಗವೇ; ಇದರ ಜೊತೆಗೆ ಸೇರಿಕೊಂಡಂತೆ ರತಿವಿಲಾಪ, ಕಾಮನ ಮರುಹುಟ್ಟುಗಳೂ ಸೇರಿಕೊಳ್ಳುತ್ತವೆ. ಇದರ ಜೊತೆಗೆ ಪ್ರಕೃತಿಯೂ ಸಂಭ್ರಮದಲ್ಲಿರುತ್ತದೆ; ಏಕೆಂದರೆ ವಸಂತದ ಆಗಮನಕ್ಕೆ ಅದು ಸಜ್ಜಾಗಿರುತ್ತದೆ.

ಹೋಳಿಹಬ್ಬದ ಮೂಲ ಏನೆಂಬುದನ್ನು ಪುರಾಣಗಳು ಕಾಣಿಸಿವೆ. ಹೋಳಿಕಾ ಎಂಬುವವಳು ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ಸಹೋದರಿ. ದುಷ್ಟೆಯಾಗಿದ್ದ ಅವಳನ್ನು ಪ್ರಹ್ಲಾದನು ಬೆಂಕಿಯ ಮೂಲಕ ಸುಟ್ಟುಹಾಕಿದ ದಿನವೇ ಹೋಳಿಹಬ್ಬವಾಯಿತು. ಹೀಗೆಯೇ ಢುಂಢಾ ಎಂಬ ರಾಕ್ಷಸಿಯೂ ಸಂಹಾರ ಆದ ನೆನಪಿನ ಉತ್ಸವವೇ ಇದು ಎಂದೂ ಪುರಾಣದ ಕಥೆಯಿದೆ. ಈ ಎಲ್ಲಕ್ಕಿಂತಲೂ ವಿಶಿಷ್ಟವಾದುದು ಕಾಮದಹನ; ಶಿವನು ಕಾಮನನ್ನು ಸುಟ್ಟ ದಿನದ ಸಂಭ್ರಮಾಚರಣೆಯೇ ಹೋಳಿಯ ಆಚರಣೆಯ ಮುಖ್ಯ ತಾತ್ಪರ್ಯ.

ಕಾಮನನ್ನು ಸುಡುವುದು ಎಂದರೆ ಕಾಮವನ್ನು ಸುಟ್ಟಂತೆಯೇ ಹೌದು. ಆದರೆ ಕಾಮವನ್ನು ಸುಡುವುದು ಅಷ್ಟು ಸುಲಭವೆ? ಸುಲಭ ಎಂದು ಅಂದುಕೊಂಡರೂ, ಹೀಗೆ ಸುಡುವುದು ಸಾಧುವೆ? ಕಾಮವಿಲ್ಲದೆ ಜೀವನವೇ ಇಲ್ಲದಿರುವಾಗ ಕಾಮನನ್ನು ಸುಟ್ಟ ಮೇಲೆ ಜೀವ ಮತ್ತು ಜೀವನ ಉಳಿಯುವುದಾದರೂ ಹೇಗೆ? ಹೀಗೆಲ್ಲ ಪ್ರಶ್ನೆಗಳು ಏಳುವುದು ಸಹಜ. ಇದಕ್ಕೂ ಮೊದಲು ಕಾಮ ಎಂದರೇನು, ಶಿವನು ಭಸ್ಮ ಮಾಡಿದ ಕಾಮ ಎಂಥವನು ಎಂಬುದನ್ನು ನಾವು ಅನುಸಂಧಾನಿಸಬೇಕು.

ನಮ್ಮಲ್ಲಿ ಪುರುಷಾರ್ಥಗಳ ಕಲ್ಪನೆ ಇದೆಯಲ್ಲವೆ? ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ – ಇವೇ ಪುರುಷಾರ್ಥಗಳು. ಮನುಷ್ಯನ ಏಳಿಗೆಗೆ ಒದಗುವ ಎಲ್ಲ ವಿವರಗಳೂ ಪುರುಷಾರ್ಥಗಳೇ ಹೌದು. ಇದರಲ್ಲಿ ಕಾಮವೂ ಸೇರಿದೆ. ಕಾಮ ಎಂದರೆ ಕೇವಲ ಹೆಣ್ಣು–ಗಂಡುಗಳ ನಡುವೆ ಉಂಟಾಗುವ ಆಕರ್ಷಣೆ, ಸೆಳೆತ ಮಾತ್ರವೇ ಅಲ್ಲ; ಅದು ನಮ್ಮ ಎಲ್ಲ ಬಯಕೆಗಳನ್ನೂ ಪ್ರತಿನಿಧಿಸುತ್ತದೆ. ನಾವು ನಮ್ಮ ಜೀವನದ ಏಳಿಗೆಗೆ, ಸಂತಸಕ್ಕೆ ಒದಗುವ ಎಲ್ಲ ಬಯಕೆಗಳೂ ಪೂಜ್ಯವೇ. ಆದರೆ ಅವುಗಳಿಗೆ ಒಟ್ಟು ಕಟ್ಟುಪಾಡು ಇರಬೇಕು, ವ್ಯವಸ್ಥೆ ಇರಬೇಕು, ಕಾಲ–ದೇಶಗಳ ಔಚಿತ್ಯ ಇರಬೇಕು. ಇದನ್ನೇ ಧರ್ಮ ಎಂದು ಕರೆದಿರುವುದು. ಎಂದರೆ ಕಾಮವೂ ಕೂಡ ಧರ್ಮಬದ್ಧವಾಗಿರಬೇಕು; 'ಧರ್ಮಾವಿರುದ್ಧೋ ಭೂತೇಷು ಕಾಮೋऽಸ್ಮಿ ಭರತರ್ಷಭ' – ಪ್ರಾಣಿಗಳಲ್ಲಿ ಧರ್ಮಕ್ಕೆ ವಿರುದ್ಧವಲ್ಲದ ಕಾಮವು ನಾನಾಗಿದ್ದೇನೆ – ಎಂದಿದ್ದಾನೆ, ಗೀತೆಯಲ್ಲಿ ಶ್ರೀಕೃಷ್ಣ.

ಆದರೆ ಶಿವನು ಸುಟ್ಟ ಕಾಮ ಇಂಥ ಕಾಮನಲ್ಲ; ಅವನು ಧರ್ಮಕ್ಕೆ ವಿರುದ್ಧವಾಗಿ ಕಾಣಿಸಿಕೊಂಡವನು. ಇದು ಹೇಗೆಂದರೆ, ಶಿವನು ತಪಸ್ಸಿನಲ್ಲಿ ತೊಡಗಿರುವಾಗ ಅವನ ತಪಸ್ಸನ್ನು ಕೆಡಿಸಲೆಂದು ದೇವತೆಗಳು ಕಾಮ, ಎಂದರೆ ಮನ್ಮಥನನ್ನು ಅವನಲ್ಲಿಗೆ ಕಳುಹಿಸುತ್ತಾರೆ. ಮನ್ಮಥನು ಅಕಾಲದಲ್ಲಿ ವಸಂತವನ್ನು ಸೃಷ್ಟಿಸಿ, ಶಿವನ ಏಕಾಗ್ರತೆಯನ್ನು ಭಂಗಗೊಳಿಸಲು ಉದ್ಯುಕ್ತನಾಗುತ್ತಾನೆ. ಆದರೆ ಈ ಅಕಾಲ ಕಾಮನನ್ನು ಶಿವನು ತನ್ನ ಮೂರನೆಯ ಕಣ್ಣಿನಿಂದ ಸುಟ್ಟುಹಾಕುತ್ತಾನೆ. ಬಳಿಕ ಶಿವನಿಂದಲೇ ಅವನಿಗೆ ಮರುಹುಟ್ಟು ಕೂಡ ಒದಗುತ್ತದೆಯೆನ್ನಿ!

ಹೋಳಿಯ ಆಚರಣೆಯ ಭಾಗವಾಗಿ ಕಾಮದಹನವೂ ನಡೆಯುತ್ತದೆ; ಕಾಮನ ಮರುಹುಟ್ಟೂ ನಡೆಯುತ್ತದೆ. ಎಂದರೆ ಅಧಾರ್ಮಿಕವಾದ, ಅಕಾಲಿಲವಾದ ಕಾಮನ ಭಸ್ಮವಾದುದೂ ಸಂಭ್ರಮಕ್ಕೆ ಕಾರಣ; ಜೀವನಕ್ಕೆ ಪೂರಕವಾದ ಕಾಮನ ಹುಟ್ಟು ಕೂಡ ಸಂಭ್ರಮಕ್ಕೆ ಕಾರಣ. ಈ ಎರಡೂ ಸಂಭ್ರಮಗಳೂ ಹೋಳಿಯ ಆಚರಣೆಯ ಹಿನ್ನೆಲೆಯಲ್ಲಿವೆ. ಹೀಗಾಗಿಯೇ ಹೋಳಿಯನ್ನು ಕಾಮನಹಬ್ಬ ಎಂದೂ ಕರೆದಿದ್ದಾರೆ. ಅಧರ್ಮಮೂಲವಾದ ಕಾಮವನ್ನು ಸುಟ್ಟುಹಾಕಿದಾಗ, ಜೀವನವು ಸಂಭ್ರಮದ ಆಚರಣೆಗೆ ಸಿದ್ಧವಾಗುತ್ತದೆ; ಆಗ ಕಾಣಿಸಿಕೊಳ್ಳುವ ಕಾಮ, ಅದು ಪುರುಷಾರ್ಥವೇ ಆಗುತ್ತದೆ.



ಯುವತಿಯಿಂದ ಶನಿವಾರ ರಾತ್ರಿ ಮತ್ತೊಂದು ವಿಡಿಯೊ • ಪ್ರಕರಣದ ದಿಕ್ಕು ಬದಲಿಸುವ ಕೆಲಸ– ಆರೋಪ

‘ನ್ಯಾಯಾಧೀಶರ ಎದುರು ಹೇಳಿಕೆ ನೀಡುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಕರಣದಲ್ಲಿ ಇಂದಿನ ಬೆಳವಣಿಗೆ ನೋಡಿದರೆ ನನಗೆ ಭಯವಾಗುತ್ತಿದೆ. ನಾನು ಅಲ್ಲಿಗೆ ಬಂದು ಹೇಳಿಕೆ ಕೊಟ್ಟರೆ ಏನಾಗುತ್ತದೆ ಎಂಬುದು ಗೊತ್ತಿಲ್ಲ. ಹೀಗಾಗಿ, ನ್ಯಾಯಾಧೀಶರ ಎದುರು ಹೇಳಿಕೆ ನೀಡಬೇಕು ಎಂದುಕೊಂಡಿದ್ದೇನೆ’ ಎಂದು ಸಂತ್ರಸ್ತೆ ಯುವತಿ ಹೇಳಿಕೊಂಡಿದ್ದಾರೆ.

ಶನಿವಾರ ರಾತ್ರಿ ವಿಡಿಯೊ ಬಿಡುಗಡೆ ಮಾಡಿರುವ ಯುವತಿ, ‘ಪ್ರಕರಣದ ದಿಕ್ಕನ್ನೇ ಬದಲಿಸುವ ಕೆಲಸವಾಗುತ್ತಿದೆ. ನನ್ನ ಅಪ್ಪ–ಅಮ್ಮನಿಗೆ ಏನೂ ಗೊತ್ತಿಲ್ಲ. ಅಂಥವರನ್ನು ಇವರು ಪ್ರಭಾವ ಬೀರಿ, ಬ್ಲ್ಯಾಕ್‌ಮೇಲ್ ಮಾಡಿ ಎಲ್ಲೋ ಇರಿಸಿ ಇವತ್ತು ಹೊರಗೆ ಕರೆದುಕೊಂಡು ಬಂದು ಅವರ ಬಾಯಿಂದ ಏನೇನೊ ಹೇಳಿಸುತ್ತಿದ್ದಾರೆ. ಅವರಿಗೆ ಏನಾಗಿದೆ ಎಂಬುದೇ ಗೊತ್ತಿಲ್ಲ. ಈ ಪ್ರಕರಣದಲ್ಲಿ ಅನ್ಯಾಯ ಆಗಿದ್ದು ನನಗೆ. ಅನ್ಯಾಯ ಮಾಡಿರುವುದು ಅವರಾಗಿರುವುದರಿಂದ, ಅವರ ಮನೆಯವರನ್ನು ಯಾರೂ ಕರೆದುಕೊಂಡು ಬಂದು ವಿಚಾರಣೆ ಮಾಡಲಿಲ್ಲ. ನಮ್ಮ ಮನೆಯವರನ್ನು ಕರೆದುಕೊಂಡು ಹೋಗಿ ಏನೇನು ವಿಚಾರಣೆ ಮಾಡಿ ಏನೇನು ಹೆಸರು ಹೇಳಿಸಿ ಪ್ರಕರಣವನ್ನೇ ಬೇರೆ ರೀತಿಯಲ್ಲಿ ಬದಲಾಯಿಸುತ್ತಿದ್ದಾರೆ’ ಎಂದೂ ಯುವತಿ ಹೇಳಿದ್ದಾರೆ.

> **ಯುವತಿ ದೂರು ಆಧರಿಸಿ ಎಫ್‌ಐಆರ್ ದಾಖಲಾಗಿದ್ದರೂ ಆರೋಪಿಯನ್ನು ಬಂಧಿಸಿಲ್ಲ. ನ್ಯಾಯಾಲಯದ ನಿಗಾದಲ್ಲಿ ವಿಚಾರಣೆ ನಡೆಸುವಂತೆ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗುವುದು**
> **ಜಗದೀಶ ಕೆ.ಎನ್.**, ವಕೀಲ

‘ನನಗೆ ರಕ್ಷಣೆ ಕೊಟ್ಟರೆ ಅವರು ನನಗೆ ಏನು ಅನ್ಯಾಯ ಮಾಡಿದ್ದಾರೆ ಎಂಬುದನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತೇನೆ’ ಎಂದೂ ತಿಳಿಸಿದ್ದಾರೆ.

ಸಾಯುವಷ್ಟು ಕಿರುಕುಳ: ಶನಿವಾರ ಬೆಳಿಗ್ಗೆ ಒಂದು ವಿಡಿಯೊ ಹರಿಬಿಟ್ಟಿದ್ದ ಯುವತಿ, ‘ರಮೇಶ ಜಾರಕಿಹೊಳಿ ಹೆಸರು ಬರೆದಿಟ್ಟು ಸಾಯುವಷ್ಟು ನನಗೆ ಕಿರುಕುಳವಾಗುತ್ತಿದೆ’ ಎಂದಿದ್ದಾರೆ.

‘ಮಾರ್ಚ್ 2ರಂದು ಸಿ.ಡಿ. ಹೊರಗೆ ಬರುತ್ತಿದ್ದಂತೆ, ನನಗೆ ಏನು ಮಾಡಬೇಕು ಎಂಬುದು ತಿಳಿಯಲಿಲ್ಲ. ಇದೆಲ್ಲ ಯಾರು ಮಾಡಿದರು ಎಂಬುದು ಗೊತ್ತಿರಲಿಲ್ಲ. ಭಯ ಶುರುವಾಗಿತ್ತು. ಸುದ್ದಿವಾಹಿನಿಯಲ್ಲಿದ್ದ ನರೇಶ್ ಅಣ್ಣನನ್ನು ಸಂಪರ್ಕಿಸಿದ್ದೆ. ಆತನೇ, ಇದಕ್ಕೆಲ್ಲ ರಾಜಕೀಯ ಬೆಂಬಲ ಬೇಕು. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಜೊತೆ ಮಾತನಾಡೋಣ. ಅವರಿಂದ ನ್ಯಾಯ ಸಿಗುತ್ತದೆಯೆಂದು ಧೈರ್ಯ ಹೇಳಿದ್ದರು’ ಎಂದಿದ್ದರು.

‘ಮನೆಯಿಂದಲೂ ನಿರಂತರವಾಗಿ ಕರೆಗಳು ಬರುತ್ತಿದ್ದವು. ಅವರೆಲ್ಲ ಭಯಗೊಂಡಿದ್ದರು. ಅವರನ್ನ ಸಮಾಧಾನ ಮಾಡಿದ್ದೆ. ಮನೆಗೆ ಹೋದರೂ ಡಿ.ಕೆ.ಶಿವಕುಮಾರ್ ಭೇಟಿಯಾಗಲು ಆಗಲಿಲ್ಲ. ವಾಪಸ್ ಬಂದೆ. ಈಗ ನಾನು ಸುರಕ್ಷಿತವಾಗಿದ್ದೇನೆ’ ಎಂದೂ ಯುವತಿ ವಿಡಿಯೊದಲ್ಲಿ ತಿಳಿಸಿದ್ದಾರೆ.

‘ಒಂದು ದಿನದಲ್ಲೇ ಸರ್ಕಾರ ಬೀಳಿಸಬಲ್ಲೆ. ಎಷ್ಟೇ ದುಡ್ಡು ಖರ್ಚಾದರೂ ಪರವಾಗಿಲ್ಲ ಎಂದು ರಮೇಶ ಜಾರಕಿಹೊಳಿ ಹೇಳುತ್ತಿದ್ದಾರೆ. ಅಪ್ಪ–ಅಮ್ಮ ತಲೆ ತೆಗೆಯಬಹುದು. ನನ್ನನ್ನೂ ಸಾಯಿಸಬಹುದು ಎಂಬ ಭಯ ಇದೆ. ನನಗೆ ನ್ಯಾಯ ಕೊಡಿಸಿ ಎಂದು ಜನರಲ್ಲಿ ಕೇಳಿಕೊಳ್ಳುತ್ತೇನೆ’ ಎಂದೂ ಯುವತಿ ಹೇಳಿದ್ದಾರೆ.

ಎಸ್‌ಐಟಿ ಎದುರು ಹಾಜರಾದ ಯುವತಿ ಪೋಷಕರು

ಸಿ.ಡಿ.ಯಲ್ಲಿದ್ದಾರೆ ಎನ್ನಲಾದ ಯುವತಿಯ ಪೋಷಕರು ಹಾಗೂ ಸಹೋದರರು, ವಿಶೇಷ ತನಿಖಾ ತಂಡದ (ಎಸ್‌ಐಟಿ) ಎದುರು ಶನಿವಾರ ಬೆಳಿಗ್ಗೆ ವಿಚಾರಣೆಗೆ ಹಾಜರಾದರು.

ಅಜ್ಞಾತ ಸ್ಥಳದಲ್ಲಿರುವ ಯುವತಿ, ರಮೇಶ ಜಾರಕಿಹೊಳಿ, ಎಸ್‌ಐಟಿ ಹಾಗೂ ಪೊಲೀಸರ ವಿರುದ್ಧ ಹಲವು ಆರೋಪಗಳನ್ನು ಮಾಡಿದ್ದರು. ‘ಅಪ್ಪ–ಅಮ್ಮ, ಸಹೋದರರಿಗೆ ರಕ್ಷಣೆ ಕೊಡಿ’ ಎಂದೂ ಕೋರಿದ್ದರು.

ಪ್ರಕರಣ ಸಂಬಂಧ ಮಾಹಿತಿ ಕಲೆಹಾಕಲು ಎಸ್‌ಐಟಿ ಅಧಿಕಾರಿಗಳು, ಯುವತಿ ಹಾಗೂ ಅವರ ಪೋಷಕರಿಗೆ ನೋಟಿಸ್ ನೀಡಿದ್ದರು. ಅದರಂತೆ ಯುವತಿಯ ತಂದೆ-ತಾಯಿ ಹಾಗೂ ಇಬ್ಬರು ಸಹೋದರರು ವಿಚಾರಣೆಗೆ ಬಂದು ತಮ್ಮ ಹೇಳಿಕೆ ದಾಖಲಿಸಿದರು.

‘ಬಿಜೆಪಿ ಯುವರಾಜನ ಹೆಸರು ಶೀಘ್ರ ಬಹಿರಂಗ’

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು (ಹಾವೇರಿ): ‘ಕಾಂಗ್ರೆಸ್ ಮಹಾನಾಯಕ’ ಮತ್ತು ‘ಬಿಜೆಪಿಯ ಯುವರಾಜ’ ಇವರ ಬಳಿ ಸಿ.ಡಿ. ತಯಾರಿಸುವ ಕಾರ್ಖಾನೆಗಳಿವೆ. ಇವರು ಸಿ.ಡಿ.ಗಳನ್ನೂ ಖರೀಸುತ್ತಾರೆ. ಈಗ ‘ಕಾಂಗ್ರೆಸ್ ಮಹಾನಾಯಕ’ನ ಹೆಸರು ಹೊರಬಿದ್ದಿದೆ. ಕೆಲವೇ ದಿನಗಳಲ್ಲಿ ‘ಬಿಜೆಪಿ ಯುವರಾಜ’ನ ಹೆಸರು ಹೊರಬರಲಿದೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಮಹಾನಾಯಕ ಮತ್ತು ಯುವರಾಜರು ಹೆಣ್ಣುಮಕ್ಕಳನ್ನು ಬಿಟ್ಟು ಕೆಲವರನ್ನು ಬ್ಲ್ಯಾಕ್‌ಮೇಲ್ ಮಾಡುತ್ತಾರೆ. ಬೆಂಬಲ ನೀಡದಿದ್ದರೆ, ತೊಂದರೆ ಕೊಟ್ಟರೆ ಸಿ.ಡಿ. ಬಿಡುಗಡೆ ಮಾಡುತ್ತೇನೆ ಎಂದು ಹೆದರಿಸುತ್ತಾರೆ. ಕಾಂಗ್ರೆಸ್, ಬಿಜೆಪಿಯ ಎಷ್ಟೋ ಶಾಸಕರು ಈ ಭಯದ ವಾತಾವರಣದಲ್ಲಿದ್ದಾರೆ’ ಎಂದು ಹೇಳಿದರು.

ಆ ಸಿ.ಡಿ. ಹೆಣ್ಣುಮಗಳು ಈಗಾಗಲೇ ‘ಮಹಾನಾಯಕ’ನ ಹೆಸರು ಹೇಳಿದ್ದಾಳೆ.


ಬಸನಗೌಡ ಪಾಟೀಲ

ಮಹಾನಾಯಕನ ಚಾಲಕ ಆಕೆಯ ಜೊತೆ ಓಡಾಡಿರುವ ಬಗ್ಗೆ ಚರ್ಚೆಯಾಗುತ್ತಿದೆ. ಯುವರಾಜನ ರಕ್ಷಣೆಗೆ ಪ್ರಯತ್ನ ನಡೆಯುತ್ತಿದೆಯೇ ಎಂಬ ಪ್ರಶ್ನೆಗೆ, ಆ ಯುವರಾಜ ಒಬ್ಬ ಜೈಲಿನಲ್ಲಿದ್ದಾನೆ. ಇನ್ನೊಬ್ಬ ಹೊರಗಡೆ ಇದ್ದಾನೆ ಎಂದರು. ಅವರು ಯಾರು ಎಂಬ ಬಗ್ಗೆ ಯತ್ನಾಳ ಬಾಯಿಬಿಡಲಿಲ್ಲ.

ಉನ್ನತ ನಾಯಕನ ಸಿ.ಡಿ: ‘ಬಿಜೆಪಿ ಉನ್ನತ ನಾಯಕ’ನ ಸಿ.ಡಿ. ‘ಕಾಂಗ್ರೆಸ್ ಮಹಾನಾಯಕ’ನ ಬಳಿ ಇದೆ. ಹಾಗಾಗಿಯೇ ಮಹಾನಾಯಕನನ್ನು ನೋಡಿದರೆ ಸಾಕು ಉನ್ನತ ನಾಯಕ ಅಂಜುತ್ತಾನೆ ಎಂದು ಹೇಳಿದರು.

ಮೇ 2ರ ನಂತರ ನಿರ್ಣಯ: ಪ್ರಧಾನಿ ಮೋದಿ ಅವರುರಾಜ್ಯದ ಬೆಳವಣಿಗೆಗಳನ್ನು ಗಮನಿಸುತ್ತಿದ್ದಾರೆ. ಮೇ 2ರ ನಂತರ ಒಂದು ಗಟ್ಟಿ ನಿರ್ಣಯ ತೆಗೆದುಕೊಳ್ಳಲಿದ್ದಾರೆ. ಅವರ ಮೇಲೆ ಸಂಪೂರ್ಣ ನಂಬಿಕೆಯಿದೆ ಎಂದರು.

ಸಿ.ಡಿ ಪ್ರಕರಣ: ಯಾರ ಬುಡಕ್ಕೆ ಕಿಡಿ?

ಒಂದನೇ ಪುಟದಿಂದ

‘ಅಕ್ಕನಿಗೆ ಏನಾದರೂ ತೊಂದರೆಯಾದರೆ ಶಿವಕುಮಾರ್ ಕಾರಣ. ತಮ್ಮ ಹೀನ ರಾಜಕೀಯಕ್ಕಾಗಿ ಅಕ್ಕನನ್ನು ಬಳಸಿಕೊಳ್ಳುವುದು ಸರಿಯಲ್ಲ. ಅಕ್ಕನನ್ನು ನಮಗೆ ಬಿಟ್ಟುಕೊಡಿ’ ಎಂದು ಬೇಡಿಕೊಂಡಿದ್ದಾರೆ.

ತಮ್ಮ ಪೋಷಕರ ಹೇಳಿಕೆ ಪ್ರಸಾರವಾದ ಕೂಡಲೇ 1.46 ನಿಮಿಷದ ವಿಡಿಯೊ ಬಿಡುಗಡೆ ಮಾಡಿರುವ ಯುವತಿ, ‘ತನ್ನ ಅಪ್ಪ–ತಮ್ಮನ ಮೇಲೆ ಒತ್ತಡ ಹಾಕಿ ಏನೇನೋ ಹೇಳಿಕೆ ಕೊಡಿಸಿದ್ದಾರೆ. ಅವರಿಗೆ ಏನೂ ಗೊತ್ತಿಲ್ಲ. ಅನ್ಯಾಯವಾಗಿರುವುದು ನನಗೆ. ನನಗೆ ಅನ್ಯಾಯ ಮಾಡಿದವರ ಹೇಳಿಕೆ ಪಡೆಯಬೇಕಾದ ಪೊಲೀಸರು ನನ್ನ ಕುಟುಂಬದ ಹೇಳಿಕೆ ಪಡೆದಿರುವುದು ಏಕೆ ಎಂದು ಗೊತ್ತಾಗುತ್ತಿಲ್ಲ. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ನನ್ನ ರಕ್ಷಣೆಗೆ ಬರಲಿ’ ಎಂದು ಮನವಿ ಮಾಡಿಕೊಂಡಿದ್ದಾರೆ.

ಸಿಡಿಯದ ಬಾಂಬ್: ‘ಶನಿವಾರ ಸಂಜೆ ದೊಡ್ಡ ಬಾಂಬ್ ಸ್ಫೋಟವಾಗಲಿದೆ’ ಎಂದು ರಮೇಶ ಜಾರಕಿಹೊಳಿ ಶುಕ್ರವಾರ ಹೇಳಿದ್ದರು. ಆದರೆ ಸಂತ್ರಸ್ತೆಯ ತಮ್ಮ ಹೇಳಿಕೆ ನೀಡುತ್ತಿದ್ದಂತೆ ಸುದ್ದಿಗಾರರ ಜತೆ ಮಾತನಾಡಿದ ರಮೇಶ, ‘ಮಹಾನಾಯಕ ಯಾರು ಎಂದು ಯುವತಿಯ ಕುಟುಂಬದವರೇ ಹೇಳಿದ್ದಾರಲ್ಲ. ಇನ್ನೇನೂ ಸ್ಫೋಟಕ ಸಿಡಿಸುವುದಿಲ್ಲ’ ಎಂದು ಪ್ರತಿಪಾದಿಸಿದ್ದಾರೆ.

ಸುದ್ದಿಗಾರರು ಪ್ರಶ್ನಿಸುತ್ತಿದ್ದಂತೆ, ಏಕವಚನ ಹಾಗೂ ಅವಾಚ್ಯ ಶಬ್ದಗಳಲ್ಲಿ ಡಿ.ಕೆ. ಶಿವಕುಮಾರ್ ವಿರುದ್ಧ ಆರ್ಭಟಿಸಿದ ರಮೇಶ, ‘ನನ್ನ ಬಳಿ 11 ಸಾಕ್ಷ್ಯಗಳಿವೆ. ನಿನ್ನೆ(ಶುಕ್ರವಾರ) ಒಂದು ಟ್ರಯಲ್ ಅಷ್ಟೇ(ಆಡಿಯೊ) ಬಿಟ್ಟಿದ್ದೇನೆ. ಡಿ.ಕೆ. ಶಿವಕುಮಾರ್ ವಿರುದ್ಧ ನೇರವಾಗಿ ದೂರು ನೀಡುತ್ತೇನೆ’ ಎಂದು ಘೋಷಿಸಿದ್ದಾರೆ.

ಸಿ.ಡಿ ಪ್ರಕರಣದ ವಿಷಯದಲ್ಲಿ ರಮೇಶ ಜಾರಕಿಹೊಳಿ ಮತ್ತು ಡಿ.ಕೆ. ಶಿವಕುಮಾರ್ ಸವಾಲು–ಪ್ರತಿ ಸವಾಲನ್ನು ಹಾಕಿಕೊಂಡಿದ್ದು, ಇಬ್ಬರೂ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ಲೈಂಗಿಕ ದೌರ್ಜನ್ಯದ ಸಿ.ಡಿ ಪ್ರಕರಣ ರಾಜಕೀಯ ಸಮರಕ್ಕೆ ದಾರಿ ಮಾಡಿಕೊಟ್ಟಂತಾಗಿದೆ. ಯುವತಿಯ ದೂರನ್ನು ಆಧರಿಸಿ ರಮೇಶ ಜಾರಕಿಹೊಳಿ ವಿರುದ್ಧ ಅತ್ಯಾಚಾರದ ಆರೋಪದ ಮೇಲೆ ಎಫ್‌ಐಆರ್ ಅನ್ನು ಶುಕ್ರವಾರ ದಾಖಲಿಸಿದ್ದ ಕಬ್ಬನ್ ಪಾರ್ಕ್ ಪೊಲೀಸರು ಅದನ್ನು ಎಸ್‌ಐಟಿಗೆ ವರ್ಗಾಯಿಸಿದ್ದಾರೆ.

‘ಆಡಿಯೊ- ವಿಡಿಯೊಗೆ ಧಾರವಾಹಿ ರೂಪ’

ಬೆಂಗಳೂರು: ‘ಸಿ.ಡಿ ಪ್ರಕರಣದಲ್ಲಿ ಆಡಿಯೊ ಮತ್ತು ವಿಡಿಯೊಗಳು ಸರಣಿ ಧಾರಾವಾಹಿ ಥರ ಬರುತ್ತಿವೆ. ಸಿಡಿ, ಆಡಿಯೊ ಮತ್ತು ವಿಡಿಯೊ ಬಗ್ಗೆ ವೈಜ್ಞಾನಿಕವಾಗಿ ತನಿಖೆ ನಡೆಯಲಿದೆ’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಎಸ್‌ಐಟಿ ತನಿಖೆಯ ದಾರಿ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಯಾವುದೇ ಒತ್ತಡ, ಪ್ರಭಾವಕ್ಕೆ ಒಳಗಾಗದೆ ತನಿಖಾ ತಂಡ ಕೆಲಸ ಮಾಡಲಿದೆ. ಕಾನೂನು ಪ್ರಕಾರ ನಿಷ್ಠುರವಾಗಿ ನಡೆಯುತ್ತಿರುವ ತನಿಖೆ, ಯಾರ ಪರವೂ ಇಲ್ಲ. ಯಾರ ವಿರೋಧವೂ ಇಲ್ಲ’ ಎಂದರು.

‘ಈಗ ಬಿಡುಗಡೆ ಆಗಿರುವ ಆಡಿಯೊ ಮತ್ತು ವಿಡಿಯೊಗಳಲ್ಲಿರುವ ಸತ್ಯಾಸತ್ಯತೆ ಅಂಶಗಳನ್ನು ಪರಿಶೀಲಿಸಲಾಗುತ್ತದೆ’ ಎಂದು ಸ್ಪಷ್ಟಪಡಿಸಿದರು.

ಡಿಕೆಶಿ ಮೇಲೆ ದೂರು ಕೊಡುವೆ: ರಮೇಶ

ಒಂದನೇ ಪುಟದಿಂದ

‘ಸಿ.ಡಿ ಪ್ರಕರಣದ ಕಿಂಗ್‌ಪಿನ್ ನರೇಶ್ ಗೌಡನಿಗೆ ಸಂಬಂಧ ಇದೆ ಎಂದು ಆ ಮಹಾನಾಯಕ ಒಪ್ಪಿಕೊಂಡಿದ್ದಾನೆ. ಆ ಯುವತಿ ನನ್ನ ಮನೆಯ ಬಳಿ ಬಂದಿದ್ದಳು ಎಂದೂ ಹೇಳಿದ್ದಾನೆ. ಅವನಿಗೆ ಕ್ಷಮೆ ಎಂಬುದು ಇರಬಾರದು. ಕಾಂಗ್ರೆಸ್ ಅವನನ್ನು ಮುಂದುವರಿಸಬಾರದು. ಪೊಲೀಸರು ಒದ್ದು ಒಳಗೆ ಹಾಕಬೇಕು’ ಎಂದೂ ಏಕವಚನದಲ್ಲಿ ಗುಡುಗಿದರು. ಅಲ್ಲದೆ, ಅವಾಚ್ಯವಾಗಿಯೂ ನಿಂದಿಸಿದರು.

‘ಆ ಹೆಣ್ಣು ಮಗಳ ಬಗ್ಗೆ ನನಗೆ ಗೊತ್ತಿಲ್ಲ. ಅವಳಿಗೂ ನನಗೂ ಸಂಬಂಧ ಇಲ್ಲ. ಜಾರಕಿಹೊಳಿ ಕುಟುಂಬ ಯಾವ ಯುವತಿಗೂ ಮೋಸ ಮಾಡಿಲ್ಲ. ನಾನು ತಪ್ಪು ಮಾಡಿದ್ದರೆ ನೇಣಿಗೆ ಹಾಕಲಿ’ ಎಂದ ರಮೇಶ ಜಾರಕಿಹೊಳಿ, ‘ಗೋಕಾಕದಲ್ಲಿ (ರಮೇಶ ಜಾರಕಿಹೊಳಿ ಪ್ರತಿನಿಧಿಸುವ ಕ್ಷೇತ್ರ) ತಮ್ಮನನ್ನು ನಿಲ್ಲಿಸುತ್ತೇನೆ. ಕನಕಪುರದಲ್ಲಿ ಅವನ (ಡಿ.ಕೆ. ಶಿವಕುಮಾರ್) ವಿರುದ್ಧ ನಾನು ಹೋರಾಡುತ್ತೇನೆ. ಅದಕ್ಕೆ ಕುಮಾರಸ್ವಾಮಿ ಜೊತೆ ಕೈಜೋಡಿಸುವುದಕ್ಕೂ ಸಿದ್ಧ. ಆ ಯುವತಿಗೆ ಏನೇ ಆದರೂ ಅವನೇ ಕಾರಣನಾಗುತ್ತಾನೆ’ ಎಂದೂ ಹೇಳಿದರು.

ಹತಾಶೆಯಲ್ಲಿ ರಮೇಶ: ಡಿಕೆಶಿ

ಒಂದನೇ ಪುಟದಿಂದ

‘ಅವರ ಸರ್ಕಾರ ಇದೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಿ’ ಎಂದರು.

‘ಯುವತಿಯ ಪೋಷಕರೂ ನಿಮ್ಮ ಹೆಸರು ಹೇಳಿ, ಮಗಳ ಹೆಸರು ಇಟ್ಟುಕೊಂಡು ರಾಜಕೀಯ ಮಾಡುತ್ತಿದ್ದೀರಿ ಎಂದೂ ಆರೋಪಿಸಿದ್ದಾರಲ್ಲ’ ಎಂದು ಕೇಳಿದಾಗ, ‘ನನಗೆ ಅದರ ಅವಶ್ಯಕತೆ ಇಲ್ಲ. ಆ ಯುವತಿಯನ್ನು ನಾನು ಭೇಟಿ ಮಾಡಿಲ್ಲ’ ಎಂದರು.

ಯುವತಿಯನ್ನು ಭೇಟಿ ಮಾಡಿಲ್ಲ: ಸುದ್ದಿಗಾರರ ಜೊತೆ ಶನಿವಾರ ಬೆಳಿಗ್ಗೆ ಮಾತನಾಡಿದ್ದ ಶಿವಕುಮಾರ್, ‘ನಾವು ರಾಜಕಾರಣಿಗಳು, ಸಾರ್ವಜನಿಕ ಜೀವನದಲ್ಲಿ ಇರುವವರು. ಸಂಕಷ್ಟ ಹೇಳಿಕೊಂಡು ಬಂದವರಿಗೆ ಸಹಾಯ ಮಾಡುತ್ತೇವೆ. ದಿನ ಬೆಳಗಾದರೆ ನನ್ನ ಮನೆ ಬಳಿ ಬಂದು ನೋಡಿ. ಅನೇಕರು ಹಣಕಾಸು ಸಮಸ್ಯೆ, ಸರ್ಕಾರದಿಂದ ತೊಂದರೆ, ಕೌಟುಂಬಿಕ ಸಮಸ್ಯೆ ಹೇಳಿಕೊಂಡು ಬರುತ್ತಾರೆ. ಅದೇ ರೀತಿ ಆ ಯುವತಿ ಬಂದಿರಬಹುದು. ನಾನು ಭೇಟಿ ಮಾಡಲು ಸಾಧ್ಯವಾಗಿಲ್ಲ’ ಎಂದಿದ್ದರು.

‘ನರೇಶ್ ಮಾಧ್ಯಮದ ವ್ಯಕ್ತಿ. ನನಗೆ ಪರಿಚಯಸ್ಥ. ನನಗೆ ಬೇಕಾದ ಹುಡುಗ. ಅವರ ಮನೆಗೂ ಹೋಗಿದ್ದೇನೆ. ಅನೇಕ ವಿಚಾರಗಳನ್ನು ಆತ ಹಂಚಿಕೊಂಡಿದ್ದ’ ಎಂದೂ ಹೇಳಿದ್ದರು.

‘ಮಗಳನ್ನು ಗೋವಾಕ್ಕೆ ಕಳುಹಿಸಿದ್ದೇ ಡಿಕೆಶಿ’

ಒಂದನೇ ಪುಟದಿಂದ

‘ನಮಗೆ ರಮೇಶ ಜಾರಕಿಹೊಳಿ ಅವರಿಂದ ಯಾವುದೇ ಬೆದರಿಕೆ ಇಲ್ಲ. ಪೊಲೀಸ್ ಇಲಾಖೆ, ಮಾಧ್ಯಮದವರು ನಮಗೆ ನೆರವು ನೀಡಬೇಕು. ನಮಗೆ ಹಿಂದೆ ಮುಂದೆ ಯಾರೂ ಇಲ್ಲ. ನಾನೊಬ್ಬ ಮಾಜಿ ಸೈನಿಕ. ದೇಶ ಕಾಯುವ ನನಗೆ ಅನ್ಯಾಯಕ್ಕೊಳಗಾದ ಮಗಳನ್ನು ಕಾಯೋಕೆ ಆಗುವುದಿಲ್ಲವೇ?. ನಿಮ್ಮ ಹೊಲಸು ರಾಜಕಾರಣಕ್ಕೆ ಒಬ್ಬ ಹೆಣ್ಣು ಮಗಳನ್ನು ಇಟ್ಟುಕೊಂಡು ಯಾಕೆ ಈ ತರ ಮಾಡುತ್ತಿದ್ದೀರಾ ಎಂಬುದೇ ನಮಗೆ ಗೊತ್ತಾಗುತ್ತಿಲ್ಲ.’

‘ನಮ್ಮ ಜೊತೆ ಮಗಳು ಮಾತಾಡಿಲ್ಲ. ಮಗ ಹಾಗೂ ಕುಟುಂಬದವರ ಜೊತೆ ಮಾತನಾಡಿದ್ದಾಳೆ. 11 ಆಡಿಯೊ ರೆಕಾರ್ಡ್ ನಮ್ಮ ಬಳಿ ಇದ್ದು, ಅವುಗಳನ್ನು ಅಧಿಕಾರಿಗಳಿಗೆ ನೀಡಿದ್ದೇವೆ’ ಎಂದೂ ತಂದೆ ಹೇಳಿದರು.

‘ನಮ್ಮ ಸ್ವಂತ ಊರು ಬಿಟ್ಟು, ಹಲವು ವರ್ಷಗಳಿಂದ ಸಂಬಂಧಿಕರ ಊರಲ್ಲಿ ಇದ್ದೇವೆ. ಈಗಲೂ ಅಲ್ಲಿಯೇ ಉಳಿದುಕೊಂಡಿದ್ದೇವೆ. ನಾವು ಯಾವುದೇ ಭಯವಿಲ್ಲದೇ ನಿರ್ಭಯದಿಂದ ಇದ್ದೇವೆ. ಓ ಮಗಳೇ, ನಿನ್ನ ಪರವಾಗಿ ನಾವಿದ್ದೇವೆ. ಇಂಥ ರಾಜಕಾರಣ ಬೇಡ ನಮಗೆ. ಬಾ ನನ್ನ ಬಳಿ’ ಎಂದೂ ಅವರು ಮಗಳ ನೆನೆದು ಕಣ್ಣೀರಿಟ್ಟರು.

ಅಕ್ಕನನ್ನು ಗೋವಾಗೆ ಕಳುಹಿಸಿದ್ದೆ ಡಿಕೆಶಿ: ಯುವತಿಯ ತಮ್ಮ ಮಾತನಾಡಿ, ‘ಮಾ. 2ರಂದು ಅಕ್ಕನ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಆಕೆ ಜೊತೆಗಿದ್ದ ಸ್ನೇಹಿತ ಆಕಾಶ್ ತಳವಾಡಿ ಮೊಬೈಲ್‌ಗೆ ಕರೆ ಮಾಡಿದ್ದೆ. ನಾನು, ನಮ್ಮ ಮನೆಯವರು ಮಾತನಾಡಿದೆವು. ಅವಾಗ ನಮ್ಮ ಅಕ್ಕ, ‘ಇದು ನಾನಲ್ಲ ಚಿನ್ನಿ, ಇದು ಯಾರೋ ನನ್ನ ವಿಡಿಯೊ ಸಂಕಲನ ಮಾಡಿದ್ದಾರೆ’ ಎಂದು ನಮಗೆ ತಿಳಿಸಿದ್ದರು’ ಎಂದರು.

‘ಏನು ಬೇಡ, ನೀನು ಬೆಂಗಳೂರಿನಲ್ಲಿ ಇರುವುದು ಬೇಡ ಊರಿಗೆ ಬಾ ಎಂದು ಹೇಳಿದ್ದೇವು. ‘ಇಲ್ಲ, ಚಿನ್ನಿ ಡಿ.ಕೆ. ಶಿವಕುಮಾರ್ ಮನೆ ಕಡೆ ಹೋಗ್ತಾ ಇದ್ದೇನೆ. ಅವರೇ ಬಂದು ನನಗೆ ದುಡ್ಡು ಕೊಟ್ಟು ಗೋವಾಕ್ಕೆ ಕಳುಹಿಸುತ್ತಿದ್ದಾರೆ. ಅವರು ಏನು ಹೇಳುತ್ತಾರೆ ಅದೇ ರೀತಿ ಕೇಳು ಎನ್ನುತ್ತಿದ್ದಾರೆ. ಅವರು ಹೇಳಿದಂತೆ ನಾನು ಮಾಡುತ್ತಿದ್ದೇನೆ’ ಎಂಬ ಅಕ್ಕ ಹೇಳಿದ್ದರು.’

‘ಡಿ.ಕೆ. ಶಿವಕುಮಾರ್ ಅವರೇ ನಮ್ಮ ಅಕ್ಕನನ್ನು ಬಳಸಿಕೊಂಡು ಈ ತರ ವಿಡಿಯೊ ಮಾಡಿ ಇದೆಲ್ಲವನ್ನೂ ಮಾಡಿದ್ದಾರೆ. ಶಿವಕುಮಾರ್ ಬಗ್ಗೆ ಅಕ್ಕ ಮಾತನಾಡಿರುವ ಆಡಿಯೊ ಇದೆ. ನಮ್ಮ ಅಕ್ಕನ ಇಟ್ಟುಕೊಂಡು ಏಕೆ ರಾಜಕೀಯ ಮಾಡುತ್ತಿದ್ದಿರಾ? ನೀವು ಗಂಡಸರೇ ಆಗಿದ್ದರೆ, ಹೊರಗೆ ಬಂದು ಬೇರೆ ವಿಷಯದಲ್ಲಿ ಮಾತನಾಡಿ. ನಮ್ಮ ಅಕ್ಕನ ತಂದು ನಮಗೆ ಕೊಡ್ರಿ. ನಾನು ಕೈ ಮುಗಿದು ಕೇಳಿಕೊಳ್ಳುತ್ತೇನೆ’ ಎಂದೂ ತಮ್ಮ ಹೇಳಿದರು.

‘2020ರ ಫೆ. 5ರಂದು ಅಕ್ಕ ಊರಿಗೆ ಬಂದು ಹೋಗಿದ್ದರು. ಅವಾಗಲೇ ಆಕೆ ಮುಖ ನೋಡಿದ್ದು. ಆಕಿಗೆ ಅನ್ಯಾಯ ಆಗಿದ್ದರೆ, ನನ್ನ ತಂದೆ ದೇಶಸೇವೆ ಮಾಡಿದ್ದಾರೆ. ಮಗಳಿಗೆ ರಕ್ಷಣೆ ಕೊಡಲು ಆಗುತ್ತಿರಲಿಲ್ಲವೇ? ನರೇಶ್ ಗೌಡ ಕೊಟ್ಟ ಹೇಳಿಕೆ ಎಲ್ಲವೂ ಸುಳ್ಳು. ಅಕ್ಕನಿಗೆ ನ್ಯಾಯ ಕೊಡಿಸಲು ಅವನು ಯಾರು’ ಎಂದೂ ತಮ್ಮ ಪ್ರಶ್ನಿಸಿದರು.

‘ಡಿಕೆಶಿ ಹೆಸರು ಪ್ರಸ್ತಾವದ ಬಳಿಕ ಹನಿ ಟ್ರ್ಯಾಪ್ ಸ್ವರೂಪ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಮೇಶ ಜಾರಕಿಹೊಳಿಗೆ ಸಂಬಂಧಿಸಿದ ಸಿ.ಡಿ ಪ್ರಕರಣದಲ್ಲಿ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಹೆಸರು ಕೇಳಿ ಬಂದಿದ್ದು, ಪ್ರಕರಣ ಈಗ ಹನಿ ಟ್ರ್ಯಾಪ್ ಸ್ವರೂಪ ಪಡೆದುಕೊಳ್ಳುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, ‘ಆರಂಭದಲ್ಲಿ ಲೈಂಗಿಕ ಹಗರಣ, ಲೈಂಗಿಕ ಶೋಷಣೆಯಂತೆ ಪ್ರಕರಣ ಕಾಣಿಸುತ್ತಿತ್ತು. ಈಗ ಬೇರೆ ಸ್ವರೂಪ ಪಡೆದುಕೊಳ್ಳುತ್ತಿದೆ. ರಾಷ್ಟ್ರದ ಎದುರು ನಾಚಿಕೆ ಪಡುವ ಸ್ಥಿತಿಯಲ್ಲಿ ರಾಜ್ಯ ನಿಲ್ಲುವಂತಾಗಿದೆ’ ಎಂದಿದ್ದಾರೆ.

ರಾತ್ರಿ ಒಂದು ಆಡಿಯೊ, ಬೆಳಿಗ್ಗೆ ಅದಕ್ಕೊಂದು ಸ್ಪಷ್ಟನೆಯ ವಿಡಿಯೊ


ಕುಮಾರಸ್ವಾಮಿ

ಬಿಡುಗಡೆಯಾಗುತ್ತಿದೆ. ಪ್ರಕರಣದ ಹಿಂದೆ ದೊಡ್ಡ ಕೂಟವೇ ಕೆಲಸ ಮಾಡುತ್ತಿರುವಂತೆ ಕಾಣುತ್ತಿದೆ. ನ್ಯಾಯ ಕೊಡಿಸುವ ನೆಪದಲ್ಲಿ, ಸಂತ್ರಸ್ತೆ ಮುಂದಿಟ್ಟುಕೊಂಡು ಯಾರೋ ಆಟವಾಡುತ್ತಿರುವುದು ಸ್ಪಷ್ಟವಾಗುತ್ತಿದೆ ಎಂದು ಹೇಳಿದ್ದಾರೆ.

‘ಆಡಳಿತ ಪಕ್ಷ, ವಿರೋಧ ಪಕ್ಷ ಎಂಬುದನ್ನು ಲೆಕ್ಕಿಸದೇ ಅಸಲಿ ಸಂಗತಿಯನ್ನು ಪೊಲೀಸರು ಹೊರತರಬೇಕು. ರಾಜ್ಯದ ಪೊಲೀಸರ ಕರ್ತವ್ಯ ನಿಷ್ಠೆ ಪ್ರದರ್ಶನಕ್ಕೆ ಮತ್ತೊಮ್ಮೆ ಅವಕಾಶ ಸಿಕ್ಕಿದೆ. ಯಾವುದೇ ರಾಜಕೀಯ ಒತ್ತಡಗಳನ್ನೂ ಲೆಕ್ಕಿಸದೇ ತನಿಖೆ ನಡೆಸಿ ಅಸಲಿ ಸತ್ಯ ಬಯಲಿಗೆಳೆಯಬೇಕು ಎಂದು ಒತ್ತಾಯಿಸಿದ್ದಾರೆ.

‘ಸದನಶೂರರ ಮೌನವೇಕೆ’

ಬೆಂಗಳೂರು: ‘ಸಂತ್ರಸ್ತೆಯನ್ನು ಒತ್ತೆಯಾಗಿಟ್ಟುಕೊಂಡು ರಾಜಕೀಯ ಆಟ ಆಡುತ್ತಿರುವ ಡಿ.ಕೆ.ಶಿವಕುಮಾರ್ ಅವರೇ ನಿಮ್ಮದೆಂತಹ ಕುತ್ಸಿತ ಮನಸ್ಥಿತಿ ಇರಬಹುದು?. ಸಂತ್ರಸ್ತೆ ಪರ ವಿಧಾನಮಂಡಲ ಅಧಿವೇಶನದಲ್ಲಿ ಬೊಬ್ಬೆ ಹಾಕಿದ್ದ ಶೂರರೆಲ್ಲ ಈಗ ಮೌನವಾಗಿರುವುದು ಏಕೆ’ ಎಂದು ಬಿಜೆಪಿ ರಾಜ್ಯ ಘಟಕ ಪ್ರಶ್ನಿಸಿದೆ.

ಡಿ.ಕೆ.ಶಿವಕುಮಾರ್ ಅವರಿಗೆ ಟ್ಯಾಗ್ ಮಾಡಿ ಟ್ವೀಟ್ ಮಾಡಿರುವ ಬಿಜೆಪಿ ಘಟಕ, ‘ಆರಂಭದಲ್ಲಿ ತಾವೇ ಹೆಗಲು ಮುಟ್ಟಿಕೊಡು ನನ್ನನ್ನು ಸಿಲುಕಿಸುವ ಪ್ರಯತ್ನ ಎಂದಿದ್ದೀರಿ. ಸಂತ್ರಸ್ತೆ ನನ್ನ ಭೇಟಿಗೆ ಪ್ರಯತ್ನಿಸಿದ್ದು ನಿಜ, ನರೇಶಗೌಡ ಮನೆಗೆ ಹೋಗಿದ್ದೇನೆ ಎನ್ನುತ್ತಿದ್ದೀರಿ. ಎಲ್ಲ ಆಗುಹೋಗುಗಳು ನಿಮ್ಮ ನಿಯಂತ್ರಣದಲ್ಲೇ ನಡೆಯುತ್ತಿತ್ತು ಎಂಬುದು ಸ್ಪಷ್ಟ ಅಲ್ಲವೇ’ ಎಂದು ಪ್ರಶ್ನಿಸಿದೆ.

‘ಎಲ್ಲವನ್ನೂ ತಾನೇ ಮುಂದೆ ನಿಂತು ಮಾಡಿಸುತ್ತಾರೆ, ಸದನದಲ್ಲಿ ಬೊಬ್ಬಿರಿಯುತ್ತಾರೆ, ಸುಭಗನಂತೆ ನಟಿಸುತ್ತಾರೆ. ಶಿವಕುಮಾರ್ ಅವರೇ, ನಿಮಗೆ ಸ್ವಲ್ಪವಾದರೂ ನೈತಿಕತೆ ಇದ್ದರೆ ರಾಜೀನಾಮೆ ಕೊಟ್ಟುಬಿಡಿ. ಒತ್ತೆಯಿಟ್ಟುಕೊಂಡಿರುವ ಸಂತ್ರಸ್ತೆಯನ್ನು ಬಿಟ್ಟುಬಿಡಿ, ತನಿಖೆಗೆ ಸಹಕರಿಸಿ’ ಎಂದು ಆಗ್ರಹಿಸಿದೆ.

‘ಕಳಂಕಿತರಿಂದ ಉತ್ತರ ಪಡೆಯುವುದಿಲ್ಲವೆಂದು ಸದನದ ಸಮಯ ಹಾಳುಗೆಡವಿದ ಕಾಂಗ್ರೆಸ್ ನಾಯಕರೇ ಈಗ ಎಲ್ಲಿದ್ದೀರಿ? ಶಿವಕುಮಾರ್ ಮಾಡಿರುವ ಘನಂದಾರಿ ಕೆಲಸವನ್ನು ನೀವು ಸಮರ್ಥಿಸುತ್ತೀರಾ’ ಎಂದು ಬಿಜೆಪಿ ಪ್ರಶ್ನಿಸಿದೆ.

ಸರ್ಕಾರಕ್ಕೆ ಮುಜುಗರ: ಮಾಧುಸ್ವಾಮಿ

ಪ್ರಜಾವಾಣಿ ವಾರ್ತೆ



ಮೈಸೂರು: ‘ಸಿ.ಡಿ ಪ್ರಕರಣದಿಂದ ರಾಜ್ಯ ಸರ್ಕಾರಕ್ಕೆ ಮುಜುಗರ ಉಂಟಾಗಿರುವುದು ನಿಜ. ಏನು ಮಾಡುವುದು? ಸರ್ಕಾರ ನಡೆಸುವಾಗ ಇಂಥ ಘಟನೆಗಳು ಎದುರಾಗುತ್ತಿರುತ್ತವೆ’ ಎಂದು ಸಚಿವ ಜೆ.ಸಿ.ಮಾಧುಸ್ವಾಮಿ ಶನಿವಾರ ಇಲ್ಲಿ ಹೇಳಿದರು.

‘ನಾವು ಅಷ್ಟು ಪ್ರಬುದ್ಧರಾಗಿಲ್ಲ. ವ್ಯಕ್ತಿಯೊಬ್ಬರ ವೈಯಕ್ತಿಕ ಬದುಕನ್ನು ಇಷ್ಟು ದೊಡ್ಡದಾಗಿ ಮಾಡಬಾರದಿತ್ತು. ಇದೊಂದು ವೈಯಕ್ತಿಕ ವಿಚಾರ ಎಂದು ಸುಮ್ಮನಾಗಿ ಬಿಡಬಹುದಿತ್ತು. ಆದರೆ, ತೇಜೋವಧೆ ಮಾಡಲಾಗಿದೆ’ ಎಂದರು.

ಶಾಸಕ ರಮೇಶ ಜಾರಕಿಹೊಳಿ ಬಂಧನ ಸಾಧ್ಯತೆ ವಿಚಾರವಾಗಿ ಪ್ರತಿಕ್ರಿಯಿಸಿದ ಸಚಿವ ಮಾಧುಸ್ವಾಮಿ, ‘ಒಬ್ಬ ಮನುಷ್ಯನನ್ನು ಏಕಾಏಕಿ ಬಂಧಿಸುವುದು ಕಷ್ಟ. ಯುವತಿಯ ಹೇಳಿಕೆಗಳಲ್ಲಿ ಗೊಂದಲಗಳಿವೆ. ಪೊಲೀಸರು ಪ್ರಾಥಮಿಕ ತನಿಖೆ ನಡೆಸಿ ಮುಂದಿನ ಹೆಜ್ಜೆ ಇಡಬೇಕು. ಆಕೆಯೇ ಮುಂದೆ ಬಂದು ದೃಢವಾಗಿ ಹೇಳಿದ್ದರೆ ಪೊಲೀಸರು ಕ್ರಮ ಕೈಗೊಳ್ಳುತ್ತಿದ್ದರು’ ಎಂದರು.

> **ನೊಂದ ಮಹಿಳೆ ಪರವಾಗಿ ಸರ್ಕಾರ ಇದೆ. ರಕ್ಷಣೆ ಇಲ್ಲ. ಜೀವ ಬೆದರಿಕೆ ಇದೆ ಎಂದು ಹೇಳುವ ಯುವತಿ, ಆ ಬಗ್ಗೆ ಮಾಹಿತಿ ಇದ್ದರೆ ಪೊಲೀಸರಿಗೆ ಮಾಹಿತಿ ಕೊಡಲಿ.**
> **ಶಶಿಕಲಾ ಜೊಲ್ಲೆ,** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ

> **‘ಸಿ.ಡಿ. ಪ್ರಕರಣದಲ್ಲಿ ಮಹಾನಾಯಕನ ಹೆಸರನ್ನು ಸಂತ್ರಸ್ತೆಯೇ ಬಹಿರಂಗಗೊಳಿಸಿದ್ದಾರೆ. ಇದು ಅಚ್ಚರಿಯ ವಿಷಯವೇನಲ್ಲ**
> **ಎಸ್.ಟಿ.ಸೋಮಶೇಖರ್,** ಸಚಿವ

> **ತಮ್ಮ ಮಗಳನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಣ ಕೊಟ್ಟು ಗೋವಾಕ್ಕೆ ಕಳುಹಿಸಿದ್ದರು ಎಂದು ಸಿ.ಡಿ.ಯಲ್ಲಿ ಕಾಣಿಸಿಕೊಂಡ ಯುವತಿ ಪೋಷಕರು ಹೇಳಿಕೆ ನೀಡಿದ್ದಾರೆ. ಎಸ್‌ಐಟಿ ಇದನ್ನು ಗಂಭೀರವಾಗಿ ಪರಿಗಣಿಸಬೇಕು.**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

‘ಆಡಿಯೊದಲ್ಲಿ ಆಕೆ ಶಿವಕುಮಾರ್ ಹೆಸರು ಪ್ರಸ್ತಾಪ ಮಾಡಿದ್ದಾಳೆ ಅಷ್ಟೆ. ಈ ಸಂಬಂಧ ಯಾವುದೇ ರೀತಿಯ ಸಾಕ್ಷ್ಯ ನೀಡಿಲ್ಲ. ಶಿವಕುಮಾರ್ ಈ ರೀತಿ ಮಾಡಲಾರರು ಎಂಬುದು ನನ್ನ ಭಾವನೆ’ ಎಂದು ಹೇಳಿದರು.

ಪ್ರಜಾವಾಣಿ ‘ಯಶಸ್ವಿನಿ’ ಸಮಾರಂಭ: ಸಚಿವೆ ಶಶಿಕಲಾ ಜೊಲ್ಲೆ ಅಭಿಮತ

ಮಹಿಳೆ ಯಶಸ್ವಿ ಪುರುಷನ ಹಿಂದಲ್ಲ, ಪಕ್ಕದಲ್ಲಿರುತ್ತಾಳೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಮಹಿಳೆ, ಪ್ರತಿ ಯಶಸ್ವಿ ಪುರುಷನ ಹಿಂದೆ ಇರುವುದಿಲ್ಲ. ಬದಲಿಗೆ ಪಕ್ಕದಲ್ಲಿಯೇ ಇರುತ್ತಾಳೆ. ಆತನ ಯಶಸ್ಸಿನಲ್ಲಿ ಪಾಲುದಾರಿಣಿಯೂ ಹೌದು. ಸಮಾಜ ಅದನ್ನು ಅದೇ ರೀತಿ ಅರ್ಥೈಸಿಕೊಳ್ಳಬೇಕು. ಆಗಲೇ ಆ ಮಾತಿಗೊಂದು ಅರ್ಥ, ಗೌರವ ಇರಲಿದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶಶಿಕಲಾ ಜೊಲ್ಲೆ ಅಭಿಪ್ರಾಯಪಟ್ಟರು.

ಇಲ್ಲಿನ ಗೌರಿಶಂಕರ ಕಲ್ಯಾಣಮಂಟಪದಲ್ಲಿ ಶನಿವಾರ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ‘ಪ್ರಜಾವಾಣಿ’ ಬಳಗದಿಂದ ಆಯೋಜಿಸಿದ್ದ ಸಾಧಕ ಮಹಿಳೆಯರಿಗೆ ಸನ್ಮಾನ ಸಮಾರಂಭ ‘ಯಶಸ್ವಿನಿ’ ಉದ್ಘಾಟಿಸಿ ಅವರು ಮಾತನಾಡಿದರು.

ಭೂಮಿ, ವಿದ್ಯೆ, ಶಕ್ತಿ, ದುಡ್ಡು, ನದಿ, ಗೋವಿನ ಹೆಸರಲ್ಲಿ ಗುರುತಿಸಲ್ಪಡುವ ಮಹಿಳೆ ಸಹನಶೀಲಳೂ ಹೌದು. ಒಳ್ಳೆಯ ಸಂಗತಿಗಳ ಬಗ್ಗೆ ಆಕೆಗೆ ಸಹನೆ ಇರಲಿದೆ. ಅನ್ಯಾಯ ಕಂಡರೆ ಸಹಿಸುವುದಿಲ್ಲ. ಸಾಧನೆ ಸುಮ್ಮನೆ ದೊರೆಯುವುದಿಲ್ಲ. ಅದರ ಹಿಂದೆ ಕಷ್ಟ, ಪರಿಶ್ರಮ, ನೋವು, ತ್ಯಾಗ ಎಲ್ಲವೂ ಇದೆ. ಸೋಲೇ ಗೆಲುವಿನ ಸೋಪಾನ ಎಂದು ಅರಿತರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಹೀಗೆ ಯಶಸ್ಸಿನ ಹಾದಿಯಲ್ಲಿ ಸಾಗಿ ಬಂದವರನ್ನು ಗುರುತಿಸುವ ಕೆಲಸ ‘ಪ್ರಜಾವಾಣಿ’ ಬಳಗ ಮಾಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮಾತನಾಡಿ, ’ಸಾಧಕ ಮಹಿಳೆಯರನ್ನು ಗುರುತಿಸಿ ಗೌರವಿಸುವ ಮೂಲಕ ನಮ್ಮನ್ನು ನಾವು ಗೌರವಿಸಿಕೊಳ್ಳುವ ಕೆಲಸ ಮಾಡಿದ್ದೇವೆ. ರಾಜಧಾನಿ ಬೆಂಗಳೂರು ಸೇರಿದಂತೆ ಎಲ್ಲ ಕಡೆಯೂ ಇಂತಹ ಕಾರ್ಯಕ್ರಮ ಸಂಘಟಿಸಲಿದ್ದೇವೆ‘ ಎಂದರು.



ಬಾಗಲಕೋಟೆಯಲ್ಲಿ ಶನಿವಾರ ಪ್ರಜಾವಾಣಿ ಬಳಗದಿಂದ ಆಯೋಜಿಸಿದ್ದ ಮಹಿಳಾ ದಿನ ಸಮಾರಂಭದಲ್ಲಿ ಜಿಲ್ಲೆಯ 19 ಮಂದಿ ಸಾಧಕ ಮಹಿಳೆಯರ ಕುರಿತಾದ ಪುಸ್ತಕ 'ಯಶಸ್ವಿನಿ'ಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ಬಿಡುಗಡೆ ಮಾಡಿದರು. ಹಾಸ್ಯ ಸಾಹಿತಿ ಇಂದುಮತಿ ಸಾಲಿಮಠ, ಕೊಪ್ಪಳದ ಉದ್ಯಮಿ ಭಾರತಿ ಗುಡ್ಲಾನೂರ, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಹುಬ್ಬಳ್ಳಿ ಬ್ಯುರೊ ಮುಖ್ಯಸ್ಥೆ ಎಸ್‌.ರಶ್ಮಿ ಚಿತ್ರದಲ್ಲಿದ್ದಾರೆ

ಪತ್ರಿಕೆಯಿಂದ ಕೊರೊನಾ ಸೋಂಕು ಹರಡಿದ ಒಂದೇ ಒಂದು ನಿದರ್ಶನವೂ ಜಗತ್ತಿನಲ್ಲಿ ಇಲ್ಲ. ಇದನ್ನು ವಿಶ್ವಸಂಸ್ಥೆಯೂ ದೃಢೀಕರಿಸಿದೆ. ಸುಳ್ಳು ಸುದ್ದಿ ನಂಬಿ ಪತ್ರಿಕೆಗಳ ಪ್ರಸರಣಕ್ಕೆ ತೊಂದರೆ ಮಾಡುವ ಕಾರ್ಯ ನಡೆದಿತ್ತು. ಅದನ್ನು ತೊಡೆದು ಹಾಕಲು ಎಲ್ಲರೂ ತಂಡವಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದರು.

ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಬಾಗಲಕೋಟೆ ಜಿಲ್ಲೆಯ 19 ಮಂದಿ ಮಹಿಳೆಯರನ್ನು ಸಚಿವೆ ಶಶಿಕಲಾ ಜೊಲ್ಲೆ ಸನ್ಮಾನಿಸಿದರು.

ಕೊಪ್ಪಳದ ಉದ್ಯಮಿ ಭಾರತಿ ಗುಡ್ಲಾನೂರ, ಹಾಸ್ಯಸಾಹಿತಿ ಇಂದುಮತಿ ಸಾಲಿಮಠ, ಜಿಲ್ಲಾಧಿಕಾರಿ ಕ್ಯಾಪ್ಟನ್ ಡಾ.ಕೆ.ರಾಜೇಂದ್ರ, ಎಸ್ಪಿ ಲೋಕೇಶ ಜಗಲಾಸರ್, ಪ್ರಜಾವಾಣಿ ಹುಬ್ಬಳ್ಳಿ ಬ್ಯುರೊ ಮುಖ್ಯಸ್ಥೆ ಎಸ್.ರಶ್ಮಿ ಹಾಜರಿದ್ದರು.

‘ದಾಳಿಗೆ ನ್ಯಾಯಾಧೀಶರ ಅನುಮತಿ ಬೇಕಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಾಳಿಗೂ, ತನಿಖೆಗೂ ವ್ಯತ್ಯಾಸ ಇದೆ. ಪೊಲೀಸರು ದಾಳಿ ನಡೆಸುವ ಮುನ್ನ ನ್ಯಾಯಾಧೀಶರ ಅನುಮತಿ ಪಡೆಯುವ ಅಗತ್ಯವಿಲ್ಲ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಚಿಕ್ಕಮಗಳೂರು ಪೊಲೀಸರ ದಾಳಿ ಮತ್ತು ನಂತರದ ತನಿಖೆ ಪ್ರಶ್ನಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಪೀಠ, ‘ಅಂದರ್–ಬಾಹರ್ ಜೂಜು ನಡೆಯುತ್ತಿರುವ ಬಗ್ಗೆ ಮಾಹಿತಿ ದೊರೆತರೆ ಪೊಲೀಸರು ದಾಳಿ ನಡೆಸಲು ನ್ಯಾಯಾಧೀಶರ ಅನುಮತಿ ಪಡೆಯಬೇಕಿಲ್ಲ’ ಎಂದು ಹೇಳಿದೆ.

ಚಿಕ್ಕಮಗಳೂರಿನ ಹಿರಿಯ ನಾಗರಿಕರ ಸೇವಾ ಕೇಂದ್ರದ ಮೇಲೆ ಫೆಬ್ರುವರಿಯಲ್ಲಿ ದಾಳಿ ನಡೆಸಿದ್ದ ಪೊಲೀಸರು ಅಕ್ರಮ ಜೂಜಾಟದಲ್ಲಿ ತೊಡಗಿದ್ದ ಆರೋಪದ ಮೇಲೆ ಒಂಬತ್ತು ಜನರ ವಿರುದ್ಧ ಪ್ರಕರಣ ದಾಖಲಿಸಿದ್ದರು.

ಇದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯಲ್ಲಿ ‘ಬಸವನಹಳ್ಳಿ ಪೊಲೀಸರು ₹12,550 ನಗದು ವಶಕ್ಕೆ ಪಡೆದಿದ್ದರು. ನ್ಯಾಯಾಧೀಶರ ಅನುಮತಿ ಪಡೆದ ಬಳಿಕ ಎಫ್‌ಐಆರ್ ದಾಖಲಿಸಿದ್ದಾರೆ. ಸಿಆರ್‌ಪಿಸಿ ಸೆಕ್ಷನ್ 155(2) ಪ್ರಕಾರ, ದಾಳಿ ಮತ್ತು ತನಿಖೆ ನಡೆಸುವ ಮೊದಲು ನ್ಯಾಯಾಧೀಶರ ಅನುಮತಿಯನ್ನು ಪೊಲೀಸರು ಪಡೆಯಬೇಕು’ ಎಂದು ಅರ್ಜಿದಾರರು ಹೇಳಿದ್ದಾರೆ.


‘ಎಫ್‌ಐಆರ್ ದಾಖಲಿಸಲು ಮಾತ್ರ ನ್ಯಾಯಾಧೀಶರ ಅನುಮತಿ ಅಗತ್ಯವಿದೆ. ದಾಳಿ ಮತ್ತು ತನಿಖೆ ಎರಡೂ ಒಂದೇ ಎಂಬ ಅರ್ಜಿದಾರರ ವಾದವನ್ನು ಒಪ್ಪಲು ಆಗುವುದಿಲ್ಲ. ಈ ಪ್ರಕರಣದಲ್ಲಿ ಡಿವೈಎಸ್‌ಪಿಯಿಂದ ಶೋಧಕ್ಕೆ ವಾರಂಟ್ ಪಡೆದ ಬಳಿಕವೇ ದಾಳಿ ನಡೆಸಿದ್ದಾರೆ. ಜೂಜಿನ ಮಾಹಿತಿ ದೊರೆತಾಗ ನ್ಯಾಯಾಧೀಶರ ಅನುಮತಿಗಾಗಿ ಕಾಯಲು ಸಾಧ್ಯವೇ’ ಎಂದು ಪ್ರಶ್ನಿಸಿದೆ.


ಲೇಖಕಿಯರ ಸಂಘದ ವಾರ್ಷಿಕ ಪ್ರಶಸ್ತಿಗಳು ಪ್ರಕಟ


ಧಾರವಾಡ: ಉತ್ತರ ಕರ್ನಾಟಕ ಲೇಖಕಿಯರ ಸಂಘವು 2020ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಅನುಭಾವ ಕ್ಷೇತ್ರದ ಸಾಧನೆಗೆ ನೀಡುವ ಸಾಹಿತ್ಯ ಸರಸ್ವತಿ ಪ್ರಶಸ್ತಿಯು ಡಾ.ವೀಣಾ ಬನ್ನಂಜೆ ಅವರಿಗೆ ಲಭಿಸಿದೆ.

ಶಾಂತಾದೇವಿ ಕಣವಿ ಕಥಾ ಪ್ರಶಸ್ತಿಗೆ ಡಾ.ಎಚ್.ಎಸ್. ಅನುಪಮಾ ಹಾಗೂ ಡಾ.ಲತಾ ರಾಜಶೇಖರ್ ಕಾವ್ಯ ಪ್ರಶಸ್ತಿಗೆ ರೂಪ ಹಾಸನ ಅವರು ಆಯ್ಕೆಯಾಗಿದ್ದಾರೆ. ಕಥೆ–ಕವಿತೆ ಪ್ರಶಸ್ತಿಗಳು ತಲಾ ₹10ಸಾವಿರ ನಗದು ಹಾಗೂ ಅನುಭಾವ ಪ್ರಶಸ್ತಿ ₹5ಸಾವಿರ ನಗದು ಒಳಗೊಂಡಿದೆ.

ಅನುಭಾವ ಕ್ಷೇತ್ರದ ಆಯ್ಕೆ ಸಮಿತಿಯಲ್ಲಿ ಡಾ.ಗುರುಲಿಂಗ ಕಾಪಸೆ, ಡಾ. ಶಾಂತಾ ಇಮ್ರಾಪುರ, ಡಾ. ವೀಣಾ ಶಾಂತೇಶ್ವರ, ಹಸನಬಿ ಬೀಳಗಿ ಇದ್ದರು. ಕಾವ್ಯ ಪ್ರಶಸ್ತಿಯ ಆಯ್ಕೆಯನ್ನು ಪ್ರೊ.ಮಾಲತಿ ಪಟ್ಟಣಶೆಟ್ಟಿ ಮತ್ತು ಅಕ್ಷತಾ ಹುಂಚದಕಟ್ಟೆ ಹಾಗೂ ಕಥಾ ಪ್ರಶಸ್ತಿಯ ಆಯ್ಕೆಯನ್ನು ಡಾ. ಚೆನ್ನವೀರ ಕಣವಿ ಹಾಗೂ ಸಂಘದ ಪದಾಧಿಕಾರಿಗಳು ಮಾಡಿದ್ದಾರೆ. ಪ್ರಶಸ್ತಿಯನ್ನು ಏ. 4ರಂದು ಜರುಗುವ ವಾರ್ಷಿಕೋತ್ಸವದಲ್ಲಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.


ರೂಪ ಹಾಸನ


ವೀಣಾ ಬನ್ನಂಜೆ


ಅನುಪಮಾ

‘ರಾಜ್ಯಗಳ ವಿಚಾರದಲ್ಲಿ ಕೇಂದ್ರದ ಹಸ್ತಕ್ಷೇಪ’

ಒಂದನೇ ಪುಟದಿಂದ

‘16 ರಾಜ್ಯಗಳು ಇದ್ದದ್ದು, ಈಗ 29 ರಾಜ್ಯಗಳಾಗಿವೆ. ಕೊಡಗಿನವರು, ಉತ್ತರ ಕರ್ನಾಟಕದವರು, ದಕ್ಷಿಣ ಕನ್ನಡದವರು, ಮದ್ರಾಸ್ ಪ್ರಾಂತ್ಯದವರು ಪ್ರತ್ಯೇಕ ರಾಜ್ಯಕ್ಕೆ ಬೇಡಿಕೆ ಇಡುತ್ತಿದ್ದಾರೆ. ಕೊಡಗಿನಲ್ಲಿ ಕಂದಾಯ ದಾಖಲೆಗಳನ್ನು ಸರಿಪಡಿಸಲು ಈವರೆಗೆ ಸಾಧ್ಯವಾಗಿಲ್ಲ. ಸರಿಯಾದ ಸೌಲಭ್ಯ ಒದಗಿಸಿದ್ದರೆ ಅವರೇಕೆ ದನಿ ಎತ್ತುತ್ತಿದ್ದರು’ ಎಂದು ಪ್ರಶ್ನಿಸಿದರು.

‘ನೀಟ್ ಪರೀಕ್ಷೆಗೂ ನಮ್ಮ ರಾಜ್ಯಕ್ಕೂ ಏನು ಸಂಬಂಧ? ಇದನ್ನು ಸಂಸದ ತೇಜಸ್ವಿ ಸೂರ್ಯ ಸಂಸತ್ತಿನಲ್ಲಿ ಪ್ರಶ್ನಿಸಬೇಕು. ಉತ್ತರ ಭಾರತದವರಿಗೆ ರಾಜ್ಯದಲ್ಲಿ ಪ್ರವೇಶಾತಿ ಸಿಗುತ್ತದೆ. ನಾವು ಬಂಡವಾಳ ಹಾಕಿ, ಅಂಥವರಿಗೆ ರೆಡ್ ಕಾರ್ಪೆಟ್ ಹಾಕಿ ಸ್ವಾಗತಿಸುತ್ತಿದ್ದೇವೆ. 3–4 ವರ್ಷಗಳಲ್ಲಿ ರಾಜ್ಯದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಉಂಟಾಗಲಿದೆ’ ಎಂದು ಎಚ್ಚರಿಸಿದರು.

> **ರಾಷ್ಟ್ರೀಯತೆ ವಿಚಾರವನ್ನು ದೆಹಲಿಯಿಂದ ನಿಯಂತ್ರಿಸಬಾರದು. ಅದು ಮನಸಿನೊಳಗಿನ ಭಾವನೆ ಆಗಬೇಕು. ದಕ್ಷಿಣ ಭಾರತಕ್ಕೆ ಸರಿಯಾದ ಪ್ರಾತಿನಿಧ್ಯ ಸಿಗಬೇಕು**
> **ಡಾ.ಆರ್.ಬಾಲಸುಬ್ರಹ್ಮಣ್ಯಂ**
> ವಿ–ಲೀಡ್ ಸಂಸ್ಥಾಪಕ

> **ಪ್ರಾದೇಶಿಕ ಸ್ವಾತಂತ್ರ್ಯದಿಂದ ದೇಶದ ಏಕತೆಗೆ ಧಕ್ಕೆ ಉಂಟಾಗಬಾರದು. ಅದು ಸ್ವಯಂ ನಿಯಂತ್ರಣದಲ್ಲಿರಬೇಕು. ಇಲ್ಲದಿದ್ದರೆ ಸ್ವೇಚ್ಛಾಚಾರವಾಗಿ ಬಿಡುತ್ತದೆ**
> **ಎನ್.ರವಿಕುಮಾರ್**
> ವಿಧಾನ ಪರಿಷತ್ ಸದಸ್ಯ

‘ಈ ವಿಚಾರದಲ್ಲಿ ತಮಿಳುನಾಡು ರಾಜ್ಯದವರು ಹೋರಾಡಿ ಯಶಸ್ಸು ಕಂಡರು. ಆದರೆ, ಕನ್ನಡಿಗರಿಗೆ ಹೋರಾಟದ ಶಕ್ತಿ ಇಲ್ಲವಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದ ಮಾಧುಸ್ವಾಮಿ, ‘ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ, ಉದ್ಧರಿಸುವೆನು ಜಗವನೆನ್ನುತಿಹ ಸಖನೆ, ನಿನ್ನ ಉದ್ಧಾರವೆಷ್ಟಾಯ್ತೊ?‘ ಎಂಬ ಡಿವಿಜಿಯವರ ಮಂಕುತಿಮ್ಮನ ಕಗ್ಗ ವಾಚಿಸಿದರು.

‘ಬಹುರಾಷ್ಟ್ರೀಯ ಕಂಪನಿಗಳಿಂದ ರಾಜ್ಯಕ್ಕೇನು ಲಾಭ? ನಮ್ಮ ಸೌಲಭ್ಯಗಳನ್ನು ಪಡೆದು ನಮಗೇ ಉದ್ಯೋಗ ನೀಡುತ್ತಿಲ್ಲ. ಹಿಂದೆ ಒಮ್ಮೆ ಪರಿಶೀಲನೆಗೆಂದು ಒರ್‍ಯಾಕಲ್ ಕಂಪನಿಗೆ ಹೋಗಿದ್ದೆ. ನನಗೆ ಕಾಫಿ ತಂದುಕೊಟ್ಟ ಹುಡುಗನಿಂದ ಹಿಡಿದು ಕಸ ಗುಡಿಸುವವನವರೆಗೆ ಒಬ್ಬ ಕನ್ನಡಿಗ ಉದ್ಯೋಗಿಯೂ ಅಲ್ಲಿರಲಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ತುಮಕೂರಿನಲ್ಲಿ 14 ಸಾವಿರ ಎಕರೆ ಜಮೀನನ್ನು ಕಿತ್ತುಕೊಂಡು ಕಾರಿಡಾರ್ ಮಾಡಲಾಗಿದೆ. ನಮ್ಮ ಅಂಕಿ ಅಂಶಗಳ ಪ್ರಕಾರ 88 ಸಾವಿರ ಉದ್ಯೋಗ ಸೃಷ್ಟಿಸಲಾಗುತ್ತಿದೆ. ಅದರಲ್ಲಿ ಸ್ಥಳೀಯವಾಗಿ 800 ಉದ್ಯೋಗವನ್ನೂ ಕೊಟ್ಟಿಲ್ಲ. ಪ್ರಧಾನಿ ಮೋದಿ ಉದ್ಘಾಟಿಸಿದ ಫುಡ್ ಪಾರ್ಕ್‌ನಲ್ಲಿ 10 ಮಂದಿ ಸ್ಥಳೀಯರಿಗೇ ಉದ್ಯೋಗ ನೀಡಿಲ್ಲ’ ಎಂದು ಅಸಮಾಧಾನ ಹೊರಹಾಕಿದರು.

ಮಾಧುಸ್ವಾಮಿ ಮಾತಿಗೆ ತೇಜಸ್ವಿ ಆಕ್ಷೇಪ

ಒಂದನೇ ಪುಟದಿಂದ

‘ಕನ್ನಡಿಗರು ಕೂಡ ವಿವಿಧ ರಾಜ್ಯಗಳಲ್ಲಿರುವ ಕೇಂದ್ರೀಯ ಶಿಕ್ಷಣ ಸಂಸ್ಥೆಗಳಿಗೆ ಹೋಗಿ ಉದ್ಯೋಗಕ್ಕೆ ಅರ್ಜಿ ಸಲ್ಲಿಸಬಹುದು’ ಎಂದು ತಿರುಗೇಟು ನೀಡಿದರು. ‘ದೇಶದ ಬಡತನಕ್ಕೆ ಮೂಲ ಕಾರಣ ಸಮಾಜವಾದ. ಖಾಸಗಿ ಉದ್ಯಮಕ್ಕೆ ಬೆಂಬಲ ನೀಡದೆ, ಸ್ವಂತ ಉದ್ದಿಮೆಗಳಿಗೆ ಅವಕಾಶ ನೀಡದೆ ಸಂಪನ್ಮೂಲ ಕೊರತೆ ಉಂಟಾಯಿತು’ ಎಂದರು.

ಧಾರ್ಮಿಕ ವಿಚಾರಗಳಿಂದಾಗಿ ದೇಶದ ಏಕತೆಗೆ ಭಂಗ ಉಂಟಾಗಿದೆ ಎಂಬ ವಾದವನ್ನು ಮುಂದಿಟ್ಟರು.

ವಿಭೂತಿ ಗಟ್ಟಿ ಮುಟ್ಟಿಸುವುದಿಲ್ಲ...

‘ಲಿಂಗಾಯತ ಸಮುದಾಯದಲ್ಲೂ ಒಳಜಾತಿಗಳಿವೆ. ಆದರೆ, ಒಬ್ಬರು ಇನ್ನೊಬ್ಬರ ಕೈಯಲ್ಲಿ ವಿಭೂತಿ ಗಟ್ಟಿ ಮುಟ್ಟಿಸುವುದಿಲ್ಲ. ಬಯಲಲ್ಲಿ ನಿಂತು ನಾವೆಲ್ಲಾ ಒಂದೇ ಎನ್ನುತ್ತೇವೆ. ನಾನೂ ಲಿಂಗಾಯತ. ಹಾಗೆಂದು ನನ್ನಿಂದ ವಿಭೂತಿ ಮುಟ್ಟಿಸುತ್ತಾರೆಯೇ? ಈ ಭಾವನೆ ಹೋಗಬೇಕು’ ಎಂದು ಮಾಧುಸ್ವಾಮಿ ಹೇಳಿದರು.

ಅಪಾರ ಅರಣ್ಯ ನಾಶ, ಬತ್ತಿದ ಝರಿಗಳು, ಬೆಳೆ ಇಳುವರಿ ಕುಸಿತ • ಜನರಿಗೆ ಅನಾರೋಗ್ಯದ ಸಮಸ್ಯೆ

ಗಣಿಬಾಧಿತರ ಸಂಕಟಕ್ಕೆ ಕೊನೆ ಎಂದು?

• ಕೆ.ನರಸಿಂಹಮೂರ್ತಿ/ ಶಶಿಕಾಂತ ಎಸ್.ಶೆಂಬೆಳ್ಳಿ

ಬಳ್ಳಾರಿ/ವಿಜಯನಗರ: ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ ಬಂದರೂ, ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ರಚನೆಯಾದರೂ ಜಿಲ್ಲೆಯಲ್ಲಿ ಗಣಿಗಾರಿಕೆಯಿಂದ ಬಾಧಿತರಾದವರ ಜೀವನದಲ್ಲಿ ಗಮನಾರ್ಹ ಬದಲಾವಣೆ ಆಗಿಲ್ಲ.

ಗಣಿಗಾರಿಕೆಯಿಂದ ಅತಿಯಾಗಿ ನಲುಗಿರುವ ಸಂಡೂರಿನ ಅದಿರಿನ ಬೆಟ್ಟಗಳ ತುದಿಯಲ್ಲಿರುವ ಗ್ರಾಮಗಳಿಗೆ ಡಾಂಬರು ರಸ್ತೆಯಾಗಿಲ್ಲ. ಮೂಲಸೌಕರ್ಯಗಳು ಮರೀಚಿಕೆಯಾಗಿವೆ, ಕೃಷಿ ಇಳುವರಿಯೂ ಕುಸಿದಿದೆ.

ಸಂಡೂರು: ಅತಿ ಹೆಚ್ಚು ಹಾನಿ

ಅಕ್ರಮ ಗಣಿಗಾರಿಕೆ ಕುರಿತ ಲೋಕಾಯುಕ್ತ ವರದಿಯು ‘ಗಣಿಗಾರಿಕೆಯಿಂದ ರಾಜ್ಯದಲ್ಲಿ ಅತಿ ಹೆಚ್ಚು ಅರಣ್ಯ ನಾಶದಿಂದ ನಲುಗಿದ ತಾಲ್ಲೂಕು ಸಂಡೂರು’ ಎಂದು ಹೇಳಿದೆ. ಇಲ್ಲಿ 1,700 ಹೆಕ್ಟೇರ್ ಅರಣ್ಯ ನಾಶವಾಗಿದೆ. ಇಡೀ ಜಿಲ್ಲೆಯಲ್ಲಿ ಶೇ 90ಕ್ಕಿಂತ ಹೆಚ್ಚು ಅರಣ್ಯ ಪ್ರದೇಶ ಗಣಿಗಾರಿಕೆಗೆ ಒಳಗಾಗಿದೆ. ಈಗಲೂ 4,684 ಹೆಕ್ಟೇರ್‌ನಲ್ಲಿ ಗಣಿಗಾರಿಕೆ ನಡೆಯುತ್ತಿದೆ.

ಅನೇಕರು ಅಸ್ತಮ, ಉಸಿರಾಟದ ತೊಂದರೆ, ಚರ್ಮ ರೋಗಗಳಿಂದ ಬಳಲುತ್ತಿದ್ದಾರೆ. ಅದಿರು ಸಾಗಣೆಗೆ ಕೆಲವೇ ಕಂಪನಿಗಳು ಕನ್ವೇಯರ್ ಬೆಲ್ಟ್ ಅಳವಡಿಸಿವೆ. ಟಿಪ್ಪರ್, ಅದಿರು ಲಾರಿಗಳ ಅಬ್ಬರ, ಶಬ್ದ ಮಾಲಿನ್ಯ, ಅಪಘಾತ, ಸಾವು ನೋವು ಸಾಮಾನ್ಯ. ಸಂಡೂರಿನ ನಂದಿಹಳ್ಳಿ, ಭುಜಂಗನಗರ, ನಾರಾಯಣಪುರ, ಸುಶೀಲಾ ನಗರ, ಸಿದ್ದಾಪುರದ ಜನ ಪ್ರಾಣ ಕೈಯಲ್ಲಿ ಹಿಡಿದೇ ಓಡಾಡುತ್ತಾರೆ.

ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಅತಿಯಾದ ಗಣಿಗಾರಿಕೆಯಿಂದ ಬಾಧಿತವಾಗಿರುವ ಪ್ರದೇಶಗಳಲ್ಲಿ ಸುಪ್ರೀಂ ಕೋರ್ಟ್ ಆದೇಶದಂತೆ ಪರಿಹಾರ ಮತ್ತು ಪುನರ್ವಸತಿ (ಆರ್ ಅಂಡ್ ಆರ್) ಯೋಜನೆ ಅನುಷ್ಠಾನಕ್ಕಾಗಿ ರಚಿಸಲಾಗಿರುವ ಗಣಿ ಪರಿಸರ ಪುನಶ್ಚೇತನ ನಿಗಮದ ಪ್ರಸ್ತಾವಕ್ಕೆ ಇನ್ನೂ ಕೋರ್ಟ್ ಅನುಮತಿ ನೀಡಿಲ್ಲ. ಯೋಜನೆಗೆ ಜಿಲ್ಲಾಡಳಿತ ಸಲ್ಲಿಸಿದ್ದ ಕ್ರಿಯಾಯೋಜನೆ ಮೂರು ಬಾರಿ ತಿರಸ್ಕೃತಗೊಂಡಿತ್ತು.

ಇದರ ನಡುವೆಯೇ, ‘ಒಂದು ಕ್ರಾಂತಿಕಾರಿ ಹೆಜ್ಜೆ’ ಎಂದು ಪ್ರತಿಪಾದಿಸಿ ಕೇಂದ್ರ ಸರ್ಕಾರವು 2015ರಲ್ಲಿ ದೇಶದಾದ್ಯಂತ ಜಾರಿಗೆ ತಂದ ‘ಪ್ರಧಾನಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯ (PMKKKY) ಅಡಿ ಸ್ಥಾಪನೆಯಾದ ಪ್ರತಿಷ್ಠಾನದ ಮೂಲಕ ಬಾಧಿತರ ಬದುಕಿನಲ್ಲಿ ಕ್ರಾಂತಿಕಾರಿ ಬದಲಾವಣೆಯಾಗಲು ಇನ್ನೂ ಹಲವು ವರ್ಷಗಳು ಬೇಕು ಎಂಬ ಪರಿಸ್ಥಿತಿ ಇದೆ. ವಿಶೇಷ ಎನ್ನಿಸುವಂಥ ಸುಸ್ಥಿರ ಕಾರ್ಯಕ್ರಮಗಳೇ ರೂಪುಗೊಂಡಿಲ್ಲ.

ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನಲ್ಲಿ ₹ 1,401 ಕೋಟಿ ಇದ್ದು, ಜಿಲ್ಲೆಯಾದ್ಯಂತ ನೀಡಲಾಗಿರುವ ಮೂಲಸೌಕರ್ಯಗಳ ಪಟ್ಟಿ ದೊಡ್ಡದಿದೆ. ಆದರೆ ಇದುವರೆಗೆ ₹ 444 ಕೋಟಿಯಷ್ಟೇ ಬಳಕೆಯಾಗಿದ್ದು, ₹ 917 ಕೋಟಿ ಉಳಿದಿದೆ.

ಕುಡಿಯುವ ನೀರು, ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ, ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಿರಿಯರು ಮತ್ತು ಅಂಗವಿಕಲರ ಕಲ್ಯಾಣ, ಕೌಶಲ ಅಭಿವೃದ್ಧಿ, ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿ ಶೇ 60 ಅನುದಾನ ನಿಗದಿಪಡಿಸಲಾಗಿದೆ. ಮೂಲಸೌಕರ್ಯ ಅಭಿವೃದ್ಧಿ, ನೀರಾವರಿ, ಇಂಧನ ಮತ್ತು ಜಲಾನಯನವನ್ನು ಇತರೆ ಆದ್ಯತೆಗಳೆಂದು ಗುರುತಿಸಿ ಉಳಿದ ಅನುದಾನ ಬಳಸಲಾಗುತ್ತಿದೆ. ಒಟ್ಟಾರೆ ಅನುದಾನದಲ್ಲಿ ಶೇ 15 ಆಡಳಿತಾತ್ಮಕ ಉದ್ದೇಶಗಳಿಗೆ ಬಳಸಲಾಗುತ್ತಿದೆ.


ಸಂಡೂರಿನ ಅದಿರಿನ ಬೆಟ್ಟಗಳ ತುದಿಯಲ್ಲಿರುವ ಕಮತೂರಿಗೆ ಹೋಗುವ ಕಚ್ಚಾ ರಸ್ತೆ

‘ಮುಂಜಾಗ್ರತೆ ಮುಖ್ಯ’

‘ಗಣಿಗಳಿಂದ ಸಮುದಾಯಗಳಿಗೆ, ವನ್ಯಜೀವಿಗಳ ಆವಾಸಸ್ಥಾನ, ನೀರಿನ ಸೆಲೆ ಮತ್ತು ಪರಿಸರಕ್ಕೆ ಆಗುವ ಹಾನಿಯನ್ನು ಸರಿಪಡಿಸಲು ಬಹುಮುಖ ಕಾರ್ಯಗಳು ಬೇಕಾಗುತ್ತವೆ. ಇವುಗಳೆಲ್ಲ ಒಂದೆರಡು ವರ್ಷಗಳಲ್ಲಿ ಆಗುವ ವಿಚಾರಗಳಲ್ಲ, ದಶಕಗಳೇ ಬೇಕು. ಹೀಗಾಗಿ, ಗಣಿಗಳನ್ನು ಪ್ರಾರಂಭಿಸುವ ವೇಳೆಯಲ್ಲೇ ಕೆಲ ಮುಂಜಾಗೃತಾ ಕ್ರಮ ಕೈಗೊಳ್ಳಬೇಕು. ಉದಾಹರಣೆಗೆ ಮಣ್ಣಿನ ಮೇಲ್ಪದರವನ್ನು ಸಂರಕ್ಷಿಸಿ, ಅದನ್ನು ಗಣಿಯ ಗುತ್ತಿಗೆ ಮುಗಿದ ನಂತರ ಪುನಃ ಸ್ಥಾಪಿಸಬೇಕು. ಇದರಿಂದ ಗಣಿಗಳು ತೆರವಾದ ನಂತರ ಅಲ್ಲಿ ಸಸ್ಯ ಸಂಪತ್ತು ಪುನರ್ ಸ್ಥಾಪನೆಗೊಳ್ಳಲು ಸಹಾಯವಾಗುತ್ತದೆ ಎನ್ನುತ್ತಾರೆ ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ.



‘ಸಂಡೂರು, ಕೊಪ್ಪಳ, ಕಂಪ್ಲಿ, ಹೊಸಪೇಟೆ, ರಾಮನಗರ, ತುಮಕೂರು ಸುತ್ತಮುತ್ತಲ ಪ್ರದೇಶಗಳಲ್ಲಿ ಆಗುತ್ತಿರುವ ಚಿರತೆ ಸಂಘರ್ಷಕ್ಕೆ ಗಣಿಗಾರಿಕೆ ಕೂಡ ಒಂದು ಕಾರಣ. ಗಣಿಗಾರಿಕೆಗೆ ಪೂರ್ವಭಾವಿಯಾಗಿ ಸಮುದಾಯಗಳಲ್ಲಿ ಸಂಘರ್ಷವನ್ನು ತಡೆಗಟ್ಟುವ ವಿಧಾನಗಳು ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಆರಂಭಿಸಲು ನಿಧಿಯನ್ನು ಬಳಸಬೇಕು. ಹಿಂದಿನ ಗಣಿ ಪ್ರದೇಶಗಳಲ್ಲಿ ನೀಲಗಿರಿ, ಅಕೇಶಿಯಾ ಮರಗಳನ್ನು ಬೆಳೆಸುವುದನ್ನು ನಿಲ್ಲಿಸಬೇಕು. ಸ್ಥಳೀಯ ವೃಕ್ಷ ಸಂಪತ್ತನ್ನು ಬೆಳೆಸಬೇಕು.

‘ಹಿಂದಿನ ದಶಕಗಳಲ್ಲಿ, ಅದರಲ್ಲೂ ವಿಶೇಷವಾಗಿ ಪಶ್ಚಿಮ ಘಟ್ಟಗಳಲ್ಲಿ ಆಗಿರುವ ಹಾನಿಯನ್ನು ಸರಿಪಡಿಸಲು ಸರ್ಕಾರ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯನ್ನು ಬಳಸಲು ಮುಂದಾಗಬೇಕು. ಕುದುರೆಮುಖ ಮತ್ತು ಕೆಮ್ಮಣ್ಣುಗುಂಡಿಗಳಲ್ಲಿ ಗಣಿಗಾರಿಕೆ ನಿಂತು ಹದಿನೈದು ವರ್ಷಗಳಾದರೂ ಅಲ್ಲಿನ ಸಸ್ಯ ಮತ್ತು ವನ್ಯಜೀವಿ ಸಂಪತ್ತು ಇನ್ನೂ ಚೇತರಿಸಿಕೊಂಡಿಲ್ಲ’ ಎಂದು ಅವರು ಹೇಳಿದ್ದಾರೆ

ನಿರೂಪಣೆ: ಓಂಕಾರ ಮೂರ್ತಿ, ಮೈಸೂರು

> **ಅಕ್ರಮ ಗಣಿಗಾರಿಕೆ ಸಂಪೂರ್ಣವಾಗಿ ನಿಂತಿದೆ. ಆದರೆ, ಪರಿಸರ ಪುನಶ್ಚೇತನ ಕಾರ್ಯ ಕೈಗೊಂಡಿಲ್ಲ. ಸರ್ಕಾರಕ್ಕೆ ಇಚ್ಛಾಶಕ್ತಿ ಕೊರತೆ ಇದೆ.**
> **ಎಸ್.ಆರ್. ಹಿರೇಮಠ,** ಮುಖ್ಯಸ್ಥ, ಜನಸಂಗ್ರಾಮ ಪರಿಷತ್ತು

> **ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆ ನಡೆಯುತ್ತಿರುವ ಪ್ರದೇಶ ಬಿಟ್ಟು ಬೇರೆಡೆ ಅರಣ್ಯೀಕರಣ ನಡೆಯುತ್ತಿದೆ. ಪುನಶ್ಚೇತನಕ್ಕೆ ಯೋಜನೆ ರೂಪಿಸಲಾಗುತ್ತಿದೆ.**
> **ಸಿದ್ದರಾಮಪ್ಪ ಚಳಕಾಪುರೆ,** ಡಿಸಿಎಫ್, ಬಳ್ಳಾರಿ–ವಿಜಯನಗರ

‘ಈ ಕ್ಷೇತ್ರಗಳಿಗೆ ಸಂಬಂಧಪಟ್ಟ ಇಲಾಖೆಗಳ ಸಹಜ ಅನುದಾನ ಬಳಕೆಯಾಗುತ್ತಿರುವ ರೀತಿಯಲ್ಲೇ ಜಿಲ್ಲಾ ಖನಿಜ ನಿಧಿಯ ಅನುದಾನವನ್ನು ಹೆಚ್ಚುವರಿ ಅನುದಾನದಂತೆ ಬಳಸಲಾಗುತ್ತಿದೆಯೇ ಹೊರತು, ಅದನ್ನೊಂದು ವಿಶೇಷ ಅನುದಾನವೆಂಬಂತೆ ಬಳಸುತ್ತಿಲ್ಲ’ ಎಂಬ ಸಂಕಟ ಬಾಧಿತರಲ್ಲಿದೆ.

ಪಟ್ಟಿ ದೊಡ್ಡದು: ನಿಧಿಯಡಿ ಯುವಜನ–ಮಹಿಳೆಯರಿಗೆ ವೃತ್ತಿ ತರಬೇತಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವವರಿಗೆ ತರಬೇತಿ ನೀಡಲಾಗುತ್ತಿದೆ. ಹಾಲು ಉತ್ಪಾದಕರ 101 ಮಹಿಳಾ ಸಂಘಗಳ ಸ್ಥಾಪನೆ ಪೂರ್ಣವಾಗಿಲ್ಲ. ಪರಿಸರ ಸಂರಕ್ಷಣೆಗಾಗಿ ನೆಡುತೋಪುಗಳಿಗಾಗಿ ಲಕ್ಷಾಂತರ ಸಸಿಗಳನ್ನು ನೆಡಲಾಗಿದೆ. ಸರ್ಕಾರಿ ಪ್ರೌಢಶಾಲೆ, ಪದವಿಪೂರ್ವ ಕಾಲೇಜುಗಳಲ್ಲಿ ಅತಿಥಿ ಶಿಕ್ಷಕರ ನೇಮಕ, ಅಂಗನವಾಡಿಗಳಿಗೆ ಮೂಲಸೌಕರ್ಯ, ಆಸ್ಪತ್ರೆಗಳಿಗೆ ವೈದ್ಯ, ಸಿಬ್ಬಂದಿ ನೇಮಕ, ಐಸಿಯು, ಚಿಕಿತ್ಸಾ ಪರಿಕರ, ಸಂಚಾರಿ ಆರೋಗ್ಯ ಘಟಕ, ಆಂಬುಲೆನ್ಸ್‌ಗಳನ್ನು ನೀಡಲಾಗಿದೆ. ಶುದ್ಧ ನೀರಿನ ಘಟಕ, ಗ್ರಂಥಾಲಯ, ಕಂಪ್ಯೂಟರ್, ಕಾಂಕ್ರಿಟ್ ರಸ್ತೆ ಸೌಕರ್ಯಗಳು ದೊರಕಿವೆ. ಕೋವಿಡ್ ನಿಯಂತ್ರಣಕ್ಕೂ ಜಿಲ್ಲಾ ಖನಿಜ ಪ್ರತಿಷ್ಠಾನದ ನಿಧಿಯನ್ನು ಬಳಸಲಾಗಿದೆ.

ಸಂಘಕ್ಕೆ ಪ್ರಶಸ್ತಿ


ಶೇಂಗಾ ಚಿಕ್ಕಿ ತಯಾರಿಕೆ ತರಬೇತಿ ಪಡೆದು ಸ್ವಾವಲಂಬನೆ ಸಾಧಿಸಿದ ಕೂಡ್ಲಿಗಿಯ ಊರಮ್ಮದೇವಿ ಮಾಜಿ ದೇವದಾಸಿಯರ ಸಂಘಕ್ಕೆ ರಾಜ್ಯೋತ್ಸವ ಪ್ರಶಸ್ತಿ ಬಂದಿದ್ದು ವಿಶೇಷ.

ಬಳ್ಳಾರಿ ಬಿಟ್ಟರೆ ಕಲಬುರ್ಗಿ, ಚಿತ್ರದುರ್ಗ, ಬಾಗಲಕೋಟೆ, ಕೊಪ್ಪಳ, ರಾಯಚೂರು, ರಾಮನಗರ ಜಿಲ್ಲೆಗಳಲ್ಲಿ ಹೆಚ್ಚು ನಿಧಿ ಸಂಗ್ರಹವಾಗಿದೆ. ಈ ಜಿಲ್ಲೆಗಳಲ್ಲಿ ₹ 678 ಕೋಟಿ ಸಂಗ್ರಹವಾಗಿದೆ. ಎಲ್ಲೆಡೆ ಮೂಲಸೌಕರ್ಯ ಅಭಿವೃದ್ಧಿಗೇ ಹೆಚ್ಚು ಒತ್ತು ನೀಡಲಾಗಿದೆ.

ಪರಿಣಾಮ ಏನು?: ‘ಖನಿಜ ಪ್ರತಿಷ್ಠಾನದ ನಿಧಿಯ ಬಳಕೆಯಿಂದ ಜನರ ಬದುಕಿನಲ್ಲಿ ಆದ ಪರಿಣಾಮಗಳೇನು’ ಎಂದು ಅಧಿಕಾರಿಗಳನ್ನು ಕೇಳಿದರೆ, ‘ಮಾರ್ಗಸೂಚಿ ಅನ್ವಯ ನಿಧಿ ಬಳಕೆ ಮಾಡುತ್ತಿದ್ದೇವೆ. ಕಾಮಗಾರಿಗಳು ಜಾರಿಯಲ್ಲಿವೆ’ ಎಂಬ ಉತ್ತರ ದೊರಕುತ್ತದೆ. ನಿಧಿ ಬಳಕೆ ಮತ್ತು ಪರಿಣಾಮ, ಬದಲಾವಣೆ ಕುರಿತ ಅಧ್ಯಯನ ಇದುವರೆಗೆ ಯಾವ ಜಿಲ್ಲೆಯಲ್ಲೂ ನಡೆದಿಲ್ಲ.

ಖನಿಜ ನಿಧಿ ಬಳಕೆಯೇ ಆಗಿಲ್ಲ

ಚಿಕ್ಕಮಗಳೂರು: ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ, ಕೆಮ್ಮಣ್ಣುಗುಂಡಿ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಿದ್ದು ಪರಿಸರದ ಮೇಲೆ ದುಷ್ಪರಿಣಾಮ ಬೀರಿದೆ. ಈಗ ಎರಡೂ ಕಡೆ ಗಣಿಗಾರಿಕೆ ಬಂದ್ ಆಗಿದೆ.



ಕುದುರೆಮುಖ ಪ್ರದೇಶದಲ್ಲಿ ಗಣಿಗಾರಿಕೆಯಿಂದ ವನಸಂಪತ್ತು, ವನ್ಯಜೀವಿ ಸಂಕುಲ, ಜಲಮೂಲಗಳು ಅಪಾಯದ ಸುಳಿಗೆ ಸಿಕ್ಕಿದ್ದವು. ಇದು ಭಾರಿ ಮಳೆಯಾಗುವ ಪ್ರದೇಶವಾಗಿದ್ದು, ಸಡಿಲಾದ ಮಣ್ಣು ಮಳೆಗೆ ಕೊಚ್ಚಿ, ಭದ್ರಾ ನದಿ ಸೇರಿತು. ಖನಿಜಯುಕ್ತ ಮಣ್ಣುಮಿಶ್ರಿತ ನೀರು ಹರಿದು ಭದ್ರಾ ಜಲಾಶಯದಲ್ಲಿ ಹೂಳು ತುಂಬಿಕೊಂಡಿದೆ. ಇದರಿಂದ ಅಣೆಕಟ್ಟೆಯ ಜಲಸಂಗ್ರಹ ಸಾಮರ್ಥ್ಯ ಕಡಿಮೆಯಾಗಿದೆ.

ಕೆಮ್ಮಣ್ಣುಗುಂಡಿ ಭಾಗದಲ್ಲಿ ಗಣಿಗಾರಿಕೆಯಿಂದ ಭದ್ರಾ ನದಿ ಜಲಮೂಲದ ಹಲವು ಹಳ್ಳಗಳು ನಾಶವಾಗಿವೆ. ಭದ್ರಾ, ತುಂಗಾ ನದಿಗಳ ಪಾತ್ರಕ್ಕೂ ಹಾನಿಯಾಗಿದೆ. ಜಂಬದ ಹಳ್ಳದಲ್ಲಿ ಬೇಸಿಗೆಯಲ್ಲಿ ನೀರು ಹರಿಯಲ್ಲ. ಅಜ್ಜಂಪುರ, ಕಡೂರು ಭಾಗದಲ್ಲಿ ನೀರಿನ ಬವಣೆ ಎದುರಾಗಿದೆ.

ಗಣಿಗಾರಿಕೆ ನಡೆಸಿದ ಈ ಎರಡೂ ಪ್ರದೇಶಗಳ ಪುನಶ್ಚೇತನಕ್ಕೆ ಯಾವುದೇ ಯೋಜನೆ ರೂಪಿಸಿಲ್ಲ. ಈ ಪ್ರದೇಶದಲ್ಲಿ ಒಂದೂ ಗಿಡ ನೆಟ್ಟಿಲ್ಲ. ಜಿಲ್ಲೆಯಲ್ಲಿ ಖನಿಜ ಪ್ರತಿಷ್ಠಾನ ನಿಧಿಯನ್ನು ಬಳಕೆ ಮಾಡಿಯೇ ಇಲ್ಲ.

ಡಿ.ವಿ.ಗಿರೀಶ್, ಟ್ರಸ್ಟಿ, ಭದ್ರಾ ವೈಲ್ಡ್‌ಲೈಫ್ ಕನ್ಸರ್ವೇಷನ್ ಟ್ರಸ್ಟ್, ಚಿಕ್ಕಮಗಳೂರು

ನಿರೂಪಣೆ: ಧನ್ಯಪ್ರಸಾದ್ ಬಿ.ಜೆ.

ಖನಿಜ ನಿಧಿ ಹೇರಳ, ಕೆಲಸ ವಿರಳ

ಒಂದನೇ ಪುಟದಿಂದ

18 ಇಲಾಖೆಗಳಿಗೆ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಕೆ ಹಾಗೂ ಕಾಮಗಾರಿ ಪೂರ್ಣಗೊಳಿಸುವ ಜವಾಬ್ದಾರಿ ನೀಡಲಾಗುತ್ತದೆ. ಇಲಾಖೆಗಳ ನಡುವಿನ ಸಮನ್ವಯದ ಕೊರತೆಯಿಂದ ಈ ನಿಧಿ ನಿಗದಿತ ಅವಧಿಯಲ್ಲಿ ಬಳಕೆಯಾಗುತ್ತಿಲ್ಲ ಎನ್ನುತ್ತಾರೆ ಅಧಿಕಾರಿಗಳು.ಇಲಾಖೆಗೆ ಬಿಡುಗಡೆಯಾದ ಅನುದಾನದ ಜೊತೆಗೆ ಖನಿಜ ನಿಧಿ ಬಳಕೆಯ ಕಾಮಗಾರಿಗೂ ಕ್ರಿಯಾ ಯೋಜನೆ ರೂಪಿಸಬೇಕು. ಅದಕ್ಕೆ ಸಮಿತಿಯಿಂದ ಅನುಮತಿ ಪಡೆದು, ಟೆಂಡರ್ ಕರೆಯಬೇಕು. ಕಾಮಗಾರಿಯ ಗುಣಮಟ್ಟದೊಂದಿಗೆ ಪೂರ್ಣಗೊಳಿಸುವ ಹೊಣೆ ಆಯಾ ಇಲಾಖೆಯ ಅಧಿಕಾರಿಗಳದ್ದು.

ಕೋವಿಡ್ ಪರಿಹಾರಕ್ಕೆ ಬಳಕೆ: ಆರೋಗ್ಯ ಕ್ಷೇತ್ರಕ್ಕೆ ನಿಧಿ ಬಳಕೆ ಮಾಡಿಕೊಳ್ಳಬಹುದಾಗಿದ್ದರೂ ಇಲ್ಲಿಯವರೆಗೆ ಆದ್ಯತೆ ಸಿಕ್ಕಿರಲಿಲ್ಲ. ಕೋವಿಡ್–19 ನಿಂದಾಗಿ ವರ್ಷವೊಂದರಲ್ಲೇ ಬಾಧಿತರ ಚಿಕಿತ್ಸೆ, ವೈದ್ಯಕೀಯ ಸಾಮಗ್ರಿಗಳ ಖರೀದಿಗಾಗಿ ಜನವರಿ ಅಂತ್ಯಕ್ಕೆ ₹118 ಕೋಟಿ ಖರ್ಚು ಮಾಡಲಾಗಿದೆ. ಮಾರ್ಚ್ ಮಧ್ಯದವರೆಗೆ ಖರ್ಚಿನ ಪ್ರಮಾಣ ₹200 ಕೋಟಿ ಸಮೀಪಿಸಿದೆ ಎನ್ನುತ್ತಾರೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು.

ನಿಧಿ ಬಳಕೆ ಹೇಗೆ?: ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಿರ್ವಹಣಾ ಸಮಿತಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಆಡಳಿತ ಸಮಿತಿ ಇರುತ್ತದೆ. ಸಮಿತಿಯಲ್ಲಿ ಶಾಸಕರು, ಸಂಸದರು ಸೂಚಿಸಿದ ಕಾಮಗಾರಿಗಳ ಪ್ರಕಾರ ಕ್ರಿಯಾಯೋಜನೆ ರೂಪಿಸಲಾಗುತ್ತದೆ. ಆರು ತಿಂಗಳಿಗೊಮ್ಮೆ ನಡೆಯುವ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆ ಸಮಿತಿಯಲ್ಲಿ ಇದಕ್ಕೆ ಅನುಮೋದನೆ ನೀಡಲಾಗುತ್ತದೆ.

ವೈಯಕ್ತಿಕ ಫಲಾನುಭವಿಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿರುವುದರಿಂದ ಸಮಗ್ರ ಅಭಿವೃದ್ಧಿ ದೃಷ್ಟಿಕೋನ ಕಾಣೆಯಾಗಿದೆ. ಇದುವರೆಗೆ 800 ಕೋಟಿ ವೆಚ್ಚವಾಗಿದ್ದರೂ, ಗಣಿಗಾರಿಕೆಯ ಪ್ರದೇಶಗಳಲ್ಲಿ ಅಭಿವೃದ್ಧಿಯ ಕುರುಹುಗಳು ಎದ್ದುಕಾಣುತ್ತಿಲ್ಲ.

ಅನುದಾನ ಬಳಕೆ ತೃಪ್ತಿದಾಯಕವಾಗಿಲ್ಲ

ಒಂದನೇ ಪುಟದಿಂದ

ಸುಪ್ರೀಂ ಕೋರ್ಟ್ ನಿರ್ದೇಶನದಂತೆ ರಾಜ್ಯದ ಕಬ್ಬಿಣದ ಅದಿರು ಗಣಿ ಕಂಪನಿಗಳಿಂದ ಸಂಗ್ರಹಿಸಿರುವ ಅಂದಾಜು ₹18 ಸಾವಿರ ಕೋಟಿ ಬಳಕೆಗೆ ನ್ಯಾಯಾಲಯದಿಂದ ಅನುಮತಿ ಪಡೆ ಯಲು ಪ್ರಯತ್ನ ಆರಂಭಿಸಲಾಗಿದೆ. ಆ ನಿಟ್ಟಿನಲ್ಲಿ ಮುಖ್ಯ ನ್ಯಾಯಮೂರ್ತಿಗಳಿಗೆ ಮನವಿ ಮಾಡಲು ರಾಜ್ಯದ ಹಿರಿಯ ವಕೀಲರ ತಂಡ ಶೀಘ್ರ ದೆಹಲಿಗೆ ತೆರಳಲಿದೆ ಎಂದು ಮಾಹಿತಿ ನೀಡಿದರು.

ಆ ಹಣವನ್ನು ರಾಜ್ಯದಲ್ಲಿ ಬಳ್ಳಾರಿ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಗಣಿ ಬಾಧಿತ ಪ್ರದೇಶಗಳ ಪುನರ್‌ನಿರ್ಮಾಣಕ್ಕೆ ಹಾಗೂ ಬಾಧಿತ ಜನರ ಪುನರ್ವಸತಿಗೆ ಬಳಕೆ ಮಾಡಿಕೊಳ್ಳಲಾಗುವುದು. ನ್ಯಾಯಾಲಯದ ಕಣ್ಗಾವಲಿನಲ್ಲಿಯೇ ಆ ಹಣ ಬಳಕೆ ಮಾಡಲಾಗುತ್ತದೆ ಎಂದರು.

ರಾಜ್ಯದ ಪಾಲಿಗೆ ದೊರೆಯಲಿರುವ ಈ ಹಣವನ್ನು ಪುನರ್‌ನಿರ್ಮಾಣ ಕಾರ್ಯಕ್ಕೆ ಖರ್ಚು ಮಾಡಲು ಕನಿಷ್ಠ ನಾಲ್ಕರಿಂದ ಐದು ವರ್ಷ ಬೇಕಾಗುತ್ತದೆ. ಆ ಅವಧಿಯಲ್ಲಿ ಸಿಗಲಿರುವ ಬಡ್ಡಿ ಹಾಗೂ ಮತ್ತೆ ಸಂಗ್ರಹವಾಗುವ ತೆರಿಗೆಯನ್ನು ಆಧರಿಸಿ ₹25 ಸಾವಿರ ಕೋಟಿ ಮೊತ್ತದ ಕಾಮಗಾರಿಗಳಿಗೆ ಕ್ರಿಯಾ ಯೋಜನೆ ರೂಪಿಸಲಾಗುವುದು. ಆ ಹಣದಲ್ಲಿ ಯಾವ ಯಾವ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕು ಎಂಬುದರ ಬಗ್ಗೆ ನ್ಯಾಯಾಲಯವೇ ನಿರ್ದೇಶನ ನೀಡಲಿದೆ ಎಂದರು.

ಪರಿಸರ ರಕ್ಷಣೆಗೆ ದೊರೆಯದ ಆದ್ಯತೆ

ಹುಬ್ಬಳ್ಳಿ: ಗಣಿಗಾರಿಕೆ ನಡೆಯುವ ಪ್ರದೇಶದ ಹಲವು ನದಿಗಳ ಜಲಮೂಲಗಳಾಗಿದ್ದ ಹಳ್ಳಗಳು ಮುಚ್ಚಿ ಹೋಗಿವೆ. ಹಚ್ಚ ಹಸಿರಿನಿಂದ ಕಂಗೊಳಿಸುತ್ತಿದ್ದ ಗುಡ್ಡಗಳು ಬೋಳಾಗಿವೆ. ಪರಿಸರ ರಕ್ಷಣೆಗೆ ಸಿಗಬೇಕಾದ ಆದ್ಯತೆ ಸಿಕ್ಕಿಲ್ಲ.

ಮನುಷ್ಯನ ಖನಿಜ ದಾಹಕ್ಕೆ ಸಾವಿರಾರು ಎಕರೆ ಪ್ರದೇಶಗಳಲ್ಲಿನ ಅರಣ್ಯ ನಾಶವಾಗಿದೆ. ವನ್ಯಜೀವಿಗಳು ಆಹಾರಕ್ಕಾಗಿ ಪರದಾಡುವ ಸ್ಥಿತಿ ಇದೆ. ಪರಿಸರ ರಕ್ಷಣೆಗೆ ಬದಲಾಗಿ ಕೌಶಲ ಅಭಿವೃದ್ಧಿ ತರಬೇತಿ, ತ್ರಿಚಕ್ರ ವಾಹನ, ಕೃತಕ ಕಾಲು ವಿತರಣೆ, ರಸ್ತೆ ದುರಸ್ತಿ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುತ್ತಿದೆ.

ಅರಣ್ಯ ಪ್ರದೇಶ ಪುನರುಜ್ಜೀವನ, ಜಲಮೂಲಗಳ ರಕ್ಷಣೆಯ ಕಾರ್ಯದತ್ತ ಜನಪ್ರತಿನಿಧಿಗಳು, ಅಧಿಕಾರಿಗಳು ಗಮನ ಹರಿಸುತ್ತಿಲ್ಲ.

ಬ್ಯಾಂಕ್‌ಗಳಲ್ಲೇ ಉಳಿದಿದೆ ₹ 1,475 ಕೋಟಿ!

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯದಲ್ಲಿ 2015ರಿಂದ 2021ರ ಫೆಬ್ರುವರಿ ಅಂತ್ಯದವರೆಗೆ ₹ 2,399 ಕೋಟಿಯಷ್ಟು ಜಿಲ್ಲಾ ಖನಿಜ ನಿಧಿ ಸಂಗ್ರಹವಾಗಿದೆ. ಈ ಪೈಕಿ ₹ 1,475.50 ಕೋಟಿ ಬ್ಯಾಂಕ್ ಖಾತೆಗಳಲ್ಲೇ ಉಳಿದಿದೆ!

ಗಣಿ ಮತ್ತು ಖನಿಜ ಕಾಯ್ದೆಗೆ 2015ರಲ್ಲಿ ತಂದಿರುವ ತಿದ್ದುಪಡಿಯ ಪ್ರಕಾರ, ಎಲ್ಲ ಜಿಲ್ಲೆಗಳಲ್ಲೂ ಪ್ರತ್ಯೇಕವಾದ ಜಿಲ್ಲಾ ಖನಿಜ ನಿಧಿ ಪ್ರತಿಷ್ಠಾನಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಗಣಿ ಗುತ್ತಿಗೆದಾರರದಿಂದ ನಿಯಮಾನುಸಾರ ವಂತಿಗೆ ಸಂಗ್ರಹಿಸುತ್ತಿದ್ದು, ಬಳಕೆಯ ಪ್ರಮಾಣ ಮಾತ್ರ ಶೇಕಡ 50ಕ್ಕಿಂತಲೂ ಕಡಿಮೆ ಇದೆ.

ಒಟ್ಟು ಸಂಗ್ರಹವಾದ ಮೊತ್ತದಲ್ಲಿ ಶೇ 10ರಷ್ಟನ್ನು (₹ 239.90 ಕೋಟಿ) ಭವಿಷ್ಯದ ಯೋಜನೆಗಳಿಗಾಗಿ ದತ್ತಿನಿಧಿ ರೂಪದಲ್ಲಿ ತೆಗೆದಿರಿಸಲಾಗಿದೆ. ಶೇ 5ರಷ್ಟನ್ನು (₹ 119.95 ಕೋಟಿ) ನೇರವಾಗಿ ಅಭಿವೃದ್ಧಿ ಕಾಮಗಾರಿಗಳು ಮತ್ತು ಗಣಿಗಾರಿಕೆಯಿಂದ ಬಾಧಿತರಾದ ಜನರಿಗೆ ನೆರವು ಒದಗಿಸುವುದಕ್ಕೆ ₹ 2,039 ಕೋಟಿ ಲಭ್ಯವಿತ್ತು.

ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಂಕಿಅಂಶಗಳ ಪ್ರಕಾರ, ಭವಿಷ್ಯದಲ್ಲಿನ ಸಂಗ್ರಹವನ್ನೂ ಗುರಿಯಾಗಿಟ್ಟುಕೊಂಡು ರಾಜ್ಯದ 30 ಜಿಲ್ಲಾ ಖನಿಜ ನಿಧಿ ಪ್ರತಿಷ್ಠಾನಗಳು ₹ 3,635.78 ಕೋಟಿ ವೆಚ್ಚದ ಪ್ರಸ್ತಾವಗಳಿಗೆ ಅನುಮೋದನೆ ನೀಡಿವೆ. ಆದರೆ, ಕೋವಿಡ್ ಅವಧಿಯಲ್ಲಿನ ವೆಚ್ಚವೂ ಸೇರಿದಂತೆ ₹ 827.62 ಕೋಟಿ ಮಾತ್ರ ಬಳಕೆಯಾಗಿದೆ.

ಚುರುಕಾಗುತ್ತಿರುವ ಪ್ರಕ್ರಿಯೆ: 2015ರಿಂದಲೇ ಹೊಸ ಕಾಯ್ದೆ ಜಾರಿಗೆ ಬಂದರೂ, ಜಿಲ್ಲಾ ಖನಿಜ ನಿಧಿ ಸ್ಪಷ್ಟವಾದ ರೂಪ ಪಡೆದಿದ್ದು 2017–18ರ ವೇಳೆಗೆ. ಆ ಬಳಿಕ ಪ್ರಸ್ತಾವಗಳನ್ನು ಸಿದ್ಧಪಡಿಸುವುದು, ನಿಧಿ ಸಂಗ್ರಹಕ್ಕೆ ಎರಡರಿಂದ ಮೂರು ವರ್ಷ ವ್ಯಯವಾಗಿದೆ. ಒಂದು ವರ್ಷದಿಂದ ಕಾಮಗಾರಿಗಳ ಅನುಷ್ಠಾನ ಆರಂಭವಾಗಿದೆ.

ಎಲ್ಲ ಜಿಲ್ಲೆಗಳಲ್ಲೂ ಆಯಾ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಖನಿಜ ನಿಧಿ ಪ್ರತಿಷ್ಠಾನಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಜಿಲ್ಲೆಯ ಎಲ್ಲ ವಿಧಾನಸಭಾ ಕ್ಷೇತ್ರಗಳ ಸದಸ್ಯರು ಪ್ರತಿಷ್ಠಾನದ ಭಾಗವಾಗಿದ್ದು, ವಿಧಾನ ಪರಿಷತ್ ಸದಸ್ಯರಿಗೆ ಅವರು ವಾಸಿಸುವ ತಾಲ್ಲೂಕಿಗೆ ಸೀಮಿತವಾಗಿ ಸದಸ್ಯತ್ವ ನೀಡಲಾಗಿದೆ. ಪ್ರತಿಷ್ಠಾನವೇ ಹಣ ಬಳಕೆಯ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಹೊಂದಿದೆ.

‘ಶಾಸಕರಿಂದ ಪ್ರಸ್ತಾವಗಳನ್ನು ಸ್ವೀಕರಿಸಿ, ಪ್ರತಿಷ್ಠಾನದಲ್ಲಿ ಅನುಮೋದನೆ ಪಡೆದ ಬಳಿಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ಶಾಸಕರು ಪದೇ ಪದೇ ಪ್ರಸ್ತಾವಗಳನ್ನು ಬದಲಾವಣೆ ಮಾಡುವುದು ಕೂಡ ಕೆಲಸ ವಿಳಂಬವಾಗಲು ಕಾರಣ. ರಾಜಕೀಯ ಕಾರಣಗಳಿಂದಾಗಿಯೂ ಕೆಲವು ಜಿಲ್ಲೆಗಳಲ್ಲಿ ಜಿಲ್ಲಾ ಖನಿಜ ನಿಧಿ ಬಳಕೆ ನಿಧಾನಗತಿಯಲ್ಲಿ ಸಾಗಿದೆ’ ಎನ್ನುತ್ತವೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮೂಲಗಳು.

ಹಣಸಂಗ್ರಹ– ವಿನಿಯೋಗ ಕಡಿಮೆ:

ಬಳ್ಳಾರಿ ಜಿಲ್ಲೆಯಲ್ಲಿ ಅತ್ಯಧಿಕ ₹1,401 ಕೋಟಿ ಖನಿಜ ನಿಧಿ ಸಂಗ್ರಹವಾಗಿದ್ದು, ₹ 433.58 ಕೋಟಿ ಬಳಕೆಯಾಗಿದೆ. ಕಲಬುರ್ಗಿ ಜಿಲ್ಲೆಯಲ್ಲಿ ₹ 337.85 ಕೋಟಿಯಲ್ಲಿ ₹ 122.55 ಕೋಟಿ ಬಳಕೆಯಾಗಿದೆ. ಮಂಡ್ಯ ಜಿಲ್ಲೆಯಲ್ಲಿ ₹ 4.11 ಕೋಟಿ ಸಂಗ್ರಹವಾಗಿದ್ದರೂ, ನಯಾಪೈಸೆಯೂ ಬಳಕೆಯಾಗಿಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ₹ 23.22 ಕೋಟಿ ಸಂಗ್ರಹವಾಗಿದ್ದು, ₹ 17.10 ಲಕ್ಷ ಮಾತ್ರ ವಿನಿಯೋಗವಾಗಿದೆ.


‘ಒಂದು ವರ್ಷದಿಂದ ಜಿಲ್ಲಾ ಖನಿಜ ನಿಧಿಯಲ್ಲಿನ ಹಣ ಬಳಕೆಯ ವೇಗ ಹೆಚ್ಚಿದೆ. ಈಗ ಲಭ್ಯವಿರುವ ಹಣಕ್ಕಿಂತಲೂ ಹೆಚ್ಚಿನ ಮೊತ್ತದ ಪ್ರಸ್ತಾವಗಳಿಗೆ ಅನುಮೋದನೆ ನೀಡಲಾಗಿದೆ. ಮುಂದಿನ ಎರಡು ವರ್ಷಗಳ ಒಳಗಾಗಿ ಪೂರ್ಣ ಮೊತ್ತದ ಖನಿಜ ನಿಧಿ ಬಳಕೆಯಾಗಲಿದೆ’ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕ ಡಿ.ಎಸ್. ರಮೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

₹ 16,802 ಕೋಟಿ ಬಳಕೆಗೆ ಅನುಮತಿ ಕೋರಿಕೆ

ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಅತಿಯಾದ ಗಣಿಗಾರಿಕೆಯಿಂದ ಬಾಧಿತವಾಗಿರುವ ಪ್ರದೇಶಗಳಲ್ಲಿ ಸುಪ್ರೀಂ ಕೋರ್ಟ್ ಆದೇಶದಂತೆ ಪರಿಹಾರ ಮತ್ತು ಪುನರ್ವಸತಿ (ಆರ್ ಅಂಡ್ ಆರ್) ಯೋಜನೆ ಅನುಷ್ಠಾನಕ್ಕೆ ಸಿದ್ಧತೆ ನಡೆದಿದೆ. ಇದಕ್ಕಾಗಿ ಗಣಿ ಪರಿಸರ ಪುನಶ್ಚೇತನ ನಿಗಮವನ್ನೂ ಅಸ್ತಿತ್ವಕ್ಕೆ ತರಲಾಗಿದೆ.

‘ಸಿ’ ದರ್ಜೆ ಗಣಿಗಳಲ್ಲಿ ಉಳಿದಿದ್ದ ಅದಿರಿನ ಮಾರಾಟ, ಈ ಗಣಿಗಳ ಹರಾಜಿನಲ್ಲಿ ಬಂದ ಮೊತ್ತದಲ್ಲಿ ವಂತಿಗೆ, ‘ಎ’ ಮತ್ತು ‘ಬಿ’ ದರ್ಜೆ ಗಣಿಗಳ ಅದಿರು ಮಾರಾಟದ ಮೊತ್ತದಲ್ಲಿನ ವಂತಿಗೆ, ದಂಡದ ಮೊತ್ತ ಎಲ್ಲವನ್ನೂ ಪರಿಹಾರ ಮತ್ತು ಪುನರ್ವಸತಿ ಯೋಜನೆಗೆ ಬಳಕೆ ಮಾಡಲಾಗುತ್ತದೆ. ಸುಪ್ರೀಂ ಕೋರ್ಟ್ ಮೇಲುಸ್ತುವಾರಿ ಸಮಿತಿಯ ನಿಗಾದಲ್ಲಿ ಅನುಷ್ಠಾನಗೊಳ್ಳಲಿರುವ ಈ ಯೋಜನೆಗೆ ₹ 16,802 ಕೋಟಿ ಸಂಗ್ರಹವಾಗಿದೆ. ಈ ಪೈಕಿ ₹ 6,528 ಕೋಟಿ ಬಡ್ಡಿಯಿಂದಲೇ ಬಂದಿದೆ. ಮೂರೂ ಜಿಲ್ಲೆಗಳಲ್ಲಿ ಒಟ್ಟು ₹ 24,996.71 ಕೋಟಿ ಮೊತ್ತದ ಗಣಿ ಪರಿಸರ ಪುನಶ್ಚೇತನ ಯೋಜನೆಯ ಪ್ರಸ್ತಾವ ಮತ್ತು ಮೊದಲ ಹಂತದಲ್ಲಿ ₹ 16,802 ಕೋಟಿ ಬಳಕೆಗೆ ಅನುಮತಿ ಕೋರಿ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 28-3-1996

• **ದಳ ಅಭ್ಯರ್ಥಿ ಆಯ್ಕೆ ಮತ್ತಷ್ಟು ಜಟಿಲ**

ಬೆಂಗಳೂರು, ಮಾರ್ಚ್ 27– ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಯಾಗಿ ಇಂದು ಇಲ್ಲಿ ಎರಡು ಸಾರಿ ಸಭೆ ಸೇರಿದ್ದ ರಾಜ್ಯ ಜನತಾ ದಳದ ಸಂಸದೀಯ ಮಂಡಳಿಯು ಸಂಭವನೀಯ ಅಭ್ಯರ್ಥಿಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಿ ದರೂ, ಯಾವುದೇ ಒಂದು ಕ್ಷೇತ್ರಕ್ಕೆ ಅಭ್ಯರ್ಥಿಯನ್ನು ಆಯ್ಕೆ ಮಾಡಲು ವಿಫಲವಾಯಿತು.

ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಆಗದಿರುವುದು ಹಾಗೂ ಪಕ್ಷದ ಕೆಲವು ಜಿಲ್ಲಾ ಸಮಿತಿಗಳು ಇನ್ನೂ ಅಭ್ಯರ್ಥಿಗಳ ಯಾದಿಯನ್ನು ರಾಜ್ಯ ಸಮಿತಿಗೆ ಕಳುಹಿಸದಿರುವುದರಿಂದ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಲು ಸಾಧ್ಯವಾಗಲಿಲ್ಲ ಎನ್ನಲಾಗಿದೆ.

• **ರೈತ ಸಂಘ ಇಬ್ಭಾಗ ಬಿಜೆಪಿ ಜತೆ ವಿಲೀನ**

ಬೆಂಗಳೂರು, ಮಾರ್ಚ್ 27– ಕರ್ನಾಟಕ ರಾಜ್ಯ ರೈತ ಸಂಘದಿಂದ ಸಿಡಿದ ಭಿನ್ನಮತೀಯರ ದೊಡ್ಡ ಗುಂಪೊಂದು ಹಿರಿಯ ನಾಯಕ ಬಾಬಾಗೌಡ ಪಾಟೀಲ್ ನೇತೃತ್ವದಲ್ಲಿ ಇಂದು ಅಧಿಕೃತವಾಗಿ ಭಾರತೀಯ ಜನತಾ ಪಕ್ಷದಲ್ಲಿ ಬೇಷರತ್ ವಿಲೀನಗೊಂಡಿತು.

ಈ ಹೊಸ ರಾಜಕೀಯ ಬೆಳವಣಿಗೆ ರಾಜ್ಯ ರೈತ ಸಂಘದ ಅಸ್ತಿತ್ವಕ್ಕೆ ಬಲವಾದ ಪೆಟ್ಟಾದರೆ, ಬಿಜೆಪಿಗೆ ಚುನಾವಣೆಯ ಹಿನ್ನೆಲೆಯಲ್ಲಿ ಅನಿರೀಕ್ಷಿತ ವರವಾಗಿ ಪರಿಣಮಿಸಿದೆ. ಬಿಜೆಪಿಯ ರೈತ ಮೋರ್ಚಾದ ರಾಜ್ಯ ಘಟಕದ ಕಾರ್ಯಾಧ್ಯಕ್ಷರಾಗಿ ಕೂಡಲೇ ನೇಮಕಗೊಂಡಿರುವ ಬಾಬಾಗೌಡ ಪಾಟೀಲರು ಬೆಳಗಾವಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸುವುದು ಬಹುತೇಕ ಖಚಿತವಾಗಿದೆ.

ದಿನ ಭವಿಷ್ಯ

ಭಾನುವಾರ 28 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ಪೂರ್ಣಿಮಾ ಗಂ. 46-9 (ರಾ. 12-52) ಭಾನುವಾರ ನಿತ್ಯ ನಕ್ಷತ್ರ ಉತ್ತರ ಫಲ್ಗುಣಿ ಗಂ. 28-35 (ಸಾ. 5-51) ವೃದ್ಧಿ ನಾಮ ಯೋಗ ಗಂ 39-58 ಭದ್ರೆ ಕರಣ ಗಂ. 18-20 ವಿಷ ಗಂ. 48-33 ಅಮೃತ ಗಂ. 10-50 ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 6-24 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 4, 6

ಮೇಷ: ಹಂತ ಹಂತವಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಬಂಧುಗಳ ಆಗಮನದಿಂದ ಸಂತೋಷದ ವಾತಾವರಣ. ಸಂಬಂಧಿಕರೊಂದಿಗೆ ಸುದೀರ್ಘ ಆಪ್ತ ಸಮಾಲೋಚನೆಯಿಂದಾಗಿ ಬಾಂಧವ್ಯದಲ್ಲಿ ವೃದ್ಧಿ.

ವೃಷಭ: ಮನೆಯವರ ಅಸಮ್ಮತಿಯ ನಡುವೆಯೂ ಉದ್ಯೋಗದ ಸಲುವಾಗಿ ದೂರದ ಪ್ರಯಾಣ. ಪತ್ನಿವರ್ಗದವರಿಂದ ಸಹಾಯ. ಸಂಬಂಧಿಗಳ ಮಧ್ಯಸ್ಥಿಕೆಯಿಂದಾಗಿ ಸಮಸ್ಯೆಗಳು ನಿವಾರಣೆಯಾಗಲಿವೆ.

ಮಿಥುನ: ತುರ್ತು ವಿಷಯಕ್ಕಾಗಿ ಸಂಬಂಧಿಕರ ನೆರವನ್ನು ಪಡೆಯಬೇಕಾದೀತು. ಸಂಸಾರದಲ್ಲಿ ನೆಮ್ಮದಿ. ಅನಗತ್ಯ ಸುತ್ತಾಟದಿಂದಾಗಿ ದೇಹಾಲಸ್ಯ. ಗುರುದೇವತಾ ದರ್ಶನ ಮಾಡುವ ಸಾಧ್ಯತೆ ಕಂಡುಬರುವುದು.

ಕರ್ಕಾಟಕ: ಚಿನ್ನಾಭರಣಗಳ ವ್ಯವಹಾರ ಪ್ರಾರಂಭಿಸಲು ಉತ್ತಮ ದಿನ. ಲೆಕ್ಕಪತ್ರ ಪರಿಶೀಲನೆಯಲ್ಲಿ ಹೆಚ್ಚಿನ ಕಾಲ ಕಳೆಯಬೇಕಾದೀತು. ಉತ್ತಮ ಆದಾಯ. ಪುಸ್ತಕ ಗ್ರಂಥಗಳ ಖರೀದಿಗಾಗಿ ವೆಚ್ಚವನ್ನು ಭರಿಸಬೇಕಾದೀತು.

ಸಿಂಹ: ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆಗಳ ಮೊರೆಹೊಗಬೇಕಾದೀತು. ದೂರದ ಪ್ರಯಾಣ. ಸ್ವಂತ ವಾಹನ ಖರೀದಿಯಿಂದ ನೆಮ್ಮದಿ.

ಕನ್ಯಾ: ತಂದೆ–ತಾಯಿಗಳಿಗೆ ಮಕ್ಕಳ ಸಲುವಾಗಿ ವಿದೇಶ ಪ್ರಯಾಣ ಯೋಗ. ಸತ್ಪುರುಷರ ಸಂದರ್ಶನ ಮಾಡುವ ಸಾಧ್ಯತೆ. ಅಧ್ಯಯನದಲ್ಲಿಯ ಆಸಕ್ತಿಯಿಂದಾಗಿ ಉತ್ತಮ ಭವಿಷ್ಯ ನಿರ್ಮಾಣಕ್ಕೆ ಮಾರ್ಗವಾಗಲಿದೆ.

ತುಲಾ: ಹೊಸದಾಗಿ ಕಟ್ಟಿಸುತ್ತಿರುವ ಮನೆಯ ಕೆಲಸಗಳು ಪೂರ್ಣಗೊಂಡು ನೆಮ್ಮದಿ. ಮಕ್ಕಳಿಗೆ ವಿವಾಹ ವಿಷಯದಲ್ಲಿ ನೆಂಟರಿಂದ ಒತ್ತಾಯಪೂರ್ವಕ ಪ್ರಸ್ತಾಪಗಳು ಬರಲಿದೆ. ಸಾಲದಿಂದ ಮುಕ್ತಿ ಹೊಂದುವಿರಿ.

ವೃಶ್ಚಿಕ: ವೈಯಕ್ತಿಕ ವಿಚಾರಗಳತ್ತ ಹೆಚ್ಚಿನ ಗಮನ ಹರಿಸಬೇಕಾದೀತು. ನೆರೆಯವರೊಂದಿಗೆ ಸ್ನೇಹ ಸಂಬಂಧಗಳು ವೃದ್ಧಿಯಾಗಲಿವೆ. ವಾಸಸ್ಥಳ ಬದಲಾವಣೆ ಸಾಧ್ಯತೆ. ಅತಿಯಾದ ಪ್ರಯಾಣದಿಂದಾಗಿ ದೇಹಾಯಾಸ.

ಧನು: ತರಕಾರಿ, ಹಣ್ಣುಗಳ ವ್ಯಾಪಾರಸ್ಥರಿಗೆ ಬಹು ಬೇಡಿಕೆಯಿಂದಾಗಿ ಅಧಿಕ ಲಾಭ. ಪತ್ನಿ ವರ್ಗದವರ ಮನೆಗಳಿಗೆ ಕುಟುಂಬ ಸಮೇತರಾಗಿ ಭೇಟಿ ಸಾಧ್ಯತೆ. ಧಾನ್ಯ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿನ ಹಿನ್ನಡೆ.

ಮಕರ: ಸಂಶೋಧನಾ ಕಾರ್ಯಗಳು ಭರದಿಂದ ಸಾಗುವುದರ ಜೊತೆಗೆ ಕಾಮಗಾರಿಗಳು ಹೆಚ್ಚಳಗೊಳ್ಳುವವು. ಹಣಕಾಸಿನ ಅನುಕೂಲತೆ. ಮನೆಯವರ ದೂರ ಪ್ರಯಾಣದಿಂದಾಗಿ ಒಂಟಿತನ ಮನೆ ಮಾಡೀತು.

ಕುಂಭ: ಪ್ರಾಪ್ತ ವಯಸ್ಕರು ವೈವಾಹಿಕ ಜೀವನಕ್ಕೆ ಕಾಲಿಡಲು ಮಾಡಿದ ಪ್ರಯತ್ನಗಳು ಫಲ ನೀಡಲಿವೆ. ಗಣ್ಯರೊಂದಿಗೆ ಸಮಾರಂಭದಲ್ಲಿ ಭಾಗವಹಿಸುವ ಸಾಧ್ಯತೆ. ನಿಮ್ಮ ಸಹಾಯ ಸಲಹೆ ಕೋರಿ ಬರುವವರಿಗೆ ಸಹಾಯ ನೀಡಿ.


ಮೀನ: ಸಹೋದ್ಯೋಗಿಗಳೊಡನೆ ಉತ್ತಮ ಸಂಬಂಧ ಬೆಳೆಸಿಕೊಳ್ಳುವಿರಿ. ಲೋಕೋಪಯೋಗಿ ಇಲಾಖೆ, ತಾಂತ್ರಿಕ ಕೆಲಸ ಮಾಡುವವರಿಗೆ ಅನುಕೂಲ. ರಾಜಕೀಯದಲ್ಲಿ ತಲ್ಲೀನರಾದವರಿಗೆ ಮಾನಸಿಕ ದ್ವಂದ್ವಗಳು ಏರ್ಪಡಲಿದೆ.

ನಿಮ್ಮ ಜನ್ಮದಿನ 28-ಮಾರ್ಚ್ ಈ ದಿನ ಅತ್ಯಂತ ಶುಭಕರ. ನಿಮಗಿರುವ ರಾಜಕೀಯದ ಬಗೆಗಿನ ಆಸಕ್ತಿಗೆ ಪುಷ್ಟಿ ದೊರಕುವಂತಹ ಘಟನಾವಳಿಗಳ ಮತ್ತು ಅವಕಾಶಗಳ ಸರಮಾಲೆಯಿಂದಾಗಿ ಉನ್ನತ ದರ್ಜೆಯ ರಾಜಕಾರಣಕ್ಕೆ ಕಾಲಿಡಲಿದ್ದೀರಿ. ನಿಮ್ಮ ಅತ್ಯಂತ ಪ್ರಿಯವಾದ ಹುದ್ದೆಯನ್ನೇ ಅಲಂಕರಿಸುವ ಸಾಧ್ಯತೆ.

ಪದಬಂಧ 4550 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮೊದಲ ನೋಟದಿಂದಲೇ ಉಂಟಾಗುವ ಪ್ರೀತಿ (4)
3.ಮೇಜವಾನಿ ಮಾಡಲು ಅಡುಗೆಗೆ ಬೇಕಾದ ಸಾಮಗ್ರಿ (4)
5.ಹೆಂಡತಿಯನ್ನು ಕಳೆದುಕೊಂಡವನು (3)
6.ಗುಬ್ಬಚ್ಚಿಯನ್ನು ಹೀಗೂ ಕರೆವರು (3)
7.ಈ ಜನುಮದಲ್ಲೇ ರಾಕ್ಷಸನನ್ನು ಹುಡುಕಿ! (3)
9.ಮನವಿಟ್ಟು ಸಾಧಿಸಿದ ಹತೋಟಿ! (3)
11.ಸೈನ್ಯವಿರುವ ಜಾಗ (3)
12.ಆ ಪಾತ್ರದಲ್ಲಿ ನಟಿಸುತ್ತಿವ ಅಯೋಗ್ಯ! (3)
13.ಮಂಗಳಗ್ರಹಕ್ಕಿರುವ ಇನ್ನೊಂದು ಹೆಸರು (4)
15.ಯೋಗವಿದ್ದುದಕ್ಕೇ ಈ ಹಂಚಿಕೆ (4)

ಮೇಲಿಂದ ಕೆಳಕ್ಕೆ
1.ಈತ ಚರ್ಮದ ಕೆಲಸಗಾರ (3)
2.ತಿಕ್ಕಲ ಹಿಡಿದಿರುವ ಎಳ್ಳು (2)
4.ವಾದದಲ್ಲಿ ಮಾತಿನಲ್ಲಿ ನಿಪುಣನಿದ್ದಾನೆ(4)
5.ವಿಷಯ ತಿಳಿಸಿದಾಗಿನ ದುಃಖ (3)
8.ನೀರಿನಲ್ಲಿ ವಾಸಿಸುವ ಪ್ರಾಣಿ (4)
10.ತಾರೆ ಇಲ್ಲಿ ಕಾಣುತ್ತಿದೆ (3)
12.ಅಂಗ ಹೀನನಿವನು (3)
14.ವಿದೂಷಕನಲ್ಲಿರುವ ಕಬ್ಬಿಗ ಕಾಣಿಸಿಹನೇ? (2)



4549ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ವಲಸೆ 4.ಕಮಠ 5.ಏಮಾರು 6.ಕದನ 8.ವ್ಯವಕಲನ 10.ಗುಲಾಬಿ 12.ಮರಣ 13.ಜರಡಿ 15.ಹೊನಲು
ಮೇಲಿಂದ ಕೆಳಕ್ಕೆ: 1.ಮೂಲ 2.ವಾಮ 3.ವರ್ತಕ 4.ಕರು 5.ಏಕೀಕರಣ 7.ನವ್ಯ 9.ನಗು 11.ಬಿಸಿಲು 12.ಮಡಿ 14.ರತ್ನ 16.ನಳ್ಳಿ

ಸುಡೊಕು 4936

	8			9		5		
6		5					1	
	9		1		5		7	6
		4	8		3		5	
	5					1		9
2				5			6	
1			9					
	3					6		1
8		6		3	1		9	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4935 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರಸ್ಪರ ಅಂತರವಿರಲಿ, ತಪ್ಪದೇ ಮಾಸ್ಕ್ ಧರಿಸಿ

ಹತ್ತಿ ನೂಲು ರಫ್ತು ನಿರ್ಬಂಧಕ್ಕೆ ಮನವಿ

ನವದೆಹಲಿ (ಪಿಟಿಐ): ಬೆಲೆಯನ್ನು ನಿಯಂತ್ರಿಸಲು ಮತ್ತು ದೇಶಿ ತಯಾರಕರಿಗೆ ಪೂರೈಕೆ ಹೆಚ್ಚಿಸಲು ಅನುಕೂಲ ಆಗುವಂತೆ ಹತ್ತಿ ನೂಲಿನ ರಫ್ತು ಮೇಲೆ ನಿರ್ಬಂಧ ವಿಧಿಸಿ ಎಂದು ಉಡುಪು ರಫ್ತು ಉತ್ತೇಜನಾ ಮಂಡಳಿ (ಎಇಪಿಸಿ) ಸರ್ಕಾರಕ್ಕೆ ಮನವಿ ಮಾಡಿದೆ.

'ಹತ್ತಿ ನೂಲಿನ ದರ ತಗ್ಗಿಸಲು ಸರ್ಕಾರ ಹಲವು ಪ್ರಯತ್ನಗಳನ್ನು ನಡೆಸಿದರೂ ನಾಲ್ಕು ತಿಂಗಳಿನಿಂದ ನಿರಂತರವಾಗಿ ಏರಿಕೆಯಾಗುತ್ತಲೇ ಇದೆ' ಎಂದು ಮಂಡಳಿಯ ಅಧ್ಯಕ್ಷ ಎ. ಶಕ್ತಿವೇಲು ತಿಳಿಸಿದ್ದಾರೆ.

ಅಕ್ರಮ ವಲಸಿಗರ ಗಡೀಪಾರು: ಕೇಂದ್ರಕ್ಕೆ ಸುಪ್ರೀಂ ನೋಟಿಸ್

ನವದೆಹಲಿ (ಪಿಟಿಐ): ರೋಹಿಂಗ್ಯಾ ಹಾಗೂ ಬಾಂಗ್ಲಾದೇಶದ ನುಸುಳುಕೋರರು ಸೇರಿದಂತೆ ಎಲ್ಲಾ ಅಕ್ರಮ ವಲಸಿಗರನ್ನು ಒಂದು ವರ್ಷದೊಳಗೆ ಪತ್ತೆ ಹಚ್ಚಿ ಬಂಧಿಸಿ ಹಾಗೂ ಗಡೀಪಾರು ಮಾಡಲು ಕೇಂದ್ರ ಹಾಗೂ ಎಲ್ಲಾ ರಾಜ್ಯ ಸರ್ಕಾರಗಳಿಗೆ ನಿರ್ದೇಶಿಸಬೇಕು ಎಂದು ಕೋರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಬಂಧ ಸುಪ್ರೀಂಕೋರ್ಟ್ ಶನಿವಾರ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿರುವ ಅರ್ಜಿ ಕುರಿತು ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ, ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣಿಯಂ ಅವರನ್ನೊಳಗೊಂಡ ಪೀಠವು ತಿಳಿಸಿತು.

ಮ್ಯಾನ್ಮಾರ್: 74 ಮಂದಿ ಹತ್ಯೆ?

ಯಾಂಗೂನ್ (ಎಪಿ): ಮ್ಯಾನ್ಮಾರ್‌ನಲ್ಲಿ ಶನಿವಾರ ಸಶಸ್ತ್ರ ಪಡೆಗಳ ದಿನಾಚರಣೆಯ ವೇಳೆ, ಸೇನಾ ಮುಖ್ಯಸ್ಥ ಹಿರಿಯ ಜನರಲ್ ಮಿನ್ ಆಂಗ್ ಹೇಲಿಂಗ್ ಅವರು ಆಂಗ್ ಸಾನ್ ಸೂಕಿ ನೇತೃತ್ವದ ಸರ್ಕಾರದ ವಿರುದ್ಧದ ಸೇನಾ ದಂಗೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಇನ್ನೊಂದೆಡೆ ದೇಶದ 24ಕ್ಕೂ ಅಧಿಕ ಕಡೆಗಳಲ್ಲಿ ನಡೆಯುತ್ತಿರುವ ಪ್ರತಿಭಟನಾಕಾರರನ್ನು ನಿಯಂತ್ರಿಸಲು ಸೇನೆ ಗುಂಡು ಹಾರಾಟ ನಡೆಸಿದ್ದು, ಕನಿಷ್ಠ 74 ಮಂದಿಯನ್ನು ಕೊಂದು ಹಾಕಿರುವ ಶಂಕೆ ಇದೆ.

ಮ್ಯಾನ್ಮಾರ್ ಸೈನಿಕರು ಗುರುವಾರ ನಡೆಸಿದ ಗುಂಡಿನ ದಾಳಿಯಲ್ಲಿ ಗಾಯಗೊಂಡಿರುವ ಮೂವರು ಮ್ಯಾನ್ಮಾರ್ ಪ್ರಜೆಗಳು ಗಡಿ ದಾಟಿ ಬಂದು ಮಣಿಪುರದ ವೈದ್ಯರಿಂದ ಜೀವ ಉಳಿಸುವಂತೆ ವೈದ್ಯಕೀಯ ಸಹಾಯ ಯಾಚಿಸಿದ್ದಾರೆ.

ಪುಣೆಯಲ್ಲಿ ಬೆಂಕಿ ಅವಘಡ: 500ಕ್ಕೂ ಹೆಚ್ಚು ಅಂಗಡಿ ಭಸ್ಮ

ಪುಣೆ (ಪಿಟಿಐ): ಇಲ್ಲಿನ ಫ್ಯಾಷನ್ ಸ್ಟ್ರೀಟ್ ಮಾರುಕಟ್ಟೆಯಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ ಬೆಂಕಿ ಅವಘಡದಲ್ಲಿ 500ಕ್ಕೂ ಹೆಚ್ಚು ಅಂಗಡಿಗಳು ಸುಟ್ಟುಹೋಗಿವೆ.

'ಯಾವುದೇ ವ್ಯಕ್ತಿಯ ಜೀವಕ್ಕೆ ಅಪಾಯವಾಗಿಲ್ಲ. ಆದರೆ, ವ್ಯಾಪಾರಿಗಳಿಗೆ, ಅಂಗಡಿಗಳ ಮಾಲೀಕರಿಗೆ ಆರ್ಥಿಕವಾಗಿ ಭಾರಿ ನಷ್ಟವಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಬಾಂಗ್ಲಾ ಪ್ರವಾಸದಲ್ಲಿ ಪ್ರಧಾನಿ ನರೇಂದ್ರ ಮೋದಿ

ಐದು ಒಪ್ಪಂದಗಳಿಗೆ ಭಾರತ–ಬಾಂಗ್ಲಾ ಸಹಿ

ಢಾಕಾ (ಪಿಟಿಐ) : ಸಂಪರ್ಕ, ವಾಣಿಜ್ಯ, ಮಾಹಿತಿ ತಂತ್ರಜ್ಞಾನ ಮತ್ತು ಕ್ರೀಡಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಭಾರತ ಮತ್ತು ಬಾಂಗ್ಲಾದೇಶ ಶನಿವಾರ ಐದು ಒಡಂಬಡಿಕೆಗಳನ್ನು ಮಾಡಿಕೊಂಡಿವೆ.

ಇದೇ ವೇಳೆ ಪ್ರಧಾನಿ ಮೋದಿ ಅವರು ಬಾಂಗ್ಲಾದೇಶಕ್ಕೆ ಭಾರತದ 12 ಲಕ್ಷ ಕೋವಿಡ್ ಲಸಿಕೆಯನ್ನು ಉಡುಗೊರೆಯಾಗಿ ನೀಡುವುದರ ಸಂಕೇತವಾಗಿ ಪ್ರಾತಿನಿಧಿಕ ಪೆಟ್ಟಿಗೆಯನ್ನು ಬಾಂಗ್ಲಾದೇಶದ ಪ್ರಧಾನಿಗೆ ಹಸ್ತಾಂತರಿಸಿದರು.

ರೈಲಿಗೆ ಚಾಲನೆ: ಬಾಂಗ್ಲಾದೇಶದ ಢಾಕಾ ಮತ್ತು ಭಾರತದ ನ್ಯೂ ಜಲ್ಪೈಗುರಿ ಸಂಪರ್ಕಿಸುವ ಹೊಸ ಪ್ಯಾಸೆಂಜರ್ ರೈಲನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿದರು.

ಮೋದಿ ಅವರು ಬಾಂಗ್ಲಾದೇಶ ಪ್ರವಾಸದ ಎರಡನೇ ದಿನವಾದ ಶನಿವಾರ ಎರಡು ಪ್ರಮುಖ ಹಿಂದೂ ದೇವಾಲಯಗಳಿಗೆ ಭೇಟಿ ನೀಡಿ ಪ್ರಾರ್ಥಿಸಿದರು. ಇದೇ ವೇಳೆ ಶೇಖ್ ಮುಜಿಬುರ್ ರಹಮಾನ್ ಅವರ 'ಬಂಗಬಂಧು' ಸ್ಮಾರಕಕ್ಕೆ ಭೇಟಿ ನೀಡಿ ಪುಷ್ಪನಮನ ಸಲ್ಲಿಸಿದರು.

ಬಾಂಗ್ಲಾದೇಶದ ಈಶ್ವರಿಪುರ ಗ್ರಾಮದಲ್ಲಿರುವ ಜೆಶೋರೇಶ್ವರಿ ಕಾಳಿ ದೇವಸ್ಥಾನ ಹಾಗೂ ಆಧ್ಯಾತ್ಮ ಗುರು ಹರಿಚಂದ್ ಠಾಕೂರ್ ಅವರ ಜನ್ಮಸ್ಥಳವಾದ ಗೋಪಾಲ್‌ಗಂಜ್‌ನ ಒರಕಂಡಿಯಲ್ಲಿ ಇರುವ ದೇವಾಲಯದಲ್ಲಿ ಅವರು ಪ್ರಾರ್ಥಿಸಿದರು. ನೆರೆಯ ರಾಷ್ಟ್ರಗಳಲ್ಲಿರುವ 51 ಶಕ್ತಿ ಪೀಠಗಳಲ್ಲಿ ಒಂದಾಗಿರುವ ಜೆಶೋರೇಶ್ವರಿ ಕಾಳಿ ದೇವಾಲಯಕ್ಕೆ ಕೈಯಲ್ಲಿ ತಯಾರಿಸಿದ ಮುಕುಟವನ್ನು ದೇವಿಗೆ ಪ್ರಧಾನಿ ಅರ್ಪಿಸಿದರು.



ಬಾಂಗ್ಲಾದೇಶದಲ್ಲಿರುವ ಜೆಶೋರೇಶ್ವರಿ ಕಾಳಿ ದೇವಸ್ಥಾನದಲ್ಲಿ ಶನಿವಾರ ಪ್ರಾರ್ಥನೆ ಸಲ್ಲಿಸಿದ ಮೋದಿ –ಪಿಟಿಐ ಚಿತ್ರ

'ಈ ಮುಕುಟವನ್ನು ಚಿನ್ನ ಮತ್ತು ಬೆಳ್ಳಿಯ ಲೇಪನದಿಂದ ಮಾಡಲಾಗಿದ್ದು, ಮೂರು ವಾರಗಳಲ್ಲಿ ಕುಶಲಕರ್ಮಿಗಳು ತಯಾರಿಸಿದ್ದಾರೆ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಂ ಬಾಗ್ಚಿ ಅವರು ಟ್ವೀಟ್ ಮೂಲಕ ತಿಳಿಸಿದ್ದಾರೆ.

ಬಾಂಗ್ಲಾದೇಶ ಮತ್ತು ಅದರ ಗಡಿ ಭಾಗದಲ್ಲಿರುವ ಪ್ರದೇಶಗಳಿಂದ ಹಲವಾರು ಭಕ್ತರು 'ಮಾ ಕಾಳಿ ಮೇಳ'ಕ್ಕಾಗಿ ದೇವಸ್ಥಾನಕ್ಕೆ ಆಗಮಿಸುತ್ತಾರೆ. ಹಾಗಾಗಿ ಭಾರತವು ದೇವಸ್ಥಾನಕ್ಕೆ ಸಭಾಂಗಣವನ್ನು ನಿರ್ಮಿಸಿಕೊಡಲಿದೆ ಎಂದು ಅವರು ಹೇಳಿದರು.

ಮತುವಾ ಸಮುದಾಯದವರೊಂದಿಗೆ ಮಾತುಕತೆ: ಆಧ್ಯಾತ್ಮ ಗುರು ಹರಿಚಂದ್ ಠಾಕೂರ್ ಅವರ ಜನ್ಮಸ್ಥಳವಾದ ಗೋಪಾಲ್‌ಗಂಜ್‌ನ ಒರಕಂಡಿಯಲ್ಲಿ ಇರುವ ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಮೋದಿ ಅವರು ಮತುವಾ ಸಮುದಾಯದ ಸದಸ್ಯರೊಂದಿಗೆ ಮಾತುಕತೆ ನಡೆಸಿದರು.

ಒರಕಂಡಿಯಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ಸ್ಥಾಪಿಸುವುದಾಗಿ ಘೋಷಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಇಲ್ಲಿನ ಬಾಲಕಿಯರ ಮಾಧ್ಯಮಿಕ ಶಾಲೆಯನ್ನು ನವೀಕರಿಸುವುದಾಗಿ ಭರವಸೆ ನೀಡಿದರು.

ಪ್ರತಿಭಟನೆ, ಐವರ ಸಾವು: ಮೋದಿ ಅವರ ಬಾಂಗ್ಲಾದೇಶ ಪ್ರವಾಸ ವಿರೋಧಿಸಿ ಇಸ್ಲಾಂ ಮೂಲಭೂತವಾದಿಗಳು ಶುಕ್ರವಾರ ನಡೆಸಿದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿ ಐವರು ಅಸುನೀಗಿದ್ದಾರೆ.

ಪರಸ್ಪರ ಒಪ್ಪಿತ ಸಂಬಂಧ: ಸುಪ್ರೀಂ ಕೋರ್ಟ್ ಪರಿಶೀಲನೆ

ಪೋಕ್ಸೊ ಕಾಯ್ದೆಯಡಿ ಅಪ್ರಾಪ್ತರನ್ನು ಶಿಕ್ಷಿಸಬಹುದೇ?

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಸ್ಪರ ಒಪ್ಪಿತ ಸಂಬಂಧ ಹೊಂದಿರುವ ಅಪ್ರಾಪ್ತರನ್ನು ಪೋಕ್ಸೊ ಕಾಯ್ದೆಯಡಿ ಶಿಕ್ಷಿಸಬಹುದೇ ಎಂಬುದರ ಕುರಿತು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ಪೋಕ್ಸೊ ಕಾಯ್ದೆಯಡಿ (2012) ಅಪ್ರಾಪ್ತರಿಗೆ ಶಿಕ್ಷೆ ವಿಧಿಸುವ ಕುರಿತ ಸ್ಪಷ್ಟತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇಂದಿರಾ ಬ್ಯಾನರ್ಜಿ ನೇತೃತ್ವದ ಪೀಠವು ಈ ಕುರಿತು ತಮಿಳುನಾಡು ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿತು.

ಇದೇ ವೇಳೆ ಅರ್ಜಿದಾರನಿಗೆ ನ್ಯಾಯಾಲಯ ಮಧ್ಯಂತರ ರಕ್ಷಣೆ ನೀಡಿತು. ಫಿರ್ಯಾದಿ ವಿರುದ್ಧ 2015ರಲ್ಲಿ ಅತ್ಯಾಚಾರ ಪ್ರಕರಣ ದಾಖಲಾಗಿದೆ.

ಒಮ್ಮತದ ಲೈಂಗಿಕ ಸಂಬಂಧಕ್ಕಾಗಿ ಹದಿಹರೆಯದವರಿಗೆ ಶಿಕ್ಷೆ ನೀಡುವುದು ಪೋಕ್ಸೊ ಕಾಯ್ದೆಯ ಉದ್ದೇಶವಲ್ಲ ಎಂದು ಅರ್ಜಿದಾರರ ಪರ ವಕೀಲ ರಾಹುಲ್ ಶ್ಯಾಮ್ ಭಂಡಾರಿ ವಾದಿಸಿದರು.

ಹಿನ್ನೆಲೆ: 2015ರಲ್ಲಿ 17 ವರ್ಷದ ಬಾಲಕಿಯೊಬ್ಬಳು, 18 ವರ್ಷದ ಯುವಕನ (ಅರ್ಜಿದಾರ) ಮೇಲೆ ಅತ್ಯಾಚಾರ, ಮೋಸ ಹಾಗೂ ಇತರ ಆರೋಪಗಳ ದೂರು ಸಲ್ಲಿಸಿದ್ದಳು. ಈ ಕುರಿತು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ದೂರಿನ ಪ್ರಕಾರ 2014ರಲ್ಲಿ ಇಬ್ಬರೂ ಅಪ್ರಾಪ್ತರಾಗಿದ್ದಾಗ ಈ ಅಪರಾಧಗಳು ನಡೆದಿದ್ದವು. 'ಮದುವೆಯಾಗುವ ನೆಪದಲ್ಲಿ ಆ ವ್ಯಕ್ತಿ ತನ್ನೊಂದಿಗೆ ದೈಹಿಕ ಸಂಬಂಧ ಬೆಳೆಸಿದ. ನಂತರ ಮದುವೆಯಾಗಲು ನಿರಾಕರಿಸಿದ' ಎಂದು ಬಾಲಕಿ ನೀಡಿದ್ದ ದೂರಿನಲ್ಲಿ ಆರೋಪಿಸಿಸಲಾಗಿತ್ತು.

ಈ ಆರೋಪಗಳನ್ನು ತಳ್ಳಿಹಾಕಿದ್ದ ಅರ್ಜಿದಾರ, 'ನಾವಿಬ್ಬರು ಶಾಲೆಯಲ್ಲಿ ಓದುವಾಗಲೇ ಪರಸ್ಪರ ಇಷ್ಟಪಡುತ್ತಿದ್ದೆವು. ಅಲ್ಲದೆ ಇಬ್ಬರ ನಡುವೆ ಪರಸ್ಪರ ಒಪ್ಪಿತ ಲೈಂಗಿಕ ಸಂಬಂಧವಿತ್ತು' ಎಂದು ವಾದಿಸಿದ್ದರು. ವಿಚಾರಣಾ ನ್ಯಾಯಾಲಯದಲ್ಲಿ ತನ್ನ ನಿಲುವು ಬದಲಿಸಿದ್ದ ಬಾಲಕಿ, ತಮ್ಮಿಬ್ಬರ ನಡುವೆ ಸಹಮತದ ದೈಹಿಕ ಸಂಬಂಧ ಇತ್ತು ಎಂದು ಒಪ್ಪಿಕೊಂಡಿದ್ದಳು. ಇದನ್ನು ಮಾನ್ಯ ಮಾಡದ ವಿಚಾರಣಾ ನ್ಯಾಯಾಲಯವು ಪೋಕ್ಸೊ ಕಾಯ್ದೆಯಡಿ ಯುವಕನಿಗೆ 2019ರಲ್ಲಿ 10 ವರ್ಷಗಳ ಶಿಕ್ಷೆ ವಿಧಿಸಿತ್ತು.

ಇದನ್ನು ಪ್ರಶ್ನಿಸಿ ಯುವಕ ಮದ್ರಾಸ್ ಹೈಕೋರ್ಟ್ ಮೊರೆ ಹೋಗಿದ್ದರು. ಈ ವೇಳೆ ಬಾಲಕಿಯು ಪರಸ್ಪರ ಒಪ್ಪಿತ ಲೈಂಗಿಕ ಸಂಬಂಧದ ಕುರಿತು ಸಲ್ಲಿಸಿದ ಪ್ರಮಾಣ ಪತ್ರವನ್ನು ಸ್ವೀಕರಿಸಲು ಹೈಕೋರ್ಟ್ ಮಾರ್ಚ್ 16ರಂದು ನಿರಾಕರಿಸಿತ್ತು.

₹ 21.17 ಲಕ್ಷ ಕೋಟಿ ಮೌಲ್ಯದ ರಫ್ತು ವಹಿವಾಟು ನಿರೀಕ್ಷೆ

ನವದೆಹಲಿ (ಪಿಟಿಐ): 'ದೇಶದ ರಫ್ತು ವಹಿವಾಟು ಪ್ರಸಕ್ತ ಹಣಕಾಸು ವರ್ಷದ ಅಂತ್ಯದ ವೇಳೆಗೆ ₹ 21.17 ಲಕ್ಷ ಕೋಟಿಗಳಷ್ಟಾಗಲಿದ್ದು, ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 7ರಷ್ಟು ಕಡಿಮೆ ಇರಲಿದೆ' ಎಂದು ಕೇಂದ್ರ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

2019-20ನೇ ಹಣಕಾಸು ವರ್ಷದಲ್ಲಿ ದೇಶದ ರಫ್ತು ವಹಿವಾಟು ₹ 22.84 ಲಕ್ಷ ಕೋಟಿಗಳಷ್ಟಾಗಿತ್ತು. ಇದಕ್ಕೆ ಹೋಲಿಸಿದರೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 93ರಷ್ಟು ಆಗಲಿದೆ ಎಂದಿದ್ದಾರೆ. ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಕೋವಿಡ್-19 ಸಾಂಕ್ರಾಮಿಕದ ಹೊರತಾಗಿಯೂ, ಭಾರತಕ್ಕೆ ಎಫ್‌ಡಿಐ ಒಳಹರಿವಿನ ದೃಷ್ಟಿಯಿಂದ ಇದು 'ದಾಖಲೆಯ ವರ್ಷ' ಎಂದು ಹೇಳಿದ್ದಾರೆ.

'ಷೇರು ವಿಕ್ರಯ ಗುರಿ ಸಾಧ್ಯ'

ನವದೆಹಲಿ (ಪಿಟಿಐ): 2021–22ನೇ ಸಾಲಿಗೆ ಕೇಂದ್ರ ಸರ್ಕಾರವು ಉದ್ದೇಶಿಸಿರುವ ₹ 1.75 ಲಕ್ಷ ಕೋಟಿ ಮೊತ್ತದ ಷೇರು ವಿಕ್ರಯದ ಗುರಿ ಸಾಧಿಸಬಹುದಾಗಿದ್ದು, ಎಲ್‌ಐಸಿಐ ಐಪಿಒದಿಂದಲೇ ₹ 1 ಲಕ್ಷ ಕೋಟಿ ಸಂಗ್ರಹವಾಗಲಿದೆ ಎಂದು ಮುಖ್ಯ ಆರ್ಥಿಕ ಸಲಹೆಗಾರ (ಸಿಇಎ) ಕೆ.ವಿ. ಸುಬ್ರಮಣಿಯನ್ ಹೇಳಿದ್ದಾರೆ.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ವರ್ಚುವಲ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2021-22ಕ್ಕೆ ನಿಗದಿಪಡಿಸಿರುವ ₹ 1.75 ಲಕ್ಷ ಕೋಟಿ ಮೊತ್ತದ ಷೇರು ವಿಕ್ರಯವು 2021ರ ಮಾರ್ಚ್ 31ಕ್ಕೆ ಕೊನೆಗೊಳ್ಳಲಿರುವ ಪ್ರಸಕ್ತ ಹಣಕಾಸು ವರ್ಷದ ₹ 2.10 ಲಕ್ಷ ಕೋಟಿ ಮೊತ್ತದ ಗುರಿಯ ಮುಂದುವರಿದ ಭಾಗವಾಗಿದೆ ಎಂದು ತಿಳಿಸಿದ್ದಾರೆ.



ಸುಬ್ರಮಣಿಯನ್

ಇದರಲ್ಲಿ ಬಿಪಿಸಿಎಲ್ ಖಾಸಗೀಕರಣ ಮತ್ತು ಎಲ್‌ಐಸಿಯ ಐಪಿಒದಿಂದ ಹೆಚ್ಚಿನ ಕೊಡುಗೆ ಬರಲಿದೆ. ಅಂದಾಜುಗಳ ಪ್ರಕಾರ, ಬಿಪಿಸಿಎಲ್ ಖಾಸಗೀಕರಣದಿಂದ ₹ 75 ಸಾವಿರದಿಂದ ₹ 80 ಸಾವಿರ ಅಥವಾ ಅದಕ್ಕೂ ಹೆಚ್ಚಿನ ಮೊತ್ತವು ಬರಲಿದೆ. ಎಲ್‌ಐಸಿ ಐಪಿಒದಿಂದ ಸರಿಸುಮಾರು ₹ 1 ಲಕ್ಷ ಕೋಟಿ ಸಂಗ್ರಹವಾಗಲಿದೆ ಎಂದು ಅವರು ತಿಳಿಸಿದ್ದಾರೆ. ಕೇಂದ್ರ ಸರ್ಕಾರವು ಬಿಪಿಸಿಎಲ್‌ನಲ್ಲಿ ಹೊಂದಿರುವ ಶೇ 52.98ರಷ್ಟು ಸಂಪೂರ್ಣ ಷೇರುಪಾಲನ್ನೂ ಮಾರಾಟ ಮಾಡಲಿದೆ.

ಸಂಕ್ಷಿಪ್ತ ಸುದ್ದಿ

ಶ್ರೀಲಂಕಾ: ಭಾರತದ 54 ಮೀನುಗಾರರ ಬಿಡುಗಡೆ

ಕೊಲಂಬೊ (ಪಿಟಿಐ): 'ಶ್ರೀಲಂಕಾ ನೌಕಾಪಡೆಯಿಂದ ಬಂಧನಕ್ಕೆ ಒಳಗಾಗಿದ್ದ ಭಾರತದ ಎಲ್ಲಾ 54 ಮೀನುಗಾರರನ್ನು ಶ್ರೀಲಂಕಾ ಬಿಡುಗಡೆ ಮಾಡಿದೆ' ಎಂದು ಅಧಿಕಾರಿಗಳು ಶನಿವಾರ ತಿಳಿಸಿದರು.

'ಶ್ರೀಲಂಕಾದ ಜಲವಲಯದಲ್ಲಿ ಮೀನುಗಾರಿಕೆ ನಡೆಸುತ್ತಿದ್ದ ಆರೋಪದಡಿ ಈ ವಾರ ಭಾರತದ 54 ಮೀನುಗಾರರನ್ನು ಬಂಧಿಸಲಾಗಿತ್ತು. ಈ ಪೈಕಿ 40 ಮೀನುಗಾರರನ್ನು ಶುಕ್ರವಾರ ಬಿಡುಗಡೆ ಮಾಡಲಾಗಿತ್ತು. ಇನ್ನುಳಿದ 14 ಮೀನುಗಾರರನ್ನು ಶನಿವಾರ ಬೆಳಿಗ್ಗೆ ಬಿಡುಗಡೆ ಮಾಡಲಾಗಿದೆ' ಎಂದು ಹೇಳಿದರು.

ಸುಯೆಜ್ ಕಾಲುವೆ: ಹಡಗು ತೆರವು ಪ್ರಯತ್ನಕ್ಕೆ ಸಿಗದ ಫಲ

ಸುಯೆಜ್/ಕೈರೊ (ಎಪಿ/ಎಎಫ್‌ಪಿ): ಸುಯೆಜ್ ಕಾಲುವೆಯಲ್ಲಿ ಎವರ್ ಗಿವನ್ ಬೃಹತ್ ಗಾತ್ರದ ಹಡಗು ಸಿಲುಕಿಕೊಂಡು ಐದು ದಿನಗಳಾಗಿದ್ದು, ಅದನ್ನು ತೆರವುಗೊಳಿಸಲು ತಜ್ಞರು ವಿವಿಧ ರೀತಿಯ ಹೊಸ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ಕಾಲುವೆಗೆ ಅಡ್ಡವಾಗಿ ಸಿಕ್ಕಿಕೊಂಡಿರುವ ಹಡಗನ್ನು ತೆರವುಗೊಳಿಸಲು ಶುಕ್ರವಾರ ಕೈಗೊಂಡ ಪ್ರಯತ್ನಗಳು ಫಲ ನೀಡಲಿಲ್ಲ ಎಂದು ತಾಂತ್ರಿಕ ಅಧಿಕಾರಿಗಳು ತಿಳಿಸಿದ್ದಾರೆ. ಸಮುದ್ರದ ಉಬ್ಬರದ ಸಮಯವನ್ನು ನೋಡಿಕೊಂಡು ಹಡಗನ್ನು ಹೂಳಿನಿಂದ ಸರಿಸುವ ಪ್ರಯತ್ನ ನಡೆಯಲಿದೆ. ಹೀಗಾಗಿ ಈ ಕಾರ್ಯಾಚರಣೆಗೆ ಕೆಲವು ದಿನ ಬೇಕಾಗಬಹುದು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

27-3-2021

ಜಾವಾ 70/80(ಹೊಸ)	10900-10950
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಸೋಯಾ ಕಚ್ಚಾ	1235 (1235)
ಪಾಮ್ ವಾರದ ಡೆಲಿವರಿ	1200 (1193)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1700)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,725 (44,450)
ಬೆಳ್ಳಿ ಕೆ.ಜಿ 64,700 (64,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹390
12 ಮೊಟ್ಟೆಗೆ	₹53

ಮೈಸೂರು

100 ಮೊಟ್ಟೆಗೆ	₹393

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1250 (1245)
ಸೂರ್ಯಕಾಂತಿ (ರಿಫೈನ್ಡ್)	₹1700 (1740)
ಪಾಮೋಲಿನ್	₹1205 (1195)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000

ಕಾಳು ಮೆಣಸು	355

ರಾಮನಗರ ರೇಷ್ಮೆ

ಮಿಶ್ರತಳಿ (ಸಿ.ಬಿ)	235-391
ದ್ವಿತಳಿ (ಬಿ.ವಿ)	291-456

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	9900	9775	128.50 ಸೆಂಟ್ಸ್
ಎಸಿ	---	3900	3775	
ಆರ್‌ಪಿ	---	5100	5100	
ಆರ್‌ಸಿ	---	3050	2875	1399 ಡಾಲರ್ಸ್

ಅಂತರ ಕಾಯ್ದುಕೊಳ್ಳಿ



ವೇಗದ ಬದುಕಿನ ಡಿ.ಆರ್. 10



ಮಾಲಿವುಡ್‌ನಲ್ಲಿ ಕೆಂಬಾವುಟ! 11



ಗಲಿವರ್ ಮತ್ತು ಲಿಲಿಪುಟ್‌ಗಳು

ಬೊಂಬೆನಗರಿಯ ಕಾಮದೇವ



ಚನ್ನಪಟ್ಟಣದ ಕಾಮದೇವನಿಗೆ ಬುಲೆಟ್ ಬೇಕೇಬೇಕು

ಮಂಜುಳಾ ಸಿ.ಎಸ್.

ಬೊಂಬೆನಗರಿ ಎಂದೇ ಪ್ರಸಿದ್ಧಿಯಾದ ಚನ್ನಪಟ್ಟಣದಲ್ಲಿ ಆಚರಿಸುವ ಕಾಮನಹಬ್ಬದ ಬಗ್ಗೆ ಬಹುತೇಕರಿಗೆ ತಿಳಿದಿಲ್ಲ. ಇಲ್ಲಿನ ಮಂಡಿಪೇಟೆಯಲ್ಲಿ ಆಚರಿಸುವ ಕಾಮನ ಹಬ್ಬದ ಸೊಬಗು ಬಲು ವಿಶಿಷ್ಟವಾದುದು. ಶಿವರಾತ್ರಿ ಅಮಾವಾಸ್ಯೆಯಂದು ಹೊರಗೆ ಕಾಮಣ್ಣನ ಪ್ರತಿಷ್ಠಾಪನೆಯ ಮೂಲಕ ಹಬ್ಬದ ಆಚರಣೆ ಶುರುವಾಗುತ್ತದೆ. ಈ ಕಾಮಣ್ಣನ ಮೂರ್ತಿಯನ್ನು ಪೊರಕೆ ಕಾಮಣ್ಣನೆಂದೂ ಕರೆಯುತ್ತಾರೆ. ಏಕೆಂದರೆ ಈ ಕಾಮಣ್ಣನ ಮೂರ್ತಿಯು ಪೊರಕೆ, ಬಿದಿರಿನ ಮೊರ, ಪುರಿ ಉಂಡೆ, ಬೆರಣಿ ಹಾಗೂ ಹೂವಿನಿಂದ ತಯಾರಾಗಿರುತ್ತದೆ.

ಪೊರಕೆ ಕಾಮಣ್ಣನ ಪ್ರತಿಷ್ಠಾಪನೆಯ ನಂತರ ಹೋಳಿ ಹುಣ್ಣಿಮೆಯವರೆಗೆ ರತಿ ಮನ್ಮಥರ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿ ಅವುಗಳಿಗೆ ದಿನಕ್ಕೊಂದು ವೇಷಭೂಷಣದಿಂದ ಅಲಂಕಾರಿಸಲಾಗುತ್ತದೆ. ಉತ್ಸವದ ಪ್ರತಿದಿನವೂ ಹಬ್ಬದ ಕಳೆ ರಂಗೇರುವಂತೆ ಆಚರಣೆಗಳು ನಡೆಯುತ್ತವೆ.

ವರನಿಗೆ ಕಚ್ಚೆ ಪಂಚೆ, ಕೋಟು, ವಧುವಿಗೆ ಸೀರೆ, ತೋಳುಬಂದಿ, ಬೈತಲೆಬೊಟ್ಟು, ಸರ, ಕಿವಿಯೋಲೆ, ನಡುವಿನ ಡಾಬು, ಒಡವೆ, ಮೊಗ್ಗಿನ ಜಡೆ ಮುಂತಾದವುಗಳ ಅಲಂಕಾರ. ಪ್ರತಿದಿನ ಸಂಜೆ ವಿವಿಧ ರೀತಿಯ ಆಚರಣೆಗಳು. ಉದಾಹರಣೆಗೆ ನಿಶ್ಚಿತಾರ್ಥ ಪ್ರಸಂಗ, ವೈವಾಹಿಕ ಪ್ರಸಂಗ, ವಿವಾಹದ ನಂತರ ಸತ್ಯನಾರಾಯಣ ಪೂಜೆಯ ಸನ್ನಿವೇಶ ಹೀಗೆ. ನಿಶ್ಚಿತಾರ್ಥ ಹಾಗೂ ಮದುವೆಯ ಶಾಸ್ತ್ರ ಸಂಪ್ರದಾಯಗಳನ್ನು ವಿಧಿವತ್ತಾಗಿ ನಾದಸ್ವರ ಮತ್ತು ಮಂಗಳ ವಾದ್ಯಗಳೊಂದಿಗೆ ನಡೆಸಲಾಗುತ್ತದೆ. ಹದಿನೈದು ದಿನಗಳ ಕಾಲ ನಡೆಯುವ ಈ ಉತ್ಸವಕ್ಕೆ ಒಂದೂವರೆ ತಿಂಗಳಿನಿಂದಲೇ ಸಿದ್ಧತೆಗಳು ನಡೆಯುತ್ತವೆ.



ರತಿಯನ್ನು ಮದುವೆಯಾದ ಮನ್ಮಥ, ಅಲಂಕರಿಸಿದ ಕಾರಿನಲ್ಲಿ ಪತ್ನಿಯನ್ನು ಕರೆದೊಯ್ಯುವಾಗ...

ಹುಣ್ಣಿಮೆ ದಿನದ ಹಿಂದಿನ ಸಂಜೆ ಕಾಮದೇವನು ಶಿವನಿಗೆ ಹೂಬಾಣ ಬಿಡುವ ಸ್ತಬ್ಧಚಿತ್ರವನ್ನು ವೇದಿಕೆಯಲ್ಲಿ ಸಿದ್ಧಪಡಿಸಿ ಪುರಾಣದ ಸನ್ನಿವೇಶವನ್ನು ಮರುಕಳಿಸುವಂತೆ ಪ್ರತಿವರ್ಷವೂ ಸೃಷ್ಟಿಸುವುದು ವಿಶೇಷ. ಅದೇ ದಿನ ಸಂಜೆ ಮೈಸೂರಿನ ದಸರಾ ಜಂಬೂಸವಾರಿ ಹೋಲುವ ರೀತಿಯಲ್ಲಿ ದೇಶೀಯ ಜಂಬೂ ಸವಾರಿಯನ್ನು ಕಾಮದೇವನ ಮೂರ್ತಿಯೊಂದಿಗೆ ಮಾಡಲಾಗುತ್ತದೆ. ಪಟಾವಳಿ ಕಾಮಣ್ಣನ ಚಿತ್ರವೂ ಜತೆಗಿರುತ್ತದೆ. ಸಾಂಸ್ಕೃತಿಕ ಮೆರುಗನ್ನು ಹೆಚ್ಚಿಸುವ ಕರಗ, ಪೌರಾಣಿಕ ವೇಷಭೂಷಣ, ಕತ್ತಿವರಸೆ, ದೊಣ್ಣೆ ವರಸೆ ಮೊದಲಾದ ಮೇಳಗಳೊಂದಿಗೆ ನಗರದ ತುಂಬಾ ನಡೆಯುತ್ತದೆ.

ಉತ್ಸವ ಸಾಗುತ್ತ ಮುಂದೆ ಹೋದಂತೆ ರಸ್ತೆಯುದ್ದಕ್ಕೂ ಮಜ್ಜಿಗೆ ಪಾನಕ ಸಿಹಿತಿಂಡಿ ಪ್ರಸಾದಗಳನ್ನು ತಮ್ಮ ತಮ್ಮ ಮನೆಗಳ ಮುಂದೆ ವಿತರಿಸಿ ಜನರ ದಣಿವನ್ನು ಕಡಿಮೆ ಮಾಡುತ್ತಾರೆ. ಹೀಗೆ ಕಾಮರತಿಯ ಉತ್ಸವದ ಮೆರವಣಿಗೆ ಮುಗಿಸಿ ಸ್ಥಳಕ್ಕೆ ಬಂದ ನಂತರ ದಹನ ಮಾಡುವ ಜಾಗದಲ್ಲಿ ಕೊರಕಿ ಕಾಮಣ್ಣನನ್ನು ನಿಲ್ಲಿಸಿ ಅದಕ್ಕೆ ಕಟ್ಟಿಗೆ ಸೌದೆ, ಬೆರಣಿ, ಹಳೆ ಚಾಪೆ, ಒಣಗರಿಗಳನ್ನು ಹಾಕಿ ಕಾಮದಹನಕ್ಕೆ ಜಾಗ ಸಿದ್ಧಪಡಿಸುತ್ತಾರೆ.

ಕಾಮನ ಉತ್ಸವ ಮಂಟಪಕ್ಕೆ ಪೂಜೆ ಸಲ್ಲಿಸಿ ಕಾಮನ ಶಿರವನ್ನು ತಕ್ಷಣ ಅಲ್ಲಿಂದ ತೆಗೆದುಕೊಂಡು ಹೋಗುತ್ತಾರೆ. ಅನಂತರ ಪಟಾವಳಿ ಕಾಮಣ್ಣನ ಚಿತ್ರವನ್ನು ಉತ್ಸವ ಮಂಟಪದಿಂದ ತೆಗೆದು ದಹನಕ್ಕೆ ಸಿದ್ಧಪಡಿಸಿರುವ ಜಾಗದ ಸುತ್ತ ಸುತ್ತು ಹಾಕಿ ಅದನ್ನು ದಹನ ಜಾಗಕ್ಕೆ ಸೇರಿಸುತ್ತಾರೆ. ಅದೇ ಸಮಯಕ್ಕೆ ಕಾಮನ ಅಣಕು ಶವಯಾತ್ರೆ ಮಾಡಿ ದಹನ ಮಾಡುವ ಮುನ್ನ ಶಾಸ್ತ್ರಾನುಸಾರ ಚಟ್ಟ ಸಿದ್ಧಪಡಿಸುತ್ತಾರೆ. ದಹನದ ಜಾಗದಲ್ಲಿ ಪೊರಕೆ ಕಾಮಣ್ಣ ಹಾಗೂ ಪಟಾವಳಿ ಕಾಮಣ್ಣನ ಚಿತ್ರಪಟವನ್ನು ಕಾಮನ ಪ್ರತಿರೂಪವಾಗಿ ಇಟ್ಟು ಅದಕ್ಕೆ ಬೆಂಕಿಯನ್ನು ಹಚ್ಚಿ ದಹಿಸುತ್ತಾರೆ. ಇದು ಕಾಮದಹನದ ಸಂಕೇತ.

ಹುಣ್ಣಿಮೆ ಚಂದ್ರನ ಬೆಳಕಲ್ಲಿ ರತಿ ತನ್ನ ಪತಿ ಕಾಮದೇವನನ್ನು ಕಳೆದುಕೊಂಡು ದುಃಖಭರಿತಳಾಗಿ ತನ್ನ ಪತಿಗೆ ಮರುಜನ್ಮ ನೀಡಿ ಎಂದು ಶಿವನಲ್ಲಿ ಬೇಡುವ ಹಾಗೆ ಬಿಳಿ ಸೀರೆ ಉಡಿಸಿ, ತಮಟೆ, ಬ್ಯಾಂಡ್, ಭಜಂತ್ರಿಗಳ ಸದ್ದಿನ ಮೂಲಕ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗುತ್ತದೆ. ಶಿವನ ಅನುಗ್ರಹ ಪಡೆದು ಕಾಮದೇವನು ಮರುಜನ್ಮ ತಾಳುವ ಕತೆಯ ಪ್ರತೀಕವಾಗಿ ಹುಣ್ಣಿಮೆಯ ಮಾರನೇ ದಿನ ವಿಜಯೋತ್ಸವವನ್ನು ಆಚರಿಸುವ ಪದ್ಧತಿ ಇಲ್ಲಿದೆ. ಅಂದಿನ ದಿನ ಬಣ್ಣ ಬಣ್ಣದ ಓಕುಳಿ ಹರಿಸಿ ಇಲ್ಲಿನ ಜನರೆಲ್ಲ ಸಂತೋಷದಿಂದ ಕುಣಿದು ಕುಪ್ಪಳಿಸಿ ಉತ್ಸವವನ್ನು ಆಚರಿಸುತ್ತಾರೆ.



ರತಿ–ಮನ್ಮಥರ ಬೈಕ್ ಸವಾರಿ



ಕಲೆ: ಭಾವು ಪತ್ತಾರ್

ಕೊರೊನಾ ರೋಗಾಣುವು ಕರ್ನಾಟಕದಲ್ಲಿ ಮಾತ್ರ ವಿಚಿತ್ರವಾದ ರೂಪಾಂತರ ಪಡೆದು ಮಠಗಳನ್ನು, ಜಾತಿ ನಿಗಮಗಳನ್ನು ಯಾವ ಕಾರಣಕ್ಕೂ ಬಾಧಿಸದೇ ಕೇವಲ ಕನ್ನಡದ ಸಂಸ್ಥೆಗಳ ಮೇಲೆ ಆಕ್ರಮಣ ಮಾಡುತ್ತಿದೆ! ಆದರೆ, ಈ ಅನುದಾನ ತಾರತಮ್ಯದ ನಿಜವಾದ ಕಾರಣವೆಂದರೆ ಕರ್ನಾಟಕದ ಧಾರ್ಮಿಕ ಸಂಸ್ಥೆಗಳು ವೋಟ್ ಬ್ಯಾಂಕ್‌ಗಳಾದರೆ ಕನ್ನಡವು ಅಂತಹ ತಾಕತ್ತನ್ನು ಗಳಿಸಿಕೊಳ್ಳದಿರುವುದು...

ಕನ್ನಡಮ್ಮನ ಪೊರೆಯಲು ಕಾಸಿಲ್ಲ!

ರಾಜೇಂದ್ರ ಚೆನ್ನಿ

ಕೆಲವು ಮಾತುಗಳನ್ನು ಸುತ್ತುಬಳಸದೆ ನೇರವಾಗಿ ದಾಖಲಿಸುವುದು ಸೂಕ್ತ ಎಂದುಕೊಂಡಿದ್ದೇನೆ.

ಅ) ಇಂದಿನ ಸರ್ಕಾರವು ಕನ್ನಡವನ್ನು ತನ್ನ ಆದ್ಯತೆಯೆಂದು ಪರಿಗಣಿಸಿಲ್ಲ. ಕನ್ನಡ ಭಾಷೆಯ ಬಗ್ಗೆ ಯಾವುದೇ ಪ್ರಾಮಾಣಿಕ ಬದ್ಧತೆಯನ್ನು ಅದು ಹೊಂದಿಲ್ಲ. ಕಾಟಾಚಾರಕ್ಕೆ ಒಂದಷ್ಟು ಅಂಕಿಸಂಖ್ಯೆಗಳನ್ನು ಬಿಡುಗಡೆಮಾಡಿ ಸ್ವತಃ ಸರ್ಕಾರದ ಕಣ್ಣಿನಲ್ಲಿಯೇ ಮುಖ್ಯವಲ್ಲದ ಮಂತ್ರಿಗಳಿಂದ ಆಗಾಗ ಹೇಳಿಕೆಗಳನ್ನು ಕೊಡಿಸುವುದನ್ನು ಬಿಟ್ಟರೆ ಅದು ಯಾವುದೇ ಕ್ರಿಯಾಶೀಲತೆಯನ್ನು ತೋರಿಸಿಲ್ಲ. ದೇವರಾಜ ಅರಸರು, ಗೋಪಾಲಗೌಡರು ಮುಂತಾದವರು ಕನ್ನಡದ ಬಗ್ಗೆ ಹೊಂದಿದ್ದ ಗಂಭೀರ ಕಾಳಜಿ, ಚಿಂತನೆ ಇವೆಲ್ಲಾ ಈಗ ಗತಕಾಲದ ನೆನಪುಗಳು ಮಾತ್ರ.

ಆ) ಕನ್ನಡ ಭಾಷೆ, ಸಾಹಿತ್ಯ, ಕರ್ನಾಟಕದ ಕಲೆಗಳು ತಮ್ಮ ಉಳಿವಿಗಾಗಿ ಸರ್ಕಾರವನ್ನೇ ಯಾಕೆ ಅವಲಂಬಿಸಬೇಕು? ಈ ಅವಲಂಬನೆಯಿಂದಾಗಿ ಸರ್ಕಾರವು ಸಂಸ್ಕೃತಿ ಕ್ಷೇತ್ರದಲ್ಲಿ ಅತಿಕ್ರಮ ಪ್ರವೇಶ ಮಾಡಲು ನ್ಯಾಯಸಮರ್ಥನೆ ದೊರೆಯುತ್ತದೆಯಲ್ಲವೇ? ಅಲ್ಲದೆ, ಸರ್ಕಾರದ ಅಕಾಡೆಮಿಗಳು, ಪ್ರಾಧಿಕಾರಗಳು, ಇಲಾಖೆಗಳು ಸಂಸ್ಕೃತಿಹೀನ ನೌಕರಶಾಹಿ, ಅಧಿಕಾರಶಾಹಿಯ ಸಂಸ್ಥೆಗಳಾಗಿದ್ದರಿಂದ ಇವುಗಳು ಭಾಷೆ, ಸಂಸ್ಕೃತಿಗಳ ಆರೋಗ್ಯಕ್ಕೆ ಮಾರಕವಲ್ಲವೇ ಎನ್ನುವ ಅನೇಕ ವಾದಗಳು, ಪ್ರಶ್ನೆಗಳು ನಮ್ಮೆದುರಿಗಿವೆ. ಇವುಗಳಲ್ಲಿ ಬಹುಪಾಲು ಗಂಭೀರವಾದ ಚಿಂತನೆಯನ್ನು ಬಯಸುತ್ತವೆ. ಆದರೆ ಚರಿತ್ರೆಯ ವಾಸ್ತವವೆಂದರೆ ಭಾಷೆ, ಸಂಸ್ಕೃತಿಗಳು, ಅರ್ಥವ್ಯವಸ್ಥೆ, ರಾಜಕೀಯ ಹಾಗೂ ಸಂಸ್ಥೆಗಳನ್ನು ಮೀರಿದ ಆದರ್ಶ, ಕಾಲ್ಪನಿಕ ತಾಣದಲ್ಲಿ ಇರುವುದಿಲ್ಲ. ಅಂಥ ತಾಣವೊಂದು ಇಲ್ಲವೂ ಇಲ್ಲ.

ಕರ್ನಾಟಕದ ಏಕೀಕರಣಕ್ಕೆ ದೊಡ್ಡ ಪ್ರೇರಣೆಯಾಗಿದ್ದು ಸಾಹಿತ್ಯ, ಸಂಸ್ಕೃತಿಗಳ ಕ್ಷೇತ್ರವೇ. ನೆಹರೂ ಅವರ ವಿರೋಧದ ಮಧ್ಯೆಯೂ 1956ರಲ್ಲಿ ಅನೇಕ ರಾಜ್ಯಗಳಂತೆ ಇದೂ ಭಾಷಾವಾರು ರಾಜ್ಯವಾಗಿ ಸ್ಥಾಪನೆಯಾಯಿತು. ಕನ್ನಡ ನಾಡು 29 ತುಂಡುಗಳಲ್ಲಿ ಹಂಚಿಹೋಗಿದ್ದರಿಂದ ಹಾಗೂ ಅನೇಕ ಪ್ರಾಂತಗಳಲ್ಲಿ ಅದು ಆಡಳಿತಭಾಷೆ, ಮೇಲ್ವರ್ಗದ ಭಾಷೆ ಅಥವಾ ಸಾಮಾಜಿಕ ಘನತೆಯ ಭಾಷೆ ಆಗಿರಲಿಲ್ಲವಾದ್ದರಿಂದ ಸರ್ಕಾರವು ಕನ್ನಡ ಭಾಷೆಯನ್ನು ತನ್ನ ಆದ್ಯತೆಯನ್ನಾಗಿ ಮಾಡಿಕೊಳ್ಳುವುದು ಅನಿವಾರ್ಯವಾಗಿತ್ತು. ಅಲ್ಲದೆ ತೀವ್ರವಾದ ಭಾಷಿಕ, ಉಪಭಾಷಿಕ, ಸಾಂಸ್ಕೃತಿಕ ವಿಭಿನ್ನತೆಗಳಿದ್ದ ರಾಜ್ಯವನ್ನು ಒಂದುಗೂಡಿಸಲು ಕನ್ನಡವೆನ್ನುವ ಸಂಕಥನವು ಅನಿವಾರ್ಯವಾಗಿತ್ತು. ಅಂದರೆ ಈ ವಿದ್ಯಮಾನದಲ್ಲಿ ಆದರ್ಶ ಹಾಗೂ ವಾಸ್ತವಿಕ ರಾಜಕೀಯಗಳೆರಡೂ ಬೆರೆತುಕೊಂಡಿದ್ದವು.

ಅಷ್ಟೇ ಮುಖ್ಯವೆಂದರೆ ಅಂದಿನ ಕರ್ನಾಟಕದ ನಾಗರಿಕ ಸಮುದಾಯದ ಸ್ವರೂಪ. ಇದು ಜಾತಿ, ಅಧಿಕಾರ, ಪ್ರಾಂತಗಳ ರಾಜಕೀಯದಿಂದ ಹೊರತಾಗಿರದಿದ್ದರೂ ಸರ್ಕಾರ ಮತ್ತು ಸಾಹಿತ್ಯ ಸಂಸ್ಕೃತಿಗಳ ಮುಂದಾಳುಗಳ ಸಂಬಂಧವು ಅಸಮಾನತೆ ಅಥವಾ ಅವಲಂಬನೆಯದಾಗಿರಲಿಲ್ಲ. ಕುವೆಂಪು, ಮಾಸ್ತಿ, ಕಾರಂತ, ಬೇಂದ್ರೆ ಇವರನ್ನು ರಾಜ್ಯದ ಯಾವ ಸರ್ಕಾರವೂ ತನ್ನ ಆಶ್ರಿತರನ್ನಾಗಿ ನೋಡುವ ಸಾಧ್ಯತೆಯೇ ಇರಲಿಲ್ಲ. ಹೀಗಾಗಿ ತಾತ್ವಿಕವಾಗಿ, ನಡವಳಿಕೆಯ ಭಾಗವಾಗಿ ಸರ್ಕಾರಕ್ಕೆ ಕನ್ನಡವು ಆದ್ಯತೆಯಾಗಿತ್ತು.

ಇದಕ್ಕಿಂತ ಮುಖ್ಯವೆಂದರೆ ಕನ್ನಡದ ಪರವಾಗಿ ನಡೆದ ಅನೇಕ ಚಳವಳಿಗಳು ಜನಸಮುದಾಯದ ಚಳವಳಿಗಳಾಗಿ ಪರಿವರ್ತನೆಗೊಂಡು ಸತತವಾಗಿ ರಾಜಕೀಯ ಹಾಗೂ ಆಡಳಿತದ ಮೇಲೆ ತಮ್ಮ ಪ್ರಭಾವವನ್ನು ಬೀರಿದವು. ಬಹುಕಾಲದವರೆಗೆ ಕರ್ನಾಟಕದ ರಾಜಕೀಯವು ಈ ಚಳವಳಿಗಳನ್ನು ಪ್ರಜಾಪ್ರಭುತ್ವದಲ್ಲಿ ಬಹುಮುಖ್ಯವಾದ pressure groups ಎಂದು ಒಂದು ಮಟ್ಟದಲ್ಲಿ ಒಪ್ಪಿಕೊಂಡು ಅವುಗಳ ಅಭಿಪ್ರಾಯವನ್ನು ತಮ್ಮ ನೀತಿಗಳಲ್ಲಿ ಅಳವಡಿಸಿಕೊಂಡವು. ಹೀಗಾಗಿ ಕಾಗೋಡು ಚಳವಳಿ, ಸಮಾಜವಾದಿ ಚಳವಳಿಗಳು ಅರಸು ಅವರ ಭೂಸುಧಾರಣಾ ನೀತಿಗಳನ್ನು ಪ್ರಭಾವಿಸಿದವು. ಕನ್ನಡ ಮಾಧ್ಯಮ, ಕನ್ನಡ ಕಲಿಕೆ, ಇಂಗ್ಲಿಷ್‌ನ ಯಾಜಮಾನ್ಯ ಇವೆಲ್ಲವೂ ಸರ್ಕಾರದ ಶಿಕ್ಷಣ ನೀತಿಯನ್ನು ಬದಲಿಸಿದವು. ಈಗಲೂ ರಾಜ್ಯಭಾಷೆ, ಮಾತೃಭಾಷೆ ಇವುಗಳ ಪರವಾದ ಹೋರಾಟವು ಸಂಸದೀಯ ರಾಜಕಾರಣದಿಂದ ಬಗೆಹರಿಯಬೇಕಾಗಿದೆ.


ಹಾಗೆಂದ ಮಾತ್ರಕ್ಕೆ ಹಿಂದಿನ ಸರ್ಕಾರಗಳು ಕನ್ನಡದ ಪರವಾಗಿ ನಿಷ್ಠೆಯಿಂದಲೇ ನಡೆದುಕೊಂಡವು ಎನ್ನುವ ಭೋಳೆ ಕಥಾನಕವನ್ನು ನಂಬುವುದೆಂದಲ್ಲ. ಗೋಕಾಕ್ ಚಳವಳಿಗೆ ಕಾರಣವಾದದ್ದು ಅಂದಿನ ಸರ್ಕಾರ ಮತ್ತು ಅಧಿಕಾರಿಗಳ ಸಂಸ್ಕೃತ ಪ್ರೇಮದಿಂದ ಮತ್ತು ಇಂದಿಗೂ ಸಮಗ್ರವಾದ ನ್ಯಾಯವೂ ಸಿಕ್ಕದೇ ಇದ್ದುದಕ್ಕೆ ನಮ್ಮ ಎಲ್ಲಾ ರಾಜಕೀಯ ಪ್ರತಿನಿಧಿಗಳು ಇಂಗ್ಲಿಷ್ ಮಾಧ್ಯಮ ಶಾಲೆಗಳ ಮಾಲೀಕರಾಗಿರುವುದರಿಂದ ಎನ್ನುವುದನ್ನು ಮರೆಯಬಾರದು. ‘ಅಂದ ಕಾಲತ್ತಿಲ್’ ಎನ್ನುವ ಭಾವುಕ ಧೋರಣೆಯನ್ನು ಆಚೆಗಿಟ್ಟು ನೋಡಿದರೂ ಇಂದು ಎಲ್ಲಾ ಪಕ್ಷಗಳಲ್ಲಿ ಇರುವ ಜನಪ್ರತಿನಿಧಿಗಳು, ಮಂತ್ರಿಗಳು ಸಾಂಸ್ಕೃತಿಕವಾಗಿ ಅಶಿಕ್ಷಿತರಾಗಿದ್ದಾರೆ. (ಬೆರಳೆಣಿಕೆಯಷ್ಟು ಅಪವಾದಗಳಿರಬಹುದು). ಆರೋಗ್ಯಕರ ರಾಜಕೀಯಕ್ಕೆ ಬೇಕಾದ Cultural Capital (ಸಾಂಸ್ಕೃತಿಕ ಸಂಪನ್ಮೂಲ) ಅವರಲ್ಲಿ ಇಲ್ಲ. ಹೀಗಾಗಿ ಅವರಲ್ಲಿರುವ ರಾಜಕೀಯದ ಪರಿಕಲ್ಪನೆಯು ಸ್ವಾರ್ಥ, ದುರಾಸೆ, ಅಧಿಕಾರ ಮತ್ತು ಇತ್ತೀಚೆಗೆ ಲೈಂಗಿಕ ಸ್ವೇಚ್ಛಾಚಾರವನ್ನು ಮೀರಿಹೋಗುವುದಿಲ್ಲ. ಅತ್ಯಂತ ಸಿನಿಕತನದಿಂದ ಮತಗಳಿಸುವುದಕ್ಕೆ ಬೇಕಾದ ಆದ್ಯತೆಗಳು ಮಾತ್ರ ಅವರಿಗೆ ರಾಜಕೀಯ ಆದ್ಯತೆಗಳಾಗಿವೆ. ಅವುಗಳೆಂದರೆ ಜಾತಿ, ಉಪಜಾತಿ, ದುಡ್ಡು, ಕೋಮುವಾದ, ಹುಸಿ ಧಾರ್ಮಿಕತೆ ಇವೇ ಮುಂತಾದವುಗಳು. ಈ ಪಟ್ಟಿಯಲ್ಲಿ ಕನ್ನಡವು ಸೇರುವುದು ಸಾಧ್ಯವೇ ಇಲ್ಲ.

ಕನ್ನಡದ ಸಂಘಟನೆಗಳ ಕಿರಿಕಿರಿ ತಪ್ಪಿಸಿಕೊಳ್ಳಲು ಕನ್ನಡ ಪರವಾಗಿ ಪತ್ರಿಕಾ ಹೇಳಿಕೆಗಳನ್ನು ಕೊಡುವುದು, ಗಡಿ ಸಮಸ್ಯೆಗಳು ಬಂದಾಗ ಪೌರಾಣಿಕ ಕಂಪನಿ ನಾಟಕಗಳ ಡೈಲಾಗ್ ಹೇಳುವುದನ್ನು ಆಯಾ ಕಾಲಕ್ಕೆ ಮಾಡಿದರೆ ಸಾಕು.

ಮುಂದಿನ ಪುಟಕ್ಕೆ...

40ರ ಹರೆಯದ ‘ಮುಖ್ಯಮಂತ್ರಿ’!

ಸತತ 40 ವರ್ಷಗಳಿಂದ ದರ್ಬಾರ್ ನಡೆಸುತ್ತಿರುವ ‘ಮುಖ್ಯಮಂತ್ರಿ’ ಕನ್ನಡದ ಹವ್ಯಾಸಿ ರಂಗತಂಡ ‘ಕಲಾಗಂಗೋತ್ರಿ’ಯ ಕೊಡುಗೆ. ಅಂದಹಾಗೆ, ‘ಕಲಾಗಂಗೋತ್ರಿ’ಗೂ ಈಗ ಸುವರ್ಣ ಸಂಭ್ರಮ. ಇದೇ ಸಂಭ್ರಮದಲ್ಲಿ ‘ಮುಖ್ಯಮಂತ್ರಿ’ ನಾಟಕದ ಮುಖ್ಯ ಪಾತ್ರಧಾರಿ ‘ಮುಖ್ಯಮಂತ್ರಿ’ ಚಂದ್ರು ‘ಭಾನುವಾರದ ಪುರವಣಿ’ಯೊಂದಿಗೆ ನೆನಪಿನ ಬುತ್ತಿ ಬಿಚ್ಚಿಟ್ಟದ್ದಾರೆ...



‘ಮುಖ್ಯಮಂತ್ರಿ’ ನಾಟಕದ ದೃಶ್ಯ

ನಿರೂಪಣೆ: ಮಂಜುಶ್ರೀ ಎಂ. ಕಡಕೋಳ

‘ಮುಖ್ಯಮಂತ್ರಿ’ ನಾಟಕ 41ನೇ ವರ್ಷದತ್ತ ದಾಪುಗಾಲಿಟ್ಟಿರುವುದನ್ನು ಹಿಂತಿರುಗಿ ನೋಡಿದಾಗ ನನಗೆ ಆಶ್ಚರ್ಯ ಮತ್ತು ಅದ್ಭುತ ಎನಿಸುತ್ತದೆ. ನಾನೊಬ್ಬ ಹಳ್ಳಿಯ ಸಾಧಾರಣ ರೈತನ ಮಗ. ರಂಗಭೂಮಿ, ಕಿರುತೆರೆ, ರಾಜಕಾರಣಕ್ಕೆ ಹೋಗುತ್ತೇನೆ ಎಂದು ಕನಸಿನಲ್ಲೂ ಎಣಿಸಿರಲಿಲ್ಲ.

1980ರಲ್ಲಿ ರಣಜಿತ್ ಕಪೂರ್ ಅವರು ಹಿಂದಿಯಲ್ಲಿ ‘ಮುಖ್ಯಮಂತ್ರಿ’ ನಾಟಕ ಪ್ರದರ್ಶಿಸಿದ್ದರು. ಅದನ್ನು ಅದೇ ಹೆಸರಿನಲ್ಲೇ ಟಿ.ಎಸ್. ಲೋಹಿತಾಶ್ವ ಕನ್ನಡಕ್ಕೆ ತಂದರು. ‘ಮುಖ್ಯಮಂತ್ರಿ’ ಹೆಸರೇ ಆಕರ್ಷಕವಾಗಿದ್ದರಿಂದ ಬಿ.ವಿ. ರಾಜಾರಾಂ ಅವರಿಗೆ ಅದನ್ನು ರಂಗಕ್ಕೆ ತರಬೇಕೆಂಬ ಹುಚ್ಚು ಸಾಹಸವಿತ್ತು. ಬರೀ ಸಂಭಾಷಣೆಗಳೇ ತುಂಬಿದ್ದ ಈ ನಾಟಕವನ್ನು ಹೇಗೆ ಮಾಡೋದು ಅನ್ನೋದು ನನ್ನ ಪ್ರಶ್ನೆ. ‘ಕಲಾಗಂಗೋತ್ರಿ’ಯಿಂದ ಹೊಸ ನಾಟಕ ಪ್ರಯೋಗಿಸಲೇಬೇಕೆಂಬ ಹಟಕ್ಕೆ ಬಿದ್ದು ಅಂತೂ ‘ಮುಖ್ಯಮಂತ್ರಿ’ಯನ್ನು ಮಾಡಲು ನಿರ್ಧರಿಸಿದೆವು.

ನನ್ನ ಹಾಗೂ ಬಿ.ವಿ.ರಾಜಾರಾಂ ನಿರ್ದೇಶನ, ಲೋಹಿತಾಶ್ವ ಅವರಿಂದ ‘ಮುಖ್ಯಮಂತ್ರಿ’ ಪಾತ್ರ ಎಂದು ತೀರ್ಮಾನವಾಗಿತ್ತು. ನಾಟಕಕ್ಕೆ ಇನ್ನೇನು ನಾಲ್ಕೈದು ದಿನಗಳಿರುವಾಗ ಲೋಹಿತಾಶ್ವ ಮತ್ತು ನನಗೆ ಜ್ವರ ಕಾಣಿಸಿಕೊಂಡಿತು. ನಾನು ಬೇಗ ಚೇತರಿಸಿಕೊಂಡೆ. ಆದರೆ, ಲೋಹಿತಾಶ್ವ ಅವರಿಗೆ ಟೈಫಾಯಿಡ್ ಜ್ವರ. ಇನ್ನೇನು ನಾಟಕ ಡ್ರಾಪ್ ಮಾಡಿಬಿಡೋಣ ಅಂದುಕೊಳ್ಳುತ್ತಿರುವಾಗ, ಲೋಹಿತಾಶ್ವ ‘ನಾಟಕ ನಿಲ್ಲಿಸೋದು ಬೇಡ. ಮುಂದಿನ ಷೋ ನಾನು ಮಾಡ್ತೀನಿ. ಇದೊಂದು ಷೋ ಮುಗಿಸಿ’ ಎಂದರು. ‘ಮುಖ್ಯಮಂತ್ರಿ’ ಪಾತ್ರ ಮಾಡುವವರಾರು ಎನ್ನುವ ಪ್ರಶ್ನೆ ಬಂದಾಗ ಬಹುತೇಕರು ಹಿಂದೆ ಸರಿದರು. ಅಷ್ಟುದ್ದದ ಸಂಭಾಷಣೆಗಳನ್ನು ನೆನಪಿನಲ್ಲಿಟ್ಟುಕೊಳ್ಳೋದು ಕಷ್ಟವಾಗಿತ್ತು. ಕೊನೆಗೆ ನನಗೆ ‘ಮುಖ್ಯಮಂತ್ರಿ’ ಪಟ್ಟ ಕಟ್ಟಿಬಿಟ್ಟರು.

‘ಕಲಾಗಂಗೋತ್ರಿ’ಯ ಸಿ.ಎಂ

‘ಮುಖ್ಯಮಂತ್ರಿ’ ನಾಟಕವನ್ನು ಹಲವರು ಸೂಕ್ಷ್ಮವಾಗಿ ವಿಮರ್ಶಿಸಿದ್ದಾರೆ, ಆರೋಗ್ಯಪೂರ್ಣ ಚರ್ಚೆಗಳನ್ನು ನಡೆಸಿದ್ದಾರೆ. ಎಷ್ಟೋ ರಾಜಕಾರಣಿಗಳು ಚಂದ್ರು ಅವರ ಬಳಿ ತಮಾಷೆಯಾಗಿ ನನ್ನ ಪಾತ್ರವನ್ನೇ ಮಾಡಿದ್ದೀರಿ ಎನ್ನುತ್ತಿದ್ದರಂತೆ’ ಎನ್ನುತ್ತಾರೆ ‘ಮುಖ್ಯಮಂತ್ರಿ’ ನಾಟಕದ ನಿರ್ದೇಶಕ ಬಿ.ವಿ. ರಾಜಾರಾಂ.

ಕಲಾಗಂಗೋತ್ರಿ ತಂಡದ ಹೊಸ ಪ್ರಯೋಗಗಳಿಗೆ ‘ಮುಖ್ಯಮಂತ್ರಿ’ಯೇ ಆಪತ್ಬಾಂಧವ. ಅದರಲ್ಲಿ ಬಂದ ಹಣವೇ ಎಷ್ಟೋ ಬಾರಿ ತಂಡವನ್ನು ಮುನ್ನಡೆಸಿದೆ. ಈಗ ಸುವರ್ಣ ಸಂಭ್ರಮದಲ್ಲಿರುವ ಕಲಾಗಂಗೋತ್ರಿ ತಂಡದಿಂದ ‘ಮತ್ತೆ ಮುಖ್ಯಮಂತ್ರಿ’(ಏ.4) ಬರುತ್ತಿದೆ. ಈ ‘ಮುಖ್ಯಮಂತ್ರಿ’ ಹಿಂದಿನಂತಲ್ಲ. ಅದನ್ನು ಪ್ರೇಕ್ಷಕರು ಹೇಗೆ ಸ್ವೀಕರಿಸುತ್ತಾರೆ ಎಂಬ ಕಾತರದಿಂದಿದ್ದೇವೆ’ ಎಂದರು ರಾಜಾರಾಂ.

ನಾಟಕದ ಸ್ಕ್ರಿಪ್ಟ್‌ನಲ್ಲಿ ಕೆಲ ಬದಲಾವಣೆ ಮಾಡಿಕೊಂಡೆ. ಗಂಭೀರವಾಗಿದ್ದ ನಾಟಕದಲ್ಲಿ ತುಸು ಹಾಸ್ಯ ಸೇರಿಸಿದೆ. 1980ರ ಡಿಸೆಂಬರ್ 4ರಂದು ಸಂಸ ಬಯಲು ರಂಗಮಂದಿರದಲ್ಲಿ ನಾಟಕ ಪ್ರದರ್ಶನವಾಗಿ, ಪ್ರೇಕ್ಷಕರಿಗೆ ಹಿಡಿಸಿಬಿಟ್ಟಿತು. ‘ಮುಖ್ಯಮಂತ್ರಿ’ಯನ್ನು ನೋಡಲು ಪ್ರೇಕ್ಷಕರು ಕ್ಯೂ ನಿಂತು ಟಿಕೆಟ್ ಖರೀದಿಸಿದರು. ಅಂದು ‘ಮುಖ್ಯಮಂತ್ರಿ’ಯಾಗಿ ಗದ್ದುಗೆ ಏರಿದವನು ಇಂದಿಗೂ ಕೆಳಗಿಳಿದಿಲ್ಲ ನೋಡಿ!

ಆಕಸ್ಮಿಕ ಎಂಬಂತೆ 80ರಲ್ಲಿ ಈ ನಾಟಕ ಮಾಡಿದ ಐದು ವರ್ಷಗಳಲ್ಲೇ (1985) ನಾನು ನಿಜ ಜೀವನದಲ್ಲಿ ರಾಜಕಾರಣಿಯೂ ಆದೆ. ಆದರೆ, ಎಷ್ಟೇ ಬ್ಯುಸಿ ಇದ್ದರೂ ಕಲಾಗಂಗೋತ್ರಿ ಜತೆಗಿನ ರಂಗನಂಟು ಬಿಡಲಿಲ್ಲ. 80ರಿಂದ ಇಂದಿನವರೆಗೆ ಒಂದು ವರ್ಷವೂ ಈ ನಾಟಕ ಪ್ರದರ್ಶನ ತಪ್ಪಲಿಲ್ಲ.

‘ಮುಖ್ಯಮಂತ್ರಿ’ ಚಂದ್ರು ಆಗಿದ್ದು...

ನನ್ನ ಮೂಲ ಹೆಸರು ಎಚ್.ಎನ್.ಚಂದ್ರಶೇಖರ್. ಆಗ ರಂಗಭೂಮಿಯಲ್ಲಿ ಹಲವು ಚಂದ್ರಶೇಖರ್‌ಗಳಿದ್ದರು. ಮಾಧ್ಯಮದವರು ನನ್ನನ್ನು ‘ಮುಖ್ಯಮಂತ್ರಿ’ ಪಾತ್ರಧಾರಿ ಚಂದ್ರು ಅಂತ ಕರೆಯಲು ಶುರು ಮಾಡಿದರು. ಸಿನಿಮಾದವರೂ ‘ಮುಖ್ಯಮಂತ್ರಿ’ ಅನ್ನುವ ಪದ ಕ್ಯಾಚಿಯಾಗಿದೆ, ಅದೇ ಇರಲಿ ಎಂದು ಸಿನಿಮಾಗಳಲ್ಲೂ ‘ಮುಖ್ಯಮಂತ್ರಿ’ ಚಂದ್ರು ಅಂತಲೇ ಉಳಿಸಿಕೊಂಡರು.

ಜನಗಣತಿ ಸಮಯದಲ್ಲಿ ಮನೆಗೆ ಬಂದ ಸಿಬ್ಬಂದಿ, ಇದು ಯಾರ ಮನೆ ಅಂತ ಕೇಳಿದರು. ನನ್ನ ಪತ್ನಿ ‘ಮುಖ್ಯಮಂತ್ರಿ’ ಚಂದ್ರು ಮನೆ ಅಂದರು. ಅವರು ಹಾಗೇ ಬರೆದುಕೊಂಡು ಹೋದರು. ಕೊನೆಗೆ ಮತದಾರರ ಪಟ್ಟಿಯಲ್ಲೂ ಹಾಗೇ ನಮೂದಾಯಿತು. ಗೌರಿಬಿದನೂರು ಕ್ಷೇತ್ರದಿಂದ ನನಗೆ ಚುನಾವಣಾ ಟಿಕೆಟ್ ಕೊಟ್ಟರು. ನನಗೋ ನನ್ನ ಹೆಸರಿನ ಚಿಂತೆ. ನಾನು ‘ಮುಖ್ಯಮಂತ್ರಿ’ ಅಲ್ಲ ಬರೀ ಎಚ್.ಎನ್.ಚಂದ್ರಶೇಖರ್ ಅಂತ ಚುನಾವಣಾ ಆಯುಕ್ತರ ಬಳಿಗೆ ಹೋದರೆ, ಅವರು ಚುನಾವಣೆ ಘೋಷಣೆ ಆಗಿಬಿಟ್ಟಿದೆ, ವೋಟರ್ ಪಟ್ಟಿಯಲ್ಲೂ ನಿಮ್ಮ ಹೆಸರು ‘ಮುಖ್ಯಮಂತ್ರಿ’ ಚಂದ್ರು ಅಂತಲೇ ಇದೆ. ಏನೂ ಮಾಡಲಾಗದು ಅಂದರು. ಕೊನೆಗೆ ಅದೇ ಹೆಸರಿನಲ್ಲೇ ಚುನಾವಣೆಯಲ್ಲಿ ಗೆದ್ದದ್ದೂ ಆಯಿತು.

ಸದನದಲ್ಲಿ ಗಲಾಟೆ ಎಬ್ಬಿಸಿದ ‘ಮುಖ್ಯಮಂತ್ರಿ’

‘ಮುಖ್ಯಮಂತ್ರಿ’ಯಾಗಿಯೇ ಶಾಸಕನಾಗಿದ್ದ ನನ್ನ ಹೆಸರು ರಾಜಕಾರಣದಲ್ಲಿ ದೊಡ್ಡ ಗಲಾಟೆಗೆ ಕಾರಣವಾಯಿತು. ‘ಮುಖ್ಯಮಂತ್ರಿ’ ಪದ ಕೈಬಿಡಬೇಕೆಂದು ಸದನದಲ್ಲಿ ಈ ಬಗ್ಗೆ ದೊಡ್ಡ ಚರ್ಚೆಯೇ ನಡೆಯಿತು. ಕೊನೆಗೆ ಅಂದಿನ ಮುಖ್ಯಮಂತ್ರಿಯಾಗಿದ್ದ ಜೆ.ಎಚ್.ಪಟೇಲರು ಮಧ್ಯ ಪ್ರವೇಶಿಸಿ, ‘ಅವನು ನಾಟಕದಲ್ಲಿ ಮಾತ್ರ ‘ಮುಖ್ಯಮಂತ್ರಿ’ ಕಣ್ರಪ್ಪಾ. ಮುಖ್ಯಮಂತ್ರಿಯಾಗಿ ನಾನೇ ಸುಮ್ಮನಿದ್ದೀನಿ. ನೀವ್ಯಾಕೆ ಇಷ್ಟು ಗಲಾಟೆ ಮಾಡ್ತೀರಿ. ಆತ ‘ಕಾಯಂ ಮುಖ್ಯಮಂತ್ರಿ’ಯಾಗಿರಲಿ ಬಿಡಿ. ಅವನ ಹೆಸರು ‘ಮುಖ್ಯಮಂತ್ರಿ’ ಚಂದ್ರು ಅಂತಲೇ ಗೆಜೆಟ್‌ನಲ್ಲಿ ನೋಟಿಫೈ ಮಾಡಿ ಎಂದು ಸದನದಲ್ಲಿ ಘೋಷಿಸಿಬಿಟ್ಟರು.

‘ಮುಖ್ಯಮಂತ್ರಿ’ ಕಂಡ ಸಿ.ಎಂ.ಗಳು

ಆರ್.ಗುಂಡೂರಾವ್, ರಾಮಕೃಷ್ಣ ಹೆಗಡೆ, ಎಸ್.ಆರ್. ಬೊಮ್ಮಾಯಿ, ಎಚ್.ಡಿ.ದೇವೇಗೌಡ, ವೀರಪ್ಪ ಮೊಯಿಲಿ, ಎಸ್.ಬಂಗಾರಪ್ಪ, ಎಸ್.ಎಂ.ಕೃಷ್ಣ, ಬಿ.ಎಸ್.ಯಡಿಯೂರಪ್ಪ, ಜಗದೀಶಶೆಟ್ಟರ್, ಡಿ.ವಿ.ಸದಾನಂದಗೌಡ ಹೀಗೆ ಅನೇಕ ಮುಖ್ಯಮಂತ್ರಿಗಳು, ರಾಜಕಾರಣಿಗಳು ಈ ನಾಟಕ ವೀಕ್ಷಿಸಿದ್ದಾರೆ.

ಗುಂಡೂರಾವ್ ಅವರು ಈ ನಾಟಕ ನೋಡಲು ಬರುತ್ತೇನೆ ಅಂದಾಗ ನಾವೆಲ್ಲಾ ಭಯಬಿದ್ದು ಹೋಗಿದ್ದೆವು. ಏಕೆಂದರೆ ನಾಟಕದ ಪಾತ್ರ ಹೆಚ್ಚುಕಮ್ಮಿ ಅವರನ್ನೇ ಹೋಲುತ್ತಿತ್ತು. ಆದರೆ, ನಾಟಕ ಮುಗಿದ ಮೇಲೆ ಗುಂಡೂರಾವ್ ಬಂದು ನಾಟಕ ಚೆನ್ನಾಗಿದೆ ಎಂದು ಬೆನ್ನುತಟ್ಟಿದಾಗಲೇ ನಾವು ನಿಟ್ಟುಸಿರುಬಿಟ್ಟದ್ದು. ಮತ್ತೊಬ್ಬ ರಾಜಕಾರಣಿ ಎಂ.ಪಿ.ಪ್ರಕಾಶ್ ಅವರು ನನಗೆ ‘ಚಂದ್ರು ನೀವು ರಂಗದ ಮೇಲೆ ಸಂಜೆ ಈ ನಾಟಕ ಅಭಿನಯಿಸುತ್ತೀರಿ. ಆದರೆ, ನಾವು ರಾಜಕಾರಣಿಗಳು ಇದಕ್ಕಿಂತ ಚೆನ್ನಾಗಿ ಹಗಲು ಹೊತ್ತಿನಲ್ಲೇ ಅಭಿನಯಿಸುತ್ತೇವೆ’ ಅಂದಿದ್ದರು. ಸಹಾಯಾರ್ಥ ಪ್ರದರ್ಶನದಲ್ಲಿ ರಾಮಕೃಷ್ಣ ಹೆಗಡೆ ಅವರು ಸಾವಿರ ರೂಪಾಯಿ ಬೆಲೆ ನಾಟಕದ ಟಿಕೆಟ್ ಅನ್ನು ₹ 25 ಸಾವಿರ ಕೊಟ್ಟು ಖರೀದಿಸಿದ್ದರು. 13 ಮುಖ್ಯಮಂತ್ರಿಗಳು ನನ್ನನ್ನು ಚಂದ್ರು ಅಂತ ಕರೆಯಲೇ ಇಲ್ಲ. ಎಲ್ಲರೂ ‘ಮುಖ್ಯಮಂತ್ರಿಗಳೇ’ ಅಂತಲೇ ಕರೆಯುತ್ತಿದ್ದರು.

11 ಪುಟಕ್ಕೆ...

ಮುನ್ನೋಟ 28-03-2021 ರಿಂದ 03-04-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಹಿರಿಯರ ಮಾರ್ಗದರ್ಶನದಿಂದಾಗಿ ನಿಮ್ಮ ಕೆಲಸಗಳು ಸುಗಮವಾಗಿ ಆಗುತ್ತವೆ. ಉನ್ನತ ವ್ಯಾಸಂಗ ಮಾಡಲು ದೂರದ ಊರಿಗೆ ಹೋಗಿ ಬರುವ ಸಾಧ್ಯತೆ ಇದೆ. ಹಳೆಯ ವ್ಯವಹಾರವನ್ನು ಬಿಟ್ಟು ಹೊಸ ವ್ಯವಹಾರವನ್ನು ಮಾಡುವ ಸಾಧ್ಯತೆಗಳು ದಟ್ಟವಾಗಿವೆ. ಕೃಷಿಕರಿಗೆ ಉತ್ತಮ ಬೆಳೆಯ ಜೊತೆಗೆ ಉತ್ತಮ ಲಾಭ ಸಹ ದೊರೆಯುತ್ತದೆ. ವಿದೇಶಕ್ಕೆ ಆಹಾರ ಪದಾರ್ಥಗಳನ್ನು ರಫ್ತು ಮಾಡುವವರಿಗೆ ವ್ಯವಹಾರ ವಿಸ್ತಾರವಾಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ರಾಸಾಯನಿಕ ವಸ್ತುಗಳ ಮಾರಾಟಗಾರರಿಗೆ ವ್ಯವಹಾರ ವಿಸ್ತರಿಸಿ ಲಾಭ ಹೆಚ್ಚುತ್ತದೆ. ಆಸ್ತಿ ಹಂಚಿಕೆ ಕುರಿತು ಸಂಬಂಧಿಗಳೊಡನೆ ಸಾಕಷ್ಟು ಮಾತುಕತೆ ಮಾಡುವಿರಿ. ಅಗತ್ಯಕ್ಕೆ ತಕ್ಕಷ್ಟು ಹಣದ ಒಳಹರಿವು ಇರುತ್ತದೆ. ಉದ್ಯೋಗದಲ್ಲಿ ಹೆಚ್ಚಿದ ಜವಾಬ್ದಾರಿಗಳಿಂದ ಮಾನಸಿಕ ಒತ್ತಡ ಹೆಚ್ಚಾಗುವುದು. ಯಾವುದಕ್ಕೂ ನಿಮ್ಮ ಆಲೋಚನಾ ಶಕ್ತಿಯನ್ನು ಜಾಗೃತಗೊಳಿಸಿ ಸಂಯಮದಿಂದಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ರಾಜಕೀಯ ಪ್ರವೇಶವನ್ನು ಮಾಡಬೇಕೆಂದು ಇಚ್ಛಿಸುವವರಿಗೆ ಈಗ ಕಾಲ ಕೂಡಿ ಬರುತ್ತದೆ, ಮಾಡಿದ್ದ ಸಾಮಾಜಿಕ ಸೇವೆಗಳು ಈಗ ನಿಮ್ಮ ನೆರವಿಗೆ ಬರುತ್ತವೆ. ಮಕ್ಕಳ ಭವಿಷ್ಯದ ಬಗ್ಗೆ ಅತಿಯಾದ ಚಿಂತೆ ಬೇಡ. ಆರ್ಥಿಕತೆಯಲ್ಲಿ ಅಲ್ಪ ಚೇತರಿಕೆಯನ್ನು ಕಾಣಬಹುದು. ಖರ್ಚುವೆಚ್ಚಗಳಲ್ಲಿ ಹತೋಟಿಯನ್ನು ಮಾಡುವುದು ಒಳಿತು. ಆಭರಣ ಮಾರಾಟಗಾರರಿಗೆ ಉತ್ತಮ ವ್ಯಾಪಾರ ವಹಿವಾಟು ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನಿಮ್ಮ ಸಾಮರ್ಥ್ಯದ ಬಗ್ಗೆ ನಿಮಗೆ ಮೊದಲು ನಂಬಿಕೆ ಇರಲಿ, ಅರ್ಧ ಮನಸ್ಸಿನಿಂದ ಮಾಡಿದ ಕೆಲಸಗಳು ಫಲಿತಾಂಶ ಕೊಡುವುದಿಲ್ಲ. ಸಾಮಾಜಿಕ ಕ್ಷೇತ್ರಗಳಲ್ಲಿ ಹೆಚ್ಚಿನ ಮನ್ನಣೆಯೊಂದಿಗೆ ಸನ್ಮಾನಗಳು ಸಹ ದೊರೆಯುತ್ತವೆ. ಅವಿವಾಹಿತರಿಗೆ ಸಂಬಂಧಗಳು ಕೂಡಿಬರುವ ಸಾಧ್ಯತೆಗಳಿವೆ. ಆರ್ಥಿಕ ಸ್ಥಿತಿಯು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ವ್ಯಾಪಾರ ಮತ್ತು ವ್ಯವಹಾರಗಳಲ್ಲಿ ಕೊಂಚ ಹಿನ್ನಡೆಯ ಸಾಧ್ಯತೆಗಳಿವೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಪುಷ್ಪೋದ್ಯಮದಲ್ಲಿ ತೊಡಗಿಕೊಂಡಿರುವವರಿಗೆ ಉತ್ತಮ ಬೆಳವಣಿಗೆ ಇರುತ್ತದೆ. ಕೃಷಿ ಕಾರ್ಯಗಳಿಗಾಗಿ ಹೆಚ್ಚಿನ ಸಮಯ ಮತ್ತು ಹಣ ಮೀಸಲಿಡುವಿರಿ. ಹೊಸ ಮನೆ ಖರೀದಿ ಯತ್ನ ಮುಂದುವರೆಸುವಿರಿ. ಆದಾಯದಲ್ಲಿ ಸಾಕಷ್ಟು ಏರಿಕೆಯನ್ನು ಕಾಣಬಹುದು. ಹೊರಗುತ್ತಿಗೆ ಕೆಲಸ ಮಾಡುವವರಿಗೆ ಸಾಕಷ್ಟು ಬೆಳವಣಿಗೆ ಇರುತ್ತದೆ. ವಿದ್ಯಾರ್ಥಿಗಳು ಸಾಕಷ್ಟು ಶ್ರಮವನ್ನು ವಹಿಸಬೇಕಾದ ಅನಿವಾರ್ಯತೆ ಇದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಹಿರಿಯ ಉದ್ಯೋಗಿಗಳು ದೇಹದ ಆಲಸ್ಯದಿಂದ ತಮ್ಮ ಜವಾಬ್ದಾರಿಯ ಕಾರ್ಯ ಬಾಹುಳ್ಯವನ್ನು ಬೇರೆಯವರಿಗೆ ವಹಿಸಿ ಕೊಡಬೇಕಾದ ಸಾಧ್ಯತೆ ಇದೆ. ಆರೋಗ್ಯದ ವಿಷಯದಲ್ಲಿ ಎಚ್ಚರಿಕೆಯನ್ನು ವಹಿಸಬೇಕು. ಕೈ ಬಿಟ್ಟು ಹೋಗಿದ್ದ ಆಸ್ತಿಯ ಬಗ್ಗೆ ಸಾಕಷ್ಟು ವಿಚಾರಗಳು ತಿಳಿದುಬರುವುದು. ನಿಮ್ಮ ಸಂಶಯಗಳಿಂದ ಕುಟುಂಬದ ಸದಸ್ಯರನ್ನು ದೂರ ಮಾಡಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆ ಮಾಡುವ ಕಾಲ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ದುಡುಕು ಸ್ವಭಾವದಿಂದ ಕೆಲಸಕಾರ್ಯಗಳಲ್ಲಿ ಹಿನ್ನಡೆಯಾಗಬಹುದು. ಬಾಲ್ಯ ಸ್ನೇಹಿತರ ಪುನರ್ ಪರಿಚಯದಿಂದ ಹೊಸ ವ್ಯವಹಾರಗಳಲ್ಲಿ ಅವಕಾಶ ದೊರೆಯುತ್ತದೆ. ತಾಂತ್ರಿಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶಗಳು ಹುಡುಕಿಕೊಂಡು ಬರಲಿದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯಲಿದೆ. ಹೈನುಗಾರಿಕೆ ಮಾಡುವವರಿಗೆ ಹೆಚ್ಚಿನ ಲಾಭವಿದೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ

ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಉದ್ಯೋಗದಲ್ಲಿ ನಿಮ್ಮ ಶ್ರದ್ಧೆಯನ್ನು ಕಂಡು ಹಿರಿಯ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸುವರು. ಕಾರ್ಯ ಸಾಧನೆಗಾಗಿ ಹೆಚ್ಚಿನ ಶ್ರಮವಹಿಸಿ ಯಶಸ್ಸನ್ನು ಸಾಧಿಸುವಿರಿ. ನಿಮ್ಮ ಪ್ರಾಮಾಣಿಕತೆಯಿಂದಾಗಿ ಜನರು ನಿಮ್ಮ ಬಗ್ಗೆ ಅಭಿಮಾನವನ್ನು ತೋರುವರು.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಬಹಳ ದಿನಗಳಿಂದ ಬರದೇ ಇದ್ದ ಬಾಕಿ ಹಣ ಈಗ ಬರಲಾರಂಭಿಸುತ್ತದೆ. ನಿಂತು ಹೋಗಿದ್ದ ವಿವಾಹ ಸಂಬಂಧದ ಮಾತುಕತೆ ಈಗ ಮುಂದುವರೆಯಬಹುದು. ಕಠಿಣ ಪರಿಸ್ಥಿತಿಗಳಲ್ಲಿ ಉತ್ತಮ ನಿರ್ಧಾರ ತೆಗೆದುಕೊಂಡು ಯಶಸ್ಸನ್ನು ಕಾಣುವಿರಿ. ಸಂಗಾತಿಯ ಸಲಹೆಗಳಿಗೆ ಅನಾದರ ಮಾಡಬೇಡಿ. ಹಿರಿಯರು ತಮ್ಮ ದುಡುಕು ಮಾತಿನಿಂದ ಸಂಬಂಧಗಳನ್ನು ಕಳೆದುಕೊಳ್ಳಬಹುದು. ಮಕ್ಕಳಿಂದ ಧನಸಹಾಯ ಸಿಗುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಆಭರಣಗಳ ವ್ಯಾಪಾರಿಗಳಿಗೆ ವ್ಯಾಪಾರ ವೃದ್ಧಿಸಿ ಲಾಭ ಹೆಚ್ಚುತ್ತದೆ. ನಿಮ್ಮ ಮನಸ್ಸಿನ ಭಾವನೆಗಳನ್ನು ಎಲ್ಲರೊಂದಿಗೆ ಹಂಚಿಕೊಳ್ಳುವುದು ಅಷ್ಟು ಒಳಿತಲ್ಲ. ಭಕ್ತಿಗೀತೆಗಳನ್ನು ಹಾಡುವವರಿಗೆ ಬೇಡಿಕೆ ಹೆಚ್ಚಾಗುವುದು. ಹೊಸ ಪಾಲುದಾರರೊಡನೆ ಸೇರಿ ಮಾಡಿದ ವ್ಯವಹಾರಗಳಲ್ಲಿ ಲಾಭ ಬರುತ್ತದೆ. ರಂಗಕಲೆಯನ್ನು ಅಭ್ಯಾಸ ಮಾಡುವವರಿಗೆ ಉತ್ತಮ ಗುರುಗಳು ದೊರೆತು ಉತ್ತಮ ಸೌಲಭ್ಯ ಸಹ ಸಿಗುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಆತ್ಮೀಯರಿಂದ ಸಾಕಷ್ಟು ಸಲಹೆಗಳು ಬರುತ್ತವೆ, ಅವುಗಳನ್ನು ಪರಿಶೀಲಿಸಿ ಕಾರ್ಯಗತಗೊಳಿಸಿರಿ. ಹಣದ ಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಹಿರಿಯರಿಂದ ಉಡುಗೊರೆಗಳನ್ನು ಪಡೆಯುವ ಸಾಧ್ಯತೆಗಳಿವೆ. ಸರ್ಕಾರಿ ಮಟ್ಟದ ಕೆಲಸ ಆಗುವುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಹಿಂದಿನ ಕಹಿ ನೆನಪುಗಳು ಮಾಸಿ ಹೊಸ ದಾರಿ ಆರಂಭವಾಗುತ್ತದೆ. ದೂರದೂರಿನಿಂದ ಬಂಧುಗಳ ಆಗಮನವಾಗುತ್ತದೆ. ಅವರು ನಿಮಗೆ ಹೊಸ ವರಮಾನದ ಮಾರ್ಗವೊಂದನ್ನು ತಿಳಿಸುವರು, ನಿಮ್ಮ ಶಕ್ತಿಗನುಸಾರವಾಗಿ ಅರಿತು ಮುನ್ನಡೆಯಿರಿ. ಕೆಲವರಿಗೆ ದೂರದೂರಿಗೆ ಉದ್ಯೋಗ ನಿಮಿತ್ತ ವರ್ಗಾವಣೆಯಾಗುವ ಸಾಧ್ಯತೆಗಳಿವೆ. ಸ್ವಂತ ಉದ್ದಿಮೆಯನ್ನು ನಡೆಸುತ್ತಿರುವವರ ಲಾಭ ಹೆಚ್ಚುತ್ತದೆ.

ಪದಬಂಧ 2680



ಮೇಲಿನಿಂದ ಕೆಳಕ್ಕೆ
1. ಅನೇಕ ವೇಷಗಳಲ್ಲಿ ಅವತಾರಗಳಲ್ಲಿ ಕಾಣಿಸಿಕೊಳ್ಳುವವ 5
2. ಭಾರತದಲ್ಲಿ ಪ್ರಚಲಿತ ನೇಪಾಳೀ ಧರ್ಮಗುರು 5
3. ಈ ಚೌಕ ತುಂಬಿಸಲು ನೀವು ಹುಡುಕುತ್ತಿರುವ ಅರ್ಥ ಕೊಡುವ ಅಕ್ಷರಗಳ ಜೋಡಣೆ 2
4. ನಮ್ಮ ನೆರೆರಾಜ್ಯ ತೆಲುಗುನಾಡಿನ ಗಂಡು 3
6. ಮುಷ್ಕರಕ್ಕೆ ಮುಡಿಪಾದ ಭೂಮಿ ತಲೆಕೆಳಗು 3
7. ರಾಕ್ಷಸ ಶಿಲ್ಪಿ ಕಟ್ಟಿದ ಭವ್ಯವಾದ ಮನೆ 5
8. ಕಾಲಂದುಗೆಯಿಂದ ಹೊರಟ ನಾದದ ಉಲಿ 5
11. ಜನಾಭಿಪ್ರಾಯದ ಮೇಲೆ ಪ್ರಭಾವ ಬೀರಲು ಸಿದ್ಧಪಡಿಸುವ ಹುಸಿ ಸುದ್ದಿಕತೆ 5
12. ದಕ್ಷಿಣಕ್ಕೆ ಸೇರಿದ ಅಶ್ವಬಲ 5
15. ವಧು ಹಾಕುವ ಶ್ರೇಷ್ಠವಾದ ಹೂಹಾರ 5
16. ಆತುರವಿಲ್ಲದ ವಿಳಂಬ ವೇಗ 5
18. ಬಟ್ಟೆ ಕೊಡುವ ಉತ್ತರಕರ್ನಾಟಕದ ಕುಲನಾಮ 3
19. ಹೂವಿನ ನಗು ಮುದುಡಿ ಹೋಗುವ ಸ್ಥಿತಿ 3
20. ದಾರಿಕಾಣಿಸುವ ಬೆರಳು 2

ಎಡದಿಂದ ಬಲಕ್ಕೆ
1. ಬಡವನ ಜೊತೆ ಬರುವ ಶ್ರೀಮಂತ 3
3. ಸಿಂಹಾಸನದ ಮೇಲೆ ಕುಳಿತಿರುವ ದಶರಥ ಪುತ್ರ 5
5. ಸ್ವತಂತ್ರಕಾಲದಲ್ಲಿ ಪ್ರಚಲಿತ ಕನ್ನಡ ಹಾಗು ಮರಾಠಿ ಭಾಷಾ ಜಾನಪದ ಹಾಡು 5
7. ವಿವೇಕ ಮತ್ತು ಬುದ್ಧಿ ಕಳೆದುಕೋ 4
9. ರಾಯನೆಂಬ ಪಟ್ಟ ಪಡೆದು, ಜೂಜಲ್ಲಿ ಸೋತು, ಸತ್ಯವಂತನೆಂಬ ಬಿರುದು ಪಡೆದ ಹಿರಿಯ ಪಾಂಡವ 4
10. ಉಸಿರಿನ ದನಿಯಲ್ಲಿ ಹೇಳಿದ ಗುಟ್ಟು 4
13. ಉಗ್ರಶಿವನ ಉಗ್ರ ನೃತ್ಯ 5
14. ಹಳೆಯ ಗಾಯಕರ ಶ್ರೋತೃಗಳಿಗೆ ಕೇಳಿಸುವ ಹೊಸ ಕೊರಲ ಸ್ವರ 4
17. ಕೃಷ್ಣಾನುಜನಿಗೆ ಭಗವಂತನ ಸ್ಥಾನ 4
19. ಎಲ್ಲೋ ಹುಟ್ಟಿ ಎಲ್ಲೋ ಹರಿಯುವ ತೊರೆಯ ಉಗಮ ಸ್ಥಾನ 4
20. ಹೂಗಿಡಗಳನ್ನು ಪೋಷಿಸಿ ರಕ್ಷಿಸುವವ 5
21. ಕೇರಳದ ಗುರುವಿನ ಸ್ಥಳದಲ್ಲಿ ಕೃಷ್ಣ ನೆಲಸಿದ್ದಾನೆ 5
22. ಕೆಳತನದಿಂದ ಸಂಬೋಧನೆಗೆ ಪ್ರಾಪ್ತವಾದ ಗೆಳತಿ ಅವತಾರ 3

ಪದಬಂಧ ಉತ್ತರ -2679

ಮೇಲಿಂದ ಕೆಳಕ್ಕೆ

1.ವಿರಹಗೀತೆ 2.ಜಪತಪ 3.ಆಡಿ 5.ಟಪ 6.ಮಾನವೀ 8.ಗದರು 10.ದನಗಾಹಿ 12.ನಿತ್ಯಸುಖ 14.ಹೊಂದಿಸು 15.ಮನಮೋಹನ 16.ತಗಡು 18.ಗಮನಿಸು20.ಲಗು 21.ಸೊಸೆ

ಎಡದಿಂದ ಬಲಕ್ಕೆ

1.ವಿರಾಜ 3.ಆಕಾರ 4.ಪಲ್ಲಟ 6.ಮಾಗಡಿ 7.ಪರಾಗ 9.ಗೀಗೀಪದ 11.ವೀರವನಿತೆ 13.ನವಿಲೂರು 14.ಹೊಂಗನಸು 15.ಮಹಿಮಾನ್ವಿತ 17.ಖಗಗಾನ 19.ಸುಫಲ 21.ಸೊಗಡು 22.ಗುಮಾನಿ 23.ಹತಾಸೆ 24.ಸುಮನ

ಇದೋ ದೇಸಿ ಫ್ಯಾಷನ್!

ಎಂ.ರಾಘವೇಂದ್ರ



ಸಾಗರ ತಾಲ್ಲೂಕಿನ ಹೊನ್ನೇಸರ ಗ್ರಾಮದಲ್ಲಿ ನಡೆದ ಚರಕ ಉತ್ಸವ ನೋಡಲು ಬಂದವರಿಗೊಂದು ಅಚ್ಚರಿ ಕಾದಿತ್ತು. ಕೊರೊನಾ ಏರುಗತಿಯಲ್ಲಿದ್ದ ಕಾಲದಲ್ಲಿ ಚರಕದ 'ಶ್ರಮಜೀವಿ'ಗಳು ನಿರ್ಮಿಸಿದ ಮಣ್ಣಿನ ಕಟ್ಟಡದಲ್ಲಿ ಹಿನ್ನೆಲೆಯಿಂದ ಪಾಶ್ಚಾತ್ಯ ಸಂಗೀತ ಅಲೆ ಅಲೆಯಾಗಿ ತೇಲಿ ಬರುತ್ತಿತ್ತು. ವೇದಿಕೆಯಲ್ಲಿ ಮಂದವಾದ ಬೆಳಕು ಉಜ್ವಲಗೊಂಡು ವಿವಿಧ ರೂಪ ಪಡೆಯುತ್ತಿದ್ದಂತೆ ತರಹೇವಾರಿ ಕೈಮಗ್ಗದ ಉಡುಪು ಧರಿಸಿದ್ದ ಹೆಣ್ಣುಮಕ್ಕಳು ರ‍್ಯಾಂಪ್ ಮೇಲೆ ಹೆಜ್ಜೆ ಹಾಕಿದರು. ಹೀಗೆ 'ಕ್ಯಾಟ್ ವಾಕ್' ಮಾಡಿದ ರೂಪದರ್ಶಿಗಳು ಚರಕದಲ್ಲೇ ಕೆಲಸ ಮಾಡುವ ಹೆಣ್ಣುಮಕ್ಕಳೇ ಆಗಿದ್ದರು. ಅವರು ಮೈತುಂಬಾ ತೊಟ್ಟಿದ್ದ ಅಪ್ಪಟ ದೇಸಿ ಉಡುಪುಗಳನ್ನು ನೋಡಿ ಕೈಮಗ್ಗದ ಉತ್ಪನ್ನಗಳಿಗೆ ಇಂತಹ ವಿನ್ಯಾಸ ಸಾಧ್ಯವೇ ಎಂದು ಅಲ್ಲಿ ನೆರೆದಿದ್ದವರು ಹುಬ್ಬೇರಿಸಿ ಚಪ್ಪಾಳೆ ತಟ್ಟಿದರು.

ಚರಕದ ಮಹಿಳೆಯರ ಪುಟ್ಟ ಮಕ್ಕಳು ಶುಭ್ರ ಬಿಳಿಬಣ್ಣದ ಪುಟ್ಟ ಗಾತ್ರದ ಪಂಚೆ, ಅಡಿಕೆ ಚೊಗರು ಬಳಸಿದ ಕೈಮಗ್ಗದ ಅಂಗಿ, ಅದರ ಮೇಲೊಂದು ಶಲ್ಯ ಹೊದ್ದು ಹಿನ್ನೆಲೆಯಲ್ಲಿ ಕೇಳುತ್ತಿದ್ದ ಸಂಗೀತಕ್ಕೆ ತಕ್ಕಂತೆ ಲಯಬದ್ಧವಾಗಿ ಪುಟ್ಟ ಪುಟ್ಟ ಹೆಜ್ಜೆ ಇಟ್ಟಾಗ ಚಪ್ಪಾಳೆ ಸದ್ದು ತಾರಕಕ್ಕೇರಿತ್ತು.

ಕೈಮಗ್ಗದ ಉತ್ಪನ್ನಗಳು ಎಂದರೆ ಅದರಲ್ಲಿ ವೈವಿಧ್ಯವಿಲ್ಲ ಎಂಬ ಭಾವನೆ ಸಾಮಾನ್ಯ. ಈ ಭಾವನೆಯನ್ನೇ ಸುಳ್ಳು ಮಾಡುವಂತೆ ಅವತ್ತು ಮಲೆನಾಡಿನ ಹಳ್ಳಿಯ ಹೆಣ್ಣುಮಕ್ಕಳು 'ದೇಸಿ ಫ್ಯಾಷನ್ ಶೋ' ಮೂಲಕ ಹೊಸ ಲೋಕವನ್ನೇ ಅನಾವರಣಗೊಳಿಸಿದ್ದರು.

ಕೈಮಗ್ಗದ ಉತ್ಪನ್ನಗಳಿಗೆ 'ವಿನ್ಯಾಸ'ದ ಹೊಸ ಸಾಧ್ಯತೆಗಳನ್ನು ಅನ್ವೇಷಿಸುವ ಕಾರ್ಯ ಈಗ ಚರಕ ಸಂಸ್ಥೆಯಲ್ಲಿ ಆರಂಭವಾಗಿದೆ. ಇಲ್ಲಿನ ಉತ್ಪನ್ನಗಳಾದ ಸೀರೆ, ಚೂಡಿದಾರ್, ದುಪ್ಪಟ್ಟಾ, ಓವರ್ ಕೋಟ್, ಶಾರ್ಟ್ ಟಾಪ್, ಸ್ಕರ್ಟ್, ಪಂಚೆ, ಕುರ್ತಾ, ಪೈಜಾಮಾ, ಜುಬ್ಬಾ, ನೈಟ್ ಪ್ಯಾಂಟ್, ಶರ್ಟ್, ಮಕ್ಕಳ ಉಡುಪು, ಗಾಂಧಿ ಟೋಪಿ, ಶಾಲು, ಶಲ್ಯ, ಟವೆಲ್, ಕೌದಿ, ಬ್ಯಾಗ್, ಪರ್ಸ್ ಮೊದಲಾದ ಉತ್ಪನ್ನಗಳಿಗೆ ಹೊಸರೂಪ ನೀಡುವ ಪ್ರಯೋಗಕ್ಕೆ ಚರಕ ಮುಂದಾಗಿದೆ.

ಚರಕದ ಈ ಹೆಜ್ಜೆಯು ತಜ್ಞರ ಮೆಚ್ಚುಗೆಯನ್ನೂ ಗಳಿಸಿದೆ. 'ಈಗಿನ ಬಹುತೇಕ ಯೋಜನೆಗಳು ನಗರ ಕೇಂದ್ರಿತವಾಗಿವೆ. ಹಳ್ಳಿಯ ಜನರನ್ನು ನಗರಕ್ಕೆ ತರುವುದೇ ಅಭಿವೃದ್ಧಿಯ ಸೂಚ್ಯಂಕ ಎನ್ನಲಾಗುತ್ತಿದೆ. ನಗರದವರನ್ನು ಹಳ್ಳಿಗೆ ಕರೆಸುವ ಡಿಸೈನ್ ಸೆಂಟರ್‌ನ ಪರಿಕಲ್ಪನೆ ವಿಶಿಷ್ಟವಾಗಿದೆ' ಎನ್ನುತ್ತಾರೆ ಸಮಾಜಶಾಸ್ತ್ರಜ್ಞ ಚಂದನ್ ಗೌಡ.

ನೈಸರ್ಗಿಕ ಬಣ್ಣದ ಉಡುಪುಗಳು ಚರಕದ ಹೆಗ್ಗಳಿಕೆ. ಯಂತ್ರಚಾಲಿತ ಮುದ್ರಣ ವ್ಯವಸ್ಥೆ ಬರುವ ಮೊದಲು ಬಟ್ಟೆಗಳ ಮೇಲೆ ಪಡಿಯಚ್ಚು ಮೂಲಕ ಚಿತ್ರಗಳನ್ನು ಮುದ್ರಿಸಲಾಗುತ್ತಿತ್ತು. ಚರಕ ಈಗಲೂ ಪಡಿಯಚ್ಚು ಮುದ್ರಣ ತಂತ್ರಜ್ಞಾನವನ್ನೇ ಬಳಸುತ್ತಿದೆ. ಕರ್ನಾಟಕದ ಪ್ರಮುಖ ಜಾನಪದ ದೃಶ್ಯಕಲಾ ಪ್ರಕಾರವಾಗಿರುವ ಹಸೆಚಿತ್ತಾರ ಕಲೆಯನ್ನು ತನ್ನ ಉಡುಪುಗಳ ಮೇಲೆ ವಿನ್ಯಾಸದ ರೂಪದಲ್ಲಿ ಯಶಸ್ವಿಯಾಗಿ ಚರಕ ಅಳವಡಿಸುತ್ತಿದೆ.

ಹೊನ್ನೇಸರ ಗ್ರಾಮದ ಶ್ರಮಜೀವಿ ಆಶ್ರಮದಲ್ಲಿ 'ಡಿಸೈನ್ ಸೆಂಟರ್' ಆರಂಭಿಸಲು ಭರದಿಂದ ಸಿದ್ಧತೆಗಳು ನಡೆದಿವೆ. ನೇಕಾರರು, ವಿನ್ಯಾಸಕಾರರು, ಉದ್ಯಮಿಗಳು, ಸಮಾಜ ಶಾಸ್ತ್ರಜ್ಞರು, ಕಲಾ ಮಾಧ್ಯಮದ ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಕ್ಷೇತ್ರಗಳ ಪರಿಣತರ ಕಾರ್ಯಾಗಾರವನ್ನೂ ಸಂಘಟಿಸಲಾಗಿದೆ.

ಚರಕ ಸಂಸ್ಥೆಯಲ್ಲಿ ರೂಪುಗೊಳ್ಳಲಿರುವ 'ಡಿಸೈನ್ ಸೆಂಟರ್'ನ ಸ್ವರೂಪ ಹೇಗಿರಬೇಕು? ದೇಶದ ಇತರ ರಾಜ್ಯಗಳಲ್ಲಿ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳ ಮಾದರಿಯನ್ನು ಅಳವಡಿಸಿಕೊಳ್ಳಬಹುದೇ ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಕ್ರಿಯೆ ನಡೆದಿದೆ.

'ಡಿಸೈನ್' ಎಂಬುದು ಸದ್ಯದ ಮಟ್ಟಿಗೆ ಕಾರ್ಪೊರೇಟ್ ಭಾಷೆಯಾಗಿ ಚಾಲ್ತಿಯಲ್ಲಿದೆ. ಅದನ್ನು ಬೇರುಮಟ್ಟಕ್ಕೆ ಇಳಿಸಿ ನಗರಗಳಿಂದ ಹಳ್ಳಿಗೆ ತರಬೇಕು.

> 'ಡಿಸೈನ್' ಎಂಬುದು ಸದ್ಯದ ಮಟ್ಟಿಗೆ ಕಾರ್ಪೊರೇಟ್ ಭಾಷೆಯಾಗಿ ಚಾಲ್ತಿಯಲ್ಲಿದೆ. ಅದನ್ನು ಬೇರುಮಟ್ಟಕ್ಕೆ ಇಳಿಸಿ ನಗರಗಳಿಂದ ಹಳ್ಳಿಗೆ ತರಬೇಕು. ಕುಶಲಕರ್ಮಿಗಳು ಮತ್ತು ವಿನ್ಯಾಸಕಾರರ ನಡುವಿನ ಅಂತರವನ್ನು ಹೋಗಲಾಡಿಸಬೇಕು ಎಂಬ ಆಶಯ ಚರಕದ ಈ ಯತ್ನದ ಹಿಂದಿದೆ...

ಕುಶಲಕರ್ಮಿಗಳು ಮತ್ತು ವಿನ್ಯಾಸಕಾರರ ನಡುವಿನ ಅಂತರವನ್ನು ಹೋಗಲಾಡಿಸಬೇಕು ಎಂಬ ಆಶಯ ಚರಕದ ಈ ಯತ್ನದ ಹಿಂದಿದೆ. ಸದ್ಯಕ್ಕೆ ಚಾಲ್ತಿಯಲ್ಲಿರುವ ಆರ್ಟ್ ಸ್ಕೂಲ್‌ಗಳಿಗೆ ಕುಶಲಕರ್ಮಿಗಳ ಮಕ್ಕಳು ಪ್ರವೇಶ ಪಡೆಯಲು ಸಾಧ್ಯವಾಗದ ಸ್ಥಿತಿ ಇದೆ. ನೂತನ ಡಿಸೈನ್ ಸೆಂಟರ್‌ನಲ್ಲಿ ಅಂತಹ ಮಕ್ಕಳಿಗೂ ಪ್ರವೇಶ ದೊರಕಿಸಿ ಕೂಲಿಕಾರರನ್ನು ಕಲಾಕಾರರನ್ನಾಗಿ ರೂಪಿಸುವ ಆಶಯವನ್ನೂ ಸಂಸ್ಥೆ ಹೊಂದಿದೆ.

'ಡಿಸೈನ್' ಎನ್ನುವುದು ತಂತ್ರಜ್ಞಾನವನ್ನು ಬಿಟ್ಟಿಲ್ಲ. ಆದರೆ ಮಿತವ್ಯಯದ, ಪರಿಸರಸ್ನೇಹಿಯಾಗಿರುವ, ಸುಸ್ಥಿರ ಮಾದರಿಯ ತಂತ್ರಜ್ಞಾನ ಬಳಕೆ ಹೊಸ ಡಿಸೈನ್ ಸೆಂಟರ್‌ನಲ್ಲಿ ಇರಬೇಕು ಎಂಬ ಆಶಯದಿಂದ ಕೆಲಸ ಆರಂಭಿಸಲಾಗಿದೆ. ಕಲೆ-ಕುಶಲಕರ್ಮಿ, ವಿನ್ಯಾಸಕಾರ-ಕುಶಲಕರ್ಮಿ, ಪರಂಪರೆ-ಆಧುನಿಕತೆ, ತಂತ್ರಜ್ಞಾನ-ದೇಸಿಜ್ಞಾನ ಇವುಗಳ ನಡುವೆ ಸಾವಯವ ಸಂಬಂಧ ಕಲ್ಪಿಸಿ ಅಂತಿಮವಾಗಿ ಕುಶಲಕರ್ಮಿಗಳೇ ವಿನ್ಯಾಸಕಾರರಾಗಬೇಕು ಎಂಬ ಮಹತ್ವಾಕಾಂಕ್ಷೆ ನೂತನ ಡಿಸೈನ್ ಸೆಂಟರ್‌ನ ಹಿಂದಿದೆ.

ದೇಸಿ ಚಿಂತಕ ಪ್ರಸನ್ನ ಅವರ ಮಾತಿನಲ್ಲಿ ಈ ಆಶಯ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. 'ಇದೊಂದು ಪರಂಪರೆ-ಆಧುನಿಕತೆಯನ್ನು ಬೆಸೆಯುವ ಕೆಲಸ. ಡಿಸೈನ್ ಸೆಂಟರ್‌ನಲ್ಲಿ ವಿನ್ಯಾಸಕಾರರು, ಕುಶಲಕರ್ಮಿಗಳು ಒಟ್ಟಾಗಿ ಕಲಿಯುತ್ತಾರೆ ಮತ್ತು ಕಲಿಸುತ್ತಾರೆ. ವಿದ್ಯಾವಂತರಾಗಿರುವ ವಿನ್ಯಾಸಕಾರರು ಮತ್ತು ಅರೆ ಅಕ್ಷರಸ್ಥರಾಗಿರುವ ಕುಶಲಕರ್ಮಿಗಳ ಭಾಷೆ ಒಂದೇ ಸ್ವರೂಪದಲ್ಲಿರುವಂತೆ ಮಾಡಬೇಕಿದೆ' ಎಂದು ಅವರು ಹೇಳುತ್ತಾರೆ.



'ವಿನ್ಯಾಸಕ್ಕೆ ಸಂಬಂಧಪಟ್ಟಂತೆ ಇರುವ ಆಧುನಿಕ ಮತ್ತು ದೇಸಿ ತಂತ್ರಜ್ಞಾನಗಳ ವಿನಿಮಯ ಆಗಬೇಕಿದೆ. ಗ್ರಾಮೀಣ ಜನತೆಯ ಜನಪದೀಯ ಸ್ಪರ್ಶ ವಿನ್ಯಾಸಕಾರರಿಗೆ ದೊರೆತರೆ ಕೈಮಗ್ಗ ಉತ್ಪನ್ನಗಳ ಮಾರುಕಟ್ಟೆಯಲ್ಲಿ ದೊಡ್ಡ ಮಟ್ಟದ ಬದಲಾವಣೆ ಕಾಣಲು ಸಾಧ್ಯ' ಎಂದು ವಿನ್ಯಾಸಕಾರ ಗೋಪಿಕೃಷ್ಣ ಅಭಿಪ್ರಾಯಪಡುತ್ತಾರೆ.

ಕೈಮಗ್ಗ ಉತ್ಪನ್ನಗಳಿಗೆ ಜನಪದ ಮತ್ತು ಆಧುನಿಕತೆ ಬೆಸೆದು ಹೊಸ ರೂಪವನ್ನು ಕೊಟ್ಟು ಅದರ ಮಾರುಕಟ್ಟೆ ವಿಸ್ತರಣೆಗೆ ಸಿದ್ಧತೆ ಕೂಡ ನಡೆದಿದೆ. ಕೈಮಗ್ಗ ಅವನತಿಯ ಹಾದಿಯಲ್ಲಿರುವ ಉದ್ಯಮ ಎನ್ನುವುದನ್ನು ಸುಳ್ಳು ಮಾಡಿ ಅದು ಗ್ರಾಮೀಣ ಜನರ ಕೈಗೆ ಉದ್ಯೋಗ ಕೊಡುವ ಕಾಯಕಲ್ಪದ ಕಸುಬು ಎಂಬುದನ್ನು ದೃಢಪಡಿಸಲು ಚರಕ ಹೊಸ ಹೆಜ್ಜೆ ಇಡಲು ಮುಂದಾಗಿದೆ. ❖

ಚರಕದ ಬೆಳ್ಳಿ ಹೆಜ್ಜೆಗಳು

ಸಾಗರ ತಾಲ್ಲೂಕಿನ ಭೀಮನಕೋಣೆ-ಹೆಗ್ಗೋಡು ಗ್ರಾಮದಲ್ಲಿ 1994ರಲ್ಲಿ ಎರಡು ಕೈಮಗ್ಗಗಳು ಬೆರಳೆಣಿಕೆಯ ನೌಕರರೊಂದಿಗೆ ಆರಂಭಿಸಿದ ಚರಕ ಸಂಸ್ಥೆಯಲ್ಲಿ ಈಗ 800 ಕೆಲಸಗಾರರಿದ್ದಾರೆ. ವರ್ಷಕ್ಕೆ ರೂ 4.5 ಕೋಟಿ ವಹಿವಾಟು. ಶೇ 90ರಷ್ಟು ಮಹಿಳಾ ನೌಕರರಿದ್ದಾರೆ. ಗ್ರಾಮೀಣ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಚರಕ ಸಂಸ್ಥೆ ಬೆಳ್ಳಿಹಬ್ಬದ ಸಂಭ್ರಮವನ್ನೂ ಆಚರಿಸಿಕೊಂಡಿದೆ.

ಲಾಕ್‌ಡೌನ್ ನಡುವೆಯೂ ಚರಕ ಸಂಸ್ಥೆ ತನ್ನ 800 ನೇಕಾರರು ಹಾಗೂ ಕುಶಲಕರ್ಮಿಗಳಿಗೆ ಕೆಲಸ ನೀಡುವ ಮೂಲಕ ಗ್ರಾಮೀಣ ಭಾಗದ ಬಡವರನ್ನು ಕಾಯುವ ಕೆಲಸ ಮಾಡಿದೆ. ಆ ಅವಧಿಯಲ್ಲಿ ಚರಕ ಸಂಸ್ಥೆ ಉತ್ಪಾದಿಸಿದ ಕೈಮಗ್ಗದ ಸಿದ್ಧ ಉಡುಪುಗಳು ಮಾರಾಟವಾಗದೆ ಸಂಸ್ಥೆಯ ಗೋದಾಮಿನಲ್ಲಿ ಉಳಿದಿದ್ದವು. ಹೀಗಾಗಿ ನೇಕಾರಿಕೆಗೆ ಸಂಬಂಧಪಟ್ಟ ಕೆಲಸಗಳನ್ನು ನಿಲ್ಲಿಸಿ ಮಣ್ಣಿನ ಕೆಲಸ, ಸಾರ್ವಜನಿಕ ಕೆರೆ ಅಭಿವೃದ್ಧಿ, ಹಸೆ ಚಿತ್ತಾರ ಮೊದಲಾದ ಕೆಲಸಗಳಲ್ಲಿ ಸಂಸ್ಥೆಯು ಕೆಲಕಾಲ ನಿರತವಾಗಿತ್ತು.

ಕನ್ನಡಮ್ಮನ ಪೊರೆಯಲು ಕಾಸಿಲ್ಲ!

ಹಿಂದಿನ ಪುಟದಿಂದ...

ನಾನು ಹೇಳುತ್ತಿರುವುದು ಅತಿಶಯೋಕ್ತಿ ಎನಿಸಿದರೆ ಈ ಸಂಗತಿಗಳನ್ನು ಗಮನಿಸಿ: ಅನೇಕ ವರ್ಷಗಳಿಂದ ನಂಬಲರ್ಹವಾದ ಸಮೀಕ್ಷೆಗಳಲ್ಲಿ ಕರ್ನಾಟಕವು ಅತಿಭ್ರಷ್ಟ ರಾಜ್ಯವಾಗಿದೆ (ಪ್ರಥಮ ಅಥವಾ ದ್ವಿತೀಯ ರ‍್ಯಾಂಕ್). ಅತಿ ಹೆಚ್ಚು ರಾಷ್ಟ್ರದ್ರೋಹ ಕೇಸುಗಳನ್ನು ದಾಖಲಿಸಿದೆ (ಪ್ರಥಮ ರ‍್ಯಾಂಕ್). ಕನ್ನಡಮಾತೃಭಾಷೆಯ ಪರವಾಗಿ ಒಂದು ವಾಕ್ಯವನ್ನೂ ಇಂದಿನ ಸರ್ಕಾರ ಸಂಸತ್ತಿನಲ್ಲಿ ಮಂಡಿಸಿಲ್ಲ (ಚಿನ್ನದ ಪದಕ). ದಲಿತ ಸಮುದಾಯಗಳ ಮೇಲೆ ಹೆಚ್ಚು ಸಾಮಾಜಿಕ ಅತ್ಯಾಚಾರಗಳು (ಮುಂಚೂಣಿಯಲ್ಲಿ). ಈ ಸಂತೆಯ ಮಧ್ಯ ಕನ್ನಡವು ಆದ್ಯತೆ ಆಗುವುದು ಹೇಗೆ?

ಇದರ ದ್ಯೋತಕವಾಗಿ ಬಜೆಟ್ ಮತ್ತು ಅದರ ಹೊರಗೆ ಕರ್ನಾಟಕ ಸರ್ಕಾರವು ಕೊಡುತ್ತಿರುವ ಅನುದಾನಗಳನ್ನು ಗಮನಿಸಿ. ಈ ಅನುದಾನಗಳ ಪ್ರಕಾರ ರಾಜ್ಯದ ಮಠಗಳು, ಜಾತಿವಾರು ನಿಗಮಗಳಿಗೆ ಆದ್ಯತೆಯಿಂದ ಅನುದಾನ ಸಿಕ್ಕಿರುವುದನ್ನು ನೋಡಿದರೆ ಅವುಗಳೇನು ಬೃಹತ್ ಕೈಗಾರಿಕೆಗಳೇನೋ ಎನ್ನುವಂತೆ ಭಾಸವಾಗುತ್ತದೆ. ಇದಕ್ಕೆ ಅನುಕೂಲವಾಗಲೆಂದು ಕನ್ನಡ ಭಾಷೆ, ಸಂಸ್ಕೃತಿ, ಕಲೆಗಳಿಗೆ ಸಂಬಂಧಿಸಿದ ಸರ್ಕಾರದ ಅಕಾಡೆಮಿ, ಪ್ರಾಧಿಕಾರ ಹಾಗೂ ಸಂಸ್ಥೆಗಳ ಅನುದಾನವನ್ನು ಕಡಿಮೆಮಾಡಲಾಗಿದೆ. ಕಾರಣವೆಂದರೆ ಕೊರೊನಾ! ಅಂದರೆ ಕೊರೊನಾ ರೋಗಾಣುವು ಕರ್ನಾಟಕದಲ್ಲಿ ಮಾತ್ರ ವಿಚಿತ್ರವಾದ ರೂಪಾಂತರ ಪಡೆದು (mutation) ಮಠಗಳನ್ನು, ಜಾತಿ ನಿಗಮಗಳನ್ನು ಯಾವ ಕಾರಣಕ್ಕೂ ಬಾಧಿಸದೇ ಕೇವಲ ಕನ್ನಡದ ಸಂಸ್ಥೆಗಳ ಮೇಲೆ ಆಕ್ರಮಣ ಮಾಡುತ್ತಿದೆ! ನಿಜವಾದ ಕಾರಣವೆಂದರೆ ಕರ್ನಾಟಕದ ಧಾರ್ಮಿಕ ಸಂಸ್ಥೆಗಳು ಏಕಕಾಲಕ್ಕೆ ಸ್ವಿಸ್ ಬ್ಯಾಂಕ್‌ಗಳು ಮತ್ತು ವೋಟ್ ಬ್ಯಾಂಕ್‌ಗಳು. ವಿಶೇಷವೆಂದರೆ ಈ ಮಠಗಳು ರೈತರ ಬಗ್ಗೆ, ಆ ರೈತರು ಮಾತನಾಡುವ ಏಕಮಾತ್ರ ಭಾಷೆಯಾದ ಕನ್ನಡದ ಬಗ್ಗೆ ಮಾತನಾಡಿ ತಮ್ಮ ಪಾವಿತ್ರ್ಯವನ್ನು ಕಳೆದುಕೊಳ್ಳುವುದಿಲ್ಲ. ಆದ್ದರಿಂದಲೇ ಯಾಕೆ ಈ ಸಂಸ್ಥೆಗಳು ರೈತರ ಪರವಾಗಿ ದನಿಯೆತ್ತುವುದಿಲ್ಲವೆಂದು ರೈತ ಮುಖಂಡರಾದ ಕೆ.ಟಿ. ಗಂಗಾಧರ್ ಅವರು ಎತ್ತಿದ ಪ್ರಶ್ನೆಗೆ ಇಂದಿಗೂ ಉತ್ತರವಿಲ್ಲ.

ಇತಿಹಾಸದಲ್ಲಿ ಧಾರ್ಮಿಕ ಸಂಸ್ಥೆಗಳೇ ಪ್ರಾಚೀನ ಹಾಗೂ ಮಧ್ಯಕಾಲೀನ ಕನ್ನಡ ಸಾಹಿತ್ಯ ಕೃತಿಗಳ ಪ್ರತಿಗಳನ್ನು ಕಾಪಿಟ್ಟುಕೊಂಡು ಬಂದವು. 19ನೇ ಶತಮಾನದ ಕೊನೆಯಿಂದ ಮತ್ತು ಇಪ್ಪತ್ತನೇ ಶತಮಾನದ ಅನೇಕ ದಶಕಗಳವರೆಗೆ ಕನ್ನಡದ ಬಡಮಕ್ಕಳಿಗೆ ಆಶ್ರಯ ಹಾಗೂ ಶಿಕ್ಷಣವನ್ನು ಕೊಟ್ಟು ಸಾಮಾಜಿಕ ಪರಿವರ್ತನೆಗಳಿಗೆ ಕಾರಣವಾದವು. ಸದ್ಯದ ಸ್ಥಿತಿಯಲ್ಲಿ ಅವು ಕೇವಲ ಜಾತಿ ರಾಜಕೀಯದ ಸಂಸ್ಥೆಗಳಾಗಿರುವುದರಿಂದ ಶಿಕ್ಷಣ, ಭಾಷೆ ಹಾಗೂ ಸಂಸ್ಕೃತಿಗಳು ಈ ಸಂಸ್ಥೆಗಳಿಗೆ ಆದ್ಯತೆಯಾಗಿಲ್ಲ. ಧರ್ಮ ಹಾಗೂ ರಾಜಕೀಯಗಳ ಅಪೂರ್ವವಾದ ಅನ್ಯೋನ್ಯ ಮೈತ್ರಿಗೆ ಇಂದು ಕರ್ನಾಟಕವು ಸಾಕ್ಷಿಯಾಗಿದೆ.

ರಾಜಕೀಯ ಹಾಗೂ ಧರ್ಮಗಳು ಕನ್ನಡವನ್ನು ಅಂಚಿಗೆ ಇಟ್ಟು ಅದರ ಬಗ್ಗೆ ಅಸಡ್ಡೆಯನ್ನು ತೋರಲು ಕಾರಣವೆಂದರೆ ನಾವು ಪ್ರಜೆಗಳು. ಪ್ರಾಮಾಣಿಕವಾಗಿ ಕೇಳಿಕೊಂಡರೆ ನಮಗೆ ಕನ್ನಡವು ಆದ್ಯತೆಯಾಗಿದೆಯೆ? ಅದು ಒಟ್ಟು ರಾಜಕೀಯದ ಪ್ರಬಲವಾದ ಭಾಗವಾಗಿದೆಯೆ? ಇಂದಿಗೂ ಮೇಲ್ವರ್ಗದ, ಪ್ರಬಲ ಜಾತಿಗಳ ಆಯ್ಕೆ ಕನ್ನಡವಾಗಿಲ್ಲ. ಈ ವರ್ಗಗಳು ಇಂಗ್ಲಿಷ್ ಅನ್ನುವ ಪ್ಯಾಕೇಜ್ ಮೂಲಕ ಜಾಗತೀಕರಣದ ಅವಕಾಶಗಳನ್ನು ನೂರು ಪ್ರತಿಶತ ಪಡೆದುಕೊಳ್ಳುವುದನ್ನು ಕಣ್ಣಾರೆ ನೋಡಿರುವ ಗ್ರಾಮೀಣ, ಸಣ್ಣ ನಗರಗಳ ಎಲ್ಲಾ ಶೂದ್ರ, ದಲಿತ ಜಾತಿಗಳು ತಮ್ಮ ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮ ಬಯಸುವುದು ಸಹಜವೇ ಆಗಿದೆ. ಎಲ್ಲರೂ ಮರೆಯುತ್ತಿರುವ ವಿಷಯವೆಂದರೆ ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಖಾಸಗೀಕರಣವೆಂದರೆ ಜಾಗತಿಕ ಕಾರ್ಪೊರೇಟ್ ಕಂಪನಿಗಳ ಯಜಮಾನಿಕೆ. ಈ ಯಜಮಾನಿಕೆಯಲ್ಲಿ ಕನ್ನಡದ ಸ್ಥಾನವು ವಸಾಹತುಶಾಹಿಯಲ್ಲಿ ಆದಿವಾಸಿ ಭಾಷೆಗಳಿಗೆ ಇದ್ದ ಸ್ಥಾನವಾಗಿರುತ್ತದೆ.

ರೈತ ಹಾಗೂ ಕಾರ್ಮಿಕರ ಅಸ್ತಿತ್ವವನ್ನೇ ನಾಶಮಾಡಬಲ್ಲ ಕಾನೂನುಗಳನ್ನು ಕಾರ್ಪೊರೇಟ್ ಶಕ್ತಿಗಳ ಪರವಾಗಿ ಜಾರಿಗೆ ತರುವ ಸರ್ಕಾರಗಳು ಈ ಜನಸಮುದಾಯಗಳ ಬಗ್ಗೆ ಕಾಳಜಿ ವಹಿಸುವುದು ತಾರ್ಕಿಕವಾಗಿ ಅಸಾಧ್ಯ. ಕಾರ್ಪೊರೇಟ್‌ಗಳ ಭಾಷೆ ಇಂಗ್ಲಿಷ್ ಭಾಷೆಯೇ ಆಗಿರುತ್ತದೆ. ಅವುಗಳು ಉದಾತ್ತವಾಗಿ ಕನ್ನಡದ ಕೆಲಸಕ್ಕಾಗಿ ದೇಣಿಗೆ ಕೊಟ್ಟು ಕಾರ್ಪೊರೇಟ್‌ಗಳ ಸಾಮಾಜಿಕ ಜವಾಬ್ದಾರಿ ನಿರ್ವಹಿಸುತ್ತವೆ ಅಷ್ಟೆ. ಭಾರತೀಯ ರಾಜಕೀಯದ ವಿಚಿತ್ರ ಲಕ್ಷಣವೆಂದರೆ ಈ ಕಾರ್ಪೊರೇಟ್ ರಾಜಕೀಯದ ಬೆಂಬಲಿಗರು ಹಿಂದಿಯನ್ನು ರಾಷ್ಟ್ರಭಾಷೆ ಮತ್ತು ಸಂಸ್ಕೃತವನ್ನು ವಿಶ್ವಭಾಷೆ ಮಾಡಲು ಹೊರಟವರು! ಬಲಪಂಥೀಯ ರಾಜಕೀಯವನ್ನು ಒಪ್ಪಿಕೊಂಡರೂ ಕನ್ನಡದ ಹೋರಾಟವನ್ನು ನಡೆಸುವ ಒಬ್ಬ ರಾಜಕೀಯ ಧುರೀಣನೂ ಈವರೆಗೆ ಬಂದಿಲ್ಲ. ಹೀಗಾಗಿ ಭದ್ರಾವತಿಯ ಸಮಾರಂಭದಲ್ಲಿ ಕನ್ನಡ ಲಿಪಿ ಯಾಕೆ ಕಾಣಲಿಲ್ಲವೆಂದು ಕೇಳುವ ಧೈರ್ಯ ಯಾರಿಗೂ ಇಲ್ಲ. ಬದಲಾಗಿ ಹಿಂದಿ ಪರವಾಗಿ, ಸಂಸ್ಕೃತದ ಪರವಾಗಿ ಮಾತನಾಡಿ ಕೇಂದ್ರದ ಗುಲಾಮಗಿರಿಯನ್ನು ಮಾಡುವವರೇ ಕರ್ನಾಟಕದ ರಾಜಕೀಯ ಪ್ರತಿನಿಧಿಗಳಾಗಿದ್ದಾರೆ.

ಕೇವಲ ಸರ್ಕಾರವು ಕನ್ನಡಕ್ಕಾಗಿರುವ ಸಂಸ್ಥೆಗಳಿಗೆ ಅನುದಾನ ಕಡಿಮೆ ಮಾಡಿದ್ದಕ್ಕಾಗಿ ಇಷ್ಟೆಲ್ಲ ಪ್ರವರ ಬೇಕೇ ಎಂದು ಯಾರಾದರೂ ಕೇಳಬಹುದು. ಅನುದಾನ ಕಡಿಮೆಯಾಗಿರುವುದು ಒಂದು ರೋಗದ ಹೊರ ಲಕ್ಷಣವಾಗಿದೆ ಹಾಗೂ ಹೀಗೆಂದು ಹೇಳಲು ಪ್ರಸ್ತುತ ಸಂದರ್ಭದ ಅನೇಕ ವಿದ್ಯಮಾನಗಳು ಸಾಕ್ಷಿಯಾಗಿವೆ. ಕನ್ನಡಪ್ರಜ್ಞೆಯ ಸಾಂಸ್ಥಿಕ ರೂಪವಾಗಲಿ ಎಂದು ಹಾರೈಸಿ ಕಟ್ಟಿದ ಕನ್ನಡ ವಿಶ್ವವಿದ್ಯಾಲಯದ ಅನುದಾನವನ್ನು ನಿಲ್ಲಿಸಿ ಅನೇಕ ತಿಂಗಳುಗಳವರೆಗೆ ಶಿಕ್ಷಕರಿಗೆ, ಸಿಬ್ಬಂದಿಗೆ ಸಂಬಳವನ್ನೂ ಕೊಡಲಿಲ್ಲ. ಕೇಳಿದರೆ ಹಣಕಾಸು ವಿಭಾಗ, ತಾಂತ್ರಿಕ ಅಡಚಣೆ ಇತ್ಯಾದಿ ಸಬೂಬುಗಳನ್ನು ಹೇಳಲಾಯಿತು. ಕನ್ನಡ ವಿಶ್ವವಿದ್ಯಾಲಯದ ಭವಿಷ್ಯವನ್ನು ಗುಮಾಸ್ತರ ಕೈಗೆ ಬಿಡುವ ಸರ್ಕಾರದಿಂದ ಕನ್ನಡ ಸಂಶೋಧನೆ ಏನನ್ನು ನಿರೀಕ್ಷಿಸಬಹುದು? ಕನ್ನಡವನ್ನು ಉಳಿಸಲು ಕನ್ನಡ ಜಗತ್ತಿನ ಆತ್ಮೀಯ ಪರಿಚಯವಿರುವ ವ್ಯಕ್ತಿಗಳು ಬೇಕು. ಗುಮಾಸ್ತರ ಗುಮಾಸ್ತರಲ್ಲ.

ಎರಡನೆಯದಾಗಿ ನಮ್ಮ ಸರ್ಕಾರಗಳಿಗೆ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಮತ್ತು ಪ್ರಜಾಪ್ರಭುತ್ವದಲ್ಲಿ ಪ್ರಾಮಾಣಿಕವಾದ ನಂಬಿಕೆ ಇದ್ದಲ್ಲಿ ನಾಡಭಾಷೆಗಳು, ಮಾತೃಭಾಷೆಗಳು ಸಹಜವಾಗಿ ಬೆಳೆಯುತ್ತವೆ. ಆದರೆ ಒಂದು ದೇಶ, ಒಂದು ಭಾಷೆ, ಒಂದು ಸಂಸ್ಕೃತಿಗಳ ಸಿದ್ಧಾಂತವನ್ನು ಒಪ್ಪುವವರಲ್ಲಿ ಮನಸ್ಸಿನ ಆಳದಲ್ಲಿ ಕನ್ನಡದ ಬಗ್ಗೆ ಅವಜ್ಞೆ ಇದ್ದೇ ಇರುತ್ತದೆ. ಅವರಲ್ಲಿ ಬಹುಪಾಲು ಜನ ಕನ್ನಡವೆಂದರೆ ಸಂಸ್ಕೃತದ ಹದಗೆಟ್ಟ ರೂಪವೆನ್ನುವ ಮತ್ತು ಅದು ಎಂದೂ ವಿಶ್ವಭಾಷೆಯಾಗಲಾರದು ಎನ್ನುವ ನಂಬಿಕೆ ಪ್ರಬಲವಾಗಿದೆ. ನಾವು ಕನ್ನಡ ಪ್ರಜೆಗಳಿಗೆ ಕನ್ನಡವೇ ವಿಶ್ವ, ಕನ್ನಡವೇ ಬ್ರಹ್ಮಾಂಡ. ಅಲ್ಲದೆ ಕನ್ನಡದ ಜೊತೆ ನೂರಾರು, ಸಾವಿರಾರು ವರ್ಷ ಸಹಬಾಳ್ವೆ ನಡೆಸಿ ಕನ್ನಡ ಜಗತ್ತನ್ನು ಶ್ರೀಮಂತಗೊಳಿಸಿದ ತುಳು, ಬ್ಯಾರಿ, ಕೊಡವ, ಉರ್ದು ಇವೆಲ್ಲವೂ ನಮ್ಮ ಭಾಷೆಗಳೇ. ಕನ್ನಡವನ್ನು ಅಲಕ್ಷಿಸುವ ಪ್ರಭುತ್ವಗಳು ನಮ್ಮ ಈ ಸಹೋದರಿ ಭಾಷೆಗಳನ್ನು ಗಮನಿಸುವುದೇ ಇಲ್ಲ. ಆದ್ದರಿಂದ ಚುನಾಯಿತ ಸರ್ಕಾರವು ತಾನೇ ನಿರ್ದೇಶಿಸಿ ರೂಪಿಸುವ ಅರ್ಥವ್ಯವಸ್ಥೆಯಲ್ಲಿ ಈ ಭಾಷೆಗಳ ಬೆಳವಣಿಗೆಗಾಗಿ ಸಮರ್ಪಕವಾದ ಬೆಂಬಲವನ್ನು ನೀಡುವುದು ನೈತಿಕ ಕರ್ತವ್ಯವಾಗಿದೆ.

ಇನ್ನು ಕನ್ನಡದ ಅಭಿಮಾನದ ಪ್ರಶ್ನೆ. ಕನ್ನಡಿಗರು ನಿರಭಿಮಾನಿಗಳು ಎಂದು ಕನ್ನಡಿಗರು ಎಂದಿನಿಂದಲೂ ಹೇಳುತ್ತಿದ್ದಾರೆ. ಇದರ ಸತ್ಯಾಸತ್ಯತೆಯನ್ನು ಸಾಬೀತು ಮಾಡುವುದು ಕಷ್ಟದ ಸಂಗತಿ. ಇಂಥ ಪಡಿಯಚ್ಚು ಕಲ್ಪನೆಗಳು ಸದಾಕಾಲ ಎಲ್ಲಾ ಸಂಸ್ಕೃತಿಗಳಲ್ಲಿ ಇರುತ್ತವೆ. ಅವುಗಳ ಬದಲಾಗಿ ಸಮಾಜ ರಾಜಕೀಯ ಹಾಗೂ ಚರಿತ್ರೆಗಳ ಹಿನ್ನೆಲೆಯಲ್ಲಿ ನೋಡುವುದಾದರೆ ಭಾಷೆಯು ವಿಶ್ವದ ಎಲ್ಲಾ ಭಾಗಗಳಲ್ಲಿ ಒಂದು ರಾಜಕೀಯ ವಿದ್ಯಮಾನವೇ ಆಗಿದೆ. ಆಕ್ರಮಣಕಾರಿಯಾದ, ಹಿಂಸಾಪರವಾದ ಭಾಷಾಂಧ ಧೋರಣೆಗಳಿಂದ, ಬಹುಭಾಷಿಕತ್ವ, ಸಹಬಾಳ್ವೆ ಇವುಗಳವರೆಗಿನ ಸಂಕಥನಗಳು ಈ ರಾಜಕೀಯದ ಭಾಗಗಳಾಗಿವೆ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿಸುವ, ಕಲಿಕೆ ಮಾಧ್ಯಮವನ್ನಾಗಿಸುವ, ಉದ್ಯೋಗದ ಭಾಷೆಯನ್ನಾಗಿಸುವ ಕರ್ನಾಟಕದ ಎಲ್ಲಾ ಪ್ರಯತ್ನಗಳು ಆತ್ಮವಿಶ್ವಾಸವಿಲ್ಲದ, ಸಾಮುದಾಯಿಕ ಭಾಗಿತ್ವವಿಲ್ಲದ, ಸ್ವಂತದ ರಾಜಕೀಯ ಸಿದ್ಧಾಂತವೇ ಇಲ್ಲದ ಅರೆಮನಸ್ಸಿನ ಪ್ರಯತ್ನಗಳಾಗಿವೆ. ಇವುಗಳ ಆಧಾರದ ಮೇಲೆ ಕನ್ನಡಿಗರು ನಿರಭಿಮಾನಿಗಳು ಅಂತಲೂ ಹೇಳಬಹುದು. ಒಕ್ಕೂಟ ರಾಜಕೀಯ, ನಾಡಭಾಷೆಗಳು ಮತ್ತು ಎಲ್ಲಾ ಸಮುದಾಯಗಳು, ಆಧುನಿಕ ಸಮಾಜದ ಅವಶ್ಯಕತೆಗಳು ಇವುಗಳನ್ನು ಒಳಗೊಂಡ ರಾಜಕೀಯವನ್ನು ರಚಿಸುವುದರಲ್ಲಿ ಕರ್ನಾಟಕವು ಸೋತಿದೆ. ❖





ವೇಗದ ಬದುಕಿನ ಡಿ.ಆರ್.

ದೊಡ್ಡಬಳ್ಳಾಪುರದ ನೇಯ್ಗೆ ಮಗ್ಗದ ಕುಟುಂಬದಲ್ಲಿ ಜನಿಸಿದ ಡಿ.ಆರ್. ನಾಗರಾಜ್ ಏರಿದ ಎತ್ತರಕ್ಕೆ ಏಣಿಗಳು ವಿರಳ. ಬಂಡಾಯ ಸಾಹಿತ್ಯಕ್ಕೆ ಒಂದು ಶಾಶ್ವತ ಚೌಕಟ್ಟು ಕೊಟ್ಟು ನಿರ್ಗಮಿಸಿದ ಡಿ.ಆರ್. ಎಲ್ಲ ಕಾಲಕ್ಕೂ ಹೊಳೆಯುವ ನಕ್ಷತ್ರ...

ಕಾಳೇಗೌಡ ನಾಗವಾರ

ಬೆಂಗಳೂರಿನ ವಿಚಾರವಾದಿಗಳು 1973ನೇ ವರ್ಷದ ಆರಂಭದ ದಿನಗಳಲ್ಲಿ, ತೀವ್ರತರವಾದ ತಮ್ಮ ಆಸಕ್ತಿಗಳ ಹಿನ್ನೆಲೆಯಲ್ಲಿ ದಕ್ಷಿಣ ಭಾರತದ ನಮ್ಮೆಲ್ಲರ ಹೆಮ್ಮೆಯ, ಸಾಮಾಜಿಕ ನ್ಯಾಯದ ಪರವಾದ ಅಸಾಧಾರಣ ಹೋರಾಟಗಾರ ಇ.ವಿ. ರಾಮಸ್ವಾಮಿ ನಾಯ್ಕರ್ (ಪೆರಿಯಾರ್) ಅವರನ್ನು ಕರೆಸಿದ್ದರು. ನಂಜುಂಡಸ್ವಾಮಿ, ಲಂಕೇಶ್, ತೇಜಸ್ವಿ ಮತ್ತಿತರ ಕರ್ನಾಟಕದ ಆ ಕಾಲದ ಸಂವೇದನಾಶೀಲರೆಲ್ಲರೂ ಒಗ್ಗೂಡಿ ಮೌಢ್ಯದ ವಿರುದ್ಧ ಸಮರ ಸಾರಿದ್ದ ನಮ್ಮೆಲ್ಲರ ಸಡಗರದ ದಿನಗಳು ಅವು.

ಆ ಹೊತ್ತಿಗಾಗಲೇ ಕೊಡಗಿನ ಗೋಣಿಕೊಪ್ಪಲು ಕಾವೇರಿ ಕಾಲೇಜಿನಲ್ಲಿ ಉಪನ್ಯಾಸಕನಾಗಿದ್ದ ನಾನು ಸಹ ಅದೇ ಸಮಾವೇಶದಲ್ಲಿ ಆಸಕ್ತಿಯಿಂದ ಭಾಗವಹಿಸಿದ್ದೆ. ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನಲ್ಲಿ ಸಾಹಿತ್ಯದ ವಿದ್ಯಾರ್ಥಿಗಳಾಗಿದ್ದು ಈ ಬಗೆಯ ಎಲ್ಲಾ ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದ ಯುವಮಿತ್ರರಾದ ಡಿ.ಆರ್. ನಾಗರಾಜ್, ಸಿದ್ಧಲಿಂಗಯ್ಯ, ಅಗ್ರಹಾರ ಕೃಷ್ಣಮೂರ್ತಿ ಮತ್ತು ಅವರ ತಂಡ ಅಪಾರವಾದ ಬದ್ಧತೆಯಿಂದ ದುಡಿಯುತ್ತಿತ್ತು. ಈ ಕುಪಿತ ತರುಣರ ಉತ್ಸಾಹವನ್ನು ಸಹಿಸಲಾರದ ಸನಾತನಿಗಳು ಪದವಿ ತರಗತಿಯ ಈ ಎಲ್ಲಾ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿ, ಘಾಸಿಗೊಳಿಸಿದ್ದರು. ವೇದಿಕೆಯ ಮೇಲಿದ್ದ ಪೆರಿಯಾರ್ ಅವರ ಎದುರಿಗೆ, ಬಾಸುಂಡೆಗಳ ಸಹಿತ ಅರೆಬೆತ್ತಲಾಗಿದ್ದ ಇವರನ್ನು ಸಾಲಾಗಿ ಕೂರಿಸಿದ್ದ ದೃಶ್ಯ ಈಗಲೂ ನನ್ನ ಕಣ್ಣಲ್ಲಿ ಚೆನ್ನಾಗಿ ಅಚ್ಚೊತ್ತಿ ನಿಂತಿದೆ!

1974ರಲ್ಲಿ ಪ್ರೊ. ಜಿ.ಎಸ್. ಶಿವರುದ್ರಪ್ಪ ಮತ್ತು ಕುಲಪತಿ ಎಚ್. ನರಸಿಂಹಯ್ಯ ಅವರ ಪ್ರೀತಿಯ ಆಹ್ವಾನದ ಮೇರೆಗೆ ನಾನು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕನ್ನಡ ಅಧ್ಯಯನ ಕೇಂದ್ರ ಸೇರಿದೆ. ಆ ವರ್ಷ ಡಿ.ಆರ್., ಮೋಟಮ್ಮ ಮತ್ತಿತರರು ಎರಡನೇ ಎಂ.ಎ. ಹಾಗೂ ಸಿದ್ಧಲಿಂಗಯ್ಯ, ಅಗ್ರಹಾರ ಕೃಷ್ಣಮೂರ್ತಿ ಮುಂತಾದವರು ಮೊದಲ ಎಂ.ಎ. ವಿದ್ಯಾರ್ಥಿಗಳು. ಮೊದಲೇ ತೀರಾ ಪರಿಚಿತರೂ ಪರಸ್ಪರ ಆಪ್ತರೂ ಆಗಿದ್ದ ನಾವೆಲ್ಲ ಅಲ್ಲಿ ಸೇರಿ ಮತ್ತಷ್ಟು ಗಟ್ಟಿಯಾದೆವು. ಲಂಕೇಶ್, ಕಿರಂ, ಮರುಳಸಿದ್ಧಪ್ಪ ಸಹ ಅದಾಗಲೇ ಅಲ್ಲಿದ್ದರು. ಶಿವರುದ್ರಪ್ಪನವರ ತುಂಬಾ ಅಪರೂಪದ ಜಾತ್ಯತೀತವೂ ಚಿಂತನಶೀಲವೂ ಆದ ಆರೋಗ್ಯಕರ ನೇತೃತ್ವ ಅಲ್ಲಿ ಆದರ್ಶಪೂರ್ಣವಾಗಿತ್ತು.

ನನ್ನ ಜೊತೆಗೆ ಕ್ರಮೇಣ ನಾಗರಾಜ್ ಮತ್ತು ಸಿದ್ಧಲಿಂಗಯ್ಯ ಸಹ ಅಪಾರವಾದ ಕಾಳಜಿಯ ಮೂಲಕವೇ ಮುಂದಿನ ವರ್ಷಗಳಲ್ಲಿ ಆಯ್ಕೆಯಾದರು. ಆನಂತರ ಇಡೀ ರಾಷ್ಟ್ರದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವಾಗಿ ಭೀಕರ ತುರ್ತುಪರಿಸ್ಥಿತಿ ಕಾಲಿಟ್ಟಿತು. ನಾವೆಲ್ಲಾ ಒಟ್ಟಾಗಿ, ಸೆರೆಮನೆ ಸೇರಿದ್ದ ಚಂಪಾ ಅವರ 'ಗಾಂಧೀಸ್ಮರಣೆ', ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಹೊರತಂದೆವು. 'ಆಪತ್ಕಾಲೀನ ಕವಿತೆಗಳು' ಪ್ರಾತಿನಿಧಿಕ ಸಂಕಲನವೂ ಹೊರಬಂತು. ಅಗ್ರಹಾರ ಕೃಷ್ಣಮೂರ್ತಿಯವರ ಜನಪದ ಕೃತಿ 'ಬೆಳ್ದಿಂಗಳಪ್ಪನ ಪೂಜೆ' ಪ್ರಕಟಿಸಿದೆವು. ಮುಂಗಾರು ಪ್ರಕಾಶನದ ಹೆಸರಲ್ಲಿ ನಾನೇ ಇವುಗಳ ಪ್ರಕಾಶಕ. ಈ ಬಗ್ಗೆ ಡಿ.ಆರ್. ಮತ್ತು ಕಿರಂ ಅವರ ಒತ್ತಾಸೆ ಅಪರಿಮಿತವಾದುದು.

ಬೆಂಗಳೂರಿನಲ್ಲಿ ನಡೆದ ರಾಷ್ಟ್ರಮಟ್ಟದ ಮೊದಲನೆಯ ಬಂಡಾಯ ಸಾಹಿತ್ಯ ಸಮ್ಮೇಳನವು 1979ರ ಮಾರ್ಚ್ 11ರಂದು ಆರಂಭವಾಯಿತು. ಸ್ವಾತಂತ್ರ್ಯೋತ್ತರ ವರ್ಷಗಳಲ್ಲಿ ಹುಟ್ಟಿ ಬೆಳೆದು, ನಮ್ಮ ಸಾಂಪ್ರದಾಯಿಕ ಪರಿಸರದಲ್ಲಿನ ಕ್ರೌರ್ಯ, ಅಸಮಾನತೆ, ಅಪಮಾನಗಳ ನಡುವೆ ಉದ್ದಕ್ಕೂ ನರಳುತ್ತಿರುವವರ ಸ್ಥಿತಿಗತಿಗಳಿಗೆ ನೇರವಾಗಿ ಸ್ಪಂದಿಸುವ ಗುಣದ ಲೇಖಕರುಗಳ ಅರ್ಥಪೂರ್ಣ ಸಂಘಟನೆ ಇದಾಗಿತ್ತು.

ಸೆಂಟ್ರಲ್ ಕಾಲೇಜು ಆವರಣದ ಉದ್ಯಾನವನದ ಹುಲ್ಲುಹಾಸಿನ ಮೇಲೆ ಕುಳಿತು ನಾವೆಲ್ಲ ಸಮಾನ ಮನೋಧರ್ಮದ ಲೇಖಕಮಿತ್ರರು ಆ ದಿನಗಳಲ್ಲಿ ಪ್ರತೀ ಸಂಜೆ ಸೇರಿ ಪ್ರಜಾಸತ್ತಾತ್ಮಕವಾಗಿ ಚರ್ಚಿಸುತ್ತಿದ್ದೆವು. ಡಿ.ಆರ್. ಆ ಕಾಲದಲ್ಲಿ ತುಂಬು ಅತ್ಯುತ್ಸಾಹಿ ಮತ್ತು ಕ್ರಿಯಾಶೀಲ ತರುಣನಾಗಿ ದುಡಿದ. ಸಂಘಟನೆಯ ಲಾಂಛನ ಮತ್ತು ಧ್ಯೇಯವಾಕ್ಯ ಸಿದ್ಧಪಡಿಸುವಾಗಿನ ಈತನ ಸಡಗರ ಹೇಳತೀರದು. 'ಖಡ್ಗವಾಗಲಿ ಕಾವ್ಯ' ಎಂಬ ಆಕರ್ಷಕ ವಾಕ್ಯ ಕಮ್ಯುನಿಸ್ಟರ ಪ್ರಭಾವಕ್ಕೆ ಆಗತಾನೇ ಒಳಗಾಗಿದ್ದ ನಾಗರಾಜ್‌ನ ಬತ್ತಳಿಕೆಯಿಂದ ಹೊರಬಂತು; ಸಭೆಯು ಉಲ್ಲಾಸದಿಂದ ಅದನ್ನು ಸ್ವೀಕರಿಸಿತು.

ಆ ಹೊತ್ತಿಗಾಗಲೇ ನನ್ನಂಥವನಿಗೆ ಒಂದು ರೀತಿಯಿಂದ ತೀರಾ ಕ್ಲೀಷೆ ಎನ್ನಿಸುತ್ತಿದ್ದ ಆ ಧ್ಯೇಯವಾಕ್ಯದ ಅಂತರ್ಗತ ಅಭಿಲಾಷೆಯ ದ್ಯೋತಕವಾಗಿ ಇನ್ನೊಂದಿಷ್ಟು ಅರ್ಥಪೂರ್ಣವಾದ ಅಂಶಗಳನ್ನು ನಾವು ಅದರಲ್ಲಿ ಅಡಕಗೊಳಿಸುವುದು ಸೂಕ್ತವೆನ್ನುವ ಚಿಂತನೆ ಬಂದಿತ್ತು. ಹೀಗಾಗಿ 'ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎಂಬ ಸಾಲು ಈ ಧ್ಯೇಯವಾಕ್ಯದ ಅವಿಭಾಜ್ಯ ಅಂಗವಾಗಿರಬೇಕು - ಎಂದು ನಾನು ಹಟ ಹಿಡಿದೆ; ಇದಕ್ಕೆ ಸಭೆಯ ಒಪ್ಪಿಗೆ ದೊರೆಯಿತು.

ಇದಾದ ಒಂದೆರಡು ದಿನಗಳಲ್ಲಿಯೇ ನಾನು, ನಾಗರಾಜ್, ಸಿದ್ಧಲಿಂಗಯ್ಯ ಸೇರಿ ಮೈಸೂರಿನ ಗೆಳೆಯರನ್ನು ಸಮ್ಮೇಳನಕ್ಕೆ ಖುದ್ದಾಗಿ ಆಹ್ವಾನಿಸಲೆಂದು ಬಂದೆವು. ಈ ಬಗ್ಗೆ ನಮ್ಮ ಜೊತೆಗೆ ಕೊಂಚ ಭಿನ್ನಮತದ ಸೊಗಸನ್ನು ಹೊಂದಿದ್ದ ದೇವನೂರ ಮಹಾದೇವ ಸಿಕ್ಕಿ, ಆಕಾಶದ ಕೆಳಗಿನ ಹಲವು ಸಂಗತಿಗಳನ್ನು ಕುರಿತು ಮಾತನಾಡಿದೆವು. ಸದಾ ಕಡಿಮೆ ಮಾತುಗಳ, ತೂಕದ ನಡವಳಿಕೆಯ ಈ ಮಹಾದೇವ ಆ ಮಾತು ಈ ಮಾತಿನ ನಡುವೆ ಸಹಜವಾಗಿಯೇ 'ಸಂಘಟನೆಯ ಈ ಧ್ಯೇಯವಾಕ್ಯದ ಮೊದಲ ಪಾದ ನಾಗರಾಜನದು; ಮುಂದಿನ ಸಾಲು ನಾಗವಾರರ ರಚನೆ' ಎಂದು ಹೇಳಿದ್ದು ನಮ್ಮೆಲ್ಲರ ವಿಸ್ಮಯಕ್ಕೆ ಕಾರಣವಾಗಿತ್ತು.

> **ಅಸಾಧಾರಣ ಮೇಧಾವಿಯಾಗಿದ್ದ ನಾಗರಾಜ್ ತನ್ನ ಆಳವಾದ ಅಧ್ಯಯನದ ಮೂಲಕ ತುಂಬಾ ಕ್ಲಿಷ್ಟಕರ, ಸಂಕೀರ್ಣ ವಿಷಯಗಳನ್ನು ಸಹ ತಲಸ್ಪರ್ಶಿಯಾಗಿ ಅರಿಯುವ, ವಿಶ್ಲೇಷಿಸುವ ಚೈತನ್ಯವನ್ನು ಪಡೆದಿದ್ದ. ಮಾರ್ಕ್ಸ್, ಗಾಂಧಿ, ಲೋಹಿಯಾ, ಅಂಬೇಡ್ಕರ್, ಪೆರಿಯಾರ್, ಬುದ್ಧ, ಬಸವ ಮತ್ತು ಜೈನ ಪರಂಪರೆಯ ವೈಶಿಷ್ಟ್ಯಗಳನ್ನು ತೌಲನಿಕವಾಗಿ ಚರ್ಚಿಸುವ ಹಾಗೂ ಅಲ್ಲಿನ ಮಿತಿಗಳನ್ನು ಸ್ಪಷ್ಟವಾಗಿ ಗುರುತಿಸುವ ಛಲವಂತ ಈತ.**

ಈ ಸಮಯಕ್ಕಾಗಲೇ ನಾಗರಾಜ್ ಚಿಂತಕನಾಗಿ ತುಂಬಾ ಬೆಳೆದಿದ್ದ: ಅಸಾಧಾರಣ ಮೇಧಾವಿಯಾಗಿದ್ದ ಈತ, ತನ್ನ ಬೌದ್ಧಿಕ ಸಾಮರ್ಥ್ಯ ಮತ್ತು ಸಾಮಾಜಿಕ ಬದ್ಧತೆಯ ಪ್ರತೀಕವಾಗಿ ಬಂಡಾಯ ಸಂಘಟನೆಯ ಸರ್ವಸಿದ್ಧತೆಗಳ ಸಕಲ ಹೊಣೆಗಾರಿಕೆಯನ್ನು ಅಕ್ಷರಶಃ ದಂಡನಾಯಕನಂತೆ ನಿರ್ವಹಿಸಿದ ರೀತಿ, ಅದನ್ನೆಲ್ಲಾ ತೀರಾ ಹತ್ತಿರದಿಂದ ಕಂಡ ನನಗೆ ನಿಜಕ್ಕೂ ಬೆರಗು ಹುಟ್ಟಿಸುವಂತಿತ್ತು. ನನ್ನ ಸಮಾಜವಾದಿ ಚಳವಳಿಯ ಹಿನ್ನೆಲೆಯ ಚಟುವಟಿಕೆಗಳನ್ನು ತುಂಬಾ ಹತ್ತಿರದಿಂದ ಕಂಡಿದ್ದ ಈತ, ಕರ್ನಾಟಕದ ಎಲ್ಲ ಜಿಲ್ಲೆಗಳ ಸಾಹಿತಿಗಳು ಮತ್ತು ಸಾಂಸ್ಕೃತಿಕ ವಲಯದ ತೀವ್ರಾಸಕ್ತರ ಜತೆಗೆ ಪತ್ರವ್ಯವಹಾರ ನಡೆಸುವ ಜವಾಬ್ದಾರಿಯನ್ನು ನಾನು ಹೊರಬೇಕೆಂದು ಬಯಸಿದ್ದ. ಅದನ್ನು ಒಪ್ಪಿ ಆ ಕಾರ್ಯ ನಿರ್ವಹಿಸಿದೆ. ಬೇರೆ, ಬೇರೆ ಹಿನ್ನೆಲೆಗಳ ಕ್ರಿಯಾಶೀಲ ಸಂಘಟಕ-ಸಂಚಾಲಕ ಸಮಿತಿಗಳ ರಚನೆಗೆ ಆಲೋಚಿಸಿದೆವು. ಬರಗೂರು ರಾಮಚಂದ್ರಪ್ಪ ಸಹ ಆ ಹೊತ್ತಿಗಾಗಲೇ ಕನ್ನಡ ಅಧ್ಯಯನ ಕೇಂದ್ರ ಸೇರಿದ್ದರಿಂದ ನಮ್ಮೊಡನೆ ಅವರನ್ನೂ ಒಳಗೊಳ್ಳುವುದು ಸೂಕ್ತವೆಂಬ ನನ್ನ ಸಲಹೆಗೆ ನಾಗರಾಜ್ ಮತ್ತು ಸಿದ್ಧಲಿಂಗಯ್ಯ ಒಪ್ಪಿಗೆ ಸೂಚಿಸಿದರು.

ಯಜಮಾನ ಸಂಸ್ಕೃತಿಯ ವಿರುದ್ಧದ ಹೋರಾಟದ ತೀವ್ರತೆ ಹೇಗಿರಬೇಕೆಂಬುದರ ಬಗ್ಗೆ ಖಚಿತವಾಗಿದ್ದ ಬಂಡಾಯ ಸಾಹಿತ್ಯ ಸಂಘಟನೆ ಕುರಿತ ನಾಗರಾಜ್ ಬರಹ ತುಂಬಾ ಅರ್ಥಪೂರ್ಣವಾಗಿತ್ತು. ಕರ್ನಾಟಕದ ಎಲ್ಲ ಜಿಲ್ಲೆಗಳಿಂದಲೂ ತಂತಮ್ಮ ಖರ್ಚು-ವೆಚ್ಚಗಳಿಂದಲೇ ಬಂದಿದ್ದ ಸಾಹಿತಿ ಮಿತ್ರರು ಸಾಮೂಹಿಕ ಹೊಣೆಗಾರಿಕೆಯ ಮಹತ್ವವನ್ನು ಅರಿತು ನಾವೆಲ್ಲಾ ಒಗ್ಗೂಡಿ ದುಡಿಯಬೇಕಾದ ಅವಶ್ಯಕತೆಯ ಬಗ್ಗೆ ವಿವರವಾಗಿ ಚರ್ಚಿಸಿದೆವು.

ಅತ್ಯಂತ ಕ್ರಿಯಾಶಾಲಿಯೂ, ಪ್ರಜ್ಞಾವಂತನೂ ಆಗಿದ್ದ ನಾಗರಾಜ್‌ನ ವ್ಯಕ್ತಿತ್ವದ ಮಹತ್ವವನ್ನು ಅರಿಯುವುದು ತೀರಾ ಆಪ್ತರಿಗೆ ಸಹ ಆಗಾಗ ಸಾಧ್ಯವಾಗುತ್ತಿರಲಿಲ್ಲ. ಬಂಡಾಯ ಸಾಹಿತ್ಯ ಸಮ್ಮೇಳನವು ಚರಿತ್ರಾರ್ಹ ದಾಖಲೆಯನ್ನು ನಿರ್ಮಿಸಿತು. ಆದರೆ, ಸಂಚಾಲಕರಲ್ಲಿ ಒಬ್ಬನಾಗಿದ್ದ ಶೂದ್ರ ಶ್ರೀನಿವಾಸ ನಮ್ಮೆಲ್ಲರಿಗೆ ಪ್ರೀತಿಪಾತ್ರನಾಗಿದ್ದರೂ ತನ್ನ ಮಾಮೂಲಿ ಗೊಂದಲದಿಂದ ಸಂಚಾಲಕ ಸಮಿತಿಯಿಂದ ಹೊರಬಿದ್ದ. ನಾಗರಾಜ್, 'ಇದನ್ನೆಲ್ಲಾ ನಿರ್ಲಕ್ಷಿಸೋಣ; ಆತ ಹಾಗೆ ಮಾಡದಿದ್ದಲ್ಲಿಯೇ ಆಶ್ಚರ್ಯವಾಗುತ್ತಿತ್ತು. ಇರಲಿ' ಎಂದು ಮನಸಾರೆ ನಕ್ಕು ಹಗುರಾದ.

ಸಮ್ಮೇಳನದ ಯಶಸ್ಸಿಗೆ ಸಂಪೂರ್ಣ ಟೊಂಕಕಟ್ಟಿ ನಮ್ಮೊಡನೆ ಉದಾರವಾಗಿ ಸಹಕರಿಸಿದ 'ಪ್ರಜಾವಾಣಿ'ಯ ಕೆ.ಎನ್. ಹರಿಕುಮಾರ್ ಪಾತ್ರ ನಿಜಕ್ಕೂ ದೊಡ್ಡದು. ಹರಿಕುಮಾರ್ ಅಕ್ಕರೆಗೆ ತುಂಬು ಪಾತ್ರನಾಗಿದ್ದ ನಾಗರಾಜ್, ಅಪ್ರತಿಮ ಬದ್ಧತೆಯ ಲಂಕೇಶ್ ಮತ್ತು ನಾನು ಆಗಾಗ ಭೇಟಿಯಾಗಿ ಚರ್ಚಿಸಿ, ನಂನಮ್ಮ ಸಾಮೂಹಿಕ ಹೊಣೆಗಾರಿಕೆಯ ಚಾರಿತ್ರಿಕ ತುರ್ತಿನ ಬಗ್ಗೆ ಗಂಭೀರವಾಗಿ ಆಲೋಚಿಸುತ್ತಿದ್ದೆವು. ನಮ್ಮ ಪ್ರಗತಿಪರ ಚಿಂತಕರಲ್ಲಿ ಅರ್ಪಣಾ ಮನೋಭಾವದ ಹೆಮ್ಮೆಯ ಗೆಳೆಯರಾದ ಹರಿಕುಮಾರ್ ಸಜ್ಜನಿಕೆ ಮತ್ತು ಬದ್ಧತೆ ನಿಜಕ್ಕೂ ಅಪರೂಪದ್ದು. ಮಾಧ್ಯಮಲೋಕದಲ್ಲಿ ದಲಿತ ಮತ್ತು ತಬ್ಬಲಿಜಾತಿಗಳ ಹಿನ್ನೆಲೆಯ ಪ್ರತಿಭಾವಂತರ ಅಭಾವ ತುಳುಕಾಡುತ್ತಿರುವ ಬಗ್ಗೆ ಆಗಾಗ ನಾವು ನೊಂದುಕೊಳ್ಳುತ್ತಿದ್ದೆವು. ಇಂತಹ ಒಂದು ಬಿಚ್ಚುಮನಸ್ಸಿನ ತೀವ್ರತರ ಸಮಾಲೋಚನೆಯ ನಂತರ ಹರಿಕುಮಾರ್ 'ಪ್ರಜಾವಾಣಿ' ಪತ್ರಿಕಾ ಸಮೂಹದಲ್ಲಿ ಆ ಬಗೆಯ ಪ್ರಾತಿನಿಧ್ಯ ತುಂಬಾ ಅವಶ್ಯವೆಂದು ನಿರ್ಧರಿಸಿ, ನಮ್ಮ ಸಹಕಾರ ಕೋರಿದರು. ನಾಗರಾಜ್ ಮತ್ತು ನಾನು ಈ ಬಗ್ಗೆ ವಿವರವಾಗಿ ಚರ್ಚಿಸುತ್ತಾ - ಬೇರೆ ಬೇರೆ ಹಂತಗಳಲ್ಲಿ ಇಂದೂಧರ, ರಾಕೆ, ಶಿವಾಜಿ, ಶಿವರಾಂ, ಕಾಟ್ರಹಳ್ಳಿ, ದಂಡಾವತಿ ಮುಂತಾದ ಗೆಳೆಯರನ್ನು ಆ ಬಳಗದಲ್ಲಿ ಸೇರಿಸಲು ಸಾಧ್ಯವಾಯಿತು.

ನಾಗರಾಜ್‌ನ ಬೌದ್ಧಿಕ ಶ್ರಮ, ಜ್ಞಾನದ ಹಸಿವಿನ ದೇಶ-ವಿದೇಶಗಳ ಸುತ್ತಾಟದ ತೀವ್ರತೆಯ ವೇಗವನ್ನು ಅವನ ಕಿರಿಯ ವಯಸ್ಸು ಅರಗಿಸಿಕೊಳ್ಳಲಿಲ್ಲ. ಯಾವಾಗಲೂ ಹತ್ತಾರು ಯೋಜನೆಗಳ ಚಿಂತನೆಗಳ ಭಾರದಲ್ಲಿಯೇ, ಟೆನ್ಶನ್‌ನಲ್ಲಿಯೇ ಇರುತ್ತಿದ್ದ. ನಾನು ಬೆಂಗಳೂರು ಬಿಟ್ಟು ಬಂದ ನಂತರ ಅವನ ಮತ್ತು ನನ್ನ ನಡುವೆ ಸಂಪರ್ಕ ಕಡಿಮೆಯಾಗಿತ್ತು. ಆದರೆ, ಅವನ ವಿಚಾರಗಳು, ಚಿಂತನೆಗಳು ಆಗಾಗ ಅವನ ಗೆಳೆಯರೆಲ್ಲರಿಗೂ ನೆನಪಾಗುತ್ತಾ ಕಾಡುವುದು ಮಾತ್ರ ನಿಜ.

(ಮಾ.28ರಂದು ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನಲ್ಲಿ ನಡೆಯಲಿರುವ 'ಡಿ.ಆರ್.ನಾಗರಾಜ್ 67' ಕಾರ್ಯಕ್ರಮದಲ್ಲಿ, ಶಿವರಾಜ್ ಬ್ಯಾಡರಹಳ್ಳಿ ಸಂಪಾದಿಸಿರುವ 'ಅನನ್ಯ ಪ್ರತಿಭೆಯ ಪರಿ' ಕೃತಿ ಬಿಡುಗಡೆ ನಡೆಯಲಿದೆ. ಈ ಲೇಖನ ಆ ಕೃತಿಯ ಆಯ್ದಭಾಗ)

ಕಿಶೋರಿಯ ಕಣ್ಣಲ್ಲಿ ನಾಜಿಗಳ ಕ್ರೌರ್ಯ

ಎಸ್. ದಿವಾಕರ್


1933ರಲ್ಲಿ ಜರ್ಮನಿಯಲ್ಲಿ ಅಡಾಲ್ಫ್ ಹಿಟ್ಲರ್ ಅಧಿಕಾರ ಹಿಡಿದ ಮೇಲೆ ಯಹೂದ್ಯರ ಒಂದು ಕುಟುಂಬ ಆ್ಯಮ್‌ಸ್ಟರ್‌ಡ್ಯಾಮ್‌ಗೆ ವಲಸೆ ಹೋಯಿತು. 1940ರಲ್ಲಿ ಜರ್ಮನಿ, ನೆದರ್ಲೆಂಡ್ಸ್ ಅನ್ನು ಆಕ್ರಮಿಸಿಕೊಂಡಾಗ ಅದೇ ಕುಟುಂಬ 1942ರಿಂದ 1944ರವರೆಗೆ ಎರಡು ವರ್ಷ ಅಡಗಿಕೊಂಡೇ ಇರಬೇಕಾಯಿತು. ಆ ಕುಟುಂಬದ ಸದಸ್ಯರೆಂದರೆ ಆ್ಯನ್ ಎಂಬ ಹುಡುಗಿ, ಅವಳ ತಂದೆ ಓಟ್ಟೊ, ತಾಯಿ ಎಡಿತ್, ಹಿರಿಯಕ್ಕ ಮಾರ್ಗೋಟ್.

ನಾಜಿಗಳು ಅನೇಕ ಯಹೂದ್ಯವಿರೋಧಿ ಕ್ರಮಗಳನ್ನು ಕೈಗೊಂಡರು. ಅವುಗಳಲ್ಲಿ ಆ್ಯನ್ ಮತ್ತು ಮಾರ್ಗೋಟ್ ಯಹೂದ್ಯರಿಗೇ ಮೀಸಲಾದ ಒಂದು ಶಾಲೆಗೆ ಸೇರಿಕೊಳ್ಳಬೇಕೆನ್ನುವುದೂ ಒಂದು. ಮರುವರ್ಷ ಮಾರ್ಗೋಟ್ ಒಂದು ಲೇಬರ್ ಕ್ಯಾಂಪಿಗೆ ಸೇರಬೇಕೆಂಬ ಆಜ್ಞೆ. ಸೇರಿಕೊಳ್ಳದಿದ್ದರೆ ದಸ್ತಗಿರಿಯಾಗಬಹುದೆಂಬ ಭಯದಿಂದ ಇಡೀ ಕುಟುಂಬ ಆ್ಯಮ್‌ಸ್ಟರ್‌ಡ್ಯಾಮ್‌ನಲ್ಲಿ ಓಟ್ಟೊವಿನ ವ್ಯಾಪಾರ ಕೇಂದ್ರದ ಒಂದು 'ರಹಸ್ಯ ವಿಭಾಗ'ದಲ್ಲಿ, ಪುಸ್ತಕಗಳ ಒಂದು ಕಪಾಟಿನ ಮರೆಯಲ್ಲಿ ಅಡಗಿಕೊಂಡಿತು. ಬಹುಬೇಗ ಇನ್ನೂ ನಾಲ್ಕು ಮಂದಿ ಯಹೂದ್ಯರು - ಹರ್ಮನ್, ಅಗೂಸ್ತೆ, ವಾನ್ ಪೆಲ್ಸ್, ಅವರ ಪುತ್ರ ಪೀಟರ್ - ಅವರನ್ನು ಸೇರಿಕೊಂಡರು. ಇತರ ಕೆಲವರೂ ಅವರ ನೆರವಿಗೆ ಬಂದರು.

1942ರ ಜೂನ್ 12ರಂದು ಆ್ಯನ್‌ಳ 13ನೆಯ ಹುಟ್ಟುಹಬ್ಬ. ಅಂದು ಅವಳಿಗೊಂದು ಡೈರಿ ಕೊಡುಗೆಯಾಗಿ ಬಂತು. ಆ ದಿನವೇ ಅದರಲ್ಲಿ ಬರೆಯತೊಡಗಿದ ಅವಳಿಗೆ ಮುಂದಿನ ಎರಡು ವರ್ಷ ಆ ಡೈರಿಯೇ ಒಬ್ಬ ಗೆಳೆಯನಂತಿತ್ತು. ಅವಳು ಡೈರಿ ರೂಪದ ಆ ಗೆಳೆಯನನ್ನು 'ಪ್ರೀತಿಯ ಕಿಟ್ಟಿ' ಎಂದು ಸಂಬೋಧಿಸಿದಳು. ಉದಾಹರಣೆಗೆ 1943ರ ಆಗಸ್ಟ್ 4ರಂದು ಅವಳು ಬರೆದಿರುವುದನ್ನು ನೋಡಿ: 'ಗುಪ್ತವಾಸದಲ್ಲಿ ತೊಡಗಿ ಒಂದು ವರ್ಷದ ಮೇಲಾಯ್ತು. ನಮ್ಮ ಬದುಕಿನ ಬಗ್ಗೆ ಕೆಲವೇ ಸಂಗತಿಗಳಷ್ಟೆ ನಿನಗೆ ಗೊತ್ತು. ಅದರಲ್ಲಿ ಕೆಲವು ವರ್ಣಿಸಲು ಆಗದಂತಹ ಸಂಗತಿಗಳು ಇವೆ. ಕಿಟ್ಟಿ, ನಿನ್ನಲ್ಲಿ ನನಗೆ ಬಹಳ ಹೇಳುವುದಿದೆ. ದಿನ ಮತ್ತು ಕಾಲ ಪ್ರತಿನಿತ್ಯವೂ ಭಿನ್ನವಾಗಿರುವಂತೆ ಸಾಮಾನ್ಯ ಜನರ ಬದುಕು ಕೂಡಾ ಭಿನ್ನ ಭಿನ್ನವಾಗಿರುತ್ತದೆ'.

'ಪ್ರತಿದಿನವೂ ನಿನಗೆ ನಾನು ಹೇಳುವುದು ಬರಿಯ ಹಗಲು ಹೊತ್ತಿನ ಸಾಮಾನ್ಯ ದಿನದ ಬಗ್ಗೆ. ಆದರೆ ಇಂದು ನಿನ್ನೊಂದಿಗೆ ಸಂಜೆಯ ಹೊತ್ತಿನ ಮತ್ತು ರಾತ್ರಿಯ ಸಮಯದ ಸಂಗತಿಗಳನ್ನು ಹೇಳುತ್ತಿದ್ದೇನೆ. ಮೇಲ್ಮಹಡಿಯಲ್ಲಿ ಜೋರಾದ ಗುಡುಗಿನ ಸದ್ದು. ಆದರೆ ಅದು ಗುಡುಗಿನ ಸದ್ದಲ್ಲ. ಶ್ರೀಮತಿ ವ್ಯಾನ್‌ಡ್ಯಾನ್‌ರ ಹಾಸಿಗೆಯ ಸದ್ದು. ಹಾಸಿಗೆಯನ್ನು ಕಿಟಕಿಯ ಪಕ್ಕ ಜರುಗಿಸಲಾಗುತ್ತಿದೆ. ಕಾರಣ ಗೊತ್ತೇ ಕಿಟ್ಟಿ? ಗುಲಾಬಿ ಬಣ್ಣದ ರಾತ್ರಿಯುಡುಗೆ ತೊಟ್ಟ ಈ ಮಹಾರಾಣಿಯ ದೊಡ್ಡ ಮೂಗಿನ ಹೊಳ್ಳೆಗಳು ಶುದ್ಧಗಾಳಿಯನ್ನು ಸೇವಿಸಬೇಕಂತೆ. ಅದಕ್ಕಾಗಿ ಈ ಬದಲಾವಣೆ...'

ಆ್ಯನ್‌ಳ ತಾರುಣ್ಯ ಕಳೆದುಹೋಗುವುದು ಹೊರಜಗತ್ತಿಗೆ ಕಾಣದ ಅಡಗುದಾಣದಲ್ಲಿ. ಅವಳು ಹಗಲುಗಳನ್ನು ಸಣ್ಣ ಸಣ್ಣ ರೂಮುಗಳಲ್ಲಿ ತುದಿಗಾಲಲ್ಲಿ ನಡೆದಾಡುತ್ತ, ರಾತ್ರಿಗಳನ್ನು ಬಾಂಬುಗಳ, ಸಿಡಿಗುಂಡುಗಳ ಸದ್ದುಗಳಿಂದ ಭಯಪಡುತ್ತ ಕಳೆಯುತ್ತಾಳೆ.



ದಿ ಡೈರಿ ಆಫ್ ಎ ಯಂಗ್ ಗರ್ಲ್
ಮೂಲ: ಆ್ಯನ್ ಫ್ರಾಂಕ್
ಅನುವಾದ: ನಾಗರೇಖಾ ಗಾಂವಕರ
ಪ್ರ: ನೆಲೆ ಪ್ರಕಾಶನ ಸಂಸ್ಥೆ, ಸಿಂದಗಿ
ಮೊ:9481082518
ಪು: 384 ₹320

ಯುದ್ಧ ಇನ್ನೇನು ಕೊನೆಗೊಳ್ಳಲಿದೆ ಎನ್ನುವಾಗ ಅವಳು ಪ್ರಪಂಚದಲ್ಲಿ ಎಷ್ಟೆಲ್ಲ ನೋವು ಯಾತನೆಗಳಿವೆಯೆಂದು ಕಂಗೆಡುತ್ತಾಳೆ. ಒಮ್ಮೆ ತಾನೂ ತನ್ನ ಕುಟುಂಬದವರೂ ಸತ್ತುಹೋಗಿದ್ದರೆ ಒಳ್ಳೆಯದಾಗುತ್ತಿತ್ತೇನೋ ಎಂದೂ ಯೋಚಿಸುತ್ತಾಳೆ. ಆಮೇಲೆ ಹಾಗೆ ಯೋಚಿಸಿದೆನಲ್ಲ ಎಂದು ಪಶ್ಚಾತ್ತಾಪ. ಅಲ್ಲಿಗೆ ಅವಳ ಡೈರಿ ಮುಗಿಯುತ್ತದೆ.

ಆ್ಯನ್‌ಗೆ ಹದಿನೈದು ವರ್ಷ ತುಂಬುವ ಮೊದಲೇ ಅವಳ ಅಡಗುದಾಣ ಪತ್ತೆಯಾಗಿ ಅವಳನ್ನು, ಇತರರನ್ನು ಜರ್ಮನ್ನರ ವಿವಿಧ ಕೂಡುದೊಡ್ಡಿಗಳಿಗೆ ಅಟ್ಟಲಾಗುತ್ತದೆ. ಅಲ್ಲಿಯೇ ಅವರೆಲ್ಲರೂ ಅಸುನೀಗುತ್ತಾರೆ. ಬದುಕಿ ಉಳಿಯುವವನು ಆ್ಯನ್‌ಳ ತಂದೆ ಓಟ್ಟೊ ಫ್ರಾಂಕ್ ಮಾತ್ರ. ಆತನ ಸತತ ಪ್ರಯತ್ನದಿಂದ ಆ್ಯನ್‌ಳ ಡೈರಿ 1947ರಲ್ಲಿ ಡಚ್ ಭಾಷೆಯಲ್ಲಿ ಪ್ರಕಟಗೊಳ್ಳುತ್ತದೆ.

ಡೈರಿಯಲ್ಲಿ ಅವಳು ತನ್ನ ಅಡಗುತಾಣದ ದಿನದಿನದ ಬದುಕನ್ನು, ಅಲ್ಲಿದ್ದವರ ನಡುವೆ ನಡೆಯುತ್ತಿದ್ದ ವಾದವಿವಾದಗಳನ್ನು, ಯಾರಾದರೂ ತಮ್ಮನ್ನು ಕಂಡುಬಿಟ್ಟಾರೆಂಬ ಭಯವನ್ನು, ತನ್ನ ಸೋದರಿಯ ಬಗೆಗಿನ ಅಸೂಯೆಯನ್ನು, ತನ್ನ ತಾಯಿಯ ಬಗ್ಗೆ ತನ್ನಲ್ಲಿದ್ದ ಸಿಟ್ಟುಸಿಡುಕುಗಳನ್ನು, ತಾನು ಪ್ರಾಪ್ತ ವಯಸ್ಸಿಗೆ ಬರುವಾಗಿನ ದೈಹಿಕ ಪರಿವರ್ತನೆಯಿಂದ ಉಂಟಾಗುವ ಮಾನಸಿಕ ತುಮುಲವನ್ನು ಸಹ ದಾಖಲಿಸಿದ್ದಾಳೆ; ತನ್ನ ದೇಹದಲ್ಲಾಗುತ್ತಿದ್ದ ಪರಿವರ್ತನೆಗಳನ್ನು ಕುರಿತು, ತಾನು ಸ್ವಲ್ಪ ಕಾಲ ಪೀಟರ್ ವಾನ್ ಪೆಲ್ಸ್‌ನನ್ನು ಪ್ರೀತಿಸಿದ್ದರ ಕುರಿತು ನಿರ್ಭಿಢೆಯಿಂದ ಬರೆದಿದ್ದಾಳೆ. ಜೊತೆಗೆ ಭವಿಷ್ಯದಲ್ಲಿ ತಾನೊಬ್ಬ ಪತ್ರಕರ್ತೆಯೋ ಲೇಖಕಿಯೋ ಆಗಬೇಕೆಂಬ ಮಹದಾಸೆಯ ಬಗ್ಗೆ ಕೂಡ.

ಒಳನೋಟ

ನಾವು ಊಹಿಸಲಾಗದ ನೋವು, ಭಯ, ಹಸಿವು, ದಣಿವು, ಮನುಷ್ಯರಿಂದ ಬೇರ್ಪಟ್ಟ ಸ್ಥಿತಿ, ಏಕಾಕಿತನ, ಎಲ್ಲವನ್ನೂ ತಿಳಿಹಾಸ್ಯದಿಂದ, ಬುದ್ಧಿಮತ್ತೆಯಿಂದ, ಅಪರೂಪದ ಒಳನೋಟಗಳಿಂದ ದಾಖಲಿಸಿರುವ ಈ ಡೈರಿ ಎರಡನೆಯ ಮಹಾಯುದ್ಧ ಕಾಲದ ಒಂದು ಕ್ಲಾಸಿಕ್ ಸಾಹಿತ್ಯ ಕೃತಿಯಾಗಿರುವುದಲ್ಲದೆ ನಾಜಿಗಳು ನಡೆಸಿದ ನರಮೇಧವನ್ನು ಕುರಿತ ಒಂದು ವೈಯಕ್ತಿಕ ವ್ಯಾಖ್ಯಾನವಾಗಿಯೂ ಹೆಸರಾಗಿದೆ.

ನಾನು ಸುಮಾರು ನಲವತ್ತು ವರ್ಷಗಳ ಹಿಂದೆ ಇಂಗ್ಲಿಷಿನಲ್ಲಿ ಓದಿದ್ದ, ಜಗತ್ತಿನ ಅನೇಕ ಭಾಷೆಗಳಿಗೆ ಅನುವಾದವಾಗಿರುವ ಈ ಪುಸ್ತಕ ಇದೀಗ ಕನ್ನಡಕ್ಕೆ ಬಂದಿದೆ - ನಾಗರೇಖಾ ಗಾಂವಕರ ಅವರ ಸೊಗಸಾದ ಅನುವಾದದಲ್ಲಿ. ಅನುವಾದವೆನ್ನುವುದು ಮೂಲ ಪಠ್ಯದೊಡನೆ ಏಕಾಂಗಿಯಾಗಿ ನಡೆಸುವ ಅನುಸಂಧಾನ. ಆ ಅನುಸಂಧಾನದಲ್ಲಿ ಅನುವಾದಕ ಸ್ವತಃ ಕೊಡುವುದಕ್ಕಿಂತ ಪಡೆಯುವುದೇ ಹೆಚ್ಚು.

ಈ ಪುಸ್ತಕದಲ್ಲಿರುವುದು ಕಿಶೋರಿಯೊಬ್ಬಳ ಮುಗ್ಧತೆ, ಅಂಜಿಕೆ, ಆತಂಕ, ಮಾನಸಿಕ ತೊಳಲಾಟ, ಮನುಷ್ಯ ವರ್ತನೆಯನ್ನು ಕುರಿತ ಕುತೂಹಲ, ವಯೋಸಹಜ ದೈಹಿಕ ಮತ್ತು ಮಾನಸಿಕ ಬದಲಾವಣೆಗಳ ಅನುಭವ ಜಗತ್ತು. ಇವುಗಳನ್ನು ಆಕೆ ಬರೆದಿರುವುದು ತನ್ನ ಕಿಶೋರ ಭಾಷೆಯಲ್ಲಿ. ಈ ಅನುವಾದಕರು ಆ ಭಾಷೆಯನ್ನೇ ಕನ್ನಡದಲ್ಲಿ ಪಡಿಮೂಡಿಸಲು ಪ್ರಯತ್ನಿಸಿ ಸಾಕಷ್ಟು ಯಶಸ್ವಿಯಾಗಿದ್ದಾರೆ ಎನ್ನಬೇಕು. ಅವರ ಅನುವಾದ ಆ್ಯನ್‌ಳ ಸರಳವೂ ಸ್ವಲ್ಪಮಟ್ಟಿಗೆ ನಿಗೂಢವೂ ಆದ ಧ್ವನಿಯನ್ನು ಸೆರೆಹಿಡಿದಿರುವುದರಿಂದ ಓದುಗರೂ ಅವಳ ಅಂತರಂಗದ ತುಮುಲವನ್ನು, ಅದು ಹುಟ್ಟಿಸುವ ಬೇಗುದಿಯನ್ನು ಅನುಭವಿಸುವಂತಾಗಿದೆ. ಆ್ಯನ್‌ಳ ಮನೋಲಹರಿ ಮತ್ತು ನವಿರು ಭಾವಗಳು ಈ ಅನುವಾದದಲ್ಲೂ ಬೆಳಗುತ್ತಿವೆ. ಇದೇನೂ ಕಡಿಮೆ ಸಾಧನೆಯಲ್ಲ.

ಕಥೆ

ವಿಶ್ವನಾಥ ಪಾಟೀಲ್ ಗೋನಾಳ ಬರೆದ ಕಥೆ

ಮಹಾನಾಯಕಿ



ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/short-story

ಕವಿತೆ

ಮಂಜುನಾಥ ನಾಯ್ಕ ಬರೆದ ಕವಿತೆ

ಬೆಟ್ಟ ಹತ್ತುವುದೆಂದರೆ...

ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry

ಉದಕದೊಳಗಿನ ಪ್ರತಿಬಿಂಬವೇ 'ನೀಲು'


ಸುರೇಶ ನಾಗಲಮಡಿಕೆ

ಎಸ್.ಎಫ್.ಯೋಗಪ್ಪನವರ್ ಅವರ 'ನೀಲು: ಮಾತು ಮೀರಿದ ಮಿಂಚು' ಎಂಬ ಕೃತಿಯು ಪಿ. ಲಂಕೇಶ್ ಅವರ ಕಾವ್ಯದ ಹೊಸ ಬಗೆಯ ರೂಹುಗಳನ್ನು ಹೊತ್ತು ತಂದಿದೆ. ಯೋಗಪ್ಪನವರ್ ಕನ್ನಡದ ವಿಶಿಷ್ಟ ಬಗೆಯ ರೂಪಕದ ಗದ್ಯಕಾರರಾದರೂ ಓದಿನ ರಾಜಕಾರಣದಿಂದ ಬಹುಬಗೆಯ ಚರ್ಚೆಯ ಆಚೆಯೇ ನಿಂತವರು. ಇವರ 'ಬೋದಿಲೇರ್‌ನ ಐವತ್ತು ಗದ್ಯಕವಿತೆಗಳು', 'ರೂಪಕದ ಲೇಖಕರು', ಸ್ಯಾಲೆಂಜರ್‌ನ 'ಹದಿಹರೆಯದ ಒಬ್ಬಂಟಿಪಯಣ' ಮುಂತಾದ ಕೃತಿಗಳ ಪಾಶ್ಚಾತ್ಯ ಒಳನೋಟಗಳು ಮತ್ತು ಅವರು ನೀಡುವ ಬದುಕಿನ ಅಗ್ನಿಕುಂಡದಂತಹ ಸತ್ಯಗಳನ್ನು ಮರು ಓದಿಗೆ ಒಳಪಡಿಸುವ ಅಗತ್ಯವಿದೆ.

ಎಂಬತ್ತರ ದಶಕದ ಸೃಜನಶೀಲ ಲೇಖಕರ ಪಟ್ಟಿಗೆ ಸೇರುವ ಯೋಗಪ್ಪನವರ್ ಜನಪದಲೋಕವನ್ನು ಕಲಾತ್ಮಕವಾಗಿ ಕಟ್ಟಿಕೊಟ್ಟ 'ಪ್ರೀತಿ ಎಂಬುದು ಚಂದ್ರನ ದಯೆ' ಕಾದಂಬರಿ ಇನ್ನೂ ಮಾಸಿಲ್ಲ. ಲಂಕೇಶರ ಒಡನಾಡಿಗಳೂ ಅವರಿಗೆ ಪ್ರೀತಿಪಾತ್ರರೂ ಆದ ಈ ಲೇಖಕರು ನೀಲು ಕಾವ್ಯವನ್ನು ನಿಕಟವಾಗಿ ಓದಿ ಅಧ್ಯಯನ ಮಾಡಿದ ಫಲವೇ ಈ ಕೃತಿ. ವಾಸ್ತವವಾಗಿ ಈ ಕೃತಿಯನ್ನು ನಾವು ಶುದ್ಧ ಸಾಹಿತ್ಯ ವಿಮರ್ಶೆಯ ಮಾನದಂಡಗಳಿಂದ, ವಿಧಾನಗಳಿಂದ ಕಾಣಬಾರದು. ಒಬ್ಬ ಸೃಜನಶೀಲ ಲೇಖಕ ನೀಲು ಕಾವ್ಯವನ್ನು ದರ್ಶಿಸಿದ ಬಗೆ, ಕಾಣುವ ಕಾಣ್ಕೆ ಯಾವ ರೀತಿಯಲ್ಲಿ ಇರಬಲ್ಲವು ಎಂಬುದಕ್ಕೆ ಇದು ನಿದರ್ಶನ. ಯೋಗಪ್ಪನವರ್ ಕೃತಿಯ ಉದ್ದಕ್ಕೂ ಬಳಸುವ ಭಾಷೆ ರೂಪಕ ಜಗತ್ತಿನದು.

ವಿಮರ್ಶೆ

ಲಂಕೇಶರು ಬರೆದ ನೀಲು ಕಾವ್ಯ ಕನ್ನಡದ ಸಾಹಿತ್ಯ ಜಗತ್ತಿನಲ್ಲಿ ತನ್ನದೇ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಹಲವರಿಗೆ ಹಲವು ರೀತಿಯ ಅರ್ಥಗಳನ್ನು ನೀಡಿದೆ. ಬಹುಜನರು ನೀಲು ಕಾವ್ಯವನ್ನು ಲೈಂಗಿಕತೆಯ ಅರ್ಥಛಾಯೆಯಲ್ಲಿ ಕಂಡಿದ್ದುಂಟು. ಆದರೆ, ಈ ಬರಹ ಆ ಬಗೆಯ ಕ್ಷಣಿಕತೆಯ ತೀರ್ಮಾನಗಳಿಗೆ ತಲುಪುವುದಿಲ್ಲ. ಬದಲಿಗೆ ನೀಲು ಕಂಡ ಲೋಕದರ್ಶನ ಮನುಷ್ಯನ ಒಟ್ಟು ಜೀವಿತಕ್ರಮಗಳಿಗೆ ಎಡತಾಕುವ ವಿಶಾಲ ನೆಲೆಗಳನ್ನು ಚರ್ಚೆ ಮಾಡುತ್ತದೆ. ನೀಲು ಅಭಿವ್ಯಕ್ತಿಸುವ ಜಗತ್ತಿನಲ್ಲಿ ಜನಪದರಿದ್ದಾರೆ, ಪ್ರೇಮಿಗಳು, ದಾರ್ಶನಿಕರು, ರಾಜಕಾರಣಿಗಳು, ಪ್ರಕೃತಿ, ಮನುಷ್ಯನ ನೀಚತನಗಳು, ಅವನ ಅಸಂಗತತನಗಳು, ಹೆಣ್ಣಿನ ಎದೆಬಡಿತಗಳು ಅಲಜಡಿಗಳು ಎಲ್ಲವೂ ಇಲ್ಲಿ ಮುಖಾಮುಖಿಯಾಗುತ್ತವೆ. ಇಲ್ಲಿ ಒಂದು ಮರದಲ್ಲಿ ನೂರು ಸ್ವರಗಳಿವೆ. ಇವುಗಳನ್ನು ಸಾವಧಾನದಿಂದ ಆಲಿಸುವ ಕೆಲಸವನ್ನು ಯೋಗಪ್ಪನವರ್ ಮಾಡಿದ್ದಾರೆ.



ನೀಲು: ಮಾತು ಮೀರಿದ ಮಿಂಚು
ಲೇ: ಎಸ್. ಎಫ್. ಯೋಗಪ್ಪನವರ್
ಪ್ರ: ಸಂಗಾತ ಪುಸ್ತಕ
ಮೊ: 9341757653
ಪು: 164 ₹200

ನೀಲು ಕಾವ್ಯವನ್ನು ಹದಿನೇಳು ಚಿಕ್ಕ ಅಧ್ಯಾಯಗಳು ಅನ್ನುವುದಕ್ಕಿಂತ ತಾತ್ವಿಕ ಆಯಾಮಗಳ ಬೆನ್ನಲ್ಲಿ ಚರ್ಚೆಮಾಡುತ್ತಾರೆ. ಹೀಗೆ ಮಾಡುವಾಗ ಯೋಗಪ್ಪನವರ್ ನೀಲುವಿನ ಲೋಕದ ಜತೆಗೆ ಜಗತ್ತಿನ ಅನೇಕ ದಾರ್ಶನಿಕರನ್ನು ಜತೆಗೂಡಿಸುತ್ತಾರೆ. ಇದೇ ಈ ಕೃತಿಯ ವೈಶಿಷ್ಟ್ಯ ಎನ್ನಬಹುದು. ಯೋಗಪ್ಪನವರ್ ಅವರಿಗೆ ಇರುವ ಭಾರತ ಮತ್ತು ಪಾಶ್ಚಾತ್ಯ ತತ್ವಶಾಸ್ತ್ರದ ತಿಳಿವಳಿಕೆ ಇದರಲ್ಲಿ ಎದ್ದುಕಾಣುತ್ತದೆ.

ಲೌಕಿಕ- ಅಲೌಕಿಕ ಸುಳಿದಾಟಗಳ ಕುರಿತು ಹಾಗೂ ಇವುಗಳ ನಡುವಿನ ಬದುಕನ್ನು ಅರ್ಥೈಸಿಕೊಳ್ಳುವ ಕ್ರಮಗಳ ಕುರಿತು ಗಂಭೀರ ತೌಲನಿಕ ವಿಶ್ಲೇಷಣೆಯಿದೆ. ಸದ್ಯಕ್ಕೆ ಇವೆರಡರ ನಡುವೆ ಬದುಕು ನಡೆಸುವ ಜಂಜಾಟಗಳನ್ನು ಮತ್ತು ಎದುರೀಜು ನಡೆಸುವ ಒಳಚಿಂತನೆಗಳನ್ನು ನೀಲು ನಡೆಸುತ್ತಾಳೆ. ಈ ಪ್ರಕ್ರಿಯೆಯಲ್ಲಿ ಲಂಕೇಶರಿಗಿದ್ದ ಆಳದ ಗುಬುಲುತನಗಳು ನೀಲು ಕಾವ್ಯದಲ್ಲೂ ಗೋಚರಿಸುತ್ತವೆ. ಗುಬುಲುತನಗಳೇ ಅನೇಕ ಬಾರಿ ಮನುಷ್ಯನ ಒಳತೋಟಿಗಳನ್ನು ಪ್ರಾಮಾಣಿಕವಾಗಿ ನಿರ್ಧರಿಸುತ್ತವೆ.


ಇದಕ್ಕೆ ಅನೇಕ ನಿದರ್ಶನಗಳನ್ನು ನೀಲುಕಾವ್ಯದಲ್ಲಿ ಕಾಣಬಹುದು. ಲಂಕೇಶರ 'ಜೊತೆಗಾರ' ಕತೆಯಲ್ಲಿ 'ಮನುಷ್ಯ ಒಬ್ಬಂಟಿಯಾಗಿದ್ದಾಗ ಬದುಕಿನ ಬಗ್ಗೆ ಎಚ್ಚರದಿಂದ ಇರುತ್ತಾನೆ' ಎಂದು ನಿರೂಪಕ ಹೇಳುವ ಮಾತುಗಳು ನೀಲುವಿನಲ್ಲೂ ಕಾಣಿಸುತ್ತವೆ. ಈ ಮಾರ್ಗವನ್ನು ವಿವರಿಸುವ ಕ್ರಮ ಅದಕ್ಕೆ ಅಗತ್ಯವಾಗುವ ಕವಿತೆಯ ಸಾಲುಗಳನ್ನು ಯೋಗಪ್ಪನವರ್ ಯೋಗ್ಯ ರೀತಿಯಲ್ಲಿ ಬಳಸುತ್ತಾರೆ. ನೀಲು ಕಾವ್ಯದಲ್ಲಿ ಏಕಕಾಲದಲ್ಲಿ ಸಾಹಿತ್ಯ ಮತ್ತು ತಾತ್ವಿಕ (ತತ್ವಶಾಸ್ತ್ರ) ಸೆಳಕುಗಳು ಎದುರು ಬದುರುಗೊಂಡಿವೆ.

ಯಾವುದೇ ಕಾವ್ಯ ತತ್ವಜ್ಞಾನಿಯ ಜಿಜ್ಞಾಸೆಯನ್ನು, ಮನಸ್ಸನ್ನು ತಾಕದೇ ಹೋದರೆ ಖಂಡಿತ ಅದು ಮಾತಿನಲ್ಲೇ ಸೊರಗುತ್ತದೆ. ಬೇಂದ್ರೆ ಕಾವ್ಯ ಇಂದು ಮುಂದೆಯೂ ನೆಲಕಚ್ಚಿ ನಿಲ್ಲುವುದೇ ಈ ಕಾರಣದಿಂದ. ನೀಲುವಿನಲ್ಲಿ ಅಂತಹ ಸೆಳಕುಗಳು ದೊಡ್ಡಪ್ರಮಾಣದಲ್ಲಿ ಇಲ್ಲದಿದ್ದರೂ ಮಿಂಚಿನಂತೆ ಕಾಣಿಸುತ್ತವೆ. ಆ ಬಗೆಯ ಮಿಂಚುಗಳನ್ನು ಯೋಗಪ್ಪನವರ್ ಸರಿಯಾದ ದಾರಿಯಲ್ಲಿ ವಿವರಿಸಿದ್ದಾರೆ. ನಿಸರ್ಗ, ಸೃಷ್ಟಿ, ಮನುಷ್ಯನ ಒಳ ಬಾಳಾಟಗಳನ್ನು ಅವರು ವೇದ, ಜೆನ್ ಪರಂಪರೆ, ಸೂಫಿಕವಿ ಶೇಕ್ ಸಾದಿ, ರೂಮಿ, ಅಮೆರಿಕನ್ ಆದಿವಾಸಿಗಳ ನಂಬಿಕೆಗಳು, ಕನ್ನಡದ ಜನಪದ ಪರಂಪರೆ, ಬೌದ್ಧಗುರು ನಾಗಾರ್ಜುನ ಮುಂತಾದವರ ಬೆನ್ನಲ್ಲಿ ಚರ್ಚೆಮಾಡುತ್ತಾರೆ.

ಭಾಷೆಯುಅಂತಿಮವಾಗಿಸೌಂದರ್ಯಾನುಭವವನ್ನು ಮಾತ್ರ ನೀಡುತ್ತದೆ ಎಂಬ ಮಾಮೂಲಿ ಮಾತುಗಳು ಇಲ್ಲಿ ತಲೆಕೆಳಗಾಗಿವೆ. ಇಲ್ಲಿನ ಭಾಷೆ ಮನುಷ್ಯನ ಎಲ್ಲ ಗುಣ-ಅವಗುಣಗಳನ್ನು ಸಾಧ್ಯವಿದ್ದಷ್ಟೂ ಅನಾವರಣ ಮಾಡಿದೆ. ನುಡಿಯಲ್ಲಿನ ಲೋಕದರ್ಶನ, ಜೀವನ ದೃಷ್ಟಿಕೋನಕ್ಕೂ ಕಾರಣಗಳನ್ನು ಒದಗಿಸುತ್ತದೆ. ಈ ಕಾರಣದಿಂದಲೇ ನೀಲು ಕವಿತೆಗಳು ಇಂದಿಗೂ ತಾಜಾ ಆಗುತ್ತವೆ. ಮುಕ್ತಛಂದಸ್ಸುವಿನ ಮಾರ್ಗವನ್ನು ಹಿಡಿದ ಇಲ್ಲಿನ ಕವಿತೆ ತನ್ನ ಮೀಮಾಂಸೆಯನ್ನು ಹಿಗ್ಗಿಸಿಕೊಂಡಿದೆ. ಯೋಗಪ್ಪನವರ್ ಬಹುತೇಕ ನೀಲು ಕಾವ್ಯದ ಎಲ್ಲ ಆಯಾಮಗಳನ್ನು ಹಿಡಿದಿದ್ದಾರೆ. ನಿಸರ್ಗದ ವಿಚಾರಗಳು ಕೆಲವೊಮ್ಮೆ ಪುನರಾವರ್ತನೆಯಾದಂತೆ ಕಾಣುತ್ತವೆ ಎನ್ನವುದು ಬಿಟ್ಟರೆ, ತಮಗೆ ಕಂಡಂತೆ ನೀಲು ಜಗತ್ತನ್ನು ಪ್ರಾಮಾಣಿಕವಾಗಿ ಕಂಡರಿಸಿದ್ದಾರೆ.

ಅಧ್ಯಾತ್ಮದ ಹಾದಿಯಲ್ಲಿ 'ಮಾಣಿಕ್ಯ'ದ ಬೆಳಕು

ಹರೀಶ ಹಾಗಲವಾಡಿ



ಶಾರದಾಪೀಠದ ಮಾಣಿಕ್ಯ
ಲೇಖಕರು: ಸಾ. ಕೃ. ರಾಮಚಂದ್ರರಾವ್
ಪ್ರಕಾಶಕರು: ಅಭಿಜ್ಞಾನ
ದೂರವಾಣಿ: 94484 94949
ಪು: 240 ₹275

ಅಂತರಂಗದ ದರ್ಶನದ ಬೆಳಕಿನಲ್ಲಿ ನಮ್ಮ ಹೊರಗಿನ ಬಾಳನ್ನು ನಡೆಸಬೇಕು ಎಂಬುದು ನಮ್ಮ ಪೂರ್ವಜರ ಆಶಯವಾಗಿದ್ದಿತು. ಈ ದರ್ಶನವನ್ನೇ ಸತ್ಯ, ಪರಮಾತ್ಮ, ದೇವರು ಇತ್ಯಾದಿಯಾಗಿ ಸಂಪ್ರದಾಯವು ವ್ಯವಹರಿಸುತ್ತದೆಯಷ್ಟೆ. ಈ ಸತ್ಯವನ್ನು ಕಂಡುಕೊಳ್ಳುವುದೇ ಪರಮಧರ್ಮ, ಆದ್ಯಕರ್ತವ್ಯ ಎಂದು ಒತ್ತಿ ಹೇಳುತ್ತದೆ ಕೂಡ. ಇಂತಹ ಅಂತರಂಗದ ಸತ್ಯದ ಶೋಧಕ್ಕೆ ತೆತ್ತುಕೊಂಡವರು, ಆ ಹಂಬಲದಲ್ಲಿ 'ಕೃತಕೃತ್ಯ'ರಾದವರು ಶೃಂಗೇರಿಯ ಆಮ್ನಾಯಪೀಠದ 34ನೆಯ ಅಧಿಪತಿಗಳಾಗಿದ್ದ ಚಂದ್ರಶೇಖರಭಾರತೀ ಮಹಾಸ್ವಾಮಿಗಳು.

ಶ್ರೀಗಳು ಜೀವನ್ಮುಕ್ತರೆಂದು ಹೆಸರಾದವರು, ಮಠಾಧಿಪತಿಗಳಾಗಿದ್ದರೂ ಬಹುತೇಕ ಅವಧೂತ ಪ್ರವೃತ್ತಿಯಲ್ಲೇ ನೆಲೆ ನಿಂತವರು, ಅನೇಕ ಸಾಧಕರ ಬಾಳಿಗೆ ಬೆಳಕಾದ ಮಹಾಗುರುಗಳು. ಅವರ ಜೀವನಚರಿತ್ರೆಯನ್ನು ಸಾ. ಕೃ. ರಾಮಚಂದ್ರರಾಯರು 'ಶಾರದಾಪೀಠದ ಮಾಣಿಕ್ಯ' ಕೃತಿಯಲ್ಲಿ ಹೃದಯಂಗಮವಾಗಿ ನಿರೂಪಿಸಿದ್ದಾರೆ. 'ಅಭಿಜ್ಞಾನ' ಪ್ರಕಾಶನ ಇದೀಗ ಈ ಕೃತಿಯನ್ನು ಮರುಮುದ್ರಿಸಿದೆ. ಇದು ಜೀವನಚರಿತ್ರೆಯಷ್ಟೇ ಆಗದೆ ಉಪಶಾಂತಿಯ ಸಾಧನವಾದ 'ಸತ್ಕಾವ್ಯ'ವೂ, ಅನುಸಂಧಾನಕ್ಕೆ ಸೇತುವಾದ 'ಶಾಸ್ತ್ರಾರ್ಥ'ವೂ ಆಗಿದೆ ಎಂಬುದು ಎಳ್ಳಷ್ಟೂ ಉತ್ಪ್ರೇಕ್ಷೆಯಲ್ಲ.

ಅವಲೋಕನ

ಶ್ರೀರಾಮಕೃಷ್ಣ ಪರಮಹಂಸರು ನಿಜವಾಗಿ ದೇವರನ್ನು ಪಡೆಯಬೇಕೆನ್ನುವ ಭಕ್ತನ ಉತ್ಕಟತೆಯು, ನೀರಿನಲ್ಲಿ ಮುಳುಗಿ ಉಸಿರುಗಟ್ಟಿದವನು ಉಸಿರಿಗಾಗಿ ಪರಿತಪಿಸುವಂತೆ ಇರಬೇಕು ಎನ್ನುತ್ತಾರೆ. ಶ್ರೀಗಳ ಜೀವನವನ್ನು ಕಂಡಾಗ ಈ ಅವಸ್ಥೆಯ ತೀವ್ರತೆ ಎಂಥದ್ದು ಎಂಬುದರ ಕಲ್ಪನೆ ಮೂಡುತ್ತದೆ. ಮಠಮಾನ್ಯಗಳೆಂಬವು ನಿಜವಾದ ಸಂನ್ಯಾಸಕ್ಕೆ ಪೂರಕವಾಗಿದ್ದಕ್ಕಿಂತಲೂ ಕಂಟಕವೇ ಆಗಿದ್ದಕ್ಕೆ ಇತಿಹಾಸದುದ್ದಕ್ಕೂ ನಿದರ್ಶನಗಳಿವೆಯಷ್ಟೆ. ಹೀಗೇ ತಮ್ಮ ಗುರುಗಳ ಆಜ್ಞೆಯಂತೆ ಮಠಾಧಿಪತಿಗಳಾದ ಶ್ರೀಗಳಿಗೂ ಈ ಕಂಟಕ ತೊಡರಿಕೊಂಡಿತು, ಹೈರಾಣಾಗಿಸಿತು ಕೂಡ. ಆದರೂ ಸಮಾಜದ ಶಿಕ್ಷಣಕ್ಕೆ, ಸಾಂತ್ವನಕ್ಕೆ ಇಂತಹ ಸಂಸ್ಥೆಗಳು ಬೇಕು ಎಂದು ಸಮಾಜ ಬಯಸುವುದು ತಪ್ಪೇನಲ್ಲ.

ಪ್ರವಾಹದಿಂದ ತಪ್ಪಿಸಿಕೊಳ್ಳಲು ದಡ ಕಣ್ಣಿಗಾದರೂ ಕಾಣಬೇಕಷ್ಟೆ. ಆದರೆ ಇಂತಹ ಸಮಯಯಲ್ಲಿ ಶ್ರೀಗಳು ನಿಜವಾದ ಸಾಧಕನಿಗೆ ಮುಖ್ಯವಾದ ಪ್ರಶ್ನೆಯನ್ನು ಕೇಳಿಕೊಂಡವರು. ಅವರದೇ ಮಾತಿನಲ್ಲಿ ಹೇಳುವುದಾದರೆ 'ತನಗೇ ಈಜು ಬಾರದವನು ಮುಳುಗುತ್ತಿರುವ ಬೇರೆಯವರನ್ನು ದಡಕಾಣಿಸುವುದು ಹೇಗೆ?' ಎಂದು. ಅದಕ್ಕೇ ಮಠದ ಬಾಹ್ಯ ಲಕ್ಷಣಕ್ಕೆ ಬೆನ್ನುಮಾಡಿದವರಂತೆ ಅಂತರಂಗಕ್ಕೆ ಮುಳುಗು ಹಾಕಿದರು, ತಪಸ್ಸಿನಲ್ಲಿ ನಿಂತರು, ಕೃತಕೃತ್ಯರಾದರು. ಕೃತಕೃತ್ಯನೆಂದರೆ 'ಮಾಡಬೇಕಾದುದನ್ನೆಲ್ಲ ಮಾಡಿಯಾಯಿತು, ಪಡೆದುಕೊಳ್ಳಬೇಕಾದುದನ್ನೆಲ್ಲ ಪಡೆದುಕೊಂಡಾಯಿತು; ಇನ್ನುಮುಂದೆ ಮಾಡಬೇಕಾದುದೂ ಪಡೆಯಬೇಕಾದುದೂ ಏನೂ ಇರದು ಎಂಬ ಧನ್ಯತೆ...' ಹೀಗೆ ಧನ್ಯರಾದವರಿಂದ ಮಾತ್ರ ಅಲ್ಲವೇ ಬದುಕು ಧನ್ಯವಾಗುವುದು!

ಅವರ ಸಾಧನಾಜೀವನಕ್ಕೊಂದು ವಿಶೇಷವೊದಗಿದ್ದು ಅವರ ವಿಶಿಷ್ಟ ಚರ್ಯೆಯಿಂದ. ಇದೂ ಅವರ ಆಧ್ಯಾತ್ಮಿಕ ತೀವ್ರತೆಯ ಒಂದು ಲಕ್ಷಣವೇ ಆಗಿದೆ. ಇದನ್ನು ಪರಂಪರೆಯಲ್ಲಿ ಅವಧೂತಾವಸ್ಥೆ ಎನ್ನುತ್ತಾರೆ (ಕೃತಿಯಲ್ಲಿ ಇದರ ಬಗ್ಗೆಯೂ ಮಾಹಿತಿಯಿದೆ). ಶ್ರೀಗಳಿಗೆ ಮಠದ ಚಟುವಟಿಕೆಗಳಲ್ಲಿದ್ದ ಅನಾಸಕ್ತಿ, ಅವರ ಅಂತರ್ಮುಖ ಸ್ಥಿತಿ, ಅದರ ಪರಿಣಾಮವಾಗಿ ಕಾಣಿಸಿಕೊಳ್ಳುತ್ತಿದ್ದ ಬಾಹ್ಯಲಕ್ಷಣಗಳು ಅವರ ಸುತ್ತಲಿದ್ದವರಿಗೆ ಹುಚ್ಚು ಎಂದು ಕಂಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಶಾಸ್ತ್ರಗಳೂ ಅವಧೂತನನ್ನು ಮಗುವಿನಂತೆ, ಉನ್ಮತ್ತನಂತೆ ಎಂದೆಲ್ಲಾ ನಿರೂಪಿಸಿವೆ. ಕಡೆಗೂ ಇವರಿಬ್ಬರೇ ತಾನೆ ಬದುಕಿನ ಜಂಜಡದಿಂದ ಮುಕ್ತರು! ಮುಕ್ತಿಗೆ ಲೋಕದ ಭಾಷೆಯಲ್ಲಿ ದಕ್ಕುವ ಉಪಮೆ ಇಷ್ಟೇ ಎನಿಸುತ್ತದೆ.

ಈ ಅಂತರ್ಮುಖ-ಬಹಿರ್ಮುಖ ಅವಸ್ಥೆಗಳಲ್ಲಿ ಹೊಕ್ಕಾಡುತ್ತಿದ್ದ ಶ್ರೀಗಳು ಆಮೇಲೂ ದೊಡ್ಡ ದೊಡ್ಡ ಗ್ರಂಥಗಳನ್ನೇನೂ ಬರೆದವರಲ್ಲ. ಅವರು 'ಶಾಸ್ತ್ರಗಳಿರುವುದು ಪ್ರವಚನಕ್ಕಲ್ಲ, ಅನುಷ್ಠಾನಕ್ಕೆ' ಎಂದೇ ಕಂಡವರು. ಮುಂದೆ ವಿವೇಕಚೂಡಾಮಣಿಗೆ ವ್ಯಾಖ್ಯಾನವೊಂದನ್ನು ಬರೆಯಲೆತ್ತಿಕೊಂಡರೂ ಪೂರ್ಣಗೊಳಿಸಲಿಲ್ಲ. ಮುಗಿಯುವ ಮೊದಲೇ ಹೇಳುವುದನ್ನೆಲ್ಲಾ ಹೇಳಿಯಾಗಿದೆ ಎಂದುಬಿಟ್ಟರು. ಆದರೆ ಅವರ ಒಂದೊಂದು ಮಾತೂ ಗ್ರಂಥಸಹಸ್ರದ ತೂಕವುಳ್ಳದ್ದು. ಉದಾಹರಣೆಗೆ ನಿಜವಾದ ಗುರು ಯಾರು ಎಂಬುದನ್ನು ಅವರು ಎಷ್ಟು ಯಥಾರ್ಥವಾಗಿ, ಮಾರ್ಮಿಕವಾಗಿ ನುಡಿಯುತ್ತಾರೆ - 'ಗುರುವಿನ ಕೆಲಸ ಇನ್ನು ಗುರುವಿನ ಅಗತ್ಯ ಶಿಷ್ಯನಿಗಿಲ್ಲದಿರುವಂತೆ ಮಾಡುವುದು. ತನ್ನನ್ನೇ ಎಂದೆಂದಿಗೂ ಶಿಷ್ಯ ಅವಲಂಬಿಸಿರಲಿ ಎಂದರೆ ಅವನು ದಿಟವಾದ ಗುರುವಲ್ಲ' ಎಂದು.

ಇನ್ನೊಮ್ಮೆ ಪರಮತಖಂಡನೆಯ ಗ್ರಂಥವೊಂದನ್ನು ಬರೆದುಕೊಂಡು ಬಂದ ವಿದ್ವಾಂಸರೊಬ್ಬರಿಗೆ 'ಇಂಥ ಗ್ರಂಥವನ್ನು ಬರೆದು ಏನು ಸಾಧಿಸುತ್ತೀರಿ? ಅಹಿಂಸೆಯು ಪರಮಧರ್ಮವೆಂದು ನೀವು ಕೇಳಿಲ್ಲವೇ? ಎರಡನೆಯವರ ಮನಸ್ಸನ್ನು ನೋಯಿಸುವ ಒಂದು ಮಾತನ್ನೂ ಆಡಲು ಪ್ರಾಜ್ಞರು ಹಿಂಜರಿಯುತ್ತಾರೆ. ಹೀಗಿರುವಾಗ ಇಡೀ ಒಂದು ಮತವನ್ನೇ ಖಂಡಿಸುವ ಈ ಗ್ರಂಥದಿಂದ ಎಷ್ಟು ಮಂದಿಯ ಮನಸ್ಸು ನೋಯುತ್ತದೆ ಎಂಬುದನ್ನೂ ಯೋಚಿಸೋಣವಾಗಲಿ' ಎನ್ನುತ್ತಾರೆ. ಭಾರತೀಯ ಇತಿಹಾಸವೆಂದರೆ ಭಿನ್ನಮತಗಳ ಬಡಿದಾಟವೆಂದೇ ಚಿತ್ರಿಸಿಕೊಂಡಿರುವ ನಮ್ಮ ಕಾಲಕ್ಕೆ ಸಂಪ್ರದಾಯದೊಳಗಿದ್ದ ಇಂತಹ ವಿವೇಕ ಕಾಣಲಾರದಿದ್ದರೆ ಆಶ್ಚರ್ಯವೇನಿಲ್ಲ. ಈ ಸಾಂಪ್ರದಾಯಿಕ ವಿವೇಕಕ್ಕೆ ಇನ್ನೊಂದು ಉತ್ಕೃಷ್ಟ ಉದಾಹರಣೆಯೆಂದರೆ ರಾಮಾನುಜಾಚಾರ್ಯರ ಬದುಕಿನ ಒಂದು ಮುಖ್ಯ ಘಟನೆಯಾದ ಸಾರ್ವಜನಿಕ ಮಂತ್ರೋಪದೇಶವನ್ನು ಶ್ರೀಗಳು ಅರ್ಥೈಸುವ ವಿಧಾನ. ಈ ಭಾಗವನ್ನು ಕೃತಿಯಲ್ಲಿ ಓದಿಯೇ ಸವಿಯಬೇಕಷ್ಟೆ.

ಹಾಗೆಯೇ ಎಥ್ನಿಸಿಟಿ, ರಾಜಕೀಯಗಳಿಂದಾಚೆಗೆ ಯೋಚಿಸಲಾರದ ಇಂದಿನ ಭಾರತಕ್ಕೆ ಅವರು ನಿಜವಾದ ಜ್ಞಾನಿಯಂತೆ 'ಜಗತ್ತಿನ ಎಲ್ಲರೂ ಹಿಂದೂಗಳೇ ಎಂಬುದು ನಮ್ಮ ಅಭಿಪ್ರಾಯ' ಎಂದದ್ದು ತುಂಬಾಮನನೀಯವಾದದ್ದು. ಅಷ್ಟಕ್ಕೇ ನಿಲ್ಲದೆ 'ಅದ್ವೈತಾನುಭವವೆನ್ನುವುದು ಶಂಕರಾಚಾರ್ಯರ ಶಿಷ್ಯರ ಸ್ವತ್ತೋ? ಯಾರಾದರೂ ಯಾವ ಕಾಲದಲ್ಲಿಯಾದರೂ ಎಲ್ಲಿಯಾದರೂ ಅದನ್ನು ಪಡೆದುಕೊಳ್ಳುವುದು ಸಾಧ್ಯ' ಎನ್ನುತ್ತಾರೆ. ಇಂತಹ ಮಾತುಗಳನ್ನು ಬೇರೆಡೆಯೂ ಕೇಳಿರಬಹುದು, ಓದಿರಬಹುದು. ಆದರೆ ಜ್ಞಾನಿಗಳ ಅನುಭವದಿಂದ ಇವಕ್ಕೆ ಮಂತ್ರತ್ವ ಒದಗುತ್ತದೆ. ಅದಕ್ಕಾಗಿಯೇ ಇದು ಅಧ್ಯಯನ ಮತ್ತು ಪಾರಾಯಣಗಳೆರಡಕ್ಕೂ ಒದಗುವ ಕೃತಿಯಾಗಿದೆ. ಶ್ರೀಗಳು ಶೃಂಗೇರಿಯ ಪರಂಪರೆಯಲ್ಲಿ ಮಾಣಿಕ್ಯವಾದರೆ, ಈ ಕೃತಿಯು ರಾಯರ ಕೃತಿಗಳಲ್ಲಿಯೇ ಮಾಣಿಕ್ಯ ಎನಿಸಿಕೊಂಡಿದೆ.

ಮಾಲಿವುಡ್‌ನಲ್ಲಿ ಕೆಂಬಾವುಟ!

ವಿಕ್ರಂ ಕಾಂತಿಕೆರೆ

> ಕೇರಳದಲ್ಲಿ ಈಗ ವಿಧಾನಸಭೆ ಚುನಾವಣೆಯ ಕಾವು. ಎಡ–ಬಲಗಳ ಪೈಪೋಟಿಗೆ ಹೆಸರಾಗಿರುವ 'ದೇವರ ನಾಡಿ'ನಲ್ಲಿ ಈ ಬಾರಿ ಕೇಸರಿಯ ಪ್ರಭಾವವೂ ಹರಡಿದೆ. ಹೌದು, ಈ ನಾಡಿನಲ್ಲಿ ಎಡ ಸಿದ್ಧಾಂತ ಅಷ್ಟೊಂದು ಗಟ್ಟಿಯಾಗಿ ತಳವೂರಲು ಕಾರಣವಾದರೂ ಏನು?

ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡ ರಾಜ್ಯದ ಸಚಿವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಆತನನ್ನು ಗೆಳೆಯ ಸಂತೈಸುತ್ತಿದ್ದಾನೆ. ಸಚಿವ, ತಾನಿನ್ನು ಬದುಕಿ ಉಳಿಯುವ ಸಾಧ್ಯತೆಯೇ ಇಲ್ಲ ಎನ್ನುತ್ತಾನೆ. ಅಸಹನೀಯ ನೋವಿನಿಂದ ದೇಹವನ್ನು ಒಂದಿನಿತೂ ಅಲುಗಾಡಿಸಲು ಆಗುತ್ತಿಲ್ಲ ಎಂದೂ ಮರುಗುತ್ತಾನೆ.

ಆಗ ಗೆಳೆಯ ಕೇಳುತ್ತಾನೆ–'ಕ್ರಾಂತಿಯ ಕಣದಲ್ಲಿ ನಾವು ಇದಕ್ಕಿಂತ ಕಠಿಣ ನೋವು ಅನುಭವಿಸಲಿಲ್ಲವೇ?'

ಆದರೂ ಮಂತ್ರಿಗೆ ಸಮಾಧಾನವಾಗುತ್ತಿಲ್ಲ. ಆಗ ಗೆಳೆಯ, ಹೋರಾಟದ ಸಂದರ್ಭದಲ್ಲಿ ಆಡುತ್ತಿದ್ದ ರಸಮಯ ಸಂಭಾಷಣೆಯ ತುಣುಕೊಂದರ ಮೂಲಕ ಸಂತೈಸಲು ಪ್ರಯತ್ನಿಸುತ್ತಾನೆ. 'ಬೀಡಿ ಇದೆಯಾ ಕಾಮ್ರೇಡ್, ಬೆಂಕಿಪೊಟ್ಟಣ ಹೊರತೆಗೆಯಲು...? ಅದಕ್ಕೆ ಮಂತ್ರಿ ಉತ್ತರಿಸುತ್ತಾನೆ–'ಬೆಂಕಿಪೊಟ್ಟಣ ಇದೆಯಾ ಕಾಮ್ರೇಡ್, ಒಂದು ಬೀಡಿಗಾಗಿ...?

ವೇಣು ನಾಗವಳ್ಳಿ ಕಥೆ-ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸಿದ 1990ರ 'ಲಾಲ್ ಸಲಾಂ' ಸಿನಿಮಾದ ಈ ದೃಶ್ಯ ಮಲಯಾಳಂ ಸಿನಿಮಾ ಪ್ರೇಮಿಗಳಿಗೆ ಮತ್ತು ಕೇರಳದ ಜನರಿಗೆ ನೀಡಿದ ರೋಮಾಂಚನ ಸಾಮಾನ್ಯದ್ದಲ್ಲ.

ಮಲಯಾಳಂನಲ್ಲಿ ರಾಜಕೀಯಕ್ಕೆ ಸಂಬಂಧಿಸಿದ ಸಿನಿಮಾಗಳಲ್ಲಿ ಬೀಡಿ, ಕೊಡಿ (ಧ್ವಜ), ಸಗಾವ್ (ಕಾಮ್ರೇಡ್), ಲಾಲ್‌ಸಲಾಂ ಮುಂತಾದ ಪದಗಳು ಬಳಕೆಯಾದುದಕ್ಕೆ ಲೆಕ್ಕವೇ ಇಲ್ಲ. ಯಾಕೆಂದರೆ ಅಲ್ಲಿ, ರಾಜಕೀಯಕ್ಕೆ ಸಂಬಂಧಿಸಿದ ಸಿನಿಮಾಗಳಲ್ಲಿ ಹೆಚ್ಚಿನವು ಎಡ ಪಕ್ಷ ಮತ್ತು ಎಡ ತತ್ವ-ಸಿದ್ಧಾಂತಗಳಿಗೆ ಸಂಬಂಧಿಸಿದವು. ಲಾಲ್‌ಸಲಾಂ, ರಕ್ತಸಾಕ್ಷಿಗಳ್ ಜಿಂದಾಬಾದ್, ಅರಬಿ ಕಥ, ಲೆಫ್ಟ್-ರೈಟ್-ಲೆಫ್ಟ್, ರಾಮ್‌ಲೀಲಾ, ಒನ್ ಇಯರ್ ಆಫ್ ಸಗಾವ್, ಒರು ಮೆಕ್ಸಿಕನ್ ಅಪಾರ್ಥ, ಸಿಐಎ... ಹೀಗೇ ಸಾಗುತ್ತದೆ ಈ ಎಳೆ ಎದ್ದು ಕಾಣುವ ಚಿತ್ರಗಳ ಪಟ್ಟಿ.



ಸಗಾವ್ ಚಿತ್ರದಲ್ಲಿ ನಿವಿನ್ ಪೌಳಿ ಮತ್ತು ಸಿಐಎ ಚಿತ್ರದಲ್ಲಿ ದುಲ್ಕರ್ ಸಲ್ಮಾನ್ -ಟ್ವಿಟರ್ ಚಿತ್ರಗಳು

ಆರಂಭದಲ್ಲಿ ಐತಿಹಾಸಿಕ, ಸಾಮಾಜಿಕ ವಸ್ತುಗಳನ್ನೇ ಕಥೆಗಾಗಿ ಬಳಸುತ್ತಿದ್ದ ಮಲಯಾಳಂ ಸಿನಿಮಾ ರಂಗ ನಂತರ ಸ್ವಲ್ಪ ಕಾಲ 'ರತಿ'ಯತ್ತ ಹೊರಳಿತ್ತು. 1970ರ ಸಂದರ್ಭದಲ್ಲಿ ಕಲಾತ್ಮಕ ಸ್ಪರ್ಶ ಪಡೆದು ವಾಪಸ್ ಮುಖ್ಯ ಧಾರೆಗೆ ಬಂತು. ಆ ಹಾದಿಯನ್ನು ಅಲ್ಲಿನ ನಿರ್ಮಾಪಕರು ಮತ್ತು ನಿರ್ದೇಶಕರು ಇನ್ನೂ ಬಿಗಿಯಾಗಿ ಹಿಡಿದುಕೊಂಡಿದ್ದಾರೆ. ಕಲಾತ್ಮಕ ಮತ್ತು ಕಡಿಮೆ ಬಜೆಟ್‌ನ ಸಿನಿಮಾಗಳಲ್ಲಿ ರಾಜಕೀಯ ವಸ್ತುಗಳೇ ಹೆಚ್ಚು ರಾರಾಜಿಸುತ್ತಿವೆ.

ಮೋಹನ್‌ಲಾಲ್, ಮುರಳಿ, ಗೀತಾ, ಊರ್ವಶಿ ಮುಂತಾದವರು ಕೆಲವು ವರ್ಷಗಳ ಹಿಂದೆ ಎಡ ವಿಚಾರಧಾರೆಯ ಚಿತ್ರಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಿದ್ದರೆ ಹೊಸ ಅಲೆಯ ಸಿನಿಮಾಗಳಲ್ಲಿ ಯುವ ನಟರೇ ಕ್ರಾಂತಿಯ 'ಅಂಬಾಸಡರ್'ಗಳು. ಪೃಥ್ವಿರಾಜ್, ಇಂದ್ರಜಿತ್, ದಿಲೀಪ್, ಟೊವಿನೊ ಥಾಮಸ್, ದುಲ್ಕರ್ ಸಲ್ಮಾನ್, ನಿವಿನ್ ಪೌಳಿ ಮುಂತಾದವರ ಅನೇಕ ಸಿನಿಮಾಗಳಲ್ಲಿ ಸಮಾಜವಾದ, ಕ್ರಾಂತಿ, ಎಡಚಿಂತನೆಗಳಿಗೆ ಸಂಬಂಧಿಸಿದ ವೈವಿಧ್ಯಮಯ ವಸ್ತುಗಳು ಮೇಳೈಸಿವೆ. ಕ್ಯಾಂಪಸ್ ರಾಜಕೀಯದ ರೋಮಾಂಚಕಾರಿ ಅನುಭವವನ್ನು ರಸವತ್ತಾಗಿ ಚಿತ್ರಿಸಿರುವ ಚಿತ್ರಗಳಿಂದ ಹಿಡಿದು ರಾಜ್ಯ ಆಳುವುದಕ್ಕಾಗಿ ನಡೆಸುವ ಪೈಪೋಟಿಯನ್ನು ವಿಡಂಬನಾತ್ಮಕವಾಗಿ ಬಿಂಬಿಸುವವರೆಗಿನ ಚಿತ್ರಗಳು ಯುವ ಸಮುದಾಯದ ಹೃದಯವನ್ನೂ ಗೆಲ್ಲುವಲ್ಲಿ ಯಶಸ್ವಿಯಾಗಿವೆ.

ಹೋರಾಟದ ಕೆಚ್ಚಿಗೆ ಸಾಹಿತ್ಯದ ಮಾರ್ದವ ಸ್ಪರ್ಶ

ಹೋರಾಟದ ಕಾವಿಗೆ ಮಾರ್ದವತೆ ತುಂಬುವ ಹೃದ್ಯ ಹಾಡುಗಳೂ ಚಿತ್ರಗಳಿಗೆ ಯಶಸ್ಸು ತಂದುಕೊಟ್ಟ ಪ್ರಮುಖ ಅಂಶಗಳಾಗಿವೆ. ಆದ್ದರಿಂದ ರಾಜಕೀಯ ಸಿದ್ಧಾಂತಗಳ, ವಿಶೇಷವಾಗಿ ಎಡಪಂಥದ ಹಿನ್ನೆಲೆಯಲ್ಲಿ ನಿರ್ಮಾಣಗೊಂಡ ಸಿನಿಮಾಗಳು ಕೇರಳದಲ್ಲಿ ಸಪ್ಪೆ ವಸ್ತುವಲ್ಲ; ಹೀಗಾಗಿ ಗಲ್ಲಾ ಪೆಟ್ಟಿಗೆಯನ್ನು ಸಮೃದ್ಧಗೊಳಿಸುವ 'ಗಟ್ಟಿ' ವಸ್ತುವಾಗಿಯೂ ಸಿನಿಮಾರಂಗದ ಕೈ ಹಿಡಿದಿವೆ.

ಚೋರ ವೀಣ ಮಣ್ಣಿಲ್‌ನಿನ್ನುಯರ್ನುವನ್ನ ಪೂಮರಂ..



ಲಾಲ್ ಸಲಾಂ ಚಿತ್ರದಲ್ಲಿ ಮೋಹನ್‌ಲಾಲ್, ಮುರಳಿ, ಊರ್ವಶಿ

ಚೇದನಯಿಲ್ ನೂರು ನೂರು ಪೂಕ್ಕಳಾಯ್ ಪೊಲಿಕ್ಕವೇ
ನೋಕ್ಕುವಿನ್ ಸಗಾಕ್ಕಳೇ ನಮ್ಮಳ್ ವನ್ನ ವೀದಿಯಿಲ್
ಆಯಿರಂಜಳ್ ಚೋರಕೊಂಡೆಳುದಿವಚ್ಚ ವಾಕ್ಕುಗಳ್..
ಲಾಲ್‌ಸಲಾಂ ಲಾಲ್‌ಸಲಾಂ...

(ನೆತ್ತರ ಹನಿ ಬಿದ್ದ ನೆಲದಲ್ಲಿ ಎದ್ದು ನಿಂತಿರುವ ಮರದಲ್ಲಿ/ ನೂರಾರು ಹೂಗಳನ್ನು ಅರಳಿಸಿದೆ ಹೋರಾಟದ ಚೇತನ/ ಹಿಂದಿರುಗಿ ನೋಡಿ ಕಾಮ್ರೇಡರೇ/ನೆತ್ತರ ಹನಿಯಲ್ಲಿ ಬರೆದಿಟ್ಟ ಪದಗಳು...ಲಾಲ್‌ಸಲಾಂ; ಲಾಲ್‌ಸಲಾಂ...)

ನಾಮೀ ಮಣ್ಣ್ ಪೊನ್ನಾಕ್ಕುಂ ನಾಳೆ/ನಾಮೀಪೊನ್ನು ಕೊಯ್ಯುಂ ನಮ್ಮಳ್ಕಾಯ್

(ಈ ಮಣ್ಣನ್ನು ಭವಿಷ್ಯದಲ್ಲಿ ನಾವು ಹೊನ್ನಾಗಿಸುವೆವು/ಆ ಹೊನ್ನನ್ನು ನಾವು ನಮಗಾಗಿಯೇ ಕೊಯ್ಲು ಮಾಡುವೆವು)

ಮುಂತಾದ ಹಾಡುಗಳನ್ನು 'ಎಡಚರ' ವಿರೋಧಿಗಳು ಕೂಡ ಗುನುಗಿದರೆ ಅಚ್ಚರಿಪಡಬೇಕಾಗಿಲ್ಲ.

ವಿಡಂಬನೆಯ 'ಚುಚ್ಚು' ಮದ್ದು

ತತ್ವ-ಸಿದ್ಧಾಂತಗಳು ಹಳಿ ತಪ್ಪುವ ಲಕ್ಷಣಗಳು ಗೋಚರಿಸಿದಾಗಲೆಲ್ಲ ಟೀಕೆ, ವಿಡಂಬನೆಗಳ ಮೂಲಕ ಸರಿದಾರಿಗೆ ತರುವ ಪ್ರಯತ್ನವೂ ಸಿನಿಮಾಗಳ ಮೂಲಕ ಆಗಿದೆ. 'ಲಾಲ್‌ಸಲಾಂ', 'ಲೆಫ್ಟ್-ರೈಟ್-ಲೆಫ್ಟ್' ಮುಂತಾದವುಗಳಲ್ಲಿ ಇದೇ ಕಥಾ ಹಂದರ. 'ಭೂಮಿಯಿಲೆ ರಾಜಾಕನ್ಮಾರ್' ಚಿತ್ರದಲ್ಲಿ ರಾಜಕೀಯದ ಮಲಿನ ಕಳೆಯುವ ಮಹೇಂದ್ರ ವರ್ಮಾ, 'ಸಂದೇಶಂ'ನಲ್ಲಿ ಸಿದ್ಧಾಂತಗಳಿಗಾಗಿ ಜಗಳವಾಡುವ ಸಹೋದರರಾದ ಪ್ರಭಾಕರನ್ ಮತ್ತು ಪ್ರಕಾಶನ್, 'ವೆಳ್ಳಿಮೂಂಜ'ದಲ್ಲಿ ಕುತಂತ್ರಿಗಳನ್ನು ಕುತಂತ್ರದ ಮೂಲಕವೇ ಮಣಿಸುವ ಮಾಮಚ್ಚನ್, 'ರಕ್ತಸಾಕ್ಷಿಗಳ್ ಜಿಂದಾಬಾದ್'ನಲ್ಲಿ ದಂಗೆ ಏಳುವ ಯುವಕರು, ಪಕ್ಷಕ್ಕಾಗಿ ದುಡಿದ ತಂದೆಯನ್ನು ಕೊಂದವರ ಮೇಲೆ ಹಗೆ ತೀರಿಸಿದ ನಂತರ ತಾಯಿಯ ಬಳಿ 'ಇಷ್ಟಾದರೂ ಮಾಡದಿದ್ದರೆ ನಾನೊಬ್ಬ ಕಮ್ಯುನಿಸ್ಟ್ ಎನಿಸಿಕೊಳ್ಳಲು ಅನರ್ಹ' ಎಂದು 'ರಾಮ್‌ಲೀಲಾ'ದಲ್ಲಿ ಪ್ರತಿಪಾದಿಸುವ ರಾಮನುಣ್ಣಿ ಮುಂತಾದ ಪಾತ್ರಗಳು ಕಮ್ಯುನಿಸ್ಟ್ ಧೋರಣೆಗಳು, ಸಮಾಜವಾದ ಮತ್ತು ಎಡಪಕ್ಷಗಳ ತತ್ವ-ಸಿದ್ಧಾಂತ ಉಳಿಯಬೇಕೆಂಬ ಆಶಯ ಹೊತ್ತುಕೊಂಡೇ ಬೆಳ್ಳಿತೆರೆ ಮೇಲೆ ಆಶಾಭಾವವನ್ನು ಮೂಡಿಸಿವೆ. ಕೇರಳದಲ್ಲೀಗ ವಾಸ್ತವದ ರಾಜಕೀಯ, ಕವಲು ದಾರಿಯಲ್ಲಿ ಸಾಗುವ ಕಡೆಗೇ ಹೆಚ್ಚು ಒಲವು ಹೊಂದಿದೆ. ❖

40ರ ಹರೆಯದ 'ಮುಖ್ಯಮಂತ್ರಿ'!

8ನೇ ಪುಟದಿಂದ...

'ಮುಖ್ಯಮಂತ್ರಿ'ಗೆ ಸ್ಫೂರ್ತಿ ಅರಸು ಉಡುಗೆ

ನಮ್ಮ ಪಾಲಿಗೆ ಮುಖ್ಯಮಂತ್ರಿ ಅಂದರೆ ಡಿ. ದೇವರಾಜ ಅರಸು. ಆ ಸ್ಥಾನಕ್ಕೆ ತಕ್ಕಂತಿದ್ದವರು ಅವರು. ಅರಸು ಅವರಿಗೊಂದು ಗತ್ತು ಇತ್ತು. ಅವರು ಕೈಬೆರಳಲ್ಲಿ ಒಂದು ಉಂಗುರ ಬಿಟ್ಟರೆ ಬೇರೆ ಆಭರಣ ಧರಿಸುತ್ತಿರಲಿಲ್ಲ. ಅವರು ಉಡುತ್ತಿದ್ದ ಕಚ್ಚೆ ಪಂಚೆ, ಉದ್ದನೆಯ ಜುಬ್ಬಾ ಅವರ ಎತ್ತರದ ವ್ಯಕ್ತಿತ್ವಕ್ಕೆ ಶೋಭೆ ನೀಡುತ್ತಿದ್ದವು. ಅವರ ಉಡುಗೆಯೇ 'ಮುಖ್ಯಮಂತ್ರಿ' ಪಾತ್ರಕ್ಕೆ ಸ್ಫೂರ್ತಿಯಾಯಿತು. ಕಾಸ್ಟ್ಯೂಮ್‌ಗಾಗಿ ಅರಸು ಅವರನ್ನು ಅನುಸರಿಸಿದರೂ 'ಮುಖ್ಯಮಂತ್ರಿ' ಪಾತ್ರ ಆಯಾ ಕಾಲಘಟ್ಟದ ರಾಜಕೀಯ ವಿದ್ಯಮಾನಕ್ಕೆ ತಕ್ಕಂತೆ ಮೌಲ್ಡ್ ಆಗಿದೆ. ನಿಜ ಜೀವನದಲ್ಲಿ ರಾಜಕಾರಣಿಯಾದ ಮೇಲೆ ರಂಗದ ಮೇಲಿನ 'ಮುಖ್ಯಮಂತ್ರಿ' ಪಾತ್ರವನ್ನು ಬಹಳಷ್ಟು ತಿದ್ದಿಕೊಂಡಿದ್ದೇನೆ. ನಿಜ ಹೇಳಬೇಕೆಂದರೆ ಇಡೀ ನಾಟಕ ನನಗೆ ಸರಿಯಾಗಿ ಅರ್ಥವಾಗಿದ್ದು ನಾನು ಶಾಸಕನಾದ ಮೇಲೆಯೇ!

ಹೊಸ 'ಮುಖ್ಯಮಂತ್ರಿ'

ಇದೇ ಏಪ್ರಿಲ್ 2ರಿಂದ 4ರವರೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿರುವ ಕಲಾಗಂಗೋತ್ರಿಯ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ 'ಮತ್ತೆ ಮುಖ್ಯಮಂತ್ರಿ' ಹೊಸ ನಾಟಕ (ಏ.4) ಪ್ರದರ್ಶನವಾಗಲಿದೆ. ಕೆ.ವೈ.ನಾರಾಯಣಸ್ವಾಮಿ ರಚಿಸಿರುವ ಈ ನಾಟಕದ ನಿರ್ದೇಶನ ಬಿ.ವಿ.ರಾಜಾರಾಂ ಅವರದ್ದು. 'ಮುಖ್ಯಮಂತ್ರಿ' ಪಾತ್ರದಲ್ಲಿ 'ಮುಖ್ಯಮಂತ್ರಿ' ಚಂದ್ರು ಅವರೇ ಅಭಿನಯಿಸುತ್ತಿರುವುದು ವಿಶೇಷ.

ನಾಟಕ ನೋಡಿ ಪಾರ್ವತಿ ಬೈದ್ರು ಅಂದ್ರು ರಾಜ್!

'ಮುಖ್ಯಮಂತ್ರಿ' ನಾಟಕ ನೋಡಿದ ರಾಜ್‌ಕುಮಾರ್ ಅವರು ನನ್ನ ಹತ್ತಿರ ಬಂದು 'ಅಮೋಘ, ಅದ್ಭುತ' ಅಂದ್ರು. ಆದರೆ, ನಿಮ್ಮ ನಾಟಕ ನೋಡುವಾಗ ನಮ್ಮ ಶ್ರೀಮತಿ ಅವರ ಕೈಲಿ ಬೈಸಿಕೊಂಡೆ ಅಂದ್ರು. ನನಗೆ ಗಾಬರಿಯಾಗಿ 'ಯಾಕೆ ಸರ್' ಅಂದಾಗ, 'ಏನಿಲ್ಲ, ನಾಟಕ ಅರ್ಥವಾಗದ ಕಡೆ ಅದೇನು–ಇದೇನು ಅಂತ ಆಗಾಗ ಪಾರ್ವತಿಯನ್ನು ಕೇಳುತ್ತಿದ್ದೆ. ಗಂಭೀರವಾಗಿ ನಾಟಕ ನೋಡುತ್ತಿದ್ದ ಅವರಿಗೆ ಕೋಪ ಬಂದು, ನಿಮಗೆ ಅರ್ಥಹೇಳುತ್ತಾ ಹೋದರೆ ನಾಟಕದ ಮುಂದಿನ ಮಾತು ಹೋಗಿಬಿಡುತ್ತೆ, ಸುಮ್ನಿರಿ. ಮನೆಗೆ ಹೋದ್ಮೇಲೆ ಹೇಳ್ತೀನಿ ಅಂದ್ರು' ಅಂದರು.

ನಂತರ ರಾಜ್ ನನ್ನ ಕಿವಿ ಹತ್ತಿರ ಬಂದು 'ನಾಟಕ ನನಗೆ ಅರ್ಥವಾಗಲಿಲ್ಲ ಬೇಸರ ಮಾಡ್ಕೊಬೇಡಿ' ಅಂದರು. ರಾಜ್‌ಕುಮಾರ್ ಅವರಂಥ ಮುಗ್ಧರಿಗೆ ರಾಜಕಾರಣ ಅರ್ಥವಾಗಿರಲಿಲ್ಲ. ಮುಂದೆ ಸಿನಿಮಾಗಳಿಗೆ ಜತೆಯಲ್ಲಿ ಕೆಲಸ ಮಾಡುವಾಗ ಶೂಟಿಂಗ್ ಸಮಯದಲ್ಲಿ ನಾಟಕದ ಬಗ್ಗೆ ಚರ್ಚಿಸುತ್ತಿದ್ದರು. ಮನದಂಗಳದಲ್ಲಿ ಮೆರವಣಿಗೆ ಹೊರಡುವ ಇಂತಹ ನೆನಪುಗಳಿಗೆ ಲೆಕ್ಕವೇ ಇಲ್ಲ. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಶಬ್ದಗಳೊಡನೆ ಸರಸ...

ನೆನಪಿಗೊಂದು ಕೊಂಚತಂತ್ರ

MINERAL- ಈ ಶಬ್ದ ನೆನಪಿಟ್ಟುಕೊಂಡರೆ ಇಲ್ಲಿಯವರೆಗಿನ ಪ್ರಧಾನಮಂತ್ರಿಗಳಿಗೆ ಯಾರ್‍ಯಾರಿಗೆ ಭಾರತ ರತ್ನ ಪ್ರಶಸ್ತಿ ಸಿಕ್ಕಿದೆ ಎಂಬುದನ್ನು ಸುಲಭವಾಗಿ ನೆನಪಿಟ್ಟುಕೊಳ್ಳಬಹುದು.

M = ಮೊರಾರ್ಜಿ ದೇಸಾಯಿ
I = ಇಂದಿರಾ ಗಾಂಧಿ
N = ನೆಹರು
E = ______________
R = ರಾಜೀವ್ ಗಾಂಧಿ
A = ಅಟಲ್ ಬಿಹಾರಿ ವಾಜಪೇಯಿ
L = ಲಾಲ್ ಬಹದ್ದೂರ್ ಶಾಸ್ತ್ರಿ

ಮಜ ಮಜ ಮಜಕೂರದ ಮಾರ್ಚ್ 22ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಡಣ್ಣ ಚಿಕ್ಕ ಶ್ರೇಷ್ಠ ಕಥೆಯ — ಗಲಿವರ್ ಮತ್ತು ಲಿಲಿಪುಟ್‌ಗಳು

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ




ಲೆಮ್ಯುವೆಲ್ ಗಲಿವರ್ ಎಂಬ ಜಾಣ ವಿದ್ಯಾರ್ಥಿಯೊಬ್ಬ ಇಂಗ್ಲೆಂಡ್‌ನ ನಾಟಿಂಗ್‌ಹ್ಯಾಮ್‌ನಲ್ಲಿದ್ದ. ಗಣಿತ ಹಾಗೂ ದಿಕ್ಸೂಚಿ ಕುರಿತು ಆತನಿಗೆ ವಿಶೇಷ ಆಸಕ್ತಿ ಇತ್ತು



ಮುಂದೆ ಲಂಡನ್ನಿನ ಆಸ್ಪತ್ರೆಯಲ್ಲಿ ಸರ್ಜನ್ ಆಗಿ ನೇಮಕಗೊಂಡ ಆತ, ರೋಗಿಗಳ ಸುಶ್ರೂಷೆಯಲ್ಲಿ ವಿಶೇಷ ಮುತುವರ್ಜಿ ವಹಿಸಿದ. ಒಳ್ಳೆಯ ಡಾಕ್ಟರ್ ಎಂದೂ ಹೆಸರಾದ



ಜಗತ್ತನ್ನು ಸುತ್ತಬೇಕು ಎನ್ನುವ ಉತ್ಕಟ ಅಭಿಲಾಷೆಯನ್ನು ಹೊಂದಿದ್ದ ಗಲಿವರ್ ಒಂದು ದಿನ ಪತ್ನಿ, ಮಗಳಿಗೆ ತಿಳಿಸಿ, ದಕ್ಷಿಣ ಸಮುದ್ರದ ಮೂಲಕ ಯಾತ್ರೆಗೆ ತೆರಳಿದ



ಗಲಿವರ್ ಇದ್ದ ಹಡಗು ಬಿರುಗಾಳಿಗೆ ಸಿಕ್ಕು, ಸಮುದ್ರದಲ್ಲಿ ಮುಳುಗಿತು. ಬದುಕುಳಿದ ಗಲಿವರ್, ಈಜಿ ಹತ್ತಿರದ ದಡ ಸೇರಿದರೆ ಅದು ಲಿಲಿಪುಟ್‌ಗಳ ನಾಡಾಗಿತ್ತು



ಒಂದೊಂದು ಇಂಚಿನಷ್ಟು ಎತ್ತರವಿದ್ದ ಲಿಲಿಪುಟ್‌ಗಳು ನೂರಾರು ಸಂಖ್ಯೆಯಲ್ಲಿ ಬಂದು ಗಲಿವರ್‌ನನ್ನು ಕಟ್ಟಿ ಹಾಕಿದರು. ತಮ್ಮ ರಾಜನ ಬಳಿಗೆ ಕರೆದೊಯ್ದರು



ಲಿಲಿಪುಟ್‌ಗಳ ಜತೆ ಸ್ನೇಹ ಸಂಪಾದಿಸಿದ ಗಲಿವರ್, ಅವರಿಗೆ ಯುದ್ಧವನ್ನೂ ಗೆದ್ದುಕೊಟ್ಟ. ಲಿಲಿಪುಟ್‌ಗಳು ದೋಣಿಯನ್ನು ಸಿದ್ಧಪಡಿಸಿ ಗಲಿವರ್‌ನನ್ನು ಬೀಳ್ಕೊಟ್ಟರು

ಗಣಿತದಲ್ಲಿ ಗರ್ದಿ ಗಮ್ಮತ್ತು

ನಗೆ ಗಣಿತ

1. ಒಬ್ಬ ತಂದೆಗೆ ನಾಲ್ಕು ಜನ ಮಕ್ಕಳು. ತನ್ನ 8 ಎಕರೆ ಜಮೀನಿನಲ್ಲಿ 4 ಎಕರೆ ತನಗಿಟ್ಟುಕೊಂಡು ಇನ್ನುಳಿದ ಜಮೀನನ್ನು ನಾಲ್ಕು ಮಕ್ಕಳಿಗೆ ಹಂಚಿದರೆ ಪ್ರತಿಯೊಬ್ಬರಿಗೂ ಏನು ಬರುತ್ತದೆ?

ಉತ್ತರ: ಪ್ರತಿಯೊಬ್ಬರಿಗೂ ಸಿಟ್ಟು ಬರುತ್ತದೆ.


2. ಗುಣಾಕಾರದಲ್ಲಿ ಇಂದಿನ ದಿನಾಂಕ:

```
 31469
   x 9
28-3-2021
```



ಟ್ವೆಂಟಿ – 20 ಮ್ಯಾಚ್

ಅಕ್ಷರಗಳಿಗೂ ಪದಗಳಿಗೂ ಹೊಂದಿಸಿ ಬೇರೆ ಪದ ಮಾಡಿ



1.	A ________	A.	OAT
2.	B ________	B.	ROPE
3.	C ________	C.	AN
4.	D ________	D.	ABLE
5.	E ________	E.	APE
6.	F ________	F.	OWN
7.	G. ________	G.	OX
8.	H ________	H.	OUR
9.	I ________	I.	DEAL
10.	K ________	J.	INK
11.	L ________	K.	CROSS
12.	M ________	L.	RICE
13.	O ________	M.	PEN
14.	P ________	N.	LOCK
15.	S ________	O.	ILL
16.	T ________	P.	NOW
17.	V ________	Q.	EARN
18.	W ________	R.	HALL
19.	Y ________	S.	IN
20.	Z ________	T.	EAR

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಗಿ ಕ ಬ ಗ ಲ
ಡಿ ಚ ಪು ಗು ದಾ

◯	ಂ	◯	ಸಮೂಹ
◯	ಂ	◯	ಚಾವಣಿ
◯	ಂ	◯	ಪರಕಾರ
◯	ಂ	◯	ವಂತಿಗೆ
◯	ಂ	◯	ಸಣ್ಣ ಚರಿಗಿ



ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ
1–ಕಂತೆ, 2–ಚುಂಚು, 3–ಸಿಂಹ, 4–ಕೆಂಪು, 5–ರುಂಡ

ಶಬ್ದಗಳಲ್ಲಿ ಸರಸ
1– ಗುಲಾಬಿಹಾರ, 2–ಸಿಂಹಾಸನ, 3–ಜಗದಗಲ, 4–ಚಿಲಿಪಿಲಿನಾದ, 5–ಕಲಾನಿಪುಣೆ, 6–ಸಾದಾ ಉಡುಪಿನ ಸುಂದರಿ

ಟ್ವೆಂಟಿ–20 ಮ್ಯಾಚ್
1-C, 2-J, 3-D, 4-B, 5-I, 6-A, 7-E, 8-H, 9-T, 10-F, 11-K, 12-G, 13-P, 14-M, 15-N, 16-O, 17-L, 18-R, 19-S, 20-Q.

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಶ್ರೇಯಾ ವಿಜಯ್, ತುಮಕೂರು



ತರೀಶ್ ಹಿರೇಮಠ, ಯಲಬುರ್ಗಾ



ಯಮನವ್ವ ಹನುಮಂತಪ್ಪ, ಅರಹಾಳ (ಗಂಗಾವತಿ)



ಅಸ್ಸಾಂ, ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ: ಕೋವಿಡ್ ನಡುವೆಯೇ ಉತ್ಸಾಹದ ಮತದಾನ

ಬಂಗಾಳದ ಅಲ್ಲಲ್ಲಿ ಗೊಂದಲ; ಅಸ್ಸಾಂನಲ್ಲಿ ಸರಾಗ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ/ಗುವಾಹಟಿ: ಪಶ್ಚಿಮ ಬಂಗಾಳದ 30 ವಿಧಾನಸಭಾ ಕ್ಷೇತ್ರ ಹಾಗೂ ಅಸ್ಸಾಂನ 47 ವಿಧಾನಸಭಾ ಕ್ಷೇತ್ರಗಳಿಗೆ ಶನಿವಾರ ಮೊದಲ ಹಂತದ ಮತದಾನ ನಡೆಯಿತು. ಅಸ್ಸಾಂನಲ್ಲಿ ಸಂಜೆ 6 ಗಂಟೆವರೆಗೆ ಶೇ 72.46 ಹಾಗೂ ಪಶ್ಚಿಮ ಬಂಗಾಳದಲ್ಲಿ ಸಂಜೆ 5 ಗಂಟೆವರೆಗೆ ಶೇ 79.79ರಷ್ಟು ಮತದಾನವಾಗಿದೆ. ಪಶ್ಚಿಮ ಬಂಗಾಳದಲ್ಲಿ ಕೆಲವು ಕಡೆ ಸಣ್ಣಪುಟ್ಟ ಘರ್ಷಣೆಗಳನ್ನು ಹೊರತುಪಡಿಸಿದರೆ, ಮತದಾನ ಶಾಂತಿಯುತವಾಗಿತ್ತು. ಅಸ್ಸಾಂನಲ್ಲಿ ಹಿಂಸಾಚಾರದ ಘಟನೆ ವರದಿಯಾಗಿಲ್ಲ.

ಬಂಗಾಳದ ಮಿಡ್ನಾಪುರ ಜಿಲ್ಲೆಯ ಕೇಶಿಯಾರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೇಗಂಪುರದ ಮನೆಯೊಂದರಲ್ಲಿ ಮಂಗಳ್ ಸೊರೆನ್ ಎಂಬುವರ ರಕ್ತಸಿಕ್ತ ಮೃತದೇಹ ಪತ್ತೆಯಾಗಿದೆ. ಅವರು ತಮ್ಮ ಪಕ್ಷದ ಕಾರ್ಯಕರ್ತ, ಟಿಎಂಸಿ ಕಾರ್ಯಕರ್ತರು ಅವರನ್ನು ಹೊಡೆದು ಸಾಯಿಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಘಟನೆ ಬಗ್ಗೆ ವರದಿ ನೀಡುವಂತೆ ಚುನಾವಣಾ ಆಯೋಗ ಸೂಚನೆ ನೀಡಿದೆ.

ಶನಿವಾರ ಬೆಳಿಗ್ಗೆ 7 ಗಂಟೆಗೆ ಮತದಾನ ಪ್ರಾರಂಭವಾಗುವ ಮೊದಲೇ ಪೂರ್ವ ಮೈನಿಪುರ ಜಿಲ್ಲೆಯ ಪೊಟಾಶ್‌ಪುರ ಮತ್ತು ಖೇಜೂರಿಯಲ್ಲಿ ರಾಜಕೀಯ ಹಿಂಸಾಚಾರದ ಘಟನೆ ನಡೆದಿವೆ. ತಮ್ಮ ಮೇಲೆ ಟಿಎಂಸಿ ಕಾರ್ಯಕರ್ತರು ಹಲ್ಲೆ ನಡೆಸಿದ್ದಾರೆ ಎಂದು ಬಿಜೆಪಿ ಕಾರ್ಯಕರ್ತರು ಆರೋಪಿಸಿದ್ದಾರೆ. ಪಶ್ಚಿಮ ಮೇದಿನಿಪುರ ಜಿಲ್ಲೆಯ ಸಾಲ್ಬೋನಿ ಎಂಬಲ್ಲಿ ಸಿಪಿಎಂ ಅಭ್ಯರ್ಥಿ ಹಾಗೂ ಟಿಎಂಸಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಕಂಟಾಯಿ ದಕ್ಷಿಣ ಕ್ಷೇತ್ರದ ಮಜಿನಾ ಎಂಬಲ್ಲಿ ಅಕ್ರಮ ಮತದಾನ ನಡೆಯುತ್ತಿದೆ ಎಂದು ಟಿಎಂಸಿ ಕಾರ್ಯಕರ್ತರು ಆರೋಪಿಸಿದ್ದರಿಂದ ಸುಮಾರು ಎರಡು ಗಂಟೆಗಳ ಕಾಲ ಮತದಾನವನ್ನು ಸ್ಥಗಿತಗೊಳಿಸಲಾಗಿತ್ತು. ಟಿಎಂಸಿಗೆ ಮತ ಚಲಾಯಿಸಿದರೆ, ವಿವಿ ಪ್ಯಾಟ್ ಯಂತ್ರದಲ್ಲಿ ಬಿಜೆಪಿ ಚಿಹ್ನೆ ತೋರಿಸುತ್ತಿದೆ ಎಂದು ಹಲವರು ಆರೋಪಿಸಿದ್ದಾರೆ. ಈ ಬಗ್ಗೆ ಪರಿಶೀಲಿಸುವಂತೆ ಚುನಾವಣಾ ಆಯೋಗವನ್ನು ಟಿಎಂಸಿ ಒತ್ತಾಯಿಸಿದೆ.

‘ಆಘಾತಕಾರಿ! ಕೇವಲ 5 ನಿಮಿಷಗಳ ಅಂತರದಲ್ಲಿ ಮತದಾನದ ಶೇಕಡಾವಾರು ಪ್ರಮಾಣ ಹೇಗೆ ಅರ್ಧಕ್ಕೆ ಇಳಿಯಿತು ಎಂಬುದನ್ನು ನೀವು ವಿವರಿಸಬಹುದೇ’ ಎಂದು ಆಯೋಗವನ್ನು ಟಿಎಂಸಿ ಟ್ವೀಟ್ ಮೂಲಕ ಪ್ರಶ್ನಿಸಿದೆ.

ಸಹಾಯ ಕೇಳಿದರೇ ಮಮತಾ? ಆಡಿಯೊ ಕ್ಲಿಪ್ ಬಹಿರಂಗ: ನಂದಿಗ್ರಾಮದಲ್ಲಿ ತಮ್ಮ ಗೆಲುವಿಗೆ ಸಹಕಾರ ನೀಡುವಂತೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸ್ಥಳೀಯ ಬಿಜೆಪಿ ಮುಖಂಡ ಪ್ರಳಯ್ ಪಾಲ್ ಅವರನ್ನು ಕೋರಿದ್ದರು ಎನ್ನಲಾದ ಧ್ವನಿಮುದ್ರಿಕೆಯೊಂದು ಭಾರಿ ಸಂಚಲನ ಸೃಷ್ಟಿಸಿದೆ.

ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೈಲಾಷ್ ವಿಜಯವರ್ಗೀಯ ಅವರ ನೇತೃತ್ವದ ನಿಯೋಗವು ರಾಜ್ಯ ಚುನಾವಣಾ ಅಧಿಕಾರಿಯನ್ನು ಭೇಟಿ ಮಾಡಿ ಆಡಿಯೊ ಕ್ಲಿಪ್ ಹಸ್ತಾಂತರಿಸಿತು. ಮುಖ್ಯಮಂತ್ರಿ ಮಮತಾ ಅವರು ಫಲಿತಾಂಶದ ಮೇಲೆ ಪ್ರಭಾವ ಬೀರಲು ತಮ್ಮ ಸ್ಥಾನವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ನಿಯೋಗ ಆರೋಪಿಸಿದೆ.

ಆಡಿಯೊ ಕ್ಲಿಪ್‌ನ ನೈಜತೆಯನ್ನು ಟಿಎಂಸಿ ಪ್ರಶ್ನೆ ಮಾಡಿದೆ. ಆದರೆ ಟಿಎಂಸಿ ತೊರೆದು ಬಿಜೆಪಿ ಸೇರಿರುವ ಪ್ರಳಯ್ ಪಾಲ್ ಅವರನ್ನು ಮತ್ತೆ ಪಕ್ಷಕ್ಕೆ ಮರಳುವಂತೆ ಕೋರುವುದರಲ್ಲಿ ತಪ್ಪಿಲ್ಲ ಎಂದು ಟಿಎಂಸಿ ವಾದಿಸಿದೆ.

ಮಮತಾ ಅವರು ಖುದ್ದಾಗಿ ತಮಗೆ ಕರೆ ಮಾಡಿ, ನಂದಿಗ್ರಾಮದಲ್ಲಿ ಗೆಲುವಿಗೆ ಸಹಕಾರ ನೀಡುವಂತೆ ಕೇಳಿದರು ಎಂದು ಪಾಲ್ ಆರೋಪಿಸಿದ್ದಾರೆ. ಆದರೆ ತಾವು ಅಧಿಕಾರಿ ಅವರಿಗೆ ಮೋಸ ಮಾಡುವುದಿಲ್ಲ ಎಂದು ಮಮತಾಗೆ ತಿಳಿಸಿದೆ ಎಂದು ಪಾಲ್ ಹೇಳಿದ್ದಾರೆ.

ಹಣಹಂಚಿಕೆ: ದೂರು: ತೃಣಮೂಲ ಕಾಂಗ್ರೆಸ್ ಅಭ್ಯರ್ಥಿಯೊಬ್ಬರು ಮತದಾರರಿಗೆ ಹಣ ವಿತರಿಸುತ್ತಿದ್ದಾರೆ ಎನ್ನಲಾದ ವಿಡಿಯೊವೊಂದು ಬಹಿರಂಗವಾಗಿದ್ದು, ಬಿಜೆಪಿಯು ಅದನ್ನು ಚುನಾವಣಾ ಆಯೋಗದ ಗಮನಕ್ಕೆ ತಂದಿದೆ.

ಟಿಎಂಸಿ ಈ ಘಟನೆಯನ್ನು ನಿರಾಕರಿಸಿದೆ. ವಿಡಿಯೊವನ್ನು ತಿರುಚಲಾಗಿದೆ ಎಂದು ಆರೋಪಿಸಿದೆ. ಬಿಜೆಪಿ ಮುಖಂಡರು ಮತದಾರರಿಗೆ ಹಣ ಹಂಚಲು ಹೊರಗಿನವರನ್ನು ಕರೆ ತರುತ್ತಿದ್ದಾರೆ ಎಂದು ಆರೋಪಿಸಿದೆ.

ಸ್ಥಳೀಯರೇ ಮತಗಟ್ಟೆ ಏಜೆಂಟ್ ಆಗಿರಲು ಮನವಿ: ಚುನಾವಣೆ ನಡೆಯುವ ಮತಗಟ್ಟೆಯಲ್ಲಿ ಮತದಾರರಾಗಿರುವ ವ್ಯಕ್ತಿಯನ್ನು ಮಾತ್ರವೇ ಆ ಮತಗಟ್ಟೆಯ ಏಜೆಂಟ್ ಆಗಿ ನೇಮಿಸುವಂತೆ ಟಿಎಂಸಿ ಸಂಸದ ಸುದೀಪ್ ಬಂಡೋಪಾಧ್ಯಾಯ ನೇತೃತ್ವದ ನಿಯೋಗವು ಚುನಾವಣಾ ಆಯೋಗಕ್ಕೆ ಮನವಿ ಮಾಡಿದೆ.

ಯಾವುದೇ ಪಕ್ಷವು ವಿಧಾನಸಭಾ ಕ್ಷೇತ್ರದ ಮತದಾರನನ್ನು ಕ್ಷೇತ್ರದೊಳಗಿನ ಯಾವುದೇ ಬೂತ್‌ಗೆ ಏಜೆಂಟ್ ಆಗಿ ನೇಮಿಸಬಹುದು ಎಂದು ಕಳೆದ ವಾರವಷ್ಟೇ ಆಯೋಗ ತಿಳಿಸಿತ್ತು.

ಸ್ಥಳೀಯರಲ್ಲದ ಕಾರಣ, ಚುನಾವಣೆಯಲ್ಲಿ ಮತದಾರರನ್ನು ಗುರುತಿಸಲು ಮತಗಟ್ಟೆ ಏಜೆಂಟ್‌ಗಳಿಗೆ ಸಾಧ್ಯವಾಗಿಲ್ಲ ಎಂದು ನಿಯೋಗ ತಿಳಿಸಿದೆ.

ಗುಂಡಿಕ್ಕುವ ಬೆದರಿಕೆ: ಪುರುಲಿಯಾ ಕ್ಷೇತ್ರದ ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಸುಜೋಯ್ ಬಂಡೋಪಾಧ್ಯಾಯ ಹಾಗೂ ಸ್ಥಳೀಯ ಬಿಜೆಪಿ ಮುಖಂಡ ದೀಪಕ್ ಬೌರಿ ಅವರ ನಡುವೆ ಶನಿವಾರ ವಾಗ್ವಾದ ನಡೆದಿದೆ. ಈ ಸಂದರ್ಭದಲ್ಲಿ ಸುಜೋಯ್ ಅವರು ಬೌರಿ ಅವರಿಗೆ ಗುಡಿಕ್ಕುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ವರದಿಯಾಗಿದೆ.

ಕ್ಷೇತ್ರದ ಮತಗಟ್ಟೆಯೊಂದರಲ್ಲಿ ಭಾರಿ ಜನರನ್ನು ಸೇರಿಸಿದ ಟಿಎಂಸಿ ವಿರುದ್ಧ ಬೌರಿ ಅವರು ಪ್ರತಿಭಟನೆ ನಡೆಸಿದ್ದರು. ಈ ಸಂದರ್ಭದಲ್ಲಿ ಮಾತಿನ ಚಕಮಕಿ ನಡೆದಿದೆ. ಈ ವಾಗ್ವಾದದ ವಿಡಿಯೊ ವೈರಲ್ ಆಗಿದೆ. ಬಂಡೋಪಾಧ್ಯಾಯ ಅವರು ಆರೋಪವನ್ನು ತಳ್ಳಿಹಾಕಿದ್ದಾರೆ.

ಸೌಟು ಹಿಡಿದು ಎದುರಿಸಿ: ಮಮತಾ ಕರೆ: ಪಶ್ಚಿಮ ಬಂಗಾಳಕ್ಕೆ ಬಿಜೆಪಿಯು ಹೊರಗಿನಿಂದ ಗೂಂಡಾಗಳನ್ನು ಕರೆಸುತ್ತಿದೆ ಎಂದು ಆರೋಪಿಸಿರುವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಸೌಟು ಹಿಡಿದು ಅವರನ್ನು ಎದುರಿಸಿ ಎಂದು ಮಹಿಳೆಯರಿಗೆ ಕರೆ ನೀಡಿದ್ದಾರೆ.

ಪಶ್ಚಿಮ ಮಿಡ್ನಾಪುರ ಜಿಲ್ಲೆಯ ನಾರಾಯಣಗಢ ಹಾಗೂ ಪಿಂಗಲಾದಲ್ಲಿ ಎರಡು ಸಾರ್ವಜನಿಕ ರ್‍ಯಾಲಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು ಸುವೇಂದು ಅಧಿಕಾರಿ ಮತ್ತವರ ಕುಟುಂಬವನ್ನು ದೇಶದ್ರೋಹಿಗಳು ಎಂದು ಕರೆದರು.

ನಂದಿಗ್ರಾಮದಲ್ಲಿ ಘರ್ಷಣೆ

ನಂದಿಗ್ರಾಮ (ಪಿಟಿಐ): ಏಪ್ರಿಲ್ 1ರಂದು ಮತದಾನ ನಡೆಯಲಿರುವ ಪುರ್ಬಾ ಮೇದಿನಿಪುರದಲ್ಲಿ ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರ ನಡುವೆ ಶನಿವಾರ ಘರ್ಷಣೆ ಸಂಭವಿಸಿದೆ. ಕನಿಷ್ಠ ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ.

‘ಬಿಜೆಪಿಯಿಂದ ನೇಮಕಗೊಂಡ ಗೂಂಡಾಗಳು ರಾಜ್ಯದ ಟಿಎಂಸಿ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ್ದಾರೆ’ ಎಂದು ಮಮತಾ ಬ್ಯಾನರ್ಜಿ ಅವರ ಚುನಾವಣಾ ಏಜೆಂಟ್ ಶೇಖ್ ಸುಫಿಯಾನ್ ಆರೋಪಿಸಿದ್ದಾರೆ. ಈ ಆರೋಪವನ್ನು ಬಿಜೆಪಿ ನಿರಾಕರಿಸಿದೆ.

ದಾಳಿಯ ಸಮಯದಲ್ಲಿ ಗಾಯಗೊಂಡ ಮೂವರೂ ಟಿಎಂಸಿಯ ಕಾರ್ಯಕರ್ತರು. ಅವರನ್ನು ಕೋಲ್ಕತ್ತದ ಎಸ್‌ಎಸ್‌ಕೆಎಂ ಆಸ್ಪತ್ರೆಗೆ ಸೇರಿಸಲಾಗಿದೆ. ಈ ಪೈಕಿ ಒಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಹೇಳಲಾಗಿದೆ.



ಪಶ್ಚಿಮ ಬಂಗಾಳದ ಝಾಡಗ್ರಾಮದಲ್ಲಿ ಮತದಾನಕ್ಕೆ ಸಾಲುಗಟ್ಟಿ ನಿಂತಿರುವ ಜನರು –ಪಿಟಿಐ ಚಿತ್ರ



ಬಾಂಗ್ಲಾದೇಶದ ಭೇಟಿ ವೇಳೆ ಮತ ಯಾಚನೆ ಮಾಡಿರುವ ಪ್ರಧಾನಿ ಮೋದಿ ಅವರ ವೀಸಾ ಮತ್ತು ಪಾಸ್‌ಪೋರ್ಟ್ ಅನ್ನು ಏಕೆ ರದ್ದುಗೊಳಿಸಬಾರದು?

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಕಿಂಗ್ ಮೇಕರ್ ಆಗುವ ವಿಶ್ವಾಸದಲ್ಲಿ ಕಾಂಗ್ರೆಸ್ – ಎಡಪಕ್ಷ ಮೈತ್ರಿಕೂಟ

ಟಿಎಂಸಿ ಹಾಗೂ ಬಿಜೆಪಿ ನಡುವೆ ನೇರ ಹಣಾಹಣಿಗೆ ಸಾಕ್ಷಿಯಾಗಿರುವ ಪಶ್ಚಿಮ ಬಂಗಾಳದಲ್ಲಿ, ಕಾಂಗ್ರೆಸ್–ಎಡಪಕ್ಷ–ಐಎಸ್‌ಎಫ್ ಮೈತ್ರಿಕೂಟವು ಅಸ್ತಿತ್ವ ಉಳಿಸಿಕೊಳ್ಳುವ ಹೋರಾಟದಲ್ಲಿದೆ. ಒಂದು ವೇಳೆ ಅತಂತ್ರ ವಿಧಾನಸಭೆ ಏರ್ಪಟ್ಟಲ್ಲಿ ಕಿಂಗ್ ಮೇಕರ್ ಆಗುವ ವಿಶ್ವಾಸದಲ್ಲಿ ಮೈತ್ರಿಕೂಟ ಇದೆ.

ಸ್ವಾತಂತ್ರ್ಯಾ ನಂತರ ಆರು ದಶಕಗಳ ಕಾಲ ಆಡಳಿತ ನಡೆಸಿದ ಬಳಿಕ ಬಂಗಾಳದ ರಾಜಕೀಯದಲ್ಲಿ ಮೂಲೆಗುಂಪಾಗಿದ್ದ ಕಾಂಗ್ರೆಸ್ ಮತ್ತು ಸಿಪಿಎಂ ನೇತೃತ್ವದ ಎಡರಂಗವು, 2016ರ ವಿಧಾನಸಭಾ ಚುನಾವಣೆಯ ನಂತರ ಎರಡನೇ ಬಾರಿಗೆ ಒಗ್ಗೂಡಿದೆ.

ಅಬ್ಬಾಸ್ ಸಿದ್ದಿಕಿ ಅವರ ಹೊಸ ವೇದಿಕೆ, ಭಾರತೀಯ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ಈ ಮೈತ್ರಿಕೂಟದ ಮೂರನೇ ಪಾಲುದಾರ ಪಕ್ಷವಾಗಿದೆ. ‘ಸಂಯುಕ್ತ ಮೋರ್ಚಾ’ ಹೆಸರಿನಲ್ಲಿ ಒಂದಾಗಿರುವ ಪಕ್ಷಗಳು, ಟಿಎಂಸಿ ಹಾಗೂ ಬಿಜೆಪಿಯ ಮತಗಳನ್ನು ವಿಭಜಿಸಿ ಗೆಲ್ಲುವ ಲೆಕ್ಕಾಚಾರದಲ್ಲಿವೆ.

ಇಷ್ಟು ವರ್ಷಗಳ ಕಾಲ ಪ್ರಬಲ ಪ್ರತಿಪಕ್ಷದ ಅನುಪಸ್ಥಿತಿಯಲ್ಲಿ, ವಿರೋಧಿ ಮತಗಳನ್ನು ಬಿಜೆಪಿ ಬುಟ್ಟಿಗೆ ಹಾಕಿಕೊಳ್ಳುತ್ತಿತ್ತು. ಸಿದ್ದಿಕಿ ಅವರ ಸೇರ್ಪಡೆಯಿಂದ ಬಂಗಾಳದಲ್ಲಿ ಅಲ್ಪಸಂಖ್ಯಾತ ಮತಗಳ ಪಾಲನ್ನು ಪಡೆಯುವ ವಿಶ್ವಾಸದಲ್ಲಿ ಮೋರ್ಚಾ ಇದೆ.

ಚುನಾವಣಾ ಕಣದಲ್ಲಿ

- ಅಭಿವೃದ್ಧಿಗೆ ಸಂಬಂಧಿಸಿದಂತೆ ತಮ್ಮ ಪಕ್ಷದ ಅಭ್ಯರ್ಥಿ ವಸಂತಿ ಶ್ರೀನಿವಾಸನ್ ಜತೆ ಮುಕ್ತ ಚರ್ಚೆಗೆ ಬರುವಂತೆ ಮಕ್ಕಳ್ ನೀಧಿ ಮಯ್ಯಂನ ಮುಖ್ಯಸ್ಥ ಕಮಲ್ ಹಾಸನ್ ಅವರಿಗೆ ಕೇಂದ್ರ ಸಚಿವೆ ಸ್ಮೃತಿ ಇರಾನಿ ಸವಾಲು ಹಾಕಿದ್ದಾರೆ. ಕೊಯಮತ್ತೂರ ದಕ್ಷಿಣ ಕ್ಷೇತ್ರದಲ್ಲಿ ಕಮಲ್ ಹಾಸನ್ ಹಾಗೂ ವಸಂತಿ ಅವರು ಸ್ಪರ್ಧಿಗಳಾಗಿದ್ದಾರೆ
- ‘ಕನ್ಯಾಕುಮಾರಿ ಜಿಲ್ಲೆಯಲ್ಲಿ ಬಂದರು ನಿರ್ಮಾಣದ ವಿಚಾರವಾಗಿ ಕಾಂಗ್ರೆಸ್ ಹಾಗೂ ಡಿಎಂಕೆ ನಾಯಕರು ಸುಳ್ಳು ಹೇಳುತ್ತಿದ್ದಾರೆ. ಅಂಥ ಯಾವುದೇ ಪ್ರಸ್ತಾವ ಇಲ್ಲ ಎಂದು ಈ ಹಿಂದೆಯೂ ಸ್ಪಷ್ಟಪಡಿಸಿದ್ದೇನೆ’ ಎಂದು ಎಐಎಡಿಎಂಕೆ ಮುಖಂಡ, ತಮಿಳುನಾಡಿನ ಮುಖ್ಯಮಂತ್ರಿ ಪಳನಿಸ್ವಾಮಿ ಹೇಳಿದ್ದಾರೆ.
- ‘ಪುದುಚೇರಿಗೆ ಪೂರ್ಣ ಪ್ರಮಾಣದ ರಾಜ್ಯದ ಸ್ಥಾನಮಾನ ನೀಡುವ ವಿಚಾರದಲ್ಲಿ ಬಿಜೆಪಿ ಯಾಕೆ ಮೌನವಾಗಿದೆ’ ಎಂದು ಅಲ್ಲಿನ ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್ ನಾಯಕ ವಿ. ನಾರಾಯಣಸ್ವಾಮಿ ಪ್ರಶ್ನಿಸಿದ್ದಾರೆ

‘ಬಿಜೆಪಿಯ ಸಂಚಿಗೆ ಕಾಂಗ್ರೆಸ್ ಸಾಥ್’

ಕೊಚ್ಚಿ (ಪಿಟಿಐ): ‘ಕೇಂದ್ರದ ತನಿಖಾ ಸಂಸ್ಥೆಗಳು ರಾಜ್ಯದಲ್ಲಿ ವಿಧ್ವಂಸಕ ಕೆಲಸಗಳನ್ನು ಮಾಡುತ್ತಿವೆ. ಕೇರಳ ಮೂಲಸೌಲಭ್ಯ ಹೂಡಿಕೆ ನಿಧಿ ಮಂಡಳಿಯನ್ನು (ಕೆಐಐಎಫ್‌ಬಿ) ನಾಶಪಡಿಸುವ ಮೂಲಕ ರಾಜ್ಯದ ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಸ್ಥಗಿತಗೊಳಿಸಲು ಪ್ರಯತ್ನಿಸುತ್ತಿವೆ’ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆರೋಪಿಸಿದ್ದಾರೆ.

ಕಾಂಗ್ರೆಸ್ ನೇತೃತ್ವದ ಯುಡಿಎಫ್ ಹಾಗೂ ಬಿಜೆಪಿ ಒಟ್ಟಾಗಿ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಪಡಿಸುತ್ತಿವೆ. ತನಿಖಾ ಸಂಸ್ಥೆಗಳ ಮೂಲಕ ಬಿಜೆಪಿಯು ಯೋಜನೆಗಳನ್ನು ಸ್ಥಗಿತಗೊಳಿಸುತ್ತಿದ್ದರೆ, ಕಾಂಗ್ರೆಸ್ ಪಕ್ಷವು ಅದಕ್ಕೆ ಸಹಕಾರ ನೀಡುತ್ತಿದೆ. ಅಭಿವೃದ್ಧಿಯನ್ನು ಗಲ್ಲಿಗೇರಿಸುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ ಎಂದು ಅವರು ಮಾಧ್ಯಮಗೋಷ್ಠಿಯಲ್ಲಿ ಆರೋಪಿಸಿದರು.

ವಸತಿರಹಿತರಿಗೆ ಮನೆಗಳನ್ನು ನಿರ್ಮಿಸಿಕೊಡುವ ರಾಜ್ಯ ಸರ್ಕಾರದ ‘ಲೈಫ್ ಮಿಷನ್’ ಯೋಜನೆಯನ್ನು ಕೆಐಐಎಫ್‌ಬಿ ನಿರ್ವಹಿಸುತ್ತಿದೆ. ಈ ಮಂಡಳಿಯು ವಿದೇಶಿ ದೇಣಿಗೆ (ನಿಯಂತ್ರಣ) ಕಾಯ್ದೆಯನ್ನು ಉಲ್ಲಂಘಿಸಿದೆ ಎಂಬ ಆರೋಪದ ಕಾರಣಕ್ಕೆ ಮಂಡಳಿಯ ಕೇಂದ್ರ ಕಚೇರಿಯಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಗುರುವಾರ ಶೋಧ ನಡೆಸಿದ್ದರು.

‘ಬಡವರಿಗೆ ಆಹಾರ ಧಾನ್ಯಗಳನ್ನು ನೀಡುವ ಮತ್ತು ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ನೀಡುವುದನ್ನು ತಡೆಯಬೇಕು ಎಂದು ವಿರೋಧ ಪಕ್ಷದ ನಾಯಕ ರಮೇಶ್ ಚೆನ್ನಿತ್ತಲ ಅವರು ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ. ಕೂಡಲೇ ಈ ದೂರನ್ನು ವಾಪಸ್ ಪಡೆದು ಜನರ ಕ್ಷಮೆ ಯಾಚಿಸಬೇಕು’ ಎಂದು ಮುಖ್ಯಮಂತ್ರಿ ಆಗ್ರಹಿಸಿದರು.

ಚುನಾವಣಾ ನೀತಿಸಂಹಿತೆ ಜಾರಿಯಲ್ಲಿರುವುದರಿಂದ, ವಿಶು ಸಂದರ್ಭದಲ್ಲಿ (ಏ.14) ಜನರಿಗೆ ವಿಶೇಷ ಆಹಾರ ವಿತರಿಸುವ ಯೋಜನೆಯನ್ನು ಸದ್ಯಕ್ಕೆ ತಡೆಹಿಡಿಯಬೇಕು ಎಂದು ಚೆನ್ನಿತ್ತಲ ಅವರು ಚುನಾವಣಾ ಆಯೋಗಕ್ಕೆ ಈಚೆಗೆ ಮನವಿ ಸಲ್ಲಿಸಿದ್ದರು.

ಸೈದ್ಧಾಂತಿಕ ಗೊಂದಲ: ‘ಎಡ ಪಕ್ಷಗಳು ಮತ್ತು ಕಾಂಗ್ರೆಸ್ ಸೈದ್ಧಾಂತಿಕ ಗೊಂದಲದಲ್ಲಿವೆ. ಕೇರಳದಲ್ಲಿ ಇವೆರಡೂ ಒಂದರ ವಿರುದ್ಧ ಇನ್ನೊಂದು ಸ್ಪರ್ಧಿಸುತ್ತಿವೆ. ಆದರೆ, ಪಶ್ಚಿಮ ಬಂಗಾಳದಲ್ಲಿ ಒಂದಾಗಿ ಬಿಜೆಪಿ ವಿರುದ್ಧ ಸ್ಪರ್ಧಿಸುತ್ತಿವೆ’ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಹೇಳಿದರು.

ಧರ್ಮಾಡಂ ಕ್ಷೇತ್ರಕ್ಕೆ ಬಿಜೆಪಿಯ ಅಭ್ಯರ್ಥಿ ಸಿ.ಕೆ. ಪದ್ಮನಾಭನ್ ಪರವಾಗಿ ಚಕ್ಕರಕ್ಕಲ್‌ನಲ್ಲಿ ಆಯೋಜಿಸಿದ್ದ ರ್‍ಯಾಲಿಯಲ್ಲಿ ಮಾತನಾಡಿದ ಅವರು, ‘ಇಲ್ಲಿಯ ಮುಖ್ಯಮಂತ್ರಿ ಕಚೇರಿಯೇ ಚಿನ್ನದ ಕಳ್ಳಸಾಗಾಣೆಯಲ್ಲಿ ತೊಡಗಿದೆ. ಪ್ರಕರಣವು ಬೆಳಕಿಗೆ ಬಂದಾಗ ಕೇಂದ್ರೀಯ ಸಂಸ್ಥೆಯ ಮೂಲಕ ತನಿಖೆ ನಡೆಸುವಂತೆ ಪಿಣರಾಯಿ ವಿಜಯನ್ ಆಗ್ರಹಿಸಿದ್ದರು. ಆದರೆ ಅವರ ಕಚೇರಿಯೇ ಇದರಲ್ಲಿ ಭಾಗಿ ಎಂದು ಗೊತ್ತಾಗುತ್ತಿದ್ದಂತೆಯೇ, ‘ರಾಜ್ಯದ ಮೇಲೆ ಕೇಂದ್ರ ಸರ್ಕಾರ ದಬ್ಬಾಳಿಕೆ ನಡೆಸುತ್ತಿದೆ’ ಎಂದು ಆರೋಪಿಸಲು ತೊಡಗಿದ್ದಾರೆ’ ಎಂದರು.



ಕನ್ಯಾಕುಮಾರಿಯಲ್ಲಿ ತಮಿಳುನಾಡು ಮುಖ್ಯಮಂತ್ರಿ ಪಳನಿಸ್ವಾಮಿ ಶನಿವಾರ ಪ್ರಚಾರ ರ್‍ಯಾಲಿ ನಡೆಸಿದರು –ಪಿಟಿಐ ಚಿತ್ರ

ಕೋವಿಡ್: ಶ್ವೇತಪತ್ರ ಹೊರಡಿಸಲು ಸಿದ್ದರಾಮಯ್ಯ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾ ಸೋಂಕು, ಸಾವು, ಚಿಕಿತ್ಸೆ ಮತ್ತು ನೊಂದ ಕುಟುಂಬಗಳಿಗೆ ನೀಡಿರುವ ಪರಿಹಾರದ ಬಗ್ಗೆ ರಾಜ್ಯ ಸರ್ಕಾರ ತಕ್ಷಣ ಶ್ವೇತಪತ್ರ ಹೊರಡಿಸಬೇಕು' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ಧರಾಮಯ್ಯ ಆಗ್ರಹಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ಕೊರೊನಾವನ್ನು ಔಷಧಿ-ಚಿಕಿತ್ಸೆಯಿಂದ ಗೆಲ್ಲಬೇಕೇ ಹೊರತು ಸುಳ್ಳುಗಳಿಂದಲ್ಲ' ಎಂದು ಕುಟುಕಿದ್ದಾರೆ. 'ಸುಳ್ಳು ಹೇಳಿರುವುದು ಕೊರೊನಾ ಸಾವಿನ ಬಗ್ಗೆ ಮಾತ್ರ ಅಲ್ಲ, ಔಷಧಿ, ಮಾಸ್ಕ್, ಸ್ಯಾನಿಟೈಸರ್ ಪಿಪಿ ಕಿಟ್‌ಗಳಿಂದ ಹಿಡಿದು ಆಸ್ಪತ್ರೆಗಳ ಹಾಸಿಗೆ ಖರೀದಿವರೆಗೆ ಎಲ್ಲದರಲ್ಲಿಯೂ ನಡೆದಿರುವ ಭ್ರಷ್ಟಾಚಾರವನ್ನು ಮುಚ್ಚಿಕೊಳ್ಳಲು ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಸುಳ್ಳು ಹೇಳುತ್ತಲೇ ಇದ್ದಾರೆ. ತಪ್ಪು ತಿದ್ದಿಕೊಳ್ಳದೆ ಎಲ್ಲವನ್ನು ಸಮರ್ಥಿಸಿಕೊಂಡ ಸರ್ಕಾರದ ಲಜ್ಜೆಗೇಡಿತನದ ಫಲವನ್ನು ರಾಜ್ಯದ ಜನ ಅನುಭವಿಸಬೇಕಾಗಿದೆ' ಎಂದಿದ್ದಾರೆ.

‘ಆರೋಗ್ಯ ಇಲಾಖೆ ದಾಖಲೆ ಪ್ರಕಾರ 2020ರ ಡಿಸೆಂಬರ್‌ವರೆಗಿನ ಕೊರೊನಾ ಸಾವಿನ ಸಂಖ್ಯೆ 12,090. ರಾಜ್ಯ ಯೋಜನಾ ಮತ್ತು ಅಂಕಿಅಂಶ ಇಲಾಖೆ ಪ್ರಕಾರ ಇದೇ ಅವಧಿಯಲ್ಲಿ ಕೊರೊನಾ ಸಾವಿನ ಸಂಖ್ಯೆ 22,320. ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವರೇ ಇದರಲ್ಲಿ ಯಾವುದು ಸತ್ಯ, ಯಾವುದು ಸುಳ್ಳು' ಎಂದೂ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ರಾಜಕೀಯಕ್ಕಾಗಿ ಸುಳ್ಳು ಹೇಳಬೇಡಿ–ಸುಧಾಕರ್

‘ಜವಾಬ್ದಾರಿ ಸ್ಥಾನದಲ್ಲಿರುವವರು ರಾಜಕೀಯ ಲಾಭಕ್ಕಾಗಿ ಸುಳ್ಳು ಆಪಾದನೆ ಮಾಡುವುದು ಸರಿಯಲ್ಲ. ಹೀಗೇ ಆರೋಪಿಸುವುದು ಕೊರೊನಾ ಯೋಧರಿಗೆ ಮಾಡುವ ಅಪಮಾನ’ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದ್ದಾರೆ.

ಸಿದ್ದರಾಮಯ್ಯ ಟೀಕೆಗೆ ಪ್ರತಿಕ್ರಿಯಿಸಿರುವ ಅವರು, ‘ಸರ್ಕಾರ ನೀಡಿರುವ ಎಲ್ಲ ಮಾಹಿತಿಗಳು ಇ-ಜನ್ಮ ತಂತ್ರಾಂಶದಲ್ಲಿ ತಾತ್ಕಾಲಿಕವಾಗಿ ದಾಖಲಿಸಲಾಗಿರುವ ದತ್ತಾಂಶವಾಗಿದೆ. ಅಂತಿಮ ಅಂಕಿ-ಅಂಶಗಳ ಪ್ರಕಟಣೆ ಇನ್ನೂ ಬಾಕಿಯಿದೆ’ ಎಂದು ಹೇಳಿದ್ದಾರೆ.

‘ಸಿದ್ದರಾಮಯ್ಯನವರಿಗೆ ಬೇಕಿದ್ದಲ್ಲಿ ಎಲ್ಲಾ ಜಿಲ್ಲೆಗಳಿಂದ ಮಾಹಿತಿ ತರಿಸಿಕೊಂಡು ತಾಳೆ ಮಾಡಲಿ. ಆದರೆ, ಇನ್ನೂ ಅಂತಿಮವಾಗಿರದ ದತ್ತಾಂಶ, ಇನ್ನೂ ಪರಿಷ್ಕರಿಸಬೇಕಾದ ಅಂಕಿ ಅಂಶಗಳನ್ನು ಇಟ್ಟುಕೊಂಡು ರಾಜಕೀಯ ಮಾಡುವುದು ಅವರಿಗೆ ಶೋಭೆಯಲ್ಲ’ ಎಂದು ಹೇಳಿದ್ದಾರೆ.

ಮಲ್ಲಿಕಾರ್ಜುನ ಖೂಬಾ ಕಾಲಿಗೆ ಬಿದ್ದ ಬಿಜೆಪಿ ಅಭ್ಯರ್ಥಿ ಶರಣು ಸಲಗರ

30ರಂದು ನಿರ್ಧಾರ ಪ್ರಕಟ: ಖೂಬಾ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ‘ಸ್ಥಳೀಯರು ಅಲ್ಲದವರಿಗೆ ಕ್ಷೇತ್ರದ ಬಿಜೆಪಿ ಟಿಕೆಟ್ ಘೋಷಿಸಿರುವ ಕಾರಣ ಬಿಜೆಪಿಯಲ್ಲಿ ಉಳಿಯುವ ಬಗ್ಗೆ ಇದೇ 30ಕ್ಕೆ ನಿರ್ಧಾರ ತೆಗೆದುಕೊಳ್ಳುತ್ತೇನೆ’ ಎಂದು ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ತಿಳಿಸಿದರು.

‘16 ಜನ ಸ್ಥಳೀಯ ಆಕಾಂಕ್ಷಿಗಳಲ್ಲಿ ಒಬ್ಬರೂ ಅರ್ಹರಿರಲಿಲ್ಲವೇ? ಅದರ ಹೊರತಾಗಿ 2.50 ಲಕ್ಷ ಮತದಾರರಲ್ಲಿ ಯಾರೂ ಬಿಜೆಪಿಯವರಿಗೆ ಸಿಗಲಿಲ್ಲವೇ’ ಎಂದು ತಮ್ಮ ನಿವಾಸದಲ್ಲಿ ಬೆಂಬಲಿಗರ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

‘ನಾನು ಪಕ್ಷ ಬಿಡುವ ಇಲ್ಲವೇ ಪಕ್ಷೇತರನಾಗಿ ಸ್ಪರ್ಧಿಸುವ ಕುರಿತು ಮಾರ್ಚ್ 30 ರಂದು ಅಕ್ಕಮಹಾದೇವಿ ಕಾಲೇಜು ಆವರಣದಲ್ಲಿ ಬೆಂಬಲಿಗರ ಸಭೆ ನಡೆಸಿ ತೀರ್ಮಾನ ಪ್ರಕಟಿಸಲಿದ್ದೇನೆ’ ಎಂದರು.

ಸಭೆ ನಡೆಯುತ್ತಿದ್ದಾಗಲೇ ಬಿಜೆಪಿ ಅಭ್ಯರ್ಥಿ ಶರಣು ಸಲಗರ ಒಳ ಬಂದು ಖೂಬಾ ಅವರ ಕಾಲಿಗೆ ಬಿದ್ದು ನಮಸ್ಕರಿಸಿದ ಪ್ರಸಂಗವೂ ನಡೆಯಿತು. ಆಗ ಕಾರ್ಯಕರ್ತರು ‘ಮಲ್ಲಿಕಾರ್ಜುನ ಖೂಬಾ ಅವರಿಗೆ ಜಯವಾಗಲಿ’ ಎಂಬ ಘೋಷಣೆ ಕೂಗಿದರು. ಇಬ್ಬರ ನಡುವೆ ಯಾವುದೇ ಮಾತುಕತೆ ನಡೆಯಲಿಲ್ಲ. ನಮಸ್ಕರಿಸಿದ ತಕ್ಷಣವೇ ಸಲಗರ ಅಲ್ಲಿಂದ ನಿರ್ಗಮಿಸಿದರು.

ಯಾರಿಂದಲೂ ಹಣ ಪಡೆದಿಲ್ಲ: ‘ಬಿಜೆಪಿ ಟಿಕೆಟ್ ಕೊಡಲು ಯಾರಿಂದಲೂ ಹಣ ಪಡೆದಿಲ್ಲ. ಕಾಂಗ್ರೆಸ್ ಹಾಗೂ ಜೆಡಿಎಸ್‌ಗಳ ‘ಬಿ’ ಟೀಮ್ ಸುಳ್ಳು ಆರೋಪ ಮಾಡಿದೆ’ ಎಂದು ಸಂಸದ ಭಗವಂತ ಖೂಬಾ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



ಬಸವಕಲ್ಯಾಣದಲ್ಲಿ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ತಮ್ಮ ಮನೆಯಲ್ಲಿ ಬೆಂಬಲಿಗರ ಸಭೆ ನಡೆಸುತ್ತಿದ್ದ ಸಂದರ್ಭದಲ್ಲಿ ಬಿಜೆಪಿ ಅಭ್ಯರ್ಥಿ ಶರಣು ಸಲಗರ ಒಳಗೆ ಬಂದು ಕೈಮುಗಿದರು

ಮಂಗಲಾ ನಾಮಪತ್ರ ಸಲ್ಲಿಕೆ 30ರಂದು

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯ ಬಿಜೆಪಿ ಅಭ್ಯರ್ಥಿ ಮಂಗಲಾ ಅಂಗಡಿ ಅವರು ಮಾರ್ಚ್ 30ರಂದು ಬೆಳಿಗ್ಗೆ 11ಕ್ಕೆ ನಾಮಪತ್ರ ಸಲ್ಲಿಸಲಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅಧ್ಯಕ್ಷತೆಯಲ್ಲಿ ಇಲ್ಲಿ ಶನಿವಾರ ನಡೆದ ಮುಖಂಡರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭಾಗವಹಿಸುವರು. 31ರಂದು ಬೆಳಿಗ್ಗೆ 10ಕ್ಕೆ ಚುನಾವಣಾ ಕಾರ್ಯಾಲಯ ಉದ್ಘಾಟಿಸಲಾಗುವುದು. ಅಭ್ಯರ್ಥಿ ಹಾಗೂ ನಾಯಕರು ಮೂರು ದಿನಗಳವರೆಗೆ ಪ್ರತಿ ದಿನ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಚಾರ ಸಭೆಗಳನ್ನು ನಡೆಸಲಿದ್ದಾರೆ’ ಎಂದು ಪಕ್ಷದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಮಹೇಶ ಟೆಂಗಿನಕಾಯಿ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.



ಮಂಗಲಾ ಅಂಗಡಿ

ಸೆಪ್ಟೆಂಬರ್‌ಗೆ ‘ಕೋವೊವಾಕ್ಸ್’ ಲಸಿಕೆ ಸಿಗುವ ನಿರೀಕ್ಷೆ

ನವದೆಹಲಿ (ಪಿಟಿಐ): ‘ಭಾರತದಲ್ಲಿ ಕೋವಿಡ್ ಲಸಿಕೆ ‘ಕೋವೊವಾಕ್ಸ್’ನ ಕ್ಲಿನಿಕಲ್ ಪ್ರಯೋಗಗಳು ಪ್ರಾರಂಭವಾಗಿದ್ದು, ಸೆಪ್ಟೆಂಬರ್ ವೇಳೆಗೆ ಈ ಲಸಿಕೆಯನ್ನು ಬಿಡುಗಡೆ ಮಾಡುವ ನಿರೀಕ್ಷೆಯಿದೆ’ ಎಂದು ಸೆರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅದಾರ್ ಪೂನಾವಾಲಾ ಶನಿವಾರ ತಿಳಿಸಿದ್ದಾರೆ.

ಅಮೆರಿಕದ ನೊವಾವಾಕ್ಸ್ ಲಸಿಕೆ ಕಂಪನಿಯು, ‘ಎನ್‌ವಿಎಕ್ಸ್–ಕೋವ್2373’ ಅಭಿವೃದ್ಧಿಪಡಿಸಲು ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಎಸ್‌ಐಐ ಜತೆ ಲೈಸೆನ್ಸ್ ಒಪ್ಪಂದ ಮಾಡಿಕೊಂಡಿದೆ.

‘ಭಾರತದಲ್ಲಿ ಕೊನೆಗೂ ಕೋವೊವಾಕ್ಸ್ ಕ್ಲಿನಿಕಲ್ ಟ್ರಯಲ್ ಆರಂಭವಾಗಿದೆ. ಈ ಲಸಿಕೆಯನ್ನು ನೋವಾವಾಕ್ಸ್ ಮತ್ತು ಎಸ್‌ಐಐ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಇದನ್ನು ಆಫ್ರಿಕಾ ಮತ್ತು ಬ್ರಿಟನ್‌ನ ರೂಪಾಂತರ ಕೋವಿಡ್–19 ಮೇಲೆಯೂ ಪರೀಕ್ಷಿಸಲಾಗಿದೆ. ಇದು ಶೇಕಡ 89ರಷ್ಟು ಪರಿಣಾಮಕಾರಿ ಆಗಿದೆ. ಈ ಕೋವಿಡ್ ಲಸಿಕೆಯನ್ನು ಸೆಪ್ಟೆಂಬರ್ 2021ರಲ್ಲಿ ಬಿಡುಗಡೆ ಮಾಡುವ ನಿರೀಕ್ಷೆಯಿದೆ’ ಎಂದು ಪೂನಾವಾಲಾ ಟ್ವೀಟ್ ಮಾಡಿದ್ದಾರೆ.

ಕೋವಿಡ್ ಪರೀಕ್ಷೆ ಹೆಚ್ಚಿಸಲು ಕೇಂದ್ರ ಸಲಹೆ

ಕೋವಿಡ್–19ರ ಪ್ರಕರಣಗಳು ಹೆಚ್ಚುತ್ತಿರುವ ಮಹಾರಾಷ್ಟ್ರ, ಕರ್ನಾಟಕ ಸೇರಿದಂತೆ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೋವಿಡ್ ಪರೀಕ್ಷೆಗಳನ್ನು ನಡೆಸುವಂತೆ ಕೇಂದ್ರ ಆರೋಗ್ಯ ಸಚಿವಾಲಯದ ಉನ್ನತ ಮಟ್ಟದ ಪರಿಶೀಲನಾ ಸಮಿತಿ ಸಲಹೆ ನೀಡಿದೆ. ಅಲ್ಲದೆ ಜನರು ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದೆ.

ಒಬ್ಬ ಸೋಂಕಿತ ವ್ಯಕ್ತಿಯು 30 ದಿನಗಳಲ್ಲಿ ಸರಾಸರಿ 406 ಜನರಿಗೆ ಸೋಂಕನ್ನು ಹರಡಬಹುದು. ಆದ್ದರಿಂದ ಕೋವಿಡ್ ಮಾರ್ಗಸೂಚಿಯ ಕಟ್ಟುನಿಟ್ಟಿನ ಪಾಲನೆ ಅತ್ಯಗತ್ಯ ಎಂದು ಸಮಿತಿ ಹೇಳಿದೆ.

ಹಣ್ಣುಗಳ ರಾಜನಿಗೆ ಕೋವಿಡ್ ಎರಡನೇ ಅಲೆಯ ಭೀತಿ

ಮಾರುಕಟ್ಟೆಗೆ ಮಾವು: ಮಾರಾಟದ್ದೇ ಚಿಂತೆ!

● ಆರ್.ಜಿತೇಂದ್ರ

ರಾಮನಗರ: ಹಣ್ಣುಗಳ ರಾಜ ಮಾವು ಮಾರುಕಟ್ಟೆಗೆ ಬಂದಿದ್ದು, ಈ ಬಾರಿಯೂ ಕೋವಿಡ್ ಕಾರಣಕ್ಕೆ ಬೇಡಿಕೆ ಕುಸಿಯುವ ಆತಂಕ ಎದುರಾಗಿದೆ.

ಚನ್ನಪಟ್ಟಣದ ಮಾರುಕಟ್ಟೆಗೆ ನಿತ್ಯ ಸುಮಾರು ನಾಲ್ಕು ಸಾವಿರ ಕ್ರೇಟ್ ಹಾಗೂ ರಾಮನಗರದ ಮಾರುಕಟ್ಟೆಗೆ 500 ಕ್ರೇಟ್ ಮಾವು ಆವಕ ಆಗುತ್ತಿದೆ. ಈ ವಾರದ ಆರಂಭದಲ್ಲಿ ಬಾದಾಮಿ ತಳಿಯ ಮಾವು ಪ್ರತಿ ಕೆ.ಜಿ.ಗೆ ₹ 200ರಂತೆ ಮಾರಾಟ ಆಗಿದ್ದು, ಶನಿವಾರ ₹ 150ಕ್ಕೆ ಕುಸಿದಿದೆ. ಮಹಾರಾಷ್ಟ್ರದಲ್ಲಿ ಕೋವಿಡ್ ಹೆಚ್ಚುತ್ತಿರುವುದು ಬೇಡಿಕೆ ಮತ್ತು ಬೆಲೆ ಕುಸಿತಕ್ಕೆ ಕಾರಣ ಎನ್ನುತ್ತಾರೆ ವರ್ತಕರು.

ರಾಜ್ಯದಾದ್ಯಂತ 1.68 ಲಕ್ಷ ಹೆಕ್ಟೇರ್‌ನಲ್ಲಿ ಮಾವು ಬೆಳೆಯಲಾಗುತ್ತಿದೆ. ಈ ವರ್ಷ ಆರಂಭದಲ್ಲಿ ಮಾವಿನ ಹೂವು ಹೆಚ್ಚಿದ್ದರೂ ಹವಾಮಾನ ವೈಪರೀತ್ಯದಿಂದ ಅರ್ಧದಷ್ಟು ನಾಶವಾಗಿದೆ. 12–14 ಲಕ್ಷ ಟನ್ ಮಾವು ಮಾರುಕಟ್ಟೆಗೆ ಬರುವ ನಿರೀಕ್ಷೆ ಇದೆ.

ರಾಮನಗರದಲ್ಲಿ ಮೊದಲ ಕೊಯ್ಲು: ರಾಜ್ಯದಲ್ಲಿ ಮೊದಲು ಮಾವು ಕೊಯ್ಲು ನಡೆಯುವುದು ರಾಮನಗರದಲ್ಲಿ. ಇಲ್ಲಿ ಈಗಾಗಲೇ ಮಾವು ಕೊಯ್ಲು ಆರಂಭಗೊಂಡಿದ್ದು, ಶೇ 90ರಷ್ಟು ಮಾವು ಹೊರ ರಾಜ್ಯಗಳಿಗೆ ಹೋಗುತ್ತದೆ. ಮೇ ತಿಂಗಳಲ್ಲಿ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕೊಯ್ಲು ನಡೆಯಲಿದೆ. ಬೆಂಗಳೂರು ಗ್ರಾಮಾಂತರ, ತುಮಕೂರು, ಧಾರವಾಡ, ಬೆಳಗಾವಿ, ದಾವಣಗೆರೆ, ಹಾವೇರಿ ಮೊದಲಾದ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾವು ಬೆಳೆಯಲಾಗಿದೆ.

ಮೊದಲ ಹಾಗೂ ಎರಡನೇ ದರ್ಜೆಯ ಮಾವು ಮಹಾರಾಷ್ಟ್ರ, ಆಂಧ್ರ ಪ್ರದೇಶಕ್ಕೆ ಸಾಗಣೆ ಆದರೆ, ಮೂರು ಹಾಗೂ ನಾಲ್ಕನೇ ದರ್ಜೆಯ ಕಾಯಿ ಚಿತ್ತೂರು, ಕೃಷ್ಣಗಿರಿ ಮೊದಲಾದ ಜಿಲ್ಲೆಗಳ ಪಲ್ಪ್ ಕಾರ್ಖಾನೆಗಳಿಗೆ ಸರಬರಾಜು ಆಗುತ್ತಿದೆ.

ಬೆಲೆ ಕುಸಿತದ ಭೀತಿ: ಕಳೆದ ವರ್ಷ ಮಾವು ಮಾರುಕಟ್ಟೆಗೆ ಬರುವ ವೇಳೆಗೆ ಕೋವಿಡ್ ಕಾಲಿಟ್ಟು ಮಾರುಕಟ್ಟೆ ಬಂದ್ ಆಗಿದ್ದವು. ಪಲ್ಪ್ ಕಾರ್ಖಾನೆಗಳಿಗೆ ಕೇಳಿದ ಬೆಲೆಗೆ ಹಣ್ಣು ನೀಡಿ ನಷ್ಟ ಅನುಭವಿಸಿದ್ದರು. ಕೋವಿಡ್ ಅಲೆ ಹೆಚ್ಚಾದರೆ ಈ ಬಾರಿಯೂ ಆರಂಭದಲ್ಲೇ ಬೆಲೆ ಕುಸಿಯುವ ಸಾಧ್ಯತೆ ಇದೆ ಎನ್ನುತ್ತಾರೆ ಮಾವು ಬೆಳೆಗಾರ ಜೋಗಿ ಶಿವರಾಮಯ್ಯ.

ಹವಾಮಾನ ವೈಪರೀತ್ಯದಿಂದ ಈಗಾಗಲೇ ಅರ್ಧದಷ್ಟು ಫಸಲು ಹಾಳಾಗಿದೆ. ಸದ್ಯ ಮಾರುಕಟ್ಟೆ ಮೇಲೆ ಯಾವುದೇ ತೊಂದರೆ ಆಗದಂತೆ ಸರ್ಕಾರ ನಿಗಾ ವಹಿಸಬೇಕು

ಸಿ. ಪುಟ್ಟಸ್ವಾಮಿ ರೈತ ಮುಖಂಡ

ಮಾವಿಗೆ ಮಾರುಕಟ್ಟೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ. ಆನ್‌ಲೈನ್ ಮಾರಾಟಕ್ಕೆ ಅಮೆಜಾನ್ ಕಂಪನಿ ಮುಂದೆ ಬಂದಿದ್ದು, ಮಾತುಕತೆ ಪ್ರಗತಿಯಲ್ಲಿದೆ

ಮುನೇಗೌಡ ಉಪನಿರ್ದೇಶಕ, ತೋಟಗಾರಿಕೆ ಇಲಾಖೆ




ರಾಮನಗರದಲ್ಲಿ ಕಟಾವಿಗೆ ಬಂದ ಮಾವು

ಅಮೆಜಾನ್, ಫ್ಲಿಪ್ ಕಾರ್ಟ್ ಉತ್ಸುಕ

ಮಾವು ಮಾರುಕಟ್ಟೆ ಮೇಲೆ ಅಮೆಜಾನ್ ಕಂಪನಿಯು ಕಣ್ಣಿಟ್ಟಿದ್ದು, ಆನ್‌ಲೈನ್ ಮಾರಾಟಕ್ಕಾಗಿ ಸರ್ಕಾರದ ಮುಂದೆ ಹಲವು ಷರತ್ತು, ಪ್ರಸ್ತಾವ ಇರಿಸಿದೆ. ರೈತರ ಉತ್ಪನ್ನಗಳ ಕಂಪನಿಗಳ (ಎಫ್‌ಪಿಒ) ಮೂಲಕ ನೇರವಾಗಿ ಗ್ರಾಹಕರಿಗೆ ಮಾವು ಮಾರಾಟ ಮಾಡಲು ಅಮೆಜಾನ್ ಯೋಜಿಸಿದೆ. ಎಫ್‌ಪಿಒಗಳು ರೈತರಿಂದ ಹಣ್ಣು ಖರೀದಿಸಿ, ಗ್ರಾಹಕರಿಗೆ ನೇರ ಮಾರಾಟ ಮಾಡಲಿವೆ. ಇದಕ್ಕಾಗಿ ಅಮೆಜಾನ್ ಶೇ 4.5 ರಷ್ಟು ಶುಲ್ಕ ಪಡೆಯುವುದಾಗಿ ಹೇಳಿದೆ.

ಈ ಸಂಬಂಧ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ ಹಾಗೂ ತೋಟಗಾರಿಕೆ ಇಲಾಖೆ ನಡುವೆ ಮಾತುಕತೆ ನಡೆದಿದ್ದು, ಇನ್ನಷ್ಟೇ ಒಪ್ಪಿಗೆ ಸಿಗಬೇಕಿದೆ. ಫ್ಲಿಪ್‌ಕಾರ್ಟ್ ಸಹ ಮಾವು ಮಾರಾಟಕ್ಕೆ ಆಸಕ್ತಿ ತೋರಿದ್ದು, ಇದು ಇನ್ನೂ ಪ್ರಸ್ತಾವದ ಹಂತದಲ್ಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.



ಶೂಟಿಂಗ್: ವಿಜಯವೀರ್–ತೇಜಸ್ವಿನಿಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ವಿಜಯವೀರ್ ಸಿಧು ಹಾಗೂ ತೇಜಸ್ವಿನಿ ಅವರು ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ ಟೂರ್ನಿಯ ಮಿಶ್ರ ತಂಡ ವಿಭಾಗದ 25 ಮೀಟರ್ ರ‍್ಯಾಪಿಡ್ ಫೈರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ.

ಫೈನಲ್‌ನಲ್ಲಿ ಅವರು 9–1ರಿಂದ ಭಾರತದವರೇ ಆದ ಗುರುಪ್ರೀತ್ ಸಿಂಗ್ ಸಂಧು ಹಾಗೂ ಅಭಿಜ್ಞಾ ಅಶೋಕ ಪಾಟೀಲ್ ಅವರನ್ನು ಹಿಂದಿಕ್ಕಿದರು. ಇದರೊಂದಿಗೆ ಭಾರತ ಗೆದ್ದ ಪದಕಗಳ ಸಂಖ್ಯೆ 27ಕ್ಕೇರಿತು. ಅದರಲ್ಲಿ 13 ಚಿನ್ನದ ಪದಕಗಳೂ ಸೇರಿವೆ.

ಎರಡನೇ ಅರ್ಹತಾ ಸುತ್ತಿನಲ್ಲಿ ಗುರುಪ್ರೀತ್ ಹಾಗೂ ಅಭಿಜ್ಞಾ 370 ಸ್ಕೋರ್ ಗಳಿಸಿ ಅಗ್ರಸ್ಥಾನ ಗಳಿಸಿದ್ದರು. 16 ವರ್ಷದ ತೇಜಸ್ವಿನಿ ಹಾಗೂ 18ರ ಹರಯದ ಸಿಧು (368) ಎರಡನೇ ಸ್ಥಾನದಲ್ಲಿದ್ದರು.

ಕಿನನ್–ಶ್ರೇಯಸಿಗೆ ನಾಲ್ಕನೇ ಸ್ಥಾನ: ಮಿಶ್ರ ತಂಡ ವಿಭಾಗದ ಟ್ರ್ಯಾಪ್ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಕಿನನ್ ಚೆನಾಯ್ ಹಾಗೂ ಶ್ರೇಯಸಿ ಸಿಂಗ್ ಅವರು ನಾಲ್ಕನೇ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು. ಕಂಚಿನ ಪದಕದ ಸುತ್ತಿನಲ್ಲಿ ಈ ಜೋಡಿಯು 35–48 ಸ್ಕೋರ್ ಅಂತರದಿಂದ ಟರ್ಕಿಯ ಸಫಿಯೆ ಸರಿಟರ್ಕ್– ಯಾವುಜ್ ಇಲ್ನಾಮ್ ಅವರಿಗೆ ಸೋತಿತು.



ಚಿನ್ನದ ಪದಕ ಗೆದ್ದ ವಿಜಯವೀರ್ ಸಿಧು (ಎಡ) ಹಾಗೂ ತೇಜಸ್ವಿನಿ—ಎಎಫ್‌ಪಿ ಚಿತ್ರ

ಕಿನನ್ ಹಾಗೂ ಶ್ರೇಯಸಿ ಅರ್ಹತಾ ಸುತ್ತಿನಲ್ಲಿ 143 ಸ್ಕೋರ್‌ನೊಂದಿಗೆ ನಾಲ್ಕನೇ ಸ್ಥಾನ ಗಳಿಸಿತ್ತು. ಸರಿಟರ್ಕ್– ಯಾವುಜ್ ಇಲ್ನಾಮ್ (143) ಮೂರನೇ ಸ್ಥಾನ ಪಡೆದಿದ್ದರು.

ಕಿನನ್ ಈ ಸ್ಪರ್ಧೆಯ ವೈಯಕ್ತಿಕ ವಿಭಾಗದಲ್ಲೂ ನಾಲ್ಕನೇ ಸ್ಥಾನ ಗಳಿಸಿದ್ದರು.

ಸ್ಕ್ವಾಷ್ ಟೂರ್ನಿ ಮುಂದೂಡಿಕೆ

ಚೆನ್ನೈ (ಪಿಟಿಐ): ಇಬ್ಬರು ಆಟಗಾರರಿಗೆ ಕೋವಿಡ್–19 ದೃಢಪಟ್ಟ ಹಿನ್ನೆಲೆಯಲ್ಲಿ ಇಲ್ಲಿ ನಡೆಯಬೇಕಿದ್ದ ಎಸ್‌ಆರ್‌ಎಫ್‌ಐ ಇಂಡಿಯನ್ ಟೂರ್ ಸ್ಕ್ವಾಷ್ ಟೂರ್ನಿಯನ್ನು ಮುಂದೂ ಡಲಾಗಿದೆ.

‘ಒಂದು ವೇಳೆ ಎರಡನೇ ಸುತ್ತಿನ ಪರೀಕ್ಷೆಯಲ್ಲಿ ಕೊರೊನಾ ಸೋಂಕು ಪತ್ತೆಯಾಗದಿದ್ದಲ್ಲಿ ಸೋಮವಾರದಿಂದ ಟೂರ್ನಿಯನ್ನು ಆರಂಭಿಸಲಾಗುತ್ತದೆ‘ ಎಸ್‌ಆರ್‌ಎಫ್‌ಐ) ತಿಳಿಸಿದೆ.

ಸೈಕ್ಲಿಂಗ್: ಕರ್ನಾಟಕಕ್ಕೆ ಆರು ಪದಕ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹೈದರಾಬಾದ್‌ನಲ್ಲಿ ಶನಿವಾರ ಆರಂಭವಾದ 72ನೇ ಸೀನಿಯರ್, 49ನೇ ಜೂನಿಯರ್ ಮತ್ತು 35ನೇ ಸಬ್ ಜೂನಿಯರ್ ರಾಷ್ಟ್ರೀಯ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡ ಮೊದಲ ದಿನವಾದ ಶನಿವಾರ ಎರಡು ಚಿನ್ನ ಸೇರಿದಂತೆ ಒಟ್ಟು ಆರು ಪದಕಗಳನ್ನು ಜಯಿಸಿತು.

ಜೂನಿಯರ್ ವಿಭಾಗದಲ್ಲಿ ಬೆಂಗಳೂರಿನ ಕೀರ್ತಿ ರಂಗಸ್ವಾಮಿ 6 ಕಿ.ಮೀ. ಸ್ಕ್ರಾಚ್ ಸ್ಪರ್ಧೆಯಲ್ಲಿ ರಾಜ್ಯಕ್ಕೆ ಮೊದಲ ಚಿನ್ನ ತಂದುಕೊಟ್ಟರು. ಇನ್ನೊಂದು ಚಿನ್ನ ಬಾಲಕರ ಸಬ್ ಜೂನಿಯರ್ ವಿಭಾಗದಲ್ಲಿ ಬಂತು. ಮಲ್ಲಿಕಾರ್ಜುನ ಯಾದವಾಡ, ಪ್ರತಾಪ ಪಡಚಿ, ಸಂಪತ್ ಪಾಸ್ಮಲ್ ಅವರನ್ನು ಒಳಗೊಂಡ ತಂಡ ಈ ಸಾಧನೆ ಮಾಡಿತು.ಮಹಿಳೆಯರ ಸೀನಿಯರ್ ವಿಭಾಗದ 10 ಕಿ.ಮೀ. ಸ್ಕ್ರಾಚ್ ಸ್ಪರ್ಧೆಯಲ್ಲಿ ಜಮಖಂಡಿಯ ದಾನಮ್ಮ ಚಿಚಖಂಡಿ, ಪುರುಷರ ಸೀನಿಯರ್ ವಿಭಾಗದ 15 ಕಿ.ಮೀ. ಸ್ಕ್ರಾಚ್ ಸ್ಪರ್ಧೆಯಲ್ಲಿ ವಿಶ್ವನಾಥ ಗಡಾದ, ಜೂನಿಯರ್ ಬಾಲಕರ ವಿಭಾಗದ 10 ಕಿ.ಮೀ. ಸ್ಕ್ರಾಚ್ ಸ್ಪರ್ಧೆಯಲ್ಲಿ ವಿಜಯಪುರದ ಗಣೇಶ ಕುಡಿಗಾನೂರ ಮತ್ತು ಜೂನಿಯರ್ ಬಾಲಕಿಯರ ತಂಡ ವಿಭಾಗ ಕಂಚಿನ ಪದಕಗಳನ್ನು ಗೆದ್ದುಕೊಂಡಿತು. ತಂಡದಲ್ಲಿ ಕೀರ್ತಿ ರಂಗಸ್ವಾಮಿ, ಚೈತ್ರಾ ಬೋರ್ಜಿ ಮತ್ತು ಅಂಕಿತಾ ರಾಠೋಡ ಇದ್ದರು.

ಕೆಕೆಆರ್ ಬಳಗಕ್ಕೆ ಹರಭಜನ್ ಸಿಂಗ್

ಮುಂಬೈ (ಪಿಟಿಐ): ಅನುಭವಿ ಕ್ರಿಕೆಟಿಗ ಹರಭಜನ್ ಸಿಂಗ್ ಈ ಬಾರಿ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.



ಹರಭಜನ್ ಸಿಂಗ್

ಶನಿವಾರ ಅವರು ಕೋಲ್ಕತ್ತ ನೈಟ್ ರೈಡರ್ಸ್ ಬಳಗ ಸೇರಿ ಕೊಂಡಿದ್ದಾರೆ. ಇಲ್ಲಿಯ ಡಿ.ವೈ. ಪಾಟೀಲ ಕ್ರೀಡಾಂಗಣದ ಸಮೀಪವಿರುವ ಹೋಟೆಲ್‌ನಲ್ಲಿ ಕ್ವಾರಂಟೈನ್ ಆಗಿರುವ ತಂಡವನ್ನು ಕೂಡಿಕೊಂಡಿದ್ದಾರೆ.

ಈ ಮೊದಲು ಅವರು ಚೆನ್ನೈ ಸೂಪರ್ ಕಿಂಗ್ಸ್‌ನಲ್ಲಿದ್ದರು. ಐಪಿಎಲ್‌ನ ಆರಂಭದ ವರ್ಷಗಳಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಪ್ರತಿನಿಧಿಸಿದ್ದರು.

ಈಚೆಗೆ ನಡೆದ ಹರಾಜು ಪ್ರಕ್ರಿಯೆಯಲ್ಲಿ ಹರಭಜನ್ ಅವರನ್ನು ಕೆಕೆಆರ್ ತಂಡವು ಎರಡು ಕೋಟಿ ರೂಪಾಯಿ ನೀಡಿ ಖರೀದಿಸಿತ್ತು.

ತಂಡದಲ್ಲಿರುವ ಸ್ಪಿನ್ನರ್ ವರುಣ್ ಚಕ್ರವರ್ತಿ, ರಾಹುಲ್ ತ್ರಿಪಾಠಿ, ಕಮಲೇಶ್ ನಾಗರಕೋಟಿ, ಸಂದೀಪ್ ವರಿಯರ್ ಮತ್ತು ಹೊಸ ಪ್ರತಿಭೆ ವೈಭವ್ ಅರೋರಾ ಈಗಾಗಲೇ ಅಭ್ಯಾಸ ಆರಂಭಿಸಿದ್ದಾರೆ.

ಫೈನಲ್‌ಗೆ ಕೃಷ್ಣ–ವಿಷ್ಣು

ಪ್ಯಾರಿಸ್ (ಪಿಟಿಐ): ಭಾರತದ ಸೈನಾ ನೆಹ್ವಾಲ್ ಅವರು ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಎಡವಿದರು. ಆದರೆ ಪುರುಷರ ಡಬಲ್ಸ್ ಜೋಡಿ ಕೃಷ್ಣ ಪ್ರಸಾದ್ ಗರ್ಗ್ ಹಾಗೂ ವಿಷ್ಣುವರ್ಧನ ಗೌಡ ಪಂಜಾಲ ಫೈನಲ್‌ಗೆ ಲಗ್ಗೆಯಿಟ್ಟಿದ್ದು ಪ್ರಶಸ್ತಿಯ ನಿರೀಕ್ಷೆ ಮೂಡಿಸಿದ್ದಾರೆ.

ಟೂರ್ನಿಯುದ್ದಕ್ಕೂ ಉತ್ತಮ ಆಟವಾಡಿದ್ದ ಸೈನಾ, ನಾಲ್ಕರ ಘಟ್ಟದ ಹಣಾಹಣಿಯಲ್ಲಿ 17-21, 17-21ರಿಂದ ಡೆನ್ಮಾರ್ಕ್‌ನ ಲಿನಿ ಕ್ರಿಸ್ಟೊಫರ್ಸನ್ ಅವರಿಗೆ ಮಣಿದರು. ಕೇವಲ 28 ನಿಮಿಷಗಳಲ್ಲಿ ಲಿನಿ, ಸೈನಾ ಅವರ ಸವಾಲನ್ನು ಮೀರಿದರು.

ಸೆಮಿಫೈನಲ್ ಪಂದ್ಯದಲ್ಲಿ 21 ವರ್ಷದ ಕೃಷ್ಣ ಹಾಗೂ 20ರ ಹರೆಯದ ವಿಷ್ಣು 21–17, 21–17ರಿಂದ ಇಂಗ್ಲೆಂಡ್‌ನ ಕಾಲಮ್ ಹೆಮಿಂಗ್ ಹಾಗೂ ಸ್ಟೀವನ್ ಸ್ಟಾಲ್‌ವುಡ್ ಅವರನ್ನು ಪರಾಭವಗೊಳಿಸಿದರು. ಈ ಮೂಲಕ ಇದೇ ಮೊದಲ ಬಾರಿ ಸೂಪರ್ 100 ಟೂರ್ನಿಯೊಂದರ ಫೈನಲ್ ತಲುಪಿದ ಸಾಧನೆ ಮಾಡಿದರು.

ಭಾರತದ ಆಟಗಾರರು ಫೈನಲ್ ಪಂದ್ಯದಲ್ಲಿ, ಇಂಡೊನೇಷ್ಯಾದ ಸಬರ್ ಕ್ಯಾರಿಮನ್ ಗುಟಾಮ–ಮೊಹ್ ರೆಜಾ ಪಹ್ಲೆವಿ ಇಸ್ಫಾಹನಿ ಹಾಗೂ ಇಂಗ್ಲೆಂಡ್‌ನ ಬೆನ್ ಲೇನ್– ಸೀಯಾನ್ ವೆಂಡಿ ನಡುವಣ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಈ ಹಿಂದೆ ಕೃಷ್ಣ, ಜೂನಿಯರ್ ವಿಭಾಗದಲ್ಲಿ ಆಡುವಾಗ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಜೊತೆಯಾಗಿ ಆಡುತ್ತಿದ್ದರು.

ಸಾತ್ವಿಕ್ ಅವರಿಗೆ ಚಿರಾಗ್ ಶೆಟ್ಟಿ ಜೊತೆಗಾರನಾದ ಬಳಿಕ, 2016ರಿಂದ ಕೃಷ್ಣ ಅವರು ಧ್ರುವ ಕಪಿಲ್ ಅವರೊಂದಿಗೆ ಕಣಕ್ಕಿಳಿಯತೊಡಗಿದರು. 2019ರಲ್ಲಿ ಈ ಜೋಡಿ ಬೇರ್ಪಟ್ಟಿತು.

ವಿಷ್ಣು, 2019ರ ಬಲ್ಗೇರಿಯನ್ ಜೂನಿಯರ್ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಇಶಾನ್ ಭಟ್ನಾಗರ್ ಜೊತೆಯಾಗಿ ಫೈನಲ್ ತಲುಪಿದ್ದರು.

ಅಶ್ವಿನಿ–ಸಿಕ್ಕಿರೆಡ್ಡಿಗೆ ಸೋಲು: ಮಹಿಳಾ ಡಬಲ್ಸ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಕರ್ನಾಟಕದ ಅಶ್ವಿನಿ ಪೊನ್ನಪ್ಪ ಹಾಗೂ ಎನ್.ಸಿಕ್ಕಿರೆಡ್ಡಿ ಕೂಡ ಸೆಮಿಫೈನಲ್ ಪಂದ್ಯದಲ್ಲಿ ಮುಗ್ಗರಿಸಿದರು. ಈ ಜೋಡಿಯು 18–21, 9–21ರಿಂದ ಅಗ್ರಶ್ರೇಯಾಂಕದ, ಥಾಯ್ಲೆಂಡ್ ಜೋಡಿ ಜಾಂಗಗಕೊಲ್ಪನ್ ಕಿತಿತಾರಕುಲ್–ರವಿಂದಾ ಪ್ರಜೊಂಗ್ಜಾಯ್ ವಿರುದ್ಧ ಸೋತಿತು.

ಜಯಲಕ್ಷ್ಮಿ, ಕಿರಣ್‌ಗೆ ತಂಡಗಳ ನಾಯಕತ್ವ

ಬೆಂಗಳೂರು: ಕಿರಣ್ ಕುಮಾರ್ ಬಿ.ಎನ್ ಮತ್ತು ಜಯಲಕ್ಷ್ಮಿ ಜಿ ಅವರು ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್‌ನಲ್ಲಿ ಕರ್ನಾಟಕದ ಪುರುಷ ಮತ್ತು ಮಹಿಳಾ ತಂಡಗಳನ್ನು ಮುನ್ನಡೆಸುವರು.

ತಂಡಗಳು: ಪುರುಷರು: ಕಿರಣ್ ಕುಮಾರ್ ಬಿ.ಎನ್ (ನಾಯಕ), ಉಲ್ಲಾಸ್ ಎನ್.ವಿ, ಮುತ್ತಮಿಲರಸು, ಸಂಜಯ್ ಎಚ್.ಆರ್, ರವಿ, ಮಹಾದೇವಸ್ವಾಮಿ, ಚೇತನ್ ಬಿ.ಕೆ, ಕಾರ್ತಿಕ್, ಆಕಾಶ್, ಜೀವನ್. **ಮಹಿಳೆಯರು:** ಜಯಲಕ್ಷ್ಮಿ ಜಿ, ಕವನ ಎಂ.ಎಂ, ದಿವ್ಯಾ ಎಂ.ಎಸ್, ಪಲ್ಲವಿ ಬಿ.ಎಸ್, ಗಾಯತ್ರಿ ಕೆ.ಎಸ್, ಗಗನಾ ಡಿ, ಸಹನಾ ಎಚ್.ವೈ, ಮೇಘನಾ ಎಚ್.ಎಂ, ಸ್ನೇಹಾ ಎಚ್.ಆರ್, ಮಾನಸ.

ಕೋಚ್: ಪ್ರವೀಣ್ ಕುಮಾರ್; **ಮ್ಯಾನೇಜರ್:** ಜಂಬಣ್ಣ, ಕವಿತಾ.

ಮುಂಬೈ ರೇಸ್

‘ಲಗಾರ್ಡೆ’ ಗೆಲ್ಲುವ ನಿರೀಕ್ಷೆ

‘ಕಿಂಗ್‌ಫಿಶರ್ ಅಲ್ಟ್ರಾ ಇಂಡಿಯನ್ ಡರ್ಬಿ’ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ‘ಲಗಾರ್ಡೆ’ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಆರ್ಕೇಡಿಯ 1, ಜಸ್ಟಿಫೈಡ್ 6, ಪ್ರೈಸ್‌ಲೆಸ್ ಗೋಲ್ಡ್ 2
2ನೇ ರೇಸ್: ಮೈ ಒಪಿನಿಯನ್ 1, ಸಲಾಜಾರ್ 4
3ನೇ ರೇಸ್: ಕಾಸ್ಮಿಕ್ ರೇ 4, ಟ್ರಫಾಲ್ಗರ್ 1, ಟ್ರೂಲಿ ಎಪಿಕ್ 6
4ನೇ ರೇಸ್: ಆರ್ಕ್ ಡೆ ಟ್ರಿಯಾಂಫೆ 2, ಆಲ್ಫಾಯಿಜ್ 1, ರಸ್ಪುಟಿನ್ 5
5ನೇ ರೇಸ್: ಕೊಲಂಬಿಯನ್ 3, ಅಹೆಡ್ ಆಫ್ ಹಿಸ್ ಟೈಮ್ 1, ಫಾರೆಲ್ 4
6ನೇ ರೇಸ್: ಲಗಾರ್ಡೆ 3, ಫಾರೆಸ್ಟ್ ಫ್ಲೇಮ್ 11, ಇಮ್ಮಾರ್ಟಾಲಿಟಿ 12
7ನೇ ರೇಸ್: ದಿ ಸಾವರೀನ್ ಆರ್ಬ್ 11, ಟಗ್ರಿಯೊ 1, ತನ್ಜಾಯಾನ್ 9
8ನೇ ರೇಸ್: ಎನಿಗ್ಮಾ 10, ಸೂಪರ್ ಗರ್ಲ್ 5, ಎನ್ಡೀವರ್ 2

ಉತ್ತಮ ಬೆಟ್: ಆರ್ಕೇಡಿಯ

ಜಾಕ್‌ಪಾಟ್	1ನೇ ಟ್ರಿಬಲ್‌ಗೆ	2ನೇ ಟ್ರಿಬಲ್
4,5,6,7,8	2,3,4	5,6,7

ಭಾರತ–ಇಂಗ್ಲೆಂಡ್ ಮೂರನೇ ಏಕದಿನ ಪಂದ್ಯ: ಮತ್ತೊಮ್ಮೆ ರನ್ ಹೊಳೆ?

ಸರಣಿ ಮೇಲೆ ಕುತೂಹಲದ ಕಣ್ಣು



ವಿರಾಟ್ ಕೊಹ್ಲಿ –ಪಿಟಿಐ ಚಿತ್ರ



ಬೆನ್ ಸ್ಟೋಕ್ಸ್ –ಎಎಫ್‌ಪಿ ಚಿತ್ರ

ಪುಣೆ (ಪಿಟಿಐ): ಏಕದಿನ ಕ್ರಿಕೆಟ್ ಸರಣಿ ಜಯದ ಮೇಲೆ ಕಣ್ಣಿಟ್ಟಿರುವ ಭಾರತ ಮತ್ತು ಇಂಗ್ಲೆಂಡ್ ತಂಡಗಳು ಭಾನುವಾರ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿವೆ.

ಸರಣಿಯಲ್ಲಿ ಉಭಯ ತಂಡಗಳು 1–1ರ ಸಮಬಲ ಸಾಧಿಸಿವೆ. ಟೆಸ್ಟ್ ಮತ್ತು ಟಿ20 ಸರಣಿಗಳಲ್ಲಿ ಸೋತಿರುವ ಪ್ರವಾಸಿ ಇಂಗ್ಲೆಂಡ್ ಬಳಗವು ಏಕದಿನ ಸರಣಿ ಕಿರೀಟ ಧರಿಸುವ ಕನಸು ಕಾಣುತ್ತಿದೆ.

ಆದರೆ ಭಾರತ ತಂಡವು ಎರಡನೇ ಪಂದ್ಯದಲ್ಲಿ ತನ್ನ ಸೋಲಿಗೆ ಕಾರಣವಾಗಿದ್ದ ಬೌಲಿಂಗ್ ವಿಭಾಗದಲ್ಲಿ ಕೆಲವು ಬದಲಾವಣೆಗಳೊಂದಿಗೆ ಕಣಕ್ಕಿಳಿಯುವ ಸಾಧ್ಯತೆ ಇದೆ.

ಎರಡೂ ಪಂದ್ಯಗಳಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ವಿರಾಟ್ ಕೊಹ್ಲಿ ಬಳಗವು ಮುನ್ನೂರು ರನ್‌ಗಳಿಗಿಂತ ಹೆಚ್ಚಿನ ಮೊತ್ತದ ಗುರಿಯನ್ನು ನೀಡಿತ್ತು. ಆದರೆ, ಎರಡನೇ ಪಂದ್ಯದಲ್ಲಿ ಸ್ಪಿನ್ ಜೋಡಿ ಕೃಣಾಲ್ ಪಾಂಡ್ಯ ಮತ್ತು ಕುಲದೀಪ್ ಯಾದವ್ ದುಬಾರಿಯಾಗಿದ್ದರು.

ಆದ್ದರಿಂದ ಈ ಪಂದ್ಯದಲ್ಲಿ ಇವರಿಬ್ಬರಿಗೂ ವಿಶ್ರಾಂತಿ ನೀಡುವ ಸಾಧ್ಯತೆ ಹೆಚ್ಚಿದೆ.

ವಾಷಿಂಗ್ಟನ್ ಸುಂದರ್ ಮತ್ತು ಯಜುವೇಂದ್ರ ಚಾಹಲ್ ಕಣಕ್ಕಿಳಿಯಬಹುದು. ಭುವನೇಶ್ವರ್ ಕುಮಾರ್ ಮತ್ತು ಪ್ರಸಿದ್ಧ ಕೃಷ್ಣ ಕೂಡ ಇನ್ನೊಂದು ಅವಕಾಶ ಗಿಟ್ಟಿಸುವುದು ಬಹುತೇಕ ಖಚಿತ. ಆದರೆ ಮೊದಲ ಪಂದ್ಯದಲ್ಲಿ ಉತ್ತಮ ಬೌಲಿಂಗ್ ಮಾಡಿದ್ದ ಶಾರ್ದೂಲ್ ಎರಡನೇಯದ್ದರಲ್ಲಿ ದುಬಾರಿಯಾಗಿದ್ದರು.

ಆದ್ದರಿಂದ ಶಾರ್ದೂಲ್ ಬದಲಿಗೆ ಟಿ. ನಟರಾಜನ್ ಸ್ಥಾನ ಪಡೆದರೆ ಅಚ್ಚರಿಯೇನಿಲ್ಲ. ಎರಡನೇ ಪಂದ್ಯದಲ್ಲಿ ಶತಕ ಗಳಿಸಿದ್ದ ಕೆ.ಎಲ್. ರಾಹುಲ್ ನಾಲ್ಕನೇ ಕ್ರಮಾಂಕದಲ್ಲಿ ಮತ್ತೊಮ್ಮೆ ಬ್ಯಾಟಿಂಗ್ ಮಾಡುವುದು ಖಚಿತವಾಗಿದೆ. ರೋಹಿತ್ ಶರ್ಮಾ ಎರಡೂ ಪಂದ್ಯಗಳಲ್ಲಿ ಲಯ ಕಂಡುಕೊಳ್ಳುವಲ್ಲಿ ಸಫಲರಾಗಿಲ್ಲ.

ಆದ್ದರಿಂದ ಶುಭಮನ್ ಗಿಲ್ ಆಡುವ ಅವಕಾಶ ಗಿಟ್ಟಿಸಬಹುದು.

ಇಂಗ್ಲೆಂಡ್ ತಂಡವು ಬ್ಯಾಟಿಂಗ್ ಕ್ರಮಾಂಕದಲ್ಲಿ ಹೆಚ್ಚು ಬದಲಾವಣೆ ಮಾಡುವುದು ಅನುಮಾನ. ಆದರೆ ಬೌಲಿಂಗ್‌ನಲ್ಲಿ ಬದಲಾವಣೆ ಮಾಡಬಹುದು. ಸ್ಪಿನ್ನರ್ ಮ್ಯಾಥ್ಯೂ ಪಾರ್ಕಿನ್ಸನ್ ಅಂತಿಮ ಹನ್ನೊಂದರಲ್ಲಿ ಸ್ಥಾನ ಗಿಟ್ಟಿಸಬಹುದು.

ತಂಡಗಳು

ಭಾರತ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ, ಶಿಖರ್ ಧವನ್, ಕೆ.ಎಲ್. ರಾಹುಲ್, ರಿಷಭ್ ಪಂತ್ (ಇಬ್ಬರೂ ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ, ಕೃಣಾಲ್ ಪಾಂಡ್ಯ, ಭುವನೇಶ್ವರ್ ಕುಮಾರ್, ಪ್ರಸಿದ್ಧಕೃಷ್ಣ, ಕುಲದೀಪ್ ಯಾದವ್, ವಾಷಿಂಗ್ಟನ್ ಸುಂದರ್, ಯಜುವೇಂದ್ರ ಚಾಹಲ್, ಟಿ. ನಟರಾಜನ್, ಶಾರ್ದೂಲ್ ಠಾಕೂರ್, ಶುಭಮನ್ ಗಿಲ್


ಇಂಗ್ಲೆಂಡ್: ಜೋಸ್ ಬಟ್ಲರ್ (ನಾಯಕ/ವಿಕೆಟ್‌ಕೀಪರ್), ಜಾನಿ ಬೆಸ್ಟೊ, ಜೇಸನ್ ರಾಯ್, ಬೆನ್ ಸ್ಟೋಕ್ಸ್, ಡೇವಿಡ್ ಮಲಾನ್, ಲಿಯಾಮ್ ಲಿವಿಂಗ್‌ಸ್ಟೋನ್, ಸ್ಯಾಮ್ ಕರನ್, ಆದಿಲ್ ರಶೀದ್, ರೀಸ್ ಟಾಪ್ಲೆ, ಮಾರ್ಕ್ ವುಡ್.

ಪಂದ್ಯ ಆರಂಭ: ಮಧ್ಯಾಹ್ನ 1.30; **ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪ್ರಸಿದ್ಧ ಕೃಷ್ಣ ಟೆಸ್ಟ್ ಆಡಲಿ: ಗಾವಸ್ಕರ್



ಸುನಿಲ್ ಗಾವಸ್ಕರ್



ಪ್ರಸಿದ್ಧ ಕೃಷ್ಣ

ಪುಣೆ (ಪಿಟಿಐ): ಇಂಗ್ಲೆಂಡ್ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಪದಾರ್ಪಣೆ ಮಾಡಿದ ಕನ್ನಡಿಗ ಪ್ರಸಿದ್ಧ ಕೃಷ್ಣ ಅವರ ಬಗ್ಗೆ ಕ್ರಿಕೆಟ್ ದಿಗ್ಗಜ ಸುನಿಲ್ ಗಾವಸ್ಕರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಪ್ರತಿಭಾವಂತ ಆಟಗಾರನಾಗಿರುವ ಪ್ರಸಿದ್ಧಕೃಷ್ಣ ಅವರನ್ನು ಟೆಸ್ಟ್ ತಂಡಕ್ಕೆ ಸೇರ್ಪಡೆ ಮಾಡುವತ್ತ ರಾಷ್ಟ್ರೀಯ ತಂಡದ ಆಯ್ಕೆ ಸಮಿತಿ ಯೋಚಿಸಬೇಕು' ಎಂದು ಗಾವಸ್ಕರ್ ಸಲಹೆ ನೀಡಿದ್ದಾರೆ.

ಇಂಗ್ಲೆಂಡ್ ಎದುರಿನ ಮೊದಲ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಪ್ರಸಿದ್ಧ ನಾಲ್ಕು ವಿಕೆಟ್ ಗಳಿಸಿದ್ದರು. ಎರಡನೇ ಪಂದ್ಯದಲ್ಲಿ 37ನೇ ಓವರ್‌ನಲ್ಲಿ ಎರಡು ವಿಕೆಟ್ ಕಬಳಿಸಿದ್ದರು. ಅದರಲ್ಲಿ ಅವರು ಪ್ರಯೋಗಿಸಿದ್ದ ನಿಖರವಾದ ಯಾರ್ಕರ್‌ಗೆ ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್ ಔಟಾಗಿದ್ದರು.

'ಜಸ್‌ಪ್ರೀತ್ ಬೂಮ್ರಾ ಸೀಮಿತ ಓವರ್‌ಗಳಲ್ಲಿ ಆಡಿದ ನಂತರ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದರು. ಅದೇ ತರಹದ ಪ್ರತಿಭೆ ಇರುವ ಪ್ರಸಿದ್ಧ ಬಗ್ಗೆಯೂ ಆಯ್ಕೆಗಾರರು ಚಿಂತನೆ ನಡೆಸಬೇಕು. ಪ್ರಸಿದ್ಧ ಎಸೆತಗಳ ವೇಗ ಮತ್ತು ಸೀಮ್ ಪೊಸಿಷನ್ ತುಂಬಾ ಚೆನ್ನಾಗಿದೆ. ಕೆಂಪು ಚೆಂಡಿನಲ್ಲಿ ಬೌಲಿಂಗ್ ಮಾಡುವಾಗ ಈ ಕೌಶಲ ಉಪಯುಕ್ತ' ಎಂದು ವೀಕ್ಷಕ ವಿವರಣೆಯ ಸಂದರ್ಭದಲ್ಲಿ ಗಾವಸ್ಕರ್ ಹೇಳಿದ್ದಾರೆ.

ಸಚಿನ್‌ಗೆ ಕೋವಿಡ್



ಸಚಿನ್ ತೆಂಡೂಲ್ಕರ್

ನವದೆಹಲಿ (ಪಿಟಿಐ): ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಅವರಿಗೆ ಕೋವಿಡ್ 19 ದೃಢಪಟ್ಟಿದ್ದು, ಸದ್ಯ ಮನೆಯಲ್ಲೇ ಪ್ರತ್ಯೇಕವಾಗಿದ್ದಾರೆ. ತಮಗೆ ಸೋಂಕು ತಗಲಿರುವುದನ್ನು ಸಚಿನ್ ಸಾಮಾಜಿಕ ಜಾಲತಾಣಗಳ ಮೂಲಕ ಖಚಿತಪಡಿಸಿದ್ದಾರೆ.

'ಮುಂಜಾಗ್ರತಾ ಕ್ರಮಗಳನ್ನು ಪಾಲಿಸುತ್ತಿದ್ದೆ. ಆದರೂ ಶನಿವಾರ ಸೋಂಕಿನ ಲಕ್ಷಣಗಳು ಕಂಡುಬಂದಿದ್ದು, ಕೋವಿಡ್ ಇರುವುದು ದೃಢಪಟ್ಟಿದೆ' ಎಂದು ಸಚಿನ್ ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ.

ಯೂಸುಫ್‌ಗೆ ಕೋವಿಡ್: ಬೆಂಗಳೂರು: ಮಾಜಿ ಕ್ರಿಕೆಟಿಗ ಯೂಸುಫ್ ಪಠಾಣ್ ಅವರಿಗೆ ಸೋಂಕು ಇರುವುದು ದೃಢಪಟ್ಟಿದೆ. ಶನಿವಾರ ಟ್ವಿಟರ್‌ನಲ್ಲಿ ಅವರು ಈ ವಿಷಯವನ್ನು ತಿಳಿಸಿದ್ದಾರೆ.

'ಮನೆಯಲ್ಲೇ ಪ್ರತ್ಯೇಕವಾಸದಲ್ಲಿದ್ದು, ಔಷಧಿ ತೆಗೆದುಕೊಳ್ಳುತ್ತಿದ್ದೇನೆ' ಎಂದು ಯೂಸುಫ್ ಟ್ವೀಟ್ ಮಾಡಿದ್ದಾರೆ.

ಎಎಫ್‌ಸಿ ಕಪ್ ಶ್ರೇಷ್ಠ ಆಟಗಾರರು: ಸುನಿಲ್ ಚೆಟ್ರಿ ನಾಮನಿರ್ದೇಶನ



ಸುನಿಲ್ ಚೆಟ್ರಿ

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡದ ನಾಯಕ ಸುನಿಲ್ ಚೆಟ್ರಿ ಅವರು ಎಎಫ್‌ಸಿ ಕಪ್ ಟೂರ್ನಿಯಲ್ಲಿ ಆಡಿದ ಸಾರ್ವಕಾಲಿಕ ಶ್ರೇಷ್ಠ ಆಟಗಾರರ ಆಯ್ಕೆಗಾಗಿ ನಾಮನಿರ್ದೇಶನಗೊಂಡಿದ್ದಾರೆ. ಒಟ್ಟು 13 ಆಟಗಾರರು ನಾಮನಿರ್ದೇಶನಗೊಂಡಿದ್ದು, ಅದರಲ್ಲಿ ಮೂರು ಮಂದಿಯನ್ನು ಮತದಾನದ ಮೂಲಕ ಆಯ್ಕೆ ಮಾಡಲಾಗುತ್ತದೆ.

36 ವರ್ಷದ ಚೆಟ್ರಿ, ಎಎಫ್‌ಸಿ ಕಪ್ ಟೂರ್ನಿಯ ನಾಲ್ಕು ಆವೃತ್ತಿಗಳಲ್ಲಿ ಒಟ್ಟು 18 ಗೋಲು ಗಳಿಸಿದ್ದಾರೆ. 2013ರಲ್ಲಿ ಚರ್ಚಿಲ್ ಬ್ರದರ್ಸ್ ತಂಡದ ಪರ ಅವರು ಮೊದಲ ಬಾರಿ ಎಎಫ್‌ಸಿ ಕಪ್ ಟೂರ್ನಿಯಲ್ಲಿ ಕಣಕ್ಕಿಳಿದಿದ್ದರು. 2016, 2017 ಹಾಗೂ 2018ರಲ್ಲಿ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ಪರ ಆಡಿದ್ದಾರೆ. 2016ರ ಟೂರ್ನಿಯಲ್ಲಿ ಚೆಟ್ರಿ ನೇತೃತ್ವದ ಬಿಎಫ್‌ಸಿ ರನ್ನರ್ ಅಪ್ ಆಗಿತ್ತು. ಫೈನಲ್ ಪಂದ್ಯದಲ್ಲಿ ಇರಾನ್ ಏರ್‌ಫೋರ್ಸ್ ಕ್ಲಬ್ ಎದುರು ಸೋಲು ಅನುಭವಿಸಿತ್ತು.

ಹ್ಯಾಂಡ್‌ಬಾಲ್: ಅನಿಲ್ ನಾಯಕ

ಬೆಂಗಳೂರು: ಅನಿಲ್‌ಕುಮಾರ್ ಟಿ.ಡಿ. ಅವರು ರಾಷ್ಟ್ರೀಯ ಹ್ಯಾಂಡ್‌ಬಾಲ್ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡದ ನಾಯಕತ್ವ ವಹಿಸಿದ್ದಾರೆ. ಮಾರ್ಚ್ 30ರಿಂದ ನಡೆಯಲಿರುವ ಟೂರ್ನಿಗೆ ಮೈಸೂರಿನಲ್ಲಿ ಆಯ್ಕೆ ಟ್ರಯಲ್ಸ್ ಹಾಗೂ ತರಬೇತಿ ನಡೆದಿತ್ತು.

ತಂಡ: ಅನಿಲ್ ಕುಮಾರ್ ಟಿ.ಡಿ. (ನಾಯಕ), ಮಹೇಶ್ ಎಸ್. ಮಾಯನ್ನಟ್ಟಿ, ಗೌತಂ ಎಸ್.ಎನ್, ಪ್ರವೀಣ್ ಕುಮಾರ್ ಎಸ್, ಜಿತೇಶ್ ವಿ. ಸುವರ್ಣ, ಪುನೀತ್ ಶೆಟ್ಟರ್, ಉಮಾ ಶಂಕರ್, ರವೀಂದ್ರನ್, ಸೂರ್ಯ ಕುಮಾರ್ ಪಿ.ಎಂ, ಶುಭಕರ್, ತಮ್ಮಣಿ ಬಂತೆ, ಗಿರೀಶ್ ಎಲ್.ಆರ್, ಅಭಿಷೇಕ್, ಸಮೀರ್ ಅಹಮದ್, ಸಚಿನ್ ಆರ್, ಹರ್ಷ ಜೆ.ಕೆ. ಮ್ಯಾನೇಜರ್: ಮಹೇಶ್ ಎಂ.ಎನ್. ಕೋಚ್: ಕೆ.ಜಿ.ಮಾದಪ್ಪ.

ಜೊಫ್ರಾಗೆ ನಾಳೆ ಶಸ್ತ್ರಚಿಕಿತ್ಸೆ

ಲಂಡನ್ (ಎಎಫ್‌ಪಿ): ಮೊಣಕೈ ನೋವಿನಿಂದ ಬಳಲುತ್ತಿರುವ ಇಂಗ್ಲೆಂಡ್ ವೇಗಿ ಜೊಫ್ರಾ ಆರ್ಚರ್‌ಗೆ ನೋವು ಶಮನಕ್ಕಾಗಿ ಇನ್ನಷ್ಟು ಚುಚ್ಚುಮದ್ದು ನೀಡಲಾಗಿದೆ. ಕೈಯಲ್ಲಿ ಆಗಿರುವ ಗಾಯಕ್ಕೆ ಸೋಮವಾರ ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದಾರೆ.

ಈ ವಿಷಯವನ್ನು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಶನಿವಾರ ತಿಳಿಸಿದ್ದು ಜನವರಿಯಿಂದ ಕಾಡುತ್ತಿರುವ ನೋವು ನಿವಾರಿಸಲು ಸರಳ ಶಸ್ತ್ರಚಿಕಿತ್ಸೆ ಅತ್ಯಗತ್ಯವಾಗಿದೆ ಎಂದು ವಿವರಿಸಿದೆ.

ಭಾರತ ಪ್ರವಾಸದಲ್ಲಿರುವ ಇಂಗ್ಲೆಂಡ್ ತಂಡದೊಂದಿಗೆ ಬಂದಿದ್ದ ಆರ್ಚರ್ ಟಿ20 ಸರಣಿಯ ನಂತರ ತವರಿಗೆ ವಾಪಸಾಗಿದ್ದರು.

ಜನವರಿಯಲ್ಲಿ ಮನೆ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಅವರ ಕೈಗೆ ಗಾಯವಾಗಿತ್ತು. ವೈದ್ಯಕೀಯ ತಂಡದ ಸಲಹೆ ಪಡೆದು ಪಂದ್ಯಗಳನ್ನು ಆಡಿದ್ದರು. ಆದರೆ ಏಕದಿನ ಸರಣಿಯಲ್ಲಿ ಆಡಲು ಸಾಧ್ಯವಿಲ್ಲ ಎಂದು ತಿಳಿಸಲಾಗಿತ್ತು ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ತಿಳಿಸಿದೆ.